ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೭೭

ಸಾಹಿತ್ಯ ಮಾಲೆ – ೮೨

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ಕಪ್ಪು ಸೂರ್ಯ

**Blank**



# ಕಪ್ಪು ಸೂರ್ಯ

ಇಂಗ್ಲಿಷ್ ಮೂಲ :

**ಭರತ್ ಜಂಗಮ್**

ಕನ್ನಡ ಅನುವಾದ :

**ಟಿ.ಎಸ್. ದಕ್ಷಿಣಾಮೂರ್ತಿ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**KAPPU SURYA; Written by** Bharat Jangam**;** Translation by **T.S. Dakshinamurthy;** Editor-in-Chief : **Dr. Pradhan Gurudatta ;** Published by **Sri P. Narayana Swamy, Registrar, Kuvempu Bhasha Bharathi Pradikara ;** Kalagrama, Jnana Bharathi, Behind Bangalore University Campus, Mallattahalli, Bangalore - 560 056 ; First Edition 2009, Second Edition by the Pradhikara 2013; Pp. xvi + 157; Price : Rs. 60/-

Published with the kind permission of Mr. Bharat Jangam, Jangam Nivas, Baneswor, Katmandu, Nepal.

© ಹಕ್ಕುಗಳನ್ನು ಕಾದಿರಿಸಿದೆ

ಮೊದಲ ಮುದ್ರಣ : ೨೦೦೯
ಪ್ರಾಧಿಕಾರದಿಂದ ಮುದ್ರಣ : ೨೦೧೩
ಪುಟಗಳು : xvi + ೧೫೭
ಬೆಲೆ : ರೂ. ೬೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀ ವಿಶ್ವನಾಥ್ ಶೆಟ್ಟಿಗಾರ್**

**ISBN : 978-81-921758-5-0**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪



ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ

ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ, **'ಕನಕದಾಸರ ಕೃತಿ'**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ

ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

**(ಸಿದ್ದರಾಮಯ್ಯ)**



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ 'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ' ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

**(ಉಮಾಶ್ರೀ)**

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುವಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ

ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ.ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರು **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ, ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ

ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ನೇಪಾಳದ ಪ್ರತಿಷ್ಠಿತ ಕಾದಂಬರಿಕಾರರೆಂದು ಹೆಸರುಗಳಿಸಿರುವ ಶ್ರೀ ಭರತ ಜಂಗಮ್ ಅವರ ಜನಪ್ರಿಯ ಕಾದಂಬರಿ 'ಕೋಲಾ ಸೂರ್ಯ'. 'The Black Sun' ಎಂಬ ಹೆಸರಿನಲ್ಲಿ ಹೊರಬಂದಿರುವ ಅದರ ಇಂಗ್ಲಿಷ್ ಅನುವಾದವನ್ನು ಕನ್ನಡ ಆವೃತ್ತಿ ಆಧರಿಸಿದೆ. ನಿರಂಕುಶ ರಾಜಕೀಯ ವ್ಯವಸ್ಥೆಯ ಕರಾಳ ಮುಖಗಳನ್ನು ಅನಾವರಣಗೊಳಿಸಿದ ಕಾರಣದಿಂದಾಗಿ ಈ ಕಾದಂಬರಿ ಅನೇಕರ ಕಣ್ಣು ತೆರೆಸಿತು ಹಾಗೂ ಇಂಗ್ಲಿಷ್ ಮತ್ತಿ ಇತರ ಭಾಷೆಗಳಿಗೂ ಅನುವಾದಗೊಂಡಿತು. ಶ್ರೀ ಟಿ.ಎಸ್. ದಕ್ಷಿಣಾ ಮೂರ್ತಿ ಅವರು ಇದನ್ನು ಕನ್ನಡಕ್ಕೆ ಅನುವಾದಿಸಿ ೨೦೦೮ರಲ್ಲಿ ಪ್ರಕಟಿಸಿದ್ದರು. ಈ ಕೃತಿಯ ಪ್ರತಿಗಳು ಅಲಭ್ಯವಾಗಿದ್ದದರಿಂದ, ಅದರ ಮಹತ್ವವನ್ನು ಗಮನಿಸಿ ಪ್ರಾಧಿಕಾರ ಇದರ ಇನ್ನೊಂದು ಆವೃತ್ತಿಯನ್ನು ಹೊರತಂದಿದೆ. ಇದಕ್ಕೆ ಅನುವು ಮಾಡಿಕೊಟ್ಟಿರುವ ಶ್ರೀ ಭರತ್ ಜಂಗಮ್ ಅವರಿಗೂ, ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ ಅವರಿಗೆ ಪ್ರಾಧಿಕಾರದ ವಿಶೇಷ ವಂದನೆಗಳು.

ಪ್ರಾಧಿಕಾರದ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸ್ಥೆವಹಿಸಿರುವ ಸನ್ಮಾನ್ಯ ಪ್ರಧಾನ ಕಾರ್ಯದರ್ಶಿಗಳಾಗಿರುವ ಶ್ರೀ ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೂತನ ಆಯುಕ್ತರಾಗಿರುವ ಶ್ರೀ ಕೆ.ಆರ್. ರಾಮಕೃಷ್ಣ ಅವರಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು ೫೬೦ ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ



## ಪರಿವಿಡಿ


ಮುನ್ನುಡಿ v
ಸಂದೇಶ vii
ಹಾರೈಕೆ viii
ಪ್ರಾಸ್ತಾವಿಕ ನುಡಿ ix
ಪೀಠಿಕೆ xi

ಕಪ್ಪು ಸೂರ್ಯ ೧–೧೫೭

**Blank**



# ಕಪ್ಪು ಸೂರ್ಯ

**Blank**

# ಭಾನುವಾರ

**ಕ**ಳೆದ ಕೆಲವು ದಿನಗಳಿಂದ ನಾನು ಮಾನಸಿಕವಾಗಿ ಅಸ್ವಸ್ಥನಾಗಿದ್ದೇನೆ. ಇವತ್ತಿನ ಜೀವನದ ರೀತಿಯನ್ನು ನಾನು ದ್ವೇಷಿಸಲು ಆರಂಭಿಸಿದ್ದೇನೆ. ಕಾರಣ, ಪ್ರಸ್ತುತ ಸಮಾಜ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದೆ. ಪ್ರತಿಯೊಬ್ಬ ವ್ಯಕ್ತಿಗೆ ಸವಾಲಾಗುವ ಎಲ್ಲ ಪರಿಸ್ಥಿತಿಗಳೂ ನನ್ನಲ್ಲಿ ಬಿರುಗಾಳಿಯನ್ನೆಬ್ಬಿಸಿವೆ. ನಾನು ಅಷ್ಟೊಂದು ವಿಚಲಿತನಾದದ್ದಕ್ಕೆ ಕಾರಣ ತಿಳಿದಿಲ್ಲ. ಆದರೆ ಪರಿಸ್ಥಿತಿ ಎಷ್ಟೊಂದು ಭಯಂಕರವಾಗಿ ಗೊಂದಲಮಯವಾಗಿದೆ ಎಂದರೆ ಅದನ್ನು ಗ್ರಹಿಸುವುದು ನನಗೆ ತೀರಾ ಕಷ್ಟವಾಗಿದೆ. ಪ್ರತಿಯೊಬ್ಬ ವ್ಯಕ್ತಿಯನ್ನು ಕಾಡುವ ಸನ್ನಿವೇಶಗಳೂ ನನ್ನ ಹೃದಯವನ್ನು ತಾಕಿವೆ. ನನ್ನ ದೇಹದ ಪ್ರತಿಯೊಂದು ಅಂಗವೂ ತತ್ತರಿಸತೊಡಗಿ, ಉಜ್ವಲ ಭವಿಷ್ಯದ ನಿರ್ಮಾಣದ ಕಡೆಗೆ ತುಡಿಯತೊಡಗಿವೆ.

ಅಂದು ನಾನು ಸ್ವಲ್ಪ ಬೇಗನೆ ಹಾಸಿಗೆಯಿಂದ ಎದ್ದೆ. ನಾನು ದಿನನಿತ್ಯ ಸೇವಿಸುವಂತೆ ಅಂದು ಟೀಯನ್ನು ಕುಡಿಯಲಿಲ್ಲ. ಅದಕ್ಕಾಗಿ ಎರಡು ಗಂಟೆ ಕಾಯಬೇಕಿತ್ತು. ಹಾಗಾಗಿ ನನ್ನ ಸ್ನೇಹಿತ ಜೀವನನ ಮನೆಯಲ್ಲಿ ಬೆಳಗಿನ ಟೀ ಕುಡಿಯುವುದೆಂದು ತೀರ್ಮಾನಿಸಿದೆ. ಆತನ ಮನೆಯ ಕಡೆ ಹೊರಟೆ.

ಜೀವನ್, ನನ್ನ ಹಳೆಯ ಸ್ನೇಹಿತ. ಸರ್ಕಾರಿ ಕೆಲಸದಲ್ಲಿದ್ದಾನೆ. ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾನೆ. ಕಠ್ಮಂಡುವಿನಲ್ಲಿ ಅದೇನು ಅಂಥ ಹೀನಾಯವಾದ್ದೇನಲ್ಲ. ಅವನ ಹೆಂಡತಿ ಮನೆಯಲ್ಲಿಯೇ ಇರುತ್ತಾಳೆ. ಶಾಲೆಗೆ ಹೋಗುವ ಇಬ್ಬರು ಚಿಕ್ಕಮಕ್ಕಳು ಇದ್ದಾರೆ. ಜೀವನ್ ಬೆಳಗಿನ ಹಾಗೂ ಸಂಜೆಯ ವೇಳೆಯಲ್ಲಿ ಮಕ್ಕಳೊಂದಿಗೆ ಆಟವಾಡುತ್ತಾ ಕಾಲ ಕಳೆಯುತ್ತಾನೆ. ಇದು ಆತನ ಹೆಂಡತಿಗೆ ಮನೆಕೆಲಸ ಮಾಡಲು ವಿರಾಮ ಹಾಗೂ ಒಂದು ರೀತಿಯ ಸ್ಫೂರ್ತಿ. ನನಗೆ ಜೀವನ್ ಕಂಡರೆ ಒಂದು ರೀತಿಯ ಅಸೂಯೆ– ಅವನು ಎಷ್ಟೊಂದು ಸಂತೋಷವಾಗಿದ್ದಾನೆ! ಮನೆಯಲ್ಲಿ ಎಂಥ ಒಂದು ಉಲ್ಲಾಸದ ವಾತಾವರಣವಿದೆ! ನೆಮ್ಮದಿಯ ಬದುಕು, ಮನೆಗೆಲಸದವರ ಸಹಾಯವಿಲ್ಲದೆ ಎಲ್ಲಾ ಕೆಲಸವನ್ನು ಸಮರ್ಥವಾಗಿ ಮಾಡುತ್ತಾನೆ ಎಂದು.

ನಾನು ಜೀವನ್ ಅವರ ಮನೆಯ ಬಾಗಿಲಲ್ಲಿ ನಿಂತೆ. ಜೀವನ್ ಮತ್ತು ಅವನ ಹೆಂಡತಿ ಯಾವುದೋ ವಿಷಯವಾಗಿ ಜೋರಾಗಿ ವಾದ ಮಾಡುತ್ತಿರುವುದನ್ನು

ಕೇಳಿಸಿಕೊಂಡೆ. ನಾನು ಜೀವನ್‌ನನ್ನು ಕರೆಯವ ಮನಸ್ಸು ಮಾಡಲಿಲ್ಲ, ಮುಂದೆಯೂ ಹೋಗಲಿಲ್ಲ. ಅವರು ಯಾವುದರ ಬಗ್ಗೆ ವಾದ ಮಾಡುತ್ತಿದ್ದಾರೆ ಎನ್ನುವುದು ಜೋರಾಗಿ ಕೇಳಿಸುತ್ತಿತ್ತು.

"ನನ್ನನ್ನು ನೀನು ಯಾಕೆ ಅರ್ಥ ಮಾಡಿಕೊಳ್ಳುತ್ತಿಲ್ಲ! ನೀನು ಯಾವಾಗಲೂ ಇದೇ ವಿಚಾರದಲ್ಲಿ ಕೆರಳಿಸುತ್ತೀಯಾ. ಶ್ರೀಮಂತರು ಬೇಕಾದರೆ ಅವರ ಮಕ್ಕಳನ್ನು ಇಂಗ್ಲಿಷ್ ಶಾಲೆಯಲ್ಲಿ ಓದಿಸಲಿ, ಡಾರ್ಜಲಿಂಗ್‌ಗಾದರೂ ಕಳುಹಿಸಲಿ, ಇಂಗ್ಲೆಂಡಿಗಾದರೂ ಕಳುಹಿಸಲಿ, ಅದರ ಚಿಂತೆ ನನಗೆ ಬೇಡ. ನಮ್ಮ ಶಕ್ತ್ಯಾನುಸಾರ ನಮ್ಮ ಮಕ್ಕಳನ್ನು ಬೆಳೆಸೋಣ. ಮನೆಯಲ್ಲಿಯೇ ಪಾಠ ಹೇಳೋಣ. ಮುಂದಿನ ವರ್ಷ ನಮ್ಮ ಬಡಾವಣೆಯ ರಸ್ತೆ ಕೊನೆಯಲ್ಲಿರುವ ಪ್ರಾಥಮಿಕ ಶಾಲೆಗೆ ಸೇರಿಸೋಣ. ನನಗೆ ಮುಂದಿನ ವರ್ಷ ಪ್ರಮೋಷನ್ ಬರುತ್ತದೆ. ಆಗ ಇಂಗ್ಲಿಷ್ ಶಾಲೆಗೆ ಕಳುಹಿಸೋಣ".

'ಕಳೆದ ವರ್ಷ ಇದನ್ನೇ ಹೇಳಿದ್ದಿರಿ. ನಿಮಗೆ ಗೊತ್ತ ನಮ್ಮ ಮಗ ಈಗ ಆರು ವರ್ಷದವ. ಮಗಳಿಗೆ ನಾಲ್ಕು ವರ್ಷ ತುಂಬಿದೆ. ಆದರೆ ನಿಮಗೆ ಮಕ್ಕಳನ್ನು ಯಾವಾಗ ಶಾಲೆಗೆ ಸೇರಿಸಬೇಕೆಂಬುದು ಗೊತ್ತಿಲ್ಲ. ನೋಡ್ರಿ ನಮ್ಮ ಪಕ್ಕದ ಮನೆಯವರ ಮಕ್ಕಳು ಇಂಗ್ಲಿಷ್ ಶಾಲೆಯಲ್ಲಿ ಓದುತ್ತಿದ್ದಾರೆ. ಆವರೂ ನಿಮ್ಮಂತೆಯೆ ಒಬ್ಬ ಸರ್ಕಾರಿ ನೌಕರ.'

ಹೆಂಡತಿಯ ಮಾತುಗಳು ಅವನನ್ನು ಚುಚ್ಚಿದವು. 'ಏನ್ ಮಾತಾಡ್ತಾಯಿದ್ದೀಯ! ನನ್ನ ಸಂಬಳ ಎಷ್ಟು ಗೊತ್ತಾ? ಜೀವನ ನಡೆಸಲಿಕ್ಕೆ ಸಾಕಾಗುತ್ತಾ? ಎಷ್ಟೊ ದಿನ ನಾವು ಟೀ ಇಲ್ಲದೆ ಇದ್ದೇವೆ. ಒಳ್ಳೆಯ ಅಕ್ಕಿ ತರಲು ಸಾಧ್ಯವಾಗದಿರುವ ನನಗೆ ಈ ಪ್ರೀತಿಯ ಮಕ್ಕಳನ್ನು ಈ ವರ್ಷ ಶಾಲೆಗೆ ಸೇರಿಸಲು ಕಷ್ಟವಾಗುತ್ತದೆ. 'ಬೋರ್ಡಿಂಗ್ ಶಾಲೆ'ಗೆ ಸೇರಿಸಿ ಎಂದು ಹೇಳುವುದು ಸುಲಭ! ಆದರೆ ಶಾಲೆಗೆ ಸೇರಿದ ಮೇಲೆ ಎಷ್ಟು ಖರ್ಚು ಬರುತ್ತದೆ ಎನ್ನುವುದು ಗೊತ್ತಿದೆಯಾ? ಯೂನಿಫಾರಂ ಹೊಲಿಸಬೇಕು, ಪಠ್ಯಪುಸ್ತಕ ಕೊಳ್ಳಬೇಕು, ಶಾಲೆಯ ಫೀ ಪಾವತಿಸಬೇಕು, ಹೀಗೆ ಒಂದೇ ಉಸಿರಿಗೆ ಮಾತು ಮುಂದುವರೆಸಿದ, 'ನೀನು ನೋಡಿದರೆ ನಮ್ಮ ಮನೆಯ ಪಕ್ಕದವರ ವಿಚಾರ ಮಾತನಾಡುತ್ತೀಯ. ಅವನು ಯಾಕೆ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಸೇರಿಸದೆ ಇದ್ದಾನು? ಆತ ಕಠ್ಮಂಡು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಂ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಅವನ ಒಂದು ದಿನದ ಲಂಚ, ಆತನ ಮೂರು ತಿಂಗಳ 'ಸಂಬಳವನ್ನು ಮೀರುತ್ತದೆ' ಅಷ್ಟೆ ಅಲ್ಲ, ಇನ್ನೊಂದು ವರ್ಷ ಆತ ಅಲ್ಲಿಯೆ ಇದ್ದರೆ ಇನ್ನೆಂದೂ ಕೆಲಸ ಮಾಡದೆ ಇದ್ದರೂ ಇಡೀ ಜೀವನಪರ್ಯಂತ ಹಾಯಾಗಿ ಇರೋವಷ್ಟು ಮಾಡಿಕೊಳ್ತಾನೆ. ಕಳೆದ ವರ್ಷ ಆತ ಹೇಗಿದ್ದ. ಸಾಮಾನ್ಯ ನೌಕರ. ಕಳೆದ ಮೂರು ತಿಂಗಳಿಂದ ಅಷ್ಟೆ. ಅವನ ಜೀವನ ಮಟ್ಟ ಸುಧಾರಿಸಿದೆ!



ಆತನೊಂದಿಗೆ ನನ್ನನ್ನು ಯಾವತ್ತೂ ಹೋಲಿಸಬೇಡ. ಸಾಕು ಈ ವಾದ. ಹೋಗು ಅಡಿಗೆ ಮಾಡು. ನನಗೆ ಕಛೇರಿಗೆ ಲೇಟಾಗುತ್ತೆ?

ಜೀವನ್‌ನ ಹೆಂಡತಿ ಅತ್ಯಂತ ಕುತೂಹಲದಿಂದ ಕೇಳಿದಳು.

'ಕಠ್ಮಂಡು ಏರ್‌ಪೋರ್ಟ್ ಕಸ್ಟಮ್ಸ್ ಕಛೇರಿ ಎಲ್ಲಿದೆ?'

ಮಾತಿಗೆ ವಿರಾಮ ನೀಡುವಂತೆ ಜೀವನ್ ಹೇಳಿದ 'ಗೌಚರ್ ಕಸ್ಟಮ್ಸ್ ಕಛೇರಿ ನಿನಗೆ ಗೊತ್ತಿಲ್ಲವೆ?'.

'ಹಾಗಿದ್ದರೆ ನೀವೇಕೆ ಅಲ್ಲಿಗೆ ವರ್ಗಾವಣೆ ತೆಗೆದುಕೊಳ್ಳಬಾರದು?' ನೀವು ಹೇಳ್ತಾಯಿರೋ ಈ ನಿಮ್ಮ ಪ್ರಮೋಷನ್‌ಗೆ ಕಾಯೋದನ್ನು ಬಿಟ್ಟು?

ಜೀವನ್ ತೀಕ್ಷ್ಣವಾಗಿ ಉತ್ತರಿಸಿದ – 'ಹೌದು, ಕಸ್ಟಂ ಕಛೇರಿ ನಿಮ್ಮಪ್ಪನದು, ಕೇಳಿದ ತಕ್ಷಣ ವರ್ಗಾವಣೆ ಸಿಕ್ಕುತ್ತದೆ'.

ಸ್ವಲ್ಪ ಸಮಯದ ನಂತರ ಜೀವನ್ ಗೊಣಗುವುದಕ್ಕೆ ಶುರುಮಾಡಿದ– 'ನನಗೆ ಬೆಂಬಲಿಸುವವರು ಅಧಿಕಾರದಲ್ಲಿ ಯಾರಿದ್ದಾರೆ? ನನ್ನ ಬಾಸ್ ನನಗೇನಾದರೂ ಬಂಧುವಾಗಬೇಕೆ ಎಂದು ಪತ್ತೆ ಹಚ್ಚಲು ಪ್ರಯತ್ನಿಸಿದೆ. ಆದರೆ ಇಲ್ಲ! ಅದು ಕೇವಲ ವ್ಯರ್ಥ. ಅಧಿಕಾರದಲ್ಲಿರುವವರ ಅನುಗ್ರಹ ಸಂಪಾದಿಸಲು ಪ್ರಯತ್ನ ಮಾಡೋಣ ಅಂದರೆ ದುಡ್ಡುಮಾಡುವ ಜಾಗಕ್ಕೆ ವರ್ಗ ಮಾಡಿಸಿಕೊಳ್ಳೋಕೆ ಹೇಗೆ ಸಾಧ್ಯ? ನನಗೆ ಸಮಯವಿಲ್ಲ. ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ? ಅಡಿಗೆಯನ್ನು ಯಾರು ಮಾಡುತ್ತಾರೆ? ಕಛೇರಿಯಲ್ಲಿ ಮಾತನಾಡುವಂತಿಲ್ಲ. ಕಛೇರಿಯಲ್ಲಿ ಅವರನ್ನು ಪ್ಲೀಸ್ ಮಾಡಲು ನನ್ನಲ್ಲಿ ಏನೂ ಇಲ್ಲ. ಹೀಗಿರುವಾಗ ನನಗೆ ಬೇಕಾದ ಜಾಗ ಪಡೆಯಲು, ಹಣ ಮಾಡಲು ಹೇಗೆ ಸಾಧ್ಯ?' ಎಂದು ಮಾತು ಮುಂದುವರಿಸಿದ. 'ಕೆಲ ದಿನಗಳ ಹಿಂದೆ ಒಬ್ಬ ಅನನುಭವಿ Boss ನಮ್ಮ ಕಚೇರಿಯಲ್ಲಿ ಇದ್ದರು. ಅವರಿಗೆ ಕಛೇರಿಯ ಎಲ್ಲ ಕೆಲಸಗಳ ಬಗೆಗೆ ಹೇಳಿಕೊಟ್ಟೆ, ನನಗೆ ಬೇಕಾದ ಕಸ್ಟಂ ಕಛೇರಿಗೆ ವರ್ಗ ಮಾಡಬಹುದು ಎಂದುಕೊಂಡೆ. ಆದರೆ ಪ್ರಯೋಜನವಾಗಲಿಲ್ಲ. ನಾನು ತರಬೇತಿ ನೀಡಿದ ಅನನುಭವಿ ಯುವಕ ಉಪ–ಕಸ್ಟಂ ಅಧಿಕಾರಿಯಾಗಿ ನೇಮಕಗೊಂಡನು. ಒಂದು ವರ್ಷದೊಳಗೆ ಅದೃಷ್ಟ ತನಗೆ ತಾನೆ ಒದ್ದುಕೊಂಡು ಬರೋ ಹಾಗೆ ಮಾಡಿಕೊಳ್ತಾನೆ ನೋಡ್ತಾಯಿರು! ಮತ್ತೆ ಮುಂದುವರೆಸಿದ. ಅಂಥೋನೊಬ್ಬನಿಗೆ ಅವಕಾಶ ಆಯಿತು ಅಂದರೇ ಅವನು ಬಾಸ್‌ನ ದೂರದ ಸಂಬಂಧಿ. ಏನೇ ಆಗಲಿ ಅವನಿಗೆ ಒಂದಿಷ್ಟು ಕಿಮ್ಮತ್ತಿದೆ. ನಿರಾಶೆ ಪಡಬೇಡ! ನನಗೂ ಒಂದು ದಿನ ಅವಕಾಶ ಬರುತ್ತೆ, ಮಕ್ಕಳನ್ನು ಇಂಗ್ಲಿಷ್ ಬೋರ್ಡಿಂಗ್ ಸ್ಕೂಲಿಗೆ ಸೇರಿಸುತ್ತೇನೆ. ನಿನ್ನನ್ನು ಚಿನ್ನದಲ್ಲಿ ಮುಳುಗಿಸುತ್ತೇನೆ! ಈಗ ಹೋಗು ಅಡುಗೆ ಮಾಡು. ಈಗ ಆಗಲೆ ೬–೩೦ ಆಗಿದೆ.

ಈ ಮಧ್ಯೆ ಮಕ್ಕಳು ಅಳುವುದಕ್ಕೆ ಪ್ರಾರಂಭಿಸಿದವು. ಆಗ ತಾನೆ ಎದ್ದಿದ್ದರು.

ಚರ್ಚೆ ಹೊಸ ತಿರುವು ಪಡೆಯಿತು. ಈವತ್ತು ತಿಂಡಿಗೆ ಬ್ರೆಡ್ ಕೂಡ ಇಲ್ಲ, ಹೋಗು ಏನಾದರೂ ತಿಂಡಿ ಮಾಡು ಅಂತ ಜೀವನ್ ಹೇಳಿದ.

ನನ್ನ ಈ ಭೇಟಿ ಜೀವನ್ ಮನೆಗೆ ಬಹಳ ದಿನದ ನಂತರದ ಭೇಟಿಯಾಗಿತ್ತು. ನಾವಿಬ್ಬರು ರಸ್ತೆಯಲ್ಲಿ ಒಬ್ಬರನ್ನೊಬ್ಬರು ನಗುಮುಖದಿಂದ ಭೇಟಿಯಾಗುತ್ತಿದ್ದೆವು. ಅವರು ಬೆಳಗಿನ ಟೀ ಕುಡಿಯುವುದನ್ನು ಕೆಲವು ತಿಂಗಳಿಂದೀಚೆಗೆ ಬಿಟ್ಟಿರುವ ವಿಚಾರವೂ ನನಗೆ ತಿಳಿದಿತ್ತು. ಮಕ್ಕಳಿಗೆ ಬೆಳಗಿನ ಉಪಾಹಾರಕ್ಕೆ ಬ್ರೆಡ್ ಕೂಡ ಇಲ್ಲವೆನ್ನುವುದು ಈಗ ತಿಳಿಯಿತು. ನಾನು ಜೀವನ್ ಮನೆಯಲ್ಲಿ ಟೀಯನ್ನು ನಿರೀಕ್ಷಿಸುವುದು ಉಚಿತವಲ್ಲ ಎನಿಸಿತು. ಜೀವನ್‌ನನ್ನು ಕರೆಯಲು ಮನಸ್ಸು ಸಂಕೋಚವಾಯಿತು. ಅವನನ್ನು ಕಛೇರಿಯಲ್ಲೇ ಕಾಣುವುದು ಸೂಕ್ತವೆನಿಸಿತು.

ಜೀವನ್‌ನ ನಂಬಿಕೆ, ಭರವಸೆ ಮತ್ತು ತಾಳ್ಮೆ ಆತನ ಬದುಕಿಗೆ ಆಧಾರವಾಗಿದ್ದವು. ಆತ ಕಠ್ಮಂಡುವಿನಲ್ಲಿದ್ದರೂ ಆತನ ಮಕ್ಕಳನ್ನು ಶಾಲೆಗೆ ಸೇರಿಸಿರಲಿಲ್ಲ. ಹೊಟ್ಟೆತುಂಬಾ ಅನ್ನ ಉಂಡವನಲ್ಲ. ತಲೆಯ ಮೇಲೊಂದು ಸೂರನ್ನು ಮಾಡಿಕೊಳ್ಳುವ ಯೋಚನೆ ಮಾಡಿರಲಿಲ್ಲ. ಜೀವನ್‌ನ ವಿಚಾರವನ್ನು ಚಿಂತಿಸುತ್ತಾ ಮನೆಯನ್ನು ಸೇರಿಕೊಂಡೆ. ೭ ಗಂಟೆಯಾಗಿತ್ತು. ಬಿಸಿಯಾದ ಟೀ ಬಂತು. ಬಿಸಿಬಿಸಿಯಾದ ಟೀಯ ಪರಿಮಳ ಮುಖದ ಮೇಲೆ ಪಸರಿಸಿತು. ಟೀಯನ್ನು ಗುಟುಕರಿಸುತ್ತಾ ಸವಿದೆ. ಜೀವನ್‌ನಂತೆ ಬದುಕು ಸಾಗಿಸುತ್ತಿರುವ ನೂರಾರು ಜನರ ಜೀವನದ ಚಿತ್ರಗಳು ನನ್ನ ಮನಸ್ಸಿನ ಮುಂದೆ ಹಾದು ಹೋದವು. ಅವರೆಲ್ಲ ಎಲಿದ್ದಾರೆ? ಏನು ಮಾಡುತ್ತಿದ್ದಾರೆ? ಹೇಗಿದ್ದಾರೆ? ಎಂಥೆಂಥ ಪರಿಸ್ಥಿತಿಗಳಲ್ಲಿ ಇದ್ದಾರೆ? ಹೇಗೆ ಇದನ್ನೆಲ್ಲಾ ಸಹಿಸುತ್ತಾರೆ! ಇಂಥ ಪ್ರಶ್ನೆಗಳು ನನ್ನ ಮನಸ್ಸನ್ನು ಕಾಡತೊಡಗಿದವು. ನಂತರ ಇಂದಿನ ಸಮಾಜದಲ್ಲಿ ನಾನೇ ಒಂದು ಪ್ರಶ್ನೆ ಆಗಿದ್ದೇನೆ ಎನ್ನಿಸಿತು.

ಜೀವನ್‌ನ ಕಛೇರಿಯನ್ನು ತಲುಪಿದೆ. ಆಗಲೇ ಹತ್ತುಗಂಟೆಯಾಗಿದೆ. ಇನ್ನೂ ಯಾರು ಬಂದಿಲ್ಲವೇ? ಎಂದೆ.

'ಯಾರನ್ನು ನೋಡಬೇಕು? ತಾವು' ಮಧ್ಯವಯಸ್ಸಿನ ವ್ಯಕ್ತಿಯೊಬ್ಬರು ಕೇಳಿದರು.

'ಜೀವನ್ ಸಾಹೇಬರನ್ನ ನೋಡಬೇಕು' ರೂಮಿನ ಕುರ್ಚಿ ಮೇಜುಗಳನ್ನು ನೋಡುತ್ತಾ ಹೇಳಿದೆ. ಇದು ಜೀವನ್ ಅವರ ಕೊಠಡಿಯೇ?

'ಹೌದು ಸಾರ್, ಎಂದು ತಲೆಯಾಡಿಸುತ್ತಾ ಹೇಳಿದ, ಇದು ಕಿರಿಯ ಸಹಾಯಕರ ಜಾಗ. ಅದು ಜೀವನ್ ಅವರು ಕುಳಿತುಕೊಳ್ಳುವ ಜಾಗ, ಮತ್ತು ಆ ರೂಮು ಅಧೀನ ಕಾರ್ಯದರ್ಶಿಗಳು ಕೂರುವ ಜಾಗ'

ನಾನು ನಗುತ್ತಾ ಕೇಳಿದೆ. 'ನಿನ್ನ ಸೀಟು ಎಲ್ಲಿ?'

ಅವನು ಸಂಕೋಚದಿಂದ ಹೇಳಿದ, 'ನನ್ನ ಸೀಟು ಎಲ್ಲಿ?' ಜವಾನರಿಗೆ



ಎಲ್ಲಿಯ ಸೀಟು, ಆತನಿಗೆ ಜಾಗವೂ ಇಲ್ಲ! ಕೂರುವಂತೆಯೂ ಇಲ್ಲ? ಎಲ್ಲೋ ಹೊರಗೆ ಕೂತಿರುತ್ತೇನೆ. ಬೆಲ್ಲು ಮಾಡಿದಾಗ ಒಳಗೆ ಹೋಗುತ್ತೇನೆ. ಟೀ ತನ್ನಿ ಅಂದರೆ ತರುತ್ತೇನೆ. ಸಿಗರೇಟ್ ತನ್ನಿ ಅಂದರೆ ತರುತ್ತೇನೆ', ಕೂರಲಿಕ್ಕೆ ಜಾಗವೂ ಇಲ್ಲ ಸಮಯವೂ ಇಲ್ಲ.

ಅವನ ಮುಗ್ಧ ಹಾಗೂ ಕೃತಕವಲ್ಲದ ವಿವರಣೆ ನನಗೆ ಕುತೂಹಲ ಮೂಡಿಸಿತು. ನಾನು ಕೇಳಿದೆ – 'ಎಷ್ಟು ವರ್ಷದಿಂದ ನೀನು ಇಲ್ಲಿ ಕೆಲಸ ಮಾಡುತ್ತಿದ್ದೀಯ?'

'ಇಪ್ಪತ್ತನಾಲ್ಕು ಕಳೆದು ಇಪ್ಪತ್ತೈದನೆ ವರ್ಷ' ಎಂದು ಇದ್ದದ್ದು ಇದ್ದಹಾಗೆ ನಿಸ್ಸಂಕೋಚವಾಗಿ ಉತ್ತರಿಸಿದ. ಮೂಲೆಯಲ್ಲಿರುವ ಮೇಜಿನ ಕಡೆ ಕೈ ತೋರಿಸಿ, 'ದಯಮಾಡಿ! ಕುಳಿತುಕೊಳ್ಳಿ. ಅದು ದೊಡ್ಡ ಸಾಹೇಬರ ಸೀಟು. ನಾನು ಇನ್ನೊಂದು ರೂಮಿನ ಬಾಗಿಲು ತೆಗೆಯಬೇಕಿದೆ' ಎಂದು ಹೊರನಡೆದ.

ನಾನು ಕೊಠಡಿಯಲ್ಲಿ ಒಬ್ಬನೇ ಇದ್ದೆ. ಕೊಠಡಿಯ ಸುತ್ತ ಕಣ್ಣು ಹಾಯಿಸಿದೆ. ಅಲ್ಲಿ ಮೂರು ಸ್ಟೀಲ್ ಅಲ್ಮೆರಾಗಳಿದ್ದವು. ಅವುಗಳ ಮೇಲೆ ಪೇಪರ್ ಹಾಗು ಫೈಲ್‌ಗಳನ್ನು ರಾಶಿ, ರಾಶಿಯಾಗಿ ಪೇರಿಸಲಾಗಿತ್ತು. ಒಂದು ಹೀಟರ್, ಒಂದು ಕೆಟಲ್, ಲೋಟಗಳು ಮತ್ತು ತಟ್ಟೆಗಳು, ರೂಮಿನ ಒಂದು ಮೂಲೆಯಲ್ಲಿ ಬಿದ್ದಿದ್ದವು. ಗೋಡೆಗೆ ಒಂದು ಕ್ಯಾಲೆಂಡರ್ ನೇತು ಹಾಕಲಾಗಿತ್ತು. ಕೊಠಡಿಗೆ ಹಾಕಿದ ಪರದೆಯ ಸಂದಿಯಿಂದ ಅಧೀನ ಕಾರ್ಯದರ್ಶಿಯವರ ತಿರುಗುಕುರ್ಚಿಯ ನೋಟ ಕಣ್ಣಿಗೆ ಬೀಳುತ್ತಿತ್ತು. 'ಒಳಗೆ ಪ್ರವೇಶವಿಲ್ಲ' ಎನ್ನುವ ಬೋರ್ಡನ್ನು ಬಾಗಿಲಿಗೆ ನೇತುಹಾಕಲಾಗಿತ್ತು. ಅಲ್ಲಿ ಕೂರುವ ಅಧೀನ ಕಾರ್ಯದರ್ಶಿ ಎಂಥವನು ಇರಬಹುದು? ಎಂದು ನಾನೇ ಪ್ರಶ್ನಿಸಿಕೊಂಡೆ? ಅಷ್ಟರಲಿ 'ಕೃಷ್ಣಬಹದ್ದೂರ್' ಎಂದು ಜೀವನ್ ಕರೆಯುತ್ತಿರುವುದು ಕೇಳಿಸಿತು. ಜೀವನ್ ಕೊಠಡಿ ಒಳಗೆ ಪ್ರವೇಶಿಸಿದರು. ನನ್ನನ್ನು ನೋಡಿ ಆಶ್ಚರ್ಯದಿಂದ 'ಓ ನೀನಾ! ಇದೇನು ಇಲ್ಲಿ! ಎಷ್ಟು ಯುಗವಾಯ್ತು ನಿನ್ನನ್ನು ನೋಡಿ. ಅಲ್ಲವಾ!'

'ಹೌದು! ಅದಕ್ಕೇ ನಾನು ನಿನ್ನನ್ನು ನೋಡಲು ಬಂದೆ. ಹತ್ತು ಗಂಟೆಗೆ ಇಲ್ಲಿದ್ದೆ' ಜೀವನ್ ಎತ್ತರದ ಧ್ವನಿಯಲ್ಲಿ ಹೇಳಿದ. ನಾನು ಯಾವಾಗಲು ೯–೩೦ಕ್ಕೆ ಮನೆ ಬಿಡುತ್ತೇನೆ, ನಾನು ನಡೆದುಕೊಂಡು ಬರಲು ಇಚ್ಛಿಸುತ್ತೇನೆ. ಜನಜಂಗುಳಿಯಿರುವ ಸಮಯದಲ್ಲಿ ಕಿಕ್ಕಿರಿದು ಜನ ತುಂಬಿರೊ ಕಛೇರಿಯ ವೇಳೆ ಬಸ್ಸುಗಳಲ್ಲಿ ಪ್ರಯಾಣ ಮಾಡೋದು ಒಂದು ಹಿಂಸೆ ಮತ್ತು ಕಷ್ಟ. ಎಷ್ಟೇ ಮುಂಚೆ ಬರಬೇಕೆಂದರೂ ಕಛೇರಿಗೆ ೧೦–೨೫ ರಿಂದ೧೦–೩೦ಕ್ಕೆ ಮುಂಚೆ ಬರಲು ಸಾಧ್ಯವಾಗುವುದಿಲ್ಲ. ಅಧೀನ ಕಾರ್ಯದರ್ಶಿಯವರು ೧೧–೦೦ ಗಂಟೆಗೆ ಮುಂಚೆ ಬರೋದಿಲ್ಲ. ಅವರು ಬರದೆ ಕಛೇರಿ ಕೆಲಸ ಆರಂಭ ಆಗೋದಿಲ್ಲ.

ಜೀವನ್ ಬೀರುವಿನ ಬೀಗ ತೆಗೆದು ೩–೪ ಕಡತಗಳನ್ನು ಟೇಬಲ್ ಮೇಲೆ

ಇಟ್ಟುಕೊಂಡನು. ಅಷ್ಟರಲ್ಲಿ ಕೃಷ್ಣಬಹದ್ದೂರ್ ಬಂದು – 'ಸಾರ್ ನನ್ನ ಕರೆದಿರಾ' ಎಂದ.

ಜೀವನ್ ಅವನಿಗೆ ಟೀ ಮಾಡಲು ಹೇಳಿ 'ಚಿಕ್ಕ ಸಾಹೇಬರು ಇನ್ನೂ ಬಂದಿಲ್ವಾ' ಎಂದು ಕೇಳಿದನು.

'ಅಧೀನ ಕಾರ್ಯದರ್ಶಿಯವರು ಅವರನ್ನು ಯಾವುದೋ ಬೇರೆ ಕೆಲಸದ ಮೇಲೆ ಕಳುಹಿಸಿದ್ದಾರೆ. ಇವತ್ತು ಬರೋದಿಲ್ಲಾ ಎಂದು ನಿನ್ನೆಯೇ ಹೇಳಿದ್ದರು. ನಿಮಗೆ ಇದು ಗೊತ್ತಿಲ್ವಾ ಸಾರ್?' – ಎಂದು ಕೃಷ್ಣಬಹದ್ದೂರ್ ಕೇಳಿದ.

'ಓ ಈ ಸಾಹೇಬ್ರಗಳು ತಮ್ಮ ಕೈಕೆಳಗಿನೋರ್ನ ಜವಾನ್‌ರಂತೆ ಕಾಣ್ತಾರೆ. ತಿಂಗಳ ಹದಿನೈದು ದಿವಸ ಸ್ವಂತದ ಕೆಲಸಕ್ಕೆ ಬಳಸಿಕೊಳ್ತಾರೆ' – ಜೀವನ್ ದೀರ್ಘ ಉಸಿರೆಳೆದು ಹೇಳಿದ. ಸರ್ಕಾರಿ ಕಛೇರಿಲಿ ಕೆಲಸ ಮಾಡ್ತೀನಿ ಅಂತ ಹೇಳಿ ಹೆಮ್ಮೆಪಡುವುದರಲ್ಲಿ ಏನೂ ಅರ್ಥ ಇಲ್ಲ. ಅವರು ಹೇಳಿದಹಾಗೆ ಕೇಳದಿದ್ದರೆ ಅವರಿಗೆ ಕೋಪ ಬರುತ್ತೆ. ಅವರಿಗೆ ಕೋಪ ಬಂದರೆ ವರ್ಗಾವಣೆ ಮಾಡುತ್ತಾರೆ, ಅಥವಾ ಕೆಲಸ ಬಿಟ್ಟು ಹೋಗಬೇಕಾಗುತ್ತೆ. ಇದಕ್ಕೆ ಬೇರೆ ದಾರಿನೇ ಇಲ್ಲ. ಈ ಸಾಹೇಬರ್‌ಗಳನ್ನು ತೃಪ್ತಿ ಪಡಿಸಿದರೆ ಸರ್ವಿಸ್ ರೆಕಾರ್ಡ್ ಚೆನ್ನಾಗಿರುತ್ತೆ. ಇಂಥ ಪರಿಸ್ಥಿತಿಯಲ್ಲಿ ನೌಕರ ಏನು ಆಯ್ಕೆ ಮಾಡ್ತಾನೆ. ಅನುಕೂಲಾನೊ – ತೊಂದರೆನೋ – ಜೀವನ್ ತನ್ನ ಮಾನಸಿಕ ನೋವನ್ನು ತೋಡಿಕೊಂಡ.

ನನಗೆ ಏನೂ ತೋಚಲಿಲ್ಲ. ನನಗೆ ಅವರ ಕಛೇರಿ ರೀತಿ ರಿವಾಜುಗಳು ಅರ್ಥವಾಗಲಿಲ್ಲ. ಕಾರಣ ಅದರ ಅನುಭವ ಇರಲಿಲ್ಲ. ಹೀಗಾಗಿ ಇಂಥ ವಿಷಯಗಳ ಬಗ್ಗೆ ನಾನು ಏನನ್ನೂ ಹೇಳಲಿಲ್ಲ. ಯಾವುದೇ ತೀರ್ಮಾನ ಹೇಳುವ ಸಾಮರ್ಥ್ಯ ಇರಲಿಲ್ಲ. ಆದರೆ ನನಗೆ ಎಲ್ಲ ಗೊತ್ತಿದೆ ಅನ್ನುವ ಹಾಗೆ ಜೀವನ್ ಹೇಳುತ್ತಿದ್ದ. ನಾನು ಅವನನ್ನೇ ಕುತೂಹಲದ ಕಣ್ಣುಗಳಿಂದ ನೋಡುತ್ತಿದ್ದೆ.

ಇಂದು ಈ ಫೈಲ್ ಅನ್ನು ಮುಗಿಸುವಂತೆ ಬಾಸ್ ಹೇಳಿದ್ದಾರೆ. ಈಗಾಗಲೇ ನನ್ನ ತಿಳಿವಳಿಕೆ ಹಾಗೂ ಮನಸ್ಸು ಒಪ್ಪುವ ಹಾಗೆ, ನನ್ನ ಶಕ್ತಿಗೆ ಅನುಗುಣವಾಗಿ ಕೆಲಸ ಮಾಡಿದ್ದೇನೆ. ಅದರೆ ಅದು ಅವನಿಗೆ ತೃಪ್ತಿ ನೀಡಿಲ್ಲ. ಹಾಗಾದರೆ ಈ ಫೈಲನ್ನು ಮುಗಿಸೋದು ಹೇಗೆ? ನನಗೆ ಏನೂ ತೋಚುತ್ತಿಲ್ಲ! ಎಂದು ಫೈಲನ್ನು ಟೇಬಲ್ ಮೇಲೆ ಎಸೆದು, ಟೋಪಿಯಿಂದ ಮುಖಕ್ಕೆ ಗಾಳಿ ಹಾಕಿಕೊಳ್ಳತೊಡಗಿದ. ಅವನು ಇಷ್ಟಪಡುವ ಹಾಗೆ ಮಾಡೋಕೆ ಆಗಲ್ಲ. ಅದಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ. ಆದರೆ ಮಾಡದೆ ಇರೋಕು ಆಗಲ್ಲ. ಇದರಿಂದ ತಪ್ಪಿಸಿಕೊಳ್ಳೋದೆ ಕಷ್ಟವಾಗಿದೆ!

ಇಷ್ಟಾದರೂ ಅವನು ಹೇಳುವುದರ ನಿಜವಾದ ಅರ್ಥ ಏನು ಅಂತ ತಿಳಿಯಲಿಲ್ಲ. ನಾನು ಏನೂ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ನಂತರ ಜೀವನ್ ಕೇಳಿದ – 'ನನ್ನಹತ್ತಿರ ನಿನಗೇನಾದರು ಕೆಲಸವಿದೆಯೆ'?



ನಾನು ತಕ್ಷಣ ಅವನ ಪ್ರಶ್ನೆಗೆ ಉತ್ತರಿಸಲಾಗಲಿಲ್ಲ. ಏಕೆಂದರೆ ನನಗೆ ಅವನ ಹತ್ತಿರ ಏನೂ ಕೆಲಸವಿರಲಿಲ್ಲ. ಬೆಳಗ್ಗೆ ಜೀವನ್ ಮತ್ತು ಅವನ ಹೆಂಡತಿಯ ನಡುವೆ ನಡೆದ ಮಾತುಕತೆಯ ಬಗ್ಗೆ ಆತನಿಂದ ಹೆಚ್ಚು ತಿಳಿದುಕೊಳ್ಳಲು ಬಂದಿದ್ದೆ.

ನಾನು ಕಸಿವಿಸಿಗೊಂಡು ಹೇಳಿದೆ. 'ಅಂಥ ವಿಶೇಷ ಏನು ಇಲ್ಲ'! ಸುಮ್ನೆ ನಿನ್ನನ್ನು ತುಂಬಾ ದಿವಸ ನೋಡಿರಲಿಲ್ಲ, ನೋಡೋಣಾಂತ ಬಂದೆ.

ನಾನು ಅಷ್ಟೊಂದು ಬಿಗುಮಾನದಿಂದಿರುವುದನ್ನು ನೋಡಿ ಅವನಿಗೆ ಆಶ್ಚರ್ಯ ವಾಗಿರಬಹುದು.

ಯಾಕೆಂದರೆ ನಾವಿಬ್ಬರೂ ಬಹಳ ವರ್ಷಗಳ ಆತ್ಮೀಯ ಸ್ನೇಹಿತರು. ಆದರೆ ಈಗಿನ ಸಂದರ್ಭ ಒಬ್ಬರ ಮುಖ ಒಬ್ಬರು ನೋಡಲು ಸಂಕೋಚ ಉಂಟಾಗುವಂತಿತ್ತು.

ಜೀವನ್ ಒಬ್ಬ ಜವಾಬ್ದಾರಿ ಗೃಹಸ್ಥ ಹಾಗೂ ಸರ್ಕಾರಿ ನೌಕರ.

ಜೀವನ್ ಮತ್ತೆ ಕೇಳಿದ, 'ಏನೋ ವಿಷಯ ಇರಲೇಬೇಕು. ಅದಕ್ಕೆ ನೀನು ಬಂದಿದ್ದೀಯ?' ಆ ವೇಳೆಗೆ ಕೃಷ್ಣಬಹದ್ದೂರ್ ಎರಡು ಕಪ್ಪು ಟೀ ತಂದು ಟೇಬಲ್ ಮೇಲೆ ಇಟ್ಟನು. ಮಾತುಕತೆ ಮುಂದುವರಿಸಲು ಟೀ ಕೂಡ ಸಹಾಯ ಮಾಡಿತು.

ನಾನು ಹೇಳಿದೆ – 'ನಾನು ಈಗತಾನೆ ಊಟ ಮಾಡಿ ಬಂದಿದ್ದೇನೆ, ಇಷ್ಟು ಬೇಗ ಟೀ ಯಾಕೆ?'

ಅದಕ್ಕೆ ಜೀವನ್ ತಡೆದು ಹೇಳಿದ. 'ಹೌದು ನನಗೆ ಬೆಳಗ್ಗೆ ಹಸಿವಾಗಿರಲಿಲ್ಲ. ಅಲ್ಲದೆ ಆಫೀಸಿಗೆ ಬಂದ ಮೇಲೆ ಟೀ ಕುಡಿಯೋದು ಅಭ್ಯಾಸವಾಗಿ ಹೋಗಿದೆ. ಮತ್ತು ಸರ್ಕಾರಿ ಕಛೇರಿಲಿ ಸಿಗುವ ಅನುಕೂಲಗಳಲ್ಲಿ ಇದೂ ಒಂದು. ಅದನ್ಯಾಕೆ ಬಳಸಿಕೊಳ್ಳಬಾರದು? ನಮ್ಮಂಥ ಸಾಮಾನ್ಯ ನೌಕರರಿಗೆ ಅಂಥ ಹೇಳಿಕೊಳ್ಳೋಂಥ ಅನುಕೂಲಗಳು ಏನಿವೆ, ಏನೂ ಇಲ್ಲ. ಈ ಅನುಕೂಲವೆಲ್ಲ ಸಾಹೇಬರುಗಳಿಗೆ.ಅವರುಗಳಿಗೆ ಬೇಡವೆನಿಸಿದರೆ ನಾಳೆಯಿಂದಲೇ ನಿಲ್ಲಿಸಬಹುದು'. ನಾನು ನಂತರ ಸರ್ಕಾರಿ ಸವಲತ್ತಿನ ರೂಪದಲ್ಲಿ ಬಂದ ಟೀಯನ್ನು ಗುಟುಕರಿಸತೊಡಗಿದೆ. ನಾನು ಬೆಳಗ್ಗೆ ಜೀವನ್ ಮತ್ತು ಆತನ ಹೆಂಡತಿಯ ಸಂಭಾಷಣೆಯನ್ನು ಕೇಳಿದ್ದೆ. ಜೀವನ್ ಹಸಿವಾಗಿರಲಿಲ್ಲ ಎನ್ನುವ ಕಾರಣಕ್ಕೆ ಊಟ ಮಾಡಿರಲಿಲ್ಲ ಎನ್ನುವುದು ಸರಿಯಾದ ಕಾರಣವಲ್ಲ ಎಂದು ನನಗೆ ಚೆನ್ನಾಗಿ ಗೊತ್ತಿತ್ತು. ಇದು ಕಟ್ಮಂಡು. ಅವನು ಕಛೇರಿಯಲ್ಲಿ ಅಧೀನ ಅಧಿಕಾರಿ. ಮನೆ ಬಾಡಿಗೆ ಕಡಮೆ ಅಂದ್ರೆ ೧೫೦ ರೂ. ನೀಡಬೇಕು ಮತ್ತು ನಾಲ್ಕು ಬಾಯಿಗಳಿಗೆ ಆಹಾರ ಒದಗಿಸಬೇಕು. ದಪ್ಪ ಅಕ್ಕಿ ತಗೊಂಡ್ರು ಕೂಡ ಕನಿಷ್ಠ ಪಕ್ಷ ಅಂದ್ರೆ ತಿಂಗಳಿಗೆ ೭೦ ಕೆ.ಜಿ. ಅಕ್ಕಿ ಬೇಕು. ಆಮೇಲೆ ತರಕಾರಿ, ಉಪ್ಪು, ಎಣ್ಣೆ, ಮಸಾಲೆಸಾಮಾನು, ಇತ್ಯಾದಿ. ಇವೆಲ್ಲಾ ದಿನನಿತ್ಯದ ಅಗತ್ಯಗಳು. ವರ್ಷದಲ್ಲಿ ಇವಲ್ಲದೆ

ಹಬ್ಬ–ಹರಿದಿನ, ನಂಟರು, ಹೊಸಬಟ್ಟೆಗಳು ಎಲ್ಲಾ ಸೇರಿ ಜೀವನ್ ಜಾಗದಲ್ಲಿ ನಾನೇ ಇದ್ದರೂ ನಿಭಾಯಿಸಲಾಗದಷ್ಟು ಖರ್ಚುವೆಚ್ಚ. ಇವೆಲ್ಲ ಹೇಗೆ ನಿಭಾಯಿಸುತ್ತಾನೆ?

ಟೀ ಕುಡಿಯುತ್ತಾ ಕೇಳಿದೆ, 'ನಿನಗೆ ಸರ್ವಿಸ್ ಎಷ್ಟಾಯಿತು?'

'ಸುಮಾರು ಹತ್ತುವರ್ಷ. ಮನೆಯಿಂದ ಬರುತ್ತಿದ್ದ ಸಹಾಯ ನಿಂತುಹೋದಾಗ ನಾನು ಅನಿವಾರ್ಯವಾಗಿ ಓದು ನಿಲ್ಲಿಸಬೇಕಾಯಿತು. ಈ ಅಧೀನ ಕಾರ್ಯದರ್ಶಿ ಶಿವನಾಥ್ ನನ್ನ ಕ್ಲಾಸ್‌ಮೇಟ್. ಅವನು ಶ್ರೀಮಂತನಾದ್ದರಿಂದ ಮುಂದೆ ಓದೋಕೆ ಸಾಧ್ಯವಾಯಿತು. ಅವನು ಕೆಲಸಕ್ಕೆ ಸೇರಿ ಇನ್ನೂ ಆರು ವರ್ಷ ಆಗಿದೆ. ಅವನು ಈಗ ನನ್ನ ಸಾಹೇಬ, ನನಗಿಂತ ಅವನು ಹುದ್ದೆಯಲ್ಲಿ ಎರಡು ಮೆಟ್ಟಿಲು ಮೇಲಿದ್ದಾನೆ. ನನ್ನ ಮೂರರಷ್ಟು ಸಂಬಳ ಬರುತ್ತೆ'.

'ಅದೇ ಶಿವನಾಥನಾ'? ನಾನು ಕೇಳಿದೆ. 'ಅದೇ ಭಾರೀ ಶ್ರೀಮಂತರ ಮಗ? ರಾಣಾ ಕಾಲದಲ್ಲಿ ಅವರಪ್ಪ, ಕಿರಿಯ ನ್ಯಾಯಾದೀಶ; ಕಟ್ಮಂಡುವಿನ ಉತ್ತರಭಾಗದಲ್ಲಿ ವಾಸಮಾಡುತ್ತಿದ್ದರು'.

'ಹೌದು ಅದೇ ಶಿವನಾಥ.'

ಜೀವನ್ ನಿರುತ್ಸಾಹ ದನಿಯಲ್ಲಿ ಹೇಳಿದ. ಒಂದು ಕಾಲದಲ್ಲಿ ನಾವು ಸ್ನೇಹಿತರೂಂತ ಮನೆಗೆ ಹೋಗುತ್ತಿದ್ದೆವು. 'ಈಗ ನಮ್ಮನ್ನು ಸೇವಕರಂತೆ ನಡೆಸಿಕೊಳ್ಳುತ್ತಾನೆ. ನಾವು ಅವನ ಎಲೆಕ್ಟ್ರಿಕ್ ಬಿಲ್ಲು, ಟೆಲಿಫೋನ್ ಬಿಲ್ಲು ಪಾವತಿಸಲು, ಮನೆಯ ಸಮಾರಂಭಗಳಿಗೆ ಸಾಮಾನು ಸರಂಜಾಮು ತರಲು ಹೋಗಬೇಕಾಗುತ್ತದೆ'.

'ನಿಮ್ಮ ಸ್ನೇಹಿತನೇ ನಿಮ್ಮ ಸಾಹೇಬರು ಆಗಿರಬೇಕಾದರೆ ನಿನಗೆ ಅನುಕೂಲ ವಾಗಿರಬೇಕಲ್ಲ. ನಿನಗೆ ಹಾಗೆ ಅನ್ನಿಸುವುದಿಲ್ಲವೆ'.

'ಈ ಸರ್ಕಾರಿ ವ್ಯವಸ್ಥೆಯಲ್ಲಿ ಸಾಹೇಬರುಗಳು ನೌಕರರನ್ನು ಸೆರೆಮನೆಯಲ್ಲಿ ಇಟ್ಟಿರುತ್ತಾರೆ. ಸಾಹೇಬರುಗಳಿಗೆ ಬೇಸರವಾದರೆ, ಅಧೀನ ನೌಕರರಿಗೆ ತೊಂದರೆ ಕೊಡಲು ಎಲ್ಲ ತರದ ನಿಯಮಗಳಿರುತ್ತವೆ, ಇನ್ನೊಂದು ಕಡೆ ನಿಯಮವಿಲ್ಲದಿದ್ದರೂ ಹಿರಿಯ ಅಧಿಕಾರಿಗಳ ಆದೇಶಗಳನ್ನು ಉಲ್ಲೇಖಿಸಿ ಸಾಹೇಬರುಗಳು ಕೆಳಗಿನ ನೌಕರರಿಗೆ ಕಿರುಕುಳ ನೀಡಬಹುದು. ಇಂಥ ಸಂಪ್ರದಾಯ ಈ ಕಛೇರಿಯಲ್ಲಿದೆ. ಆದ್ದರಿಂದ ನಾವು ಅವರಿಗೆ ತಲೆಬಾಗಲೇ ಬೇಕಿದೆ. ಅದೂ ಅಲ್ಲದೆ ಸಾಹೇಬರುಗಳು ಅವರ ಸಾಹೇಬರುಗಳಿಗೆ ನಮ್ಮ ಹಾಗೆ ಸಲಾಮು ಹೊಡೆಯಬೇಕು. ಸಾಹೇಬರು ಸಂತೃಪ್ತರಾದರೆ ಕೆಲವು ತಿಂಗಳಲ್ಲಿ ನಮ್ಮನ್ನು ಲಕ್ಷಾಧಿಪತಿಯನ್ನಾಗಿ ಮಾಡಬಹುದು. ಇದು ವಾಸ್ತವಸಂಗತಿ. ಈ ನಂಬಿಕೆಯೊಂದಿಗೆ ಏನೇ ಆಗಲಿ ಅವರನ್ನು ನಾವು ತೃಪ್ತಿಪಡಿಸಬೇಕು. ಇದು ಇಲ್ಲಿಯ ವ್ಯವಸ್ಥೆ'

ನನಗೆ ಇನ್ನಷ್ಟು ಪ್ರಶ್ನೆ ಕೇಳಬೇಕೆನಿಸಿದರೂ ಕೇಳಲಿಲ್ಲ. ನಮ್ಮ ಸ್ನೇಹ ನೂರಕ್ಕೆ ನೂರು ಆದರ್ಶಸ್ನೇಹವೆಂದರೂ ಅಂಥ ಪ್ರಶ್ನೆಯನ್ನು ನಾನು ಕೇಳಲಾಗಲಿಲ್ಲ.



ಜೀವನ್‌ನ ಬದುಕಿನ ಕಠೋರ ವಾಸ್ತವಗಳಿಂದ ನಾನೂ ತೀರ ಭಿನ್ನನಲ್ಲವೆನಿಸಿತು. ಆದ್ದರಿಂದ ಅದುಮಿಟ್ಟ ತನ್ನ ಕೋಪವನ್ನು ಜೀವನ್ ತಾನಾಗಿ ಹೊರಗೆಡವಲೆಂದು ನಾನು ಸುಮ್ಮನಿದ್ದೆ. ಸಾಹೇಬರ ಕೊಠಡಿಗೆ ಹೋಗಲು ಸಿದ್ಧನಾದ. ಅಷ್ಟರಲ್ಲಾಗಲೆ ಶಿವನಾಥ ನಾವು ಇರುವುದನ್ನು ಗಮನಿಸಿಯೂ ಗಮನಿಸದಂತೆ ತನ್ನ ಕೊಠಡಿಗೆ ಹೋದನು. ಜೀವನ್ ತನ್ನ ನಮಸ್ಕಾರ ತಿಳಿಸಲು ಅವರ ಹಿಂದೆಯೇ ಕೊಠಡಿಗೆ ಹೋದ. ಸ್ವಲ್ಪ ಸಮಯದ ನಂತರ ಜೀವನ್ ವಾಪಸ್ ಬಂದು 'ನಾನು ಈ ಕಡತದೊಂದಿಗೆ ಕಾರ್ಯದರ್ಶಿಗಳ ಕೊಠಡಿಗೆ ಹೋಗುತ್ತಿದ್ದೇನೆ. ನೀನು ಶಿವನಾಥ್ ಜೊತೆಯಲ್ಲಿ ಮಾತನಾಡುತ್ತಾ ಇರು, ಬೇಗ ಬರ್ತೀನಿ' – ಎಂದು ಹೇಳಿದ.

ಹಾಗೆಂದು ಹೇಳಿ ಜೀವನ್ ಸೆಕ್ರೆಟ್ರಿಯವರ ಕೊಠಡಿಗೆ ಹೋದ. ನನಗೆ ಈಗ ಶಿವನಾಥನನ್ನು ನೋಡುವ ಕುತೂಹಲ ಉಂಟಾಯಿತು. ಕೃಷ್ಣಬಹದ್ದೂರನನ್ನು ಕರೆದು ಆತನ ಕೈಲಿ ನನ್ನ ಗುರುತಿನ ಚೀಟಿ ಕಳುಹಿಸಿದೆ. ಕೃಷ್ಣಬಹದ್ದೂರ್ ಚೀಟಿಯನ್ನು ನೀಡಿದನು, ಆದರೆ ಶಿವನಾಥ್ ತಕ್ಷಣ ಕರೆಯಲಿಲ್ಲ. ಸ್ವಲ್ಪಹೊತ್ತು ಕಾಯಲು ಹೇಳಿದರು. ಈ ಸಂದರ್ಭದಲ್ಲಿ ನನ್ನ ಗಮನ ಕೃಷ್ಣಬಹದ್ದೂರ್ ಕಡೆ ಹೋಯಿತು.

ತಮ್ಮ ಸಾಹೇಬರುಗಳ ತಾಳಕ್ಕೆ ತಕ್ಕಂತೆ ಹೆಜ್ಜೆಹಾಕುವ ಕೃಷ್ಣಬಹದ್ದೂರ್ ೨೫ ವರ್ಷ ಸರ್ಕಾರಿ ಸೇವಾ ಅನುಭವ ಹೊಂದಿದ್ದಾನೆ. ಕೃಷ್ಣಬಹದ್ದೂರ್ ಸರ್ಕಾರಿ ಕೆಲಸಕ್ಕೆ ಸೇರಿದ ಸಂದರ್ಭದಲ್ಲಿ ಶಿವನಾಥ ಇನ್ನೂ ಓನಾಮ ಕಲಿತಿರಲಿಲ್ಲ. ಸರ್ಕಾರಿ ಸೇವೆಯಲ್ಲಿ ಜವಾನನಿಗಿಂತ ಕಡಿಮೆ ದರ್ಜೆ ಹುದ್ದೆ ಬೇರೆ ಯಾವುದೂ ಇಲ್ಲ.

ಕೃಷ್ಣಬಹದ್ದೂರ್ ಜವಾನನಾಗಿಯೇ ನೌಕರಿ ಪ್ರಾರಂಭಿಸಿ ಜವಾನನಾಗಿಯೇ ನಿವೃತ್ತನಾಗಬೇಕು. ನೇಪಾಲಿ ಸರ್ಕಾರದಲ್ಲಿ ಜವಾನನಾಗಿ ನೇಮಕವಾಗಲು ನೇಪಾಲಿ ಭಾಷೆ ಓದಲು/ಬರೆಯಲು ತಿಳಿದಿರಬೇಕೆನ್ನುವುದು ಒಂದು ಆಶ್ಚರ್ಯವೇ ಸರಿ. ಆದರೆ ಸೇನೆ / ಪೊಲೀಸ್ ಇಲಾಖೆಯಲ್ಲಿ ಇದು ಕಡ್ಡಾಯವಲ್ಲ. ಆದರೆ ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೇಬಲ್ ಆಗಿ ಸೇರಿದವನು ಸಬ್‌ಇನ್‌ಸ್ಪೆಕ್ಟರ್ ಆಗಿ, ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಆಗಿ ಬಡ್ತಿ ಹೊಂದಬಹುದು. ಸೈನಿಕನಾಗಿ ಸೇರಿದವನು ನಂತರ ಮೇಜರ್ ಅಥವಾ ಲೆಫ್ಟಿನೆಂಟ್‌ವರೆಗೆ ಏರಬಹುದು. ಆದರೆ ಜವಾನ ಮಾತ್ರ ಜವಾನನಾಗಿಯೇ ಇರುತ್ತಾನೆ. ೨೫ ವರ್ಷವಾದರೂ ಯಾವುದೇ ಬಡ್ತಿ ಹೊಂದಿರುವುದಿಲ್ಲ. ಆದರೆ ರಾಣ ಅವರ ಅವಧಿಯಲ್ಲಿ ಅಕ್ಷರಸ್ಥ ಸೈನಿಕರು ಮತ್ತು ಅನಕ್ಷರಸ್ಥ ಸೈನಿಕರು ಎಂಬ ವರ್ಗೀಕರಣದ ನಿಯಮ ಇತ್ತು. ಅಕ್ಷರಸ್ಥ ಸೈನಿಕರು ಕ್ರಮವಾಗಿ ಕಿರಿಯ ಗುಮಾಸ್ತರಿಂದ ಹಿರಿಗುಮಾಸ್ತರವರೆಗೂ ಮುಂಬಡ್ತಿ ಪಡೆಯಬಹುದಿತ್ತು. ಕೃಷ್ಣಬಹದ್ದೂರನು ಜವಾನನಾಗಿ ಸಂತೃಪ್ತನಾಗಿರುವಂತೆ ಕಂಡಿತು. ಎಲ್ಲರಿಗಿಂತ ಮೊದಲು ಕಛೇರಿಗೆ ಬರುವವನು ಇವನೇ ಮತ್ತು ಎಲ್ಲರಿಗಿಂತ ಕೊನೆಗೆ ಮನೆಗೆ ಹೋಗುವವನು ಇವನೇ.

ನೇಪಾಲಿ ಡ್ರೆಸ್ಸನ್ನು ಧರಿಸಿದ ಯುವಕನೊಬ್ಬ ರೂಮಿಗೆ ಬಂದ. ಆತ ಕುಳಿತುಕೊಳ್ಳಲು ಹೋದ ಕುರ್ಚಿಯನ್ನು ಗಮನಿಸಿ ಆತ ಸೆಕ್ಷನ್ ಅಧಿಕಾರಿಯಿರಬಹುದು ಎಂದುಕೊಂಡೆ. ನನಗೆ ಆತ ಪರಿಚಿತನಲ್ಲವಾದ್ದರಿಂದ ನಾನು ಅವನ ಕಡೆ ಗಮನಹರಿಸಬೇಕೆಂದು ಅನಿಸಲಿಲ್ಲ. ಸ್ವಲ್ಪ ಸಮಯದ ನಂತರ ಆತ ಶಿವನಾಥನ ಕೊಠಡಿಯನ್ನು ಪ್ರವೇಶಿಸಿದ. 'ಯಾಕೆ ಈ ವಿಷಯದಲ್ಲಿ ಇಷ್ಟೊಂದು ಲೇಟು' ಎಂದು ಶಿವನಾಥನು ಆತನನ್ನು ಪ್ರಶ್ನಿಸಿದ. ಆದರೆ ಅವರ ಪಿಸುಮಾತುಗಳು ನನಗೆ ಸರಿಯಾಗಿ ಕೇಳಿಸುತ್ತಿರಲಿಲ್ಲ.

'ಆ ಅಧೀನ ಕಾರ್ಯದರ್ಶಿಯವರ ಮಗ..... ಜವಾಲಕೇಲ್.....St Xavior.... ತುಂಬಿತುಳುಕುತ್ತಿದ್ದ ಬಸ್ಸು.....'

ಸೆಕ್ಷನ್ ಆಫೀಸರ್ ಶಿವನಾಥರ ರೂಮಿನಿಂದ ಹೊರಬಂದನು. ಗಂಟೆ ಬಾರಿಸಿತು. ಗಂಟೆ ಬಾರಿಸಿದ ತಕ್ಷಣ ಕೃಷ್ಣಬಹದ್ದೂರ್ ರೂಮಿನೊಳಕ್ಕೆ ಹೋದನು. ರೂಮಿನಿಂದ ಹೊರಬರುತ್ತಾ ನಾನು ಶಿವನಾಥನ ರೂಮಿಗೆ ಹೋಗುವಂತೆ ಸೂಚನೆಯನ್ನು ನೀಡಿದನು.

ನಾನು ಶಿವನಾಥನ ಕೊಠಡಿಯನ್ನು ಪ್ರವೇಶಿಸಿ ಆತನ ಕೈಕುಲುಕಿದೆ. ನಾನು ಅಲ್ಲಿರುವದು ಆತನಿಗೆ ಮುಜುಗರ ತಂದಂತೆ ಕಾಣುತ್ತಿತ್ತು. ಆತನಿಗೆ ಹುದ್ದೆಯ ಹೆಮ್ಮೆ ಇದ್ದಿರಬಹುದು. ಆತನ ಕಣ್ಣುಗಳು ಟೇಬಲ್ಲಿನ ಸುತ್ತಾ ಏನನ್ನೋ ಕಳೆದುಕೊಂಡಿರುವುದನ್ನು ಹುಡುಕುತ್ತಿರುವಂತೆ ಕಾಣಿಸಿತು.

ಮೌನ ಮುರಿದು ನಾನು ಕೇಳಿದೆ – 'ಶಿವನಾಥ್‌ಜಿ, ತಾವು ಇಲ್ಲಿರುವುದು ತಿಳಿಯಿತು. ಎಷ್ಟು ದಿನಗಳಿಂದ ಇಲ್ಲಿದ್ದೀರಿ'?

'ಕಳೆದ ವರ್ಷದಿಂದ' – ಗಂಭೀರ ಧ್ವನಿಯಲ್ಲಿ ಶಿವನಾಥ್ ಹೇಳಿದ. ಹಿಂದಿನ ಶಿವನಾಥನಿಗೂ, ಇಂದಿನ ಶಿವನಾಥನಿಗೂ ಬಹಳ ವ್ಯತ್ಯಾಸವಿತ್ತು. ನಾವು ನಮ್ಮ ಮಾತನ್ನು ಮುಗಿಸುವುದರಲ್ಲಿದ್ದೆವು. ನಾನು ನಮ್ಮ ವಿದ್ಯಾರ್ಥಿ ಜೀವನವನ್ನು ನೆನಪಿಸಿದಾಗ ಶಿವನಾಥ್ ಸಂತಸ ಪಡಲಿಲ್ಲ. ಏನನ್ನೋ ಹೇಳಲು ಹೋಗಿ ಏನನ್ನೂ ಹೇಳದೆ ಸುಮ್ಮನಾದ. ನಾನು ತುಂಬಾ ಮುಕ್ತವಾಗಿ ಹಿಂದಿನ ದಿನಗಳನ್ನು ನೆನಪು ಮಾಡಿದೆ. ನನ್ನ ಅನಿಶ್ಚಿತ ಭವಿಷ್ಯವನ್ನು ಸೂಚಿಸಿದೆ. ಕೊನೆಯಲ್ಲಿ ನಾನು, 'ನೀವು ಈಗಾಗಲೇ ಅನೇಕ ಕಛೇರಿಗಳಲ್ಲಿ ಕೆಲಸ ಮಾಡಿರಬಹುದು. ನೀವು ಈಗ ಬೇರೆ ಕಛೇರಿಗೆ ವರ್ಗಾವಣೆ ಪಡೆಯಲು ಬಯಸಿರಬಹುದು ಅಲ್ಲವೆ'? ಎಂದೆ.

'ಲೋಕಸೇವಾ ಆಯೋಗ ಆರು ವರ್ಷಗಳ ಹಿಂದೆ ನನ್ನನ್ನು ಈ ಸಚಿವಾಲಯಕ್ಕೆ ನೇಮಕಮಾಡಿದೆ. ನಾನು ಒಂದು ವರ್ಷ ಇಲ್ಲಿ ಸೇವೆ ಸಲ್ಲಿಸಿದ್ದೇನೆ. ಇದಕ್ಕಿಂತ ಮೊದಲು ತೆರಿಗೆ ಮತ್ತು ಅಬಕಾರಿ ಇಲಾಖೆಯಲ್ಲಿ ಎರಡು ವರ್ಷ ಸೇವೆ ಸಲ್ಲಿಸಿದ್ದೇನೆ. ನಾನು ಈಗ ಬಿರ್‌ಗುಂಜ್ ಅಥವಾ ಭೀರತ್‌ನಗರದ ಸುಂಕದ ಕಛೇರಿಗೆ ವರ್ಗಾವಣೆ ಹೊಂದಲು ಬಯಸಿದ್ದೇನೆ; ಇಲ್ಲಿದ್ದು ಏನು ಪ್ರಯೋಜನ? ಬರೀ ಕಾಲತಳ್ಳುವುದು ಅಷ್ಟೆ' ಎಂದು ಶಿವನಾಥ್ ತನ್ನ ಮಾತು ಸೇರಿಸಿದ. ಇಲ್ಲಿ ಏನೂ ಇಲ್ಲವೆಂದು ಯಾರು ಬೇಕಾದರೂ ಹೇಳುತ್ತಾರೆ. ಆಗೊಮ್ಮೆ ಈಗೊಮ್ಮೆ ಒಂದೋ–ಎರಡೋ ಫೈಲುಗಳು ಬರುತ್ತವೆ. ಅದನ್ನ ನೋಡಿ ಕಳುಹಿಸಿದರೆ ಅವತ್ತಿನ ಕೆಲಸ ಮುಗಿಯಿತು. ಈ ಸಚಿವಾಲಯದಲ್ಲಿಯೆ ಬಹಳ ದಿವಸ ಉಳಿದರೆ, ನೀವು ಮಾನಸಿಕವಾಗಿ, ದೈಹಿಕವಾಗಿ, ಆರ್ಥಿಕವಾಗಿ ದಿವಾಳಿಯಾಗುತ್ತೀರಿ. ತುಂಬಾ ಬಿಜ಼ಿಯಾಗಿರುವ ಕಛೇರಿಗೆ ವರ್ಗಾವಣೆ ಪಡೆಯಲು ಆಶಿಸುತ್ತಿದ್ದೇನೆ. ನೋಡೋಣ ಗಾಳಿ ಯಾವ ಕಡೆ ಬೀಸುತ್ತದೆಯೊ'?

ನಾನು ಶಿವನಾಥನ ಬಗ್ಗೆ ಹೆಚ್ಚು ತಿಳಿಯಲು ಪ್ರಯತ್ನಿಸಿದೆ. ಈಗ ಸ್ವಲ್ಪ ಬಿಗುಮಾನದಿಂದ ಹೊರಬಂದಂತಿತ್ತು. ಮುಜುಗರ ಪಡುವ ಯಾವ ಸಂದರ್ಭವೂ ಇರಲಿಲ್ಲ. ನಾನೊಬ್ಬ ಸರಳ ಮನುಷ್ಯ. ಆತ ತನ್ನ ಬಗ್ಗೆಯೆ ಹೊಗಳಿಕೊಳ್ಳುತ್ತಿದ್ದ. ಇದು ಆತನ ಯೋಗ್ಯತೆಯನ್ನೂ ತೋರಿಸುತ್ತಿತ್ತು. ನಾನು ಆತನ ಮಾತುಗಳನ್ನು ಗಮನಿಸಿ, 'ನಾಲ್ಕು ವರ್ಷಗಳ ಎಕ್ಸೈಸ್ ಮತ್ತು ಟ್ಯಾಕ್ಸ್ ಆಫೀಸಿನ ನಿಮ್ಮ ಅನುಭವ ಕಸ್ಟಂ ಆಫೀಸಿನಲ್ಲಿ ಸೇವೆ ಸಲ್ಲಿಸಲು ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸಿರಬೇಕು' ಎಂದು ಹೇಳಿದೆ.

ನಮ್ಮ ಅನುಭವವನ್ನು ಇಲ್ಲಿ ಯಾರು ಕೇಳುತ್ತಾರೆ? ಶಿವನಾಥ ವಿವರಿಸಿದ: 'ಲೋಕಸೇವಾ ಆಯೋಗ ನನ್ನನ್ನು ನೀವು ತಿಳಿದಂತೆ ಸುಲಭವಾಗಿ ಇಲ್ಲಿ ನೇಮಕ ಮಾಡಲಿಲ್ಲ. ನಾನು ಬಹಳಷ್ಟು ಹಣ ಮತ್ತು ಪ್ರಭಾವವನ್ನು ಬಳಸಬೇಕಾಯಿತು. ನನ್ನ ಅದೃಷ್ಟವೆಂಬಂತೆ ಅಲ್ಲಿ ನಮ್ಮ ತಂದೆಯವರಿಂದ ತರಬೇತಿ ಪಡೆದವರೊಬ್ಬರಿದ್ದರು. ನಮ್ಮ ತಂದೆಯವರೆ ಅವರನ್ನು ಭೇಟಿ ಮಾಡಿ ನನ್ನನ್ನು ಹಣಕಾಸು ಇಲಾಖೆಗೆ ಅಥವಾ ವಿದೇಶಾಂಗ ಇಲಾಖೆಗೆ ನೇಮಿಸುವಂತೆ ವ್ಯವಸ್ಥೆ ಮಾಡಿದ್ದರು. ನಾನು ಕೆಲಸ ಗಿಟ್ಟಿಸಿದ್ದು ಈ ರೀತಿ ಗೊತ್ತಾ! ಇಲ್ಲಿ ನೇಮಕವಾದ ಮೇಲೂ ನನಗೆ ಯಾವುದೇ ಜವಾಬ್ದಾರಿಯ ಕೆಲಸವನ್ನು ಬಹಳ ವರ್ಷ ನೀಡಲಿಲ್ಲ. ಆಮೇಲೆ ಹರಸಾಹಸ ಮಾಡಿ, ಎಕ್ಸೈಸ್‌ಡ್ಯೂಟಿ ಕಛೇರಿಗೆ ವರ್ಗಾವಣೆ ಪಡೆದೆ; ನಂತರ ನನ್ನ ಬದುಕು ಸರಿಯಾದ ದಾರಿಯಲ್ಲಿ ಇದೆ.'.......

'ಶಿವನಾಥ ಎಕ್ಸೈಸ್ ಕಛೇರಿಯಲ್ಲಿ ಕೆಲಸ ಮಾಡುವಾಗ ಹಣ ಮಾಡಿ ಕೊಂಡಿರಬಹುದು' ಎಂದು ಮನಸ್ಸಿನಲ್ಲಿಯೇ ಲೆಕ್ಕಹಾಕಿದೆ. ಈಗ ಕಸ್ಟಂ ಕಛೇರಿಗೆ ವರ್ಗಾವಣೆ ಪಡೆಯಲು ಪ್ರಯತ್ನ ನಡೆಸಿದ್ದಾನೆ. ತನ್ನ ಹಣಕಾಸು ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಹೆಣಗುತ್ತಿದ್ದಾನೆ. ಹಣ ಮಾಡಲುಬಾರದ ಕಛೇರಿಗಳು ಅವನ ದೃಷ್ಟಿಯಲ್ಲಿ ಪ್ರಯೋಜನವಿಲ್ಲದವು. ನಾನು ಮೆಲುದನಿಯಲ್ಲಿ ಕೇಳಿದೆ. 'ನಿಮ್ಮ ಸಂಬಳ ಎಷ್ಟು'? ಎಂದು.

'ನನ್ನ ಸಂಬಳ' ವ್ಯಂಗ್ಯವಾಗಿ ನಗುತ್ತಾ ಆತ ಹೇಳಿದ.....ಎಷ್ಟು?. ಓ ಅದು ನನ್ನ ತಿಂಗಳ ಸಿಗರೇಟಿನ ಖರ್ಚಿಗೆ ಸಾಕಾಗುತ್ತದೆ. ಅಂದರೆ ಕೇವಲ ನಾಲ್ಕುನೂರು ಮತ್ತು ಸ್ವಲ್ಪ. ನಾನು ಭವಿಷ್ಯ ನಿಧಿಯಿಂದ ಮನೆಯ ಮೇಲೆ ಪಡೆದಿರುವ ಸಾಲಕ್ಕೆ ಸ್ವಲ್ಪ ಹಿಡಿಯುತ್ತಾರೆ.  'ನೀವು ಮನೆ ಎಲ್ಲಿ ಕಟ್ಟಿದ್ದೀರಿ'?

ಥಾಮಲ್‌ನಲ್ಲಿ. ಸರ್ಕಾರಿ ಸಾಲದಲ್ಲಿ ಒಂದು ಸಣ್ಣ ಸೈಟು ಕೊಳ್ಳೋದಕ್ಕೂ ಸಾಕಾಗಲಿಲ್ಲ. ಅದು ಅಷ್ಟೇ. ಅದರಿಂದ ಏನೂ ಆಗಲಿಲ್ಲ ಎಂದು ನಿಟ್ಟುಸಿರು ಬಿಟ್ಟು ಹೇಳಿದ 'ನನ್ನ ಹತ್ತಿರ ಎರಡು ಲಕ್ಷ ಹಣ ಇತ್ತು. ಇದರಿಂದ ಒಂದು ಸಣ್ಣ ಮನೆ ಕಟ್ಟಿಸಿದೆ. ನಾನು ನಮ್ಮ ತಂದೆಯವರಿಂದ ಏನನ್ನೂ ತೆಗೆದುಕೊಂಡಿಲ್ಲ'.

'ಒಳ್ಳೆಯ ಮಗ ತಂದೆಯಿಂದ ಏನನ್ನೂ ನಿರೀಕ್ಷಿಸುವುದಿಲ್ಲ' ಎಂದು ಅವನ ಮಾತಿಗೆ ನೈತಿಕ ಸಮರ್ಥನೆ ನೀಡುತ್ತಾ – ಪ್ರತಿಯೊಬ್ಬನೂ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವುದು, ಅದು ಸುಖವಿರಲಿ ದುಃಖವಿರಲಿ ಸರಿಯಾದ ಕ್ರಮ' ಎಂದೆ.

ಈಗ ಆತನಿಗೆ ಸ್ವಂತ ಕಾರನ್ನು ಹೊಂದುವ ಆಸೆಯಿದೆ. ಒಂದು ದಿನ ಅದನ್ನೂ ಪಡೆಯುವ ನಂಬಿಕೆಯಿದೆ. ಮತ್ತು ಇನ್ನೂ ಸ್ವಲ್ಪ ದಿನಗಳಲ್ಲಿಯೆ ಅವರ ಸಾಹೇಬರು ತನ್ನನ್ನು ಕಸ್ಟಮ್ ಮುಖ್ಯಾಧಿಕಾರಿಯಾಗಿ ವರ್ಗಮಾಡಬಹುದೆಂಬ ಭರವಸೆಯನ್ನು ಹೊಂದಿದ್ದಾನೆ.

'ಯಾವುದು ಸೂಕ್ತ, ಬಿರ್ಗುಂಜ್ ಕಸ್ಟಮ್ ಕಛೇರಿಯೋ ಅಥವಾ ಬೀರತ್‌ನಗರ್–ಕಚೇರಿಯೋ?' ನಾನು ಕೇಳಿದೆ.

'ಎರಡೂ ಒಂದೆ. ಎರಡೂ ಕೂಡ ಭಾರತ– ನೇಪಾಳದ ಗಡಿಯಲ್ಲಿವೆ. ಬಿರ್ಗುಂಜ್– ಕಠ್ಮಂಡುವಿನ ಹೆಬ್ಬಾಗಿಲಿನಂತಿದೆಯಾದ್ದರಿಂದ ಬಿರ್ಗುಂಜ್ ಉತ್ತಮ'.

ಬಿರ್ಗುಂಜ್ ಉತ್ತಮವಾದ ಜಾಗ ಅನ್ನುವುದಾದರೆ, ನೀವು ಬಿರ್ಗುಂಜ್‌ಗೆ ಹೋಗುವುದು ಸರಿ – ಎಂದು ನಾನು ಸಹಜವಾಗಿ ಹೇಳಿದೆ.

'ನೀವು ಟ್ಯಾಕ್ಸ್ ಆಫೀಸ್‌ನಲ್ಲಿದ್ದರೆ ಸದಾ ೨೪ ಗಂಟೆಗಳು ಭಯದ ನೆರಳಿನಲ್ಲಿರಬೇಕು.  ಕಸ್ಟಮ್ಸ್ ಕಛೇರಿಯಲ್ಲಿ, ಪ್ರತಿಯೊಬ್ಬರಿಗೂ ಗೊತ್ತು ಅಲ್ಲಿಯ ವಾತಾವರಣ ಹೇಗಿರುತ್ತದೆ, ಎಂದು. ಅಲ್ಲಿ ಬರುವ ಮಾಮೂಲು ಎಲ್ಲರಿಗೂ ಹಂಚಿಕೆಯಾಗುತ್ತದೆ. ಮೇಲಿನಿಂದ ಕೆಳಗಿನವರೆಗೆ ಎಲ್ಲರಿಗೂ ಹಂಚಿಕೆಯಾಗುತ್ತೆ. ಇದು ತಿಮ್ಮ, ಬೊಮ್ಮ, ಕಾಳ ಎಲ್ಲರಿಗೂ ಗೊತ್ತಿರುತ್ತದೆ. ಕೆಲವರಿಗೆ ಹೆಚ್ಚಿಗೆ ಸಿಗುತ್ತೆ, ಕೆಲವರಿಗೆ ಕಡಿಮೆ ಸಿಗುತ್ತೆ. ನೀವು ಬೇಕಾದ್ರೆ ಲಾಭ ಮಾಡಿಕೊಳ್ಳಬಹುದು. ಅದಕ್ಕೆ ಧೈರ್ಯಬೇಕು. ಆದರೆ, ಇದು ಅರ್ಥಾತ್ ಅನೈತಿಕ ಸಂಪಾದನೆಗೆ, ರಾಣ ಕಾಲದಿಂದಲೂ ಇದ್ದದ್ದೆ' ಎಂದು ಹೇಳಿದೆ.

'ಅನೈತಿಕವಾದದ್ದೇನನ್ನೂ ಮಾಡದೆ ಮಾಡುವ ದುಡಿಮೆ ನೈತಿಕವೇ' –



ನಾನು ಪುಸಲಾಯಿಸುವ ರೀತಿ ಹೇಳಿದೆ – ಲಂಚದಿಂದ ಬರುವ ಆದಾಯ ಹೇಗಿದೆ?

'ಒಂದು ತಿಂಗಳಿಗೆ ಹದಿನೆಂಟರಿಂದ ಇಪ್ಪತ್ತು ಸಾವಿರ ರೂಪಾಯಿಗಳು. ಅದು ಸಂಬಳದ ದಿನ ಪ್ರತಿಯೊಬ್ಬರಿಗೂ ಹಂಚಿಕೆಯಾಗುತ್ತದೆ. ಇದು ಒಂದು ರೀತಿಯಲ್ಲಿ ಎಲ್ಲರಿಗೂ ಗೊತ್ತಿರುವ ರಹಸ್ಯ. ಅದು ಕಪ್ಪುಹಣವೆಂದು ಯಾರೂ ಭಾವಿಸುವುದಿಲ್ಲ. ಅದಕ್ಕಾಗಿಯೆ ನಾನು ಅಲ್ಲಿಗೆ ಹೋಗಲು ಪ್ರಯತ್ನಿಸುತ್ತಿದ್ದೇನೆ.'

ದೂರವಾಣಿಯ ಕರೆ ನಮ್ಮ ಸಂಭಾಷಣೆಗೆ ವಿರಾಮ ಹಾಕಿತು. 'ಒಂದು ನಿಮಿಷ' ಎಂದು ಹೇಳಿದ ಶಿವನಾಥ ದೂರವಾಣಿಯಲ್ಲಿ ಮಾತನಾಡಲು ಆರಂಭಿಸಿದ.

'ಹಲೋ ಸರ್– ಗುಡ್‌ಮಾರ್ನಿಂಗ್ ಸಾರ್ – ಶಿವನಾಥ್ ಮಾತಾನಾಡುತ್ತಿರುವುದು. ಸರಿ ಸಾರ್ ಜೀವನ್‌ಗೆ ಹೇಳಿದೆ, ಫೈಲನ್ನು ತಂದಿದ್ದಾನೆ ಸರ್....ಸರಿ ಸರ್ ಗುಡ್ ಬೈ ಸರ್' ಎಂದು ಹೇಳಿ ಟೆಲಿಫೋನ್ ರಿಸೀವರನ್ನು ಇಟ್ಟು ನನ್ನ ಕಡೆ ತಿರುಗಿ ಹೇಳಿದ: 'ಸಿಬ್ಬಂದಿ, ಬಾಸ್ ಏನು ಹೇಳುತ್ತಾರೆ ಎನ್ನುವುದನ್ನು ಅರ್ಥವಾಡಿಕೊಳ್ಳುವುದಿಲ್ಲ. ಬಾಸ್ ಕೂಡ ಸಿಬ್ಬಂದಿಯ ಸ್ವಭಾವವನ್ನು ಅರ್ಥಮಾಡಿಕೊಳ್ಳುವುದಿಲ್ಲ. ನಾನು ಇಲ್ಲಿ ಇಬ್ಬರ ಮಧ್ಯ ಸಿಲುಕಿ ಮಧ್ಯವರ್ತಿಯಾಗಿ ಕೆಲಸ ಮಾಡಬೇಕು'.

ಆತ ಯಾವ ವಿಚಾರವಾಗಿ ಮಾತನಾಡಿದ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲವಾದ್ದರಿಂದ, ನಾನು ಸುಮ್ಮನೆ ತಲೆದೂಗಿದೆ. ಅಷ್ಟರಲ್ಲಿ ಜೀವನ್ ರೂಮಿಗೆ ಬಂದನು. ನನ್ನನ್ನು ಗಮನಿಸದೆ ಶಿವನಾಥನ ಬಳಿ ಹೋಗಿ ಆತನ ಸಮೀಪ ನಿಂತು, ಫೈಲಿನ ಬಗ್ಗೆ ಅವನ ಅಭಿಪ್ರಾಯ ನೀಡಿದನು, – 'ಈ ಫೈಲಿನ ಬಗ್ಗೆ ಕಾರ್ಯದರ್ಶಿಯವರು ಹೇಳುವಂತೆ ಮಾಡಲು ಸಾಧ್ಯವಿಲ್ಲ. ಇದು ಆರ್ಥಿಕ ನಿಯಮಗಳು ಹಾಗೂ ಕಾನೂನಿಗೆ ವಿರುದ್ಧವಾಗಿದೆ' ಎಂದು. 'ನಾನು ಕಾನೂನು ಮತ್ತು ನಿಯಮಗಳ ವಿರುದ್ಧವಾಗಿ ಹೇಗೆ ಬರೆಯಲಿ? ನಿಯಮಗಳಲ್ಲಿಯೆ ಏನಾದರೂ ಹೊಂದಾಣಿಕೆಯಾಗುವಂತೆ ಮಾಡಿ' ಎಂದು ಕಾರ್ಯದರ್ಶಿಯವರು ಆದೇಶಿಸುತ್ತಾರೆ. ಆದರೆ ಅವರ ಇಂಗಿತದಂತೆ ಹೊಂದಾಣಿಕೆ ಮಾಡಲು ನಿಯಮದಲ್ಲಿ ಅವಕಾಶವಿಲ್ಲ. 'ನೀವೇ ಯೋಚನೆ ಮಾಡಿ ಸಾರ್! ಆ ಗುತ್ತಿಗೆದಾರರ ಕೆಲಸ ಕರಾರಿನ ಪ್ರಕಾರ ಮುಗಿದಿದೆ. ಕಂಟ್ರಾಕ್ಟರರಿಗೆ ನೀಡಬೇಕಾದ ಹಣ ಈಗಾಗಲೇ ಪಾವತಿಯಾಗಿದೆ. ಈಗ ಅನಾವಶ್ಯಕವಾದ, ತಳಬುಡವಿಲ್ಲದ ಕ್ಲೈಮನ್ನು ಸರ್ಕಾರದಿಂದ ಪಾವತಿಸುವುದು ಹೇಗೆ? ಕೇವಲ ಐವತ್ತೊ–ಅರವತ್ತೋ ಸಾವಿರಗಳಾದರೆ ಯೋಚಿಸಬಹುದಿತ್ತು, ಆದರೆ ಎಂಟು ಮಿಲಿಯನ್! ಓ– ಅದು ನನ್ನಿಂದ ಊಹಿಸಲೂ ಸಾಧ್ಯವಿಲ್ಲ. ನಾವು ಬಡಪಾಯಿ ನೌಕರರು. ನಾವು ನಮ್ಮ ಕೆಲಸದ ಬಗ್ಗೆ ಯೋಚಿಸಬೇಕಲ್ಲವೆ. ಲಂಚನಿರೋಧ ಇಲಾಖೆಯವರು ನಮ್ಮನ್ನು ಹಿಡಿದರೆ

ಏನೂಂತಾ ಹೇಳೋದು? ಸಾರ್ ತಾವು ಯೋಚನೆ ಮಾಡಿ'.

'ಫೈಲ್ ಕೊಡು' ಶಿವನಾಥ್ ಜೀವನ್‌ನಿಂದ ಫೈಲು ಕಸಿದುಕೊಂಡು ಆತುರಾತುರವಾಗಿ ಓದಿ 'ನೀವು ಕಾರ್ಯದರ್ಶಿಯವರು ಏನು ಹೇಳುತ್ತಾರೆ ಎನ್ನುವುದನ್ನು ಪ್ರಶ್ನಿಸಲಾಗದು, ಅರ್ಥವಾಯಿತಾ? ನೀನು ಕೆಲಸ ಕಳೆದುಕೊಂಡರೂ ನೀನು ಒಬ್ಬ ಸಾಮಾನ್ಯ ನೌಕರ. ಆದರೆ ಕಾರ್ಯದರ್ಶಿಯವರಿಗೆ ಏನಾಗಬಹುದು ಗೊತ್ತಾ? ಅವರು ಹೇಳಿದ್ದನ್ನು ನಾವು ಯಾವ ರೀತಿಯಲ್ಲಾದರೂ ನೆರವೇರಿಸಲೇಬೇಕು. ಅಲ್ಲದೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಅವರಿಗೆ ಸೇರಿದೆ. ಕಾರ್ಯದರ್ಶಿಯವರು ಹೇಳುತ್ತಿರುವುದು ಏನು. ಒಂದೇ ಫೈಲಿಗೆ ಈ ಸಚಿವಾಲಯದಲ್ಲಿ ಎರಡು ರೀತಿಯ ಅಭಿಪ್ರಾಯ ಇರಬಾರದು ಎಂದು. ಅದು ಹೇಗೆ ಅವರು ಟ್ರ್ಯಾಪ್ ಆಗುವ ಹಾಗೆ ಕೆಲಸ ಮಾಡುತ್ತಾರೆ. ಅವರು ಟ್ರ್ಯಾಪ್ ಆದರೂ ಅವರ ಕೂದಲನ್ನೂ ಅಳ್ಳಾಡಿಸುವ ಶಕ್ತಿ ನೇಪಾಳದಲ್ಲಿಯೆ ಯಾರಿಗೂ ಇಲ್ಲ. ಅವರಾರು ಗೊತ್ತಾ? ಅವರ ಹಿಂದೆ ಯಾರಿದ್ದಾರೆ ಗೊತ್ತಾ? ನಿಮಗೆ ಗೊತ್ತಿಲ್ಲ. ಸರಿ ಅವರು ಹೇಗಾದರೂ ಇರಲಿ, ನಾವು ಮಾತ್ರ ನಮಗೆ ಅನ್ನ ಕೊಡೋ ಕೆಲಸಕ್ಕೆ ಪ್ರಾಮಾಣಿಕರಾಗಿರಬೇಕು. ಏನೆಂದರೆ ನಾವು ಅವರ ಆದೇಶವನ್ನು ಗೌರವಗಳೊಂದಿಗೆ ಪಾಲಿಸಲೇಬೇಕು, ಅರ್ಥವಾಯಿತಾ?' ಎಂದರು.

ಶಿವನಾಥ ಫೈಲನ್ನು ಅಧ್ಯಯನಮಾಡಿ ಹೇಳಿದ, 'ನೋಡು' ಇಲ್ಲಿ ಸ್ವಲ್ಪ ಕ್ಲೂಯಿದೆ, ಇದು ಹೇಗಿರಬೇಕೆಂಬುದಕ್ಕೆ ಕಾಮಗಾರಿ ಹಾಗೂ ಸಂಪರ್ಕ ಸಚಿವಾಲಯ ಅಭಿಪ್ರಾಯ ನೀಡಿದೆ. ನೀನು ಅದನ್ನು ಆಧರಿಸಿ ಕ್ರಮ ಕೈಗೊಳ್ಳಬಹುದೆಂದು ಶಿವನಾಥ ಏನೊ ಹೊಸಬೆಳಕು ಕಾಣಿಸಿಕೊಂಡಂತೆ ಧೈರ್ಯವಾಗಿ ಸೂಚನೆ ನೀಡಲು ಆರಂಭಿಸಿದ. ಸರಿ ನಾನು ಹೇಳಿದ ಹಾಗೆ ಬರಿ – ಕಂಟ್ರಾಕ್ಟರ್ ಕೆಲಸವನ್ನು ಅಗ್ರಿಮೆಂಟ್ ಪ್ರಕಾರ ಮುಗಿಸಬೇಕಿದೆ. ಮಾರುಕಟ್ಟೆಯಲ್ಲಿ ದುಬಾರಿಯಾದ ಬೆಲೆ ಯೋಜನೆಯ ಅಂದಾಜಿಗೆ ಹೊರತಾಗಿ ಆತ ಮಾಡಿರುವ ಕಾಮಗಾರಿ–ಇತ್ಯಾದಿಗಳ ಬಗ್ಗೆ ಆಗಿಂದಾಗ್ಗೆ ಆತ ನೀಡಿರುವ ಪತ್ರಗಳಿಂದ ಸಾಬೀತಾಗುತ್ತದೆ. ಮತ್ತು ಸಂಬಂಧಿಸಿದ ಸಚಿವಾಲಯ ಆತನ ಕ್ಲೈಮ್ ಅನ್ನು ಬೆಂಬಲಿಸಿ ಆರ್ಥಿಕ ನಿಯಮ ಹಾಗೂ ನಿಬಂಧನೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಹೇಳಿದೆ. ಇದು ಆರ್ಥಿಕ ನಿಯಮ ಹಾಗೂ ಕಾನೂನು ಬಾಹಿರವಾದರೂ, ಕಂಟ್ರಾಕ್ಟರ್ ಕ್ಲೈಮ್ ಮಾಡಿರುವ ೮ ಮಿಲಿಯನ್ ಹಣ ನ್ಯಾಯಸಮ್ಮತವಾಗಿದೆ. ಆದ್ದರಿಂದ ಮಂಜೂರಾತಿಗೆ ಅವರು ಸಲ್ಲಿಸಿರುವ ವಿನಂತಿಯನ್ನು ಒಪ್ಪಿಸಲಾಗಿದೆ'; ಇಷ್ಟು ನೀನು ಬರೆಯಬೇಕಾದ್ದು. ನಮ್ಮ ಜೇಬಿನಿಂದ ಏನೂ ಕೊಡಬೇಕಿಲ್ಲ. ಪಾವತಿ ಮಾಡಬೇಕಾಗಿರುವವರು ಪಾವತಿ ಮಾಡಲು ಸಿದ್ಧರಿರುವಾಗ ನಾವೇಕೆ ಅವರಿಗೆ ತಲೆನೋವಾಗಬೇಕು? ಹೋಗಿ ದಯಮಾಡಿ ಇವತ್ತೆ ಫೈಲ್ ಸಿದ್ಧಮಾಡಿ.



ಶಿವನಾಥನ ದೀರ್ಘ ವಿವರಣೆ ಸರಳವಾಗಿದ್ದಂತೆ ಕಂಡರೂ ಜೀವನ್‌ನಿಗೆ ಒಪ್ಪಿಕೊಳ್ಳಲು ಕಷ್ಟವಾಗಿದ್ದವು. ಜೀವನ್ ಫೈಲ್ ತೆಗೆದುಕೊಳ್ಳಲು ಹಿಂದೇಟು ಹಾಕಿದ. ಆದರೆ ಶಿವನಾಥ ಗೌರವಯುತವಾಗಿ ಫೈಲನ್ನು ತೆಗೆದುಕೊಳ್ಳುವಂತೆ ಹೇಳಿದ ಮೇಲೆ, ಜೀವನ್ ಏನನ್ನೂ ಹೇಳದೆ ಫೈಲ್ ತೆಗೆದುಕೊಂಡು ಹೊರನಡೆದ.

'ಜೀವನ್ ನನ್ನ ಸಹಪಾಠಿ' ಶಿವನಾಥ್ ನಗುತ್ತಾ ಹೇಳಿದ: 'ನಿಮಗೆ ಗೊತ್ತಾ? ಆತ ಮುಗ್ಧ. ಅರ್ಥಾನೆ ಮಾಡಿಕೊಳ್ಳೋದಿಲ್ಲ ಆದ್ದರಿಂದಲೆ ಆತ ಮೇಲೆ ಬಂದಿಲ್ಲ. ಹತ್ತು ವರ್ಷಗಳಿಂದ ಸರ್ಕಾರಿ ಸೇವೆಯಲ್ಲಿದ್ದಾನೆ!'

ಅಷ್ಟರಲ್ಲಿ ಟೆಲಿಫೋನಿನ ಕರೆ ಬಂತು. ಟೆಲಿಫೋನಿನ ರಿಸೀವರ್ ಅನ್ನು ತೆಗೆದುಕೊಂಡ ಶಿವನಾಥ–ಹಲೋ ಗುಡ್‌ಮಾರ್ನಿಂಗ್ ಸರ್, ಎಸ್ ಸರ್, ನಾನು ಆದೇಶ ನೀಡಿದ್ದೇನೆ ಸರ್! ಎಸ್ ಸರ್... ಎಸ್ ಸರ್........ ಸರಿ ಸರ್ ನಾನು ಬರ್ತೀನಿ ಸರ್!

ಶಿವನಾಥ್ ನನ್ನ ಕಡೆ ನೋಡಿ ಹೇಳಿದ 'ನಾನು ಈಗ ಕಾರ್ಯದರ್ಶಿಯವರ ಕೊಠಡಿಗೆ ಹೋಗಬೇಕಿದೆ, ನೀವು ದಯವಿಟ್ಟು ನಾಳೆ ಬರ್ತೀರಾ? ಮತ್ತೆ ಬನ್ನಿ ಹರಟೆ ಹೊಡೆಯೋಣ. ನಾನಿನ್ನು ಬರ್ತೀನಿ. ಮತ್ತೆ ಸಿಗೋಣ!'

ನಾನು ಮತ್ತು ಜೀವನ್ ಶಿವನಾಥನ ರೂಮಿನಿಂದ ಹೊರಬಂದೆವು. ಶಿವನಾಥ್ ಕಾರ್ಯದರ್ಶಿಯವರ ರೂಮಿಗೆ ಹೋದನು. ನಾನು ವರಾಂಡದಲ್ಲಿ ಸ್ವಲ್ಪ ಇಣುಕಿದೆ. ಜೀವನ್ ಅಲ್ಲಿಯೇ ಕೂರುವಂತೆ ಸೂಚಿಸಿದ. ಅದೇ ರೂಮಿನಲ್ಲಿ ಕುಳಿತಿದ್ದ ಸೆಕ್ಷನ್ ಅಧಿಕಾರಿ ನಾನು ಆಗಂತುಕನಾದ ಕಾರಣ ಮೊದಲು ನನ್ನ ಕಡೆ ಆನಂತರ ಜೀವನ್‌ನ ಕಡೆ ನೋಡಿದ. ಜೀವನ್ ನನ್ನನ್ನು ಸೆಕ್ಷನ್ ಅಧಿಕಾರಿ ಕೃಷ್ಣಗೋಪಾಲನಿಗೆ ಪರಿಚಯಿಸಿದ. ನಾನು ನಮಸ್ತೆ ಹೇಳಿದೆ. ಆತ ಪ್ರತಿಯಾಗಿ ವಿನಯದಿಂದ ನಮಸ್ತೆ ಹೇಳಿದ. ನಾವು ಸಹಜವಾಗಿ ಮಾತಿಗಿಳಿದೆವು. ಆತ ಈಗ ತಾನೆ ಮೂರು ವರ್ಷಗಳ ಹಿಂದೆ ಸರ್ಕಾರಿ ಸೇವೆಗೆ ಸೇರಿರುವುದರ ವಿಷಯ ತಿಳಿಸಿದ. ಆತನನ್ನು ನೋಡಿದರೆ ಗೊತ್ತಾಗುತ್ತಿತ್ತು ಸರಳಸ್ವಭಾವದ ಮನುಷ್ಯನೆಂದು. ಆತ ಸರ್ಕಾರಿ ಸೇವೆಯ ಫಲದ ರುಚಿಯನ್ನು ಕಂಡಿರಲಿಲ್ಲ. ಆತ ತನ್ನ ಸಂಬಳವನ್ನೇ ನಂಬಿ ಬದುಕುತ್ತಿದ್ದ.

ಜೀವನ್ ಸೆಕ್ಷನ್ ಅಧಿಕಾರಿಯನ್ನು ಕುರಿತು 'ಹೇಳಿ ಸಾಹೇಬರೆ' ಕಾರ್ಯದರ್ಶಿಯವರು ಹೇಳಿದಂತೆ ಅವರ ಆಸಕ್ತಿಗನುಗುಣವಾಗಿ ಹೇಗೆ ಈ ಫೈಲನ್ನು ಸಿದ್ಧಪಡಿಸಲಿ?

ನೋಡಿ ಸಾಹೇಬರೆ, ನೀವೇನಾದರೂ ಬರೀರಿ ನಾನು ಸಹಿ ಮಾಡಿ ಮುಂದೆ ಕಳುಹಿಸುತ್ತೇನೆ. ನನಗೆ ಗೊತ್ತಿರೋದು ಅಷ್ಟೆ. ಈಗಾಗಲೇ ಅಧೀನ ಕಾರ್ಯದರ್ಶಿಯವರು ಏನು ಬರೆಯಬೇಕೆಂಬುದನ್ನು ಸೂಚಿಸಿರುವಾಗ, ಮತ್ತೆ ಆಕ್ಷೇಪಣೆಗಳನ್ನು ಎತ್ತುವುದರಲ್ಲಿ ಉಪಯೋಗವಿಲ್ಲ. ನಿಮಗೆ ಕೆಲಸದಲ್ಲಿ ಇರಬಾರದು

ಅನ್ನುವ ಹಾಗಿದ್ರೆ ರಾಜೀನಾಮೆ ನೀಡಿ. ಕೆಲಸ ಬೇಕಂದ್ರೆ ನಿಮಗೆ ಈಗ ಅವರು ಏನು ಹೇಳಿದ್ದಾರೊ ಅದರಂತೆ ಮಾಡಿ. ಈ ಬಗ್ಗೆ ಮತ್ತೆ ಕಾಲ ಹರಣ ಮಾಡುವುದರಿಂದ ಉಪಯೋಗವಿಲ್ಲ'.

ಜೀವನ್ ಸುಮ್ಮನಾದ. ಫೈಲನ್ನು ಓದಿ, ಕರಡು ಸಿದ್ಧಪಡಿಸತೊಡಗಿದ. ಆತ ಒತ್ತಡದಲ್ಲಿದ್ದ ಮತ್ತು ಬೇರೆ ದಾರಿಯಿರಲಿಲ್ಲ. ಕೆಲಸದ ಬಗ್ಗೆ ಲಘುವಾಗಿ ಭಾವಿಸುವಂತಿರಲಿಲ್ಲ. ಕೆಲಸ ಬಿಟ್ಟರೆ ಬೇರೇನು ಮಾಡಲಾರದ ಮತ್ತು ಕೆಲಸ ಬಿಡಲು ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದ.

ಆ ಕೊಠಡಿಯಲ್ಲಿ ಬೆಳೆಯುತ್ತಿದ್ದ ಸಮಸ್ಯೆಗಳ ಬಗ್ಗೆ ನನಗೆ ಆಸಕ್ತಿಯಿರಲಿಲ್ಲ, ಕಾರಣ ಅವು ನನಗೆ ಸಂಬಂಧ ಪಟ್ಟವಲ್ಲ ಮತ್ತು ಅದು ನನ್ನ ತಿಳುವಳಿಕೆಗೆ ಮೀರಿದ ವಿಚಾರವಾಗಿತ್ತು. ನನ್ನ ಆಸಕ್ತಿ ಇದ್ದುದು ಪ್ರಸ್ತುತ ಬದುಕಿನ ಬಗ್ಗೆ ಮಾತ್ರ. ಈ ಸಂಬಂಧವಾಗಿ ಕೃಷ್ಣಗೋಪಾಲರನ್ನು ಕೆಲವು ಪ್ರಶ್ನೆ ಕೇಳಿದೆ. 'ಕೃಷ್ಣಗೋಪಾಲ್‌ಜೀ ಸರ್ಕಾರಿ ನೌಕರನ ಬದುಕಿನ ಬಗ್ಗೆ ನಿಮಗೆ ಏನನ್ನಿಸುತ್ತದೆ?'

ನನ್ನ ಪ್ರಶ್ನೆಯಿಂದ ಆತನಿಗೆ ಆಶ್ಚರ್ಯವಾಗಿ ಮುಖ ಕಪ್ಪಿಟ್ಟಿತು. ಸ್ವಲ್ಪ ಕಾಲ ಮೌನವಾಗಿದ್ದ. ಏನೂ ಹೇಳಲಿಲ್ಲ. ಇನ್ನೊಮ್ಮೆ ನಿಮ್ಮ ಪ್ರಶ್ನೆ ಹೇಳಿ ಎಂದ. ನಾನು ಮತ್ತೆ ಕೇಳಿದೆ. ಗಂಭೀರವಾಗಿ ಮಾತನಾಡಿದ. ನೀವು ತುಂಬ ಕಷ್ಟವಾದ ಪ್ರಶ್ನೆ ಕೇಳಿದ್ದೀರಿ ಎಂದ.

'ನಿಮಗೆ ಅದು ಕಷ್ಟವಾದರೆ, ಅದನ್ನು ಬಿಟ್ಟುಬಿಡಿ. ನಾನು ಸರ್ಕಾರಿ ಸೇವೆಗೆ ಸೇರಿದರೆ ಹೇಗಿರುತ್ತೆ ಅಂತ ತಿಳಿದುಕೊಳ್ಳುವ ದೃಷ್ಟಿಯಿಂದ ಕೇಳಿದೆ ಅಷ್ಟೆ' ಎಂದು ನಗುತ್ತಾ ಹೇಳಿದೆ.

'ಏನಿಲ್ಲ. ಅದು ಅಂಥ ಕಷ್ಟವಲ್ಲ' ಕೃಷ್ಣಗೋಪಾಲ್ ಹೇಳಿದ. 'ಆದರೆ ನಿಮ್ಮ ಎರಡನೆ ಪ್ರಶ್ನೆಗೆ ನಾನು ಮೂರು ಗಂಟೆ ಉತ್ತರ ಹೇಳಬೇಕಾಗುತ್ತದೆ. ಅದಕ್ಕೆ ನಾನು ಹಿಂಜರಿದೆ. ನಿಮಗೆ ಯಾರಾದರೂ ಹತ್ತಿರದ ಸಂಬಂಧಿ ಉನ್ನತ ಹುದ್ದೆಯಲ್ಲಿದ್ದರೆ ಸರ್ಕಾರಿ ಕೆಲಸಕ್ಕೆ ಸೇರಬಹುದು. ಅಲ್ಲದಿದ್ದರೆ ನಿಮ್ಮ ಬದುಕು ತುಂಬಾ ದುರ್ಭರವಾಗುತ್ತೆ. ಇದಕ್ಕೆ ಬೇರೊಂದು ತಂತ್ರವೂ ಇದೆ. ಮಸ್ಕಾ ಹೊಡೆಯುವ, ಬೆಣ್ಣೆ ಹಚ್ಚುವ ಗುಣ ಇದ್ರೆ– ಅದೂ ಕೆಲಸಕ್ಕೆ ಬರುತ್ತೆ'.

ಜೀವನ್ ಮಧ್ಯೆ ಪ್ರವೇಶಿಸಿ, 'ನೇರವಾಗಿ ಹೇಳಿ ಸಾಹೇಬರೆ ಆ ಮೂರು ಗುಣಗಳ ಬಗ್ಗೆ; ಬೆಣ್ಣೆಹಚ್ಚುವ ಗುಣ, ವಂಚನೆ ಮಾಡೋದು, ಗೋಗರೆಯೋದು (ಭಿಕ್ಷೆ ಬೇಡುವುದು) ಇದ್ರೆ ಸಾಕು ಎಲ್ಲಿಯಾದರೂ ಬದುಕಬಹುದು' ಎಂದು.

ಜೀವನ್ ಹೇಳಿದ ಈ ಮೂರು ಗುಣಗಳನ್ನು ಕೇಳಿ ನಗು ಬಂದಿತು. ಮೂವರೂ ಒಟ್ಟಿಗೆ ನಕ್ಕೆವು. ಉಲ್ಲಾಸಪೂರ್ಣ ಮಾತುಕತೆಯ ನಡುವೆಯು ಜೀವನ್‌ನ ಮುಖ ಮಾತ್ರ ತೀರ ಪೇಲವವಾಗಿತ್ತು. ಆತ ಆ ಕಂಟ್ರಾಕ್ಟರ್‌ನ ಫೈಲನ್ನು ಕುರಿತೇ



ಚಿಂತಿಸುತ್ತಿದ್ದ. ಜೀವನ್ ಅನ್ನು ನೋಡಿದರೆ ಎಂಥ ಕಷ್ಟದ ಸ್ಥಿತಿಯಲ್ಲಿ ಇದ್ದಾನೆ ಎಂದು ನೋಡಿದ ತಕ್ಷಣ ಅನ್ನಿಸುತ್ತಿತ್ತು. ಆತನ ಬದುಕಿನ ಒಳ್ಳೆಯ ದಿನಗಳು ಕಳೆದಿವೆ. ಇಷ್ಟಾದರೂ ಆತನ ತಾಳ್ಮೆ ಹಾಗೂ ಸಹನೆಗೆ ಅಭಿನಂದಿಸಲೇಬೇಕು. ಅವಕಾಶಗಳಿಂದ ವಂಚಿತರಾದ ವ್ಯಕ್ತಿಗಳು ಎಷ್ಟು ಯಾತನೆಯನ್ನು ಅನುಭವಿಸಬೇಕು? ಎಲ್ಲದಕ್ಕೂ ದರಿದ್ರ, ಹಾಗೂ ಹಸಿದ ಮನೆಯಲ್ಲಿ, ನೆಮ್ಮದಿಯ ಜೀವನವಿರಲು ಹೇಗೆ ಸಾಧ್ಯ? ಅವ್ಯವಹಾರದ ಆಗರವಾದ ಕಛೇರಿಯಲ್ಲಿ ಶಾಂತಿಯಿಂದಿರಲು ಹೇಗೆ ಸಾಧ್ಯ? ಅವನ ಮುಖ ಮಾತ್ರ ಅಂತರಂಗದ ಭಾವನೆಯನ್ನು ವ್ಯಕ್ತಪಡಿಸಲು ಮರೆಯಲಿಲ್ಲ. ಆತ ನೇಪಾಳಿ. ಆತನ ಜೀವನ ನಗರ ಹಾಗೂ ಗ್ರಾಮೀಣ ಬದುಕಿನ ಮಿಶ್ರಣದಂತಿತ್ತು

ತಾವು ಹೇಳಿದಂತೆ ಬರೆಯಬೇಕೆಂದು ಒತ್ತಾಯಿಸುವ ಮೇಲಧಿಕಾರಿಗಳ ಮನೋವೃತ್ತಿಯ ಮೇಲೆ ಜೀವನನಿಗೆ ಯಾವ ಹತೋಟಿಯೂ ಇರಲಿಲ್ಲ. ಎಂಟು ಮಿಲಿಯನ್ ಸಾರ್ವಜನಿಕರ ಹಣವನ್ನು ನೀಡಲು ಅನುಮತಿಸುವುದು ಆತನ ಮನಸ್ಸಿಗೆ ಒಪ್ಪದ ವಿಚಾರವಾಗಿತ್ತು. ತನಗೆ ಇಷ್ಟವಿಲ್ಲದಿದ್ದರೂ ಅಸಹಾಯಕನಾಗಿದ್ದರಿಂದ ಬರೆಯಲೇಬೇಕಾಯಿತು. ಹೌದು ಆತ ಟಿಪ್ಪಣಿಯನ್ನು ಬರೆಯಲು ಆರಂಭಿಸಬೇಕು. ಪ್ರತಿದಿನ ಆತ ತನ್ನನ್ನು ಹತ್ತು ರೂಪಾಯಿಗೆ ಮಾರಿಕೊಳ್ಳುತ್ತಿದ್ದ. ಈ ರೀತಿ ತನ್ನ ಬದುಕನ್ನೆ ಮಾರಿಕೊಂಡಿದ್ದಾನೆ.

ಜೀವನ್ ಫೈಲಿನ ಬಗ್ಗೆ ತನ್ನ ಅಭಿಪ್ರಾಯವನ್ನು ನೀಡಿ ಬರೆದು ಮುಗಿಸಿದ. ಆ ಫೈಲನ್ನು ಸೆಕ್ಷನ್ ಆಫೀಸರ್ ಟೇಬಲ್ಲಿನ ಮೇಲಿಟ್ಟು ಹೇಳಿದ 'ನೀವು ಈಗ ಅದನ್ನು ಮುಂದಕ್ಕೆ ಕಳುಹಿಸಬಹುದು ಸಾರ್. ನಾನು ನನ್ನ ಕೆಲಸವನ್ನು ಉಳಿಸಿಕೊಂಡಿದ್ದೇನೆ.'

ಫೈಲ್‌ಕಡೆ ನೋಡಿ ಕೃಷ್ಣಗೋಪಾಲ್ ಹೇಳಿದ – ಈ ಕೆಲಸಕ್ಕೆ ಬಳುವಳಿಯಾಗಿ, ನಮಗೆ ಯಾವುದಾದರೂ ಟ್ಯಾಕ್ಸ್ ಆಫೀಸಿನಂಥ ಕಡೆ ವರ್ಗ ಆದರೆ ಅದು ನಮ್ಮ ಅದೃಷ್ಟವಲ್ಲವೆ?

ಕೃಷ್ಣಗೋಪಾಲನ ಮಾತನ್ನು ಅನುಮೋದಿಸುವಂತೆ ಜೀವನ್ ಹೇಳಿದ 'ನಾನು ಹೇಳಿಲ್ಲವೆ ಇಲ್ಲಿಂದ ವರ್ಗಾವಣೆ ಪಡೆಯಿರಿ ಎಂದು. ಆದರೆ ನೀವು ನನ್ನ ಮಾತನ್ನು ಕೇಳುವುದಿಲ್ಲ. ಅವಕಾಶಗಳು ನಿಮ್ಮನ್ನು ಹುಡುಕಿಕೊಂಡು ಬರುವುದಿಲ್ಲ; ನೀವೇ ಅವಕಾಶಗಳಿಗಾಗಿ ಹುಡುಕಿಕೊಂಡು ಹೋಗಬೇಕು.'

ಜೀವನ್ ತನ್ನ ಸ್ವಭಾವದಲ್ಲಿ ಬಹಳಷ್ಟು ಬದಲಾವಣೆ ಆದಂತೆ ಕಾಣುತ್ತಿದ್ದ, ಆತ ತನ್ನ ತತ್ತ್ವ ಮತ್ತು ಅಂತರಾತ್ಮವನ್ನು ಹೊರಗಿನ ಭ್ರಷ್ಟ ಜಗತ್ತಿನ ಶಕ್ತಿಗಳಿಗೆ ಒಪ್ಪಿಸಿದಂತಿತ್ತು.

ಕೃಷ್ಣಗೋಪಾಲ್ ಹೇಳಿದ 'ನೀವು ಹೇಳೋದು ಸರಿ. ಆದರೆ ನಾವೇನು

ಮಾಡುವುದು. ಜೀವನ್‌ಜಿ! ನಾನು ಪ್ರಯತ್ನಪಟ್ಟೆ, ಆದರೆ ಫಲ ಸಿಗಲಿಲ್ಲ. ನಮಗೆ ಯಾರಾದರೊಬ್ಬರು ಸಹಾಯ ಮಾಡುವವರು ಅಧಿಕಾರದಲ್ಲಿದ್ದಿದ್ದರೆ; ಇದ್ಯಾಕೆ ಈ ನರಕ! ಇಂಥ ದಾರುಣ ಜೀವನ ನಡೆಸಬೇಕೆ? ಹರಿಕಾಂತನನ್ನು ನೋಡಿ! ಎಕ್ಸೈಜ್‌ಡ್ಯೂಟಿ ಕಛೇರಿಗೆ ವರ್ಗವಾಯಿತು. ಅದರಲ್ಲೂ ಡಿಸ್ಟಿಲರಿ ಶಾಖೆ, ಇನ್ನೂ ಅನುಕೂಲವಾಯಿತು. ಆತ ಯಾರಿಗೂ ತನ್ನನ್ನು ಮಾರಿಕೊಳ್ಳುವ ಅಗತ್ಯವಿಲ್ಲ. ಸಾವಿರಾರು ರೂಪಾಯಿಗಳು ಆತನ ಕೈಲಾಡುತ್ತವೆ. ಆತ ಎಂ.ಎ. ಪಾಸು ಮಾಡಿದ್ದರೆ ಅದರಲ್ಲಿ ಆಶ್ಚರ್ಯವೇನಿದೆ? ಇತ್ತೀಚೆಗೆ ಸಪ್ತರಿಯ ಲ್ಯಾಂಡ್ ರೆವಿನ್ಯೂ ಕಛೇರಿಗೆ ವರ್ಗವಾಯಿತು. ಕಡಿಮೆಯೆಂದರೆ ಅರ್ಧ ಮಿಲಿಯನ್ ಸಂಪಾದಿಸಿಕೊಳ್ಳುತ್ತಾನೆ. ನಾವು ಕೂಡ ಆತನ ಸಮಾನ ಹುದ್ದೆಯವರೆ, ನಮಗೆ ತರಕಾರಿ ಊಟವೂ ಇಲ್ಲ; ರಸಕವಳದ ಮಾತಂತು ಇಲ್ಲವೆ ಇಲ್ಲ!.'

ಜೀವನ್ ಹೇಳಿದ 'ಆತ ನಮ್ಮ ಮಿನಿಸ್ಟರ್ ಅವರ ಸಂಬಂಧಿ. ಅವನ ಕೇಸ್ ಬಿಡಿ, ಆದರೆ ಶಿವಬಹದ್ದೂರ್ ನೋಡಿ. ಆತ ನಮ್ಮಂತೆ ಸಾಮಾನ್ಯ ಮನುಷ್ಯ. ಆತ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಟ್ಯಾಕ್ಸ್ ಕಲೆಕ್ಟರ್ ಆಗಿದ್ದಾಗ, ಅವನು ಏನೂ ಅಲ್ಲ ಮತ್ತು ಆತನಲ್ಲಿ ಏನೂ ಇರಲಿಲ್ಲ. ಮತ್ತೆ, ಜಿಲ್ಲಾಕಛೇರಿಯಲ್ಲಿ ತಾತ್ಕಾಲಿಕ ಸಹಾಯಕ ಅಧಿಕಾರಿಯಾಗಿದ್ದ. ಅಲ್ಲಿದ್ದಾಗಲೂ ಕೂಡ ಹೇಳಿಕೊಳ್ಳುವಂಥದ್ದು ಏನೂ ಇರಲಿಲ್ಲ. ಆದರೆ ಕಸ್ಟಂ ಕಛೇರಿಗೆ ಯಾವಾಗ ವರ್ಗವಾಗಿ ಬಂದನೋ! ಓ! ನೋಡಿ ಆರು ತಿಂಗಳಲ್ಲಿ ಅವನ ಮನೆ! ಈಗ ಆತ ಕೆಲಸ ಮಾಡುವ ಅಗತ್ಯವೇ ಇಲ್ಲ. ಕೆಲಸ ಯಾಕೆ ಮಾಡಬೇಕು? ಆತನಿಗೆ ಬರುವ ಮನೆಯ ಬಾಡಿಗೆಯಲ್ಲಿ ನಿಮ್ಮಂಥ ಆರು ಜನ ಅಧಿಕಾರಿಗಳನ್ನು ನೇಮಿಸಿಕೊಳ್ಳಬಹುದು. ಎಲ್ಲದಕ್ಕೂ ತಾಳ್ಮೆ ಬೇಕು. ನಮ್ಮ ಹಣೆಬರಹ ಹೇಗೆ ಇದೆಯೊ ನೋಡಬೇಕು. ನನಗನ್ನಿಸುತ್ತದೆ, ಒಂದು ದಿನ ನಾವು ಕೂಡ ಸರಿದಾರಿಯಲ್ಲಿ ಹೆಜ್ಜೆ ಹಾಕುತ್ತೇವೆ' ಎಂದು.

ಜೀವನ್ ಮತ್ತು ಕೃಷ್ಣಗೋಪಾಲರ ಸಂಭಾಷಣೆಯ ಬಗ್ಗೆ ನಾನು ಯಾವ ಪ್ರತಿಕ್ರಿಯೆಯನ್ನೂ ಮಾಡಲಿಲ್ಲ. ಅದು ದಿನಾ ಇದ್ದದ್ದೇ.

ಕೃಷ್ಣಬಹದ್ದೂರ್‌ಗೆ ತನ್ನ ಕೆಲಸದ ಬಗ್ಗೆ ಎಚ್ಚರವಿತ್ತು. ಟೀ ತಯಾರಿಸಬೇಕೆ ಎಂದು ಬಾಸ್ ಅನ್ನು ಕೇಳಿದ. ಆದೇಶ ಸಿಕ್ಕ ತಕ್ಷಣ, ಮೂರು ಕಪ್ ಟೀ ತಯಾರು ಮಾಡಿ ಟೇಬಲ್ ಮೇಲೆ ತಂದು ಇಟ್ಟನು. ಟೀಯನ್ನು ಚಪ್ಪರಿಸುತ್ತಾ ಕೃಷ್ಣಗೋಪಾಲ್ ಹೇಳಿದ, 'ಜೀವನ್‌ಜೀ' ನಾನು ಇಂದು ಬೇಗ ಹೋಗಬೇಕು, ಬನೇಶ್ವರದಲ್ಲಿ ಖಾಲಿ ಮನೆಯಿದೆಯೆಂದು ತಿಳಿಯಿತು, ಮತ್ತು ಬಾಡಿಗೆಯೂ ಪರವಾಗಿಲ್ಲವಂತೆ. ಆದ್ದರಿಂದ ನಾನು ಹೋಗಿ ನೋಡಬೇಕು. ಯಾರಾದರೂ ಕೇಳಿದರೆ, ದಯಮಾಡಿ ಕಛೇರಿ ಕೆಲಸದ ಮೇಲೆ ಹೊರಗೆ ಹೋಗಿದ್ದಾರೆ ಎಂದು ಹೇಳಿ. ಹಾಗೆಯೇ ದಯಮಾಡಿ ಈ ಫೈಲನ್ನು ಕಾರ್ಯದರ್ಶಿಯವರ ರೂಮಿಗೆ ತೆಗೆದುಕೊಂಡು ಹೋಗಿ.



ಕೃಷ್ಣಗೋಪಾಲ್ ರೂಮಿನಿಂದ ಹೊರನಡೆದ. ಈಗ ನಾನು ಮತ್ತು ಜೀವನ್ ಮಾತ್ರ ರೂಮಿನಲ್ಲಿದ್ದೆವು. ನನ್ನೊಡನೆ ಮಾತಾನಾಡುವ ಇಚ್ಛೆ ಇದ್ದರೂ ತಾನು ಈಗ ಫೈಲನ್ನು ನೋಡಬೇಕಾಗಿದೆ ಎಂಬ ಅರ್ಥ ಬರುವಂತೆ ಜೀವನ್ ಮುಖದ ಭಾವವಿತ್ತು. ಹಾಗಾಗಿ ಸುಮ್ಮನೆ ಕುಳಿತಿದ್ದ. ನಾನೇ ಮೌನ ಮುರಿದೆ – ಜೀವನ್ ನಿನ್ನ ಹೆಂಡತಿ ಮಕ್ಕಳು ಹೇಗಿದ್ದಾರೆ.

'ಚೆನ್ನಾಗಿದ್ದಾರೆ! ಮಕ್ಕಳು ಕೆಲವು ದಿವಸ ಚೆನ್ನಾಗಿದ್ದರೆ, ಕೆಲವು ದಿವಸ ಹುಷಾರಿರಲ್ಲ. ಅದೆಲ್ಲ ಮಾಮೂಲು.

ಈಗ ಮಕ್ಕಳನ್ನು ಶಾಲೆಗೆ ಸೇರಿಸಬೇಕಿದೆ ಅಲ್ಲವಾ? ನಾನು ಸಂದರ್ಭಕ್ಕೆ ಹೊರತಾಗಿ ಕೇಳಿದೆ.

'ಹೌದು! ಶಾಲೆಗೆ ಸೇರಿಸಬೇಕು. ಆದರೆ!....?' ತನ್ನ ಗಾಂಭೀರ್ಯ ಕಾಪಾಡಿಕೊಳ್ಳಲು ಯತ್ನಿಸುತ್ತ ಹೇಳಿದ.

'ನಾನು ಮುಂದಿನ ವರ್ಷ ಸೇರಿಸುವ ಯೋಚನೆಯಲ್ಲಿದ್ದೇನೆ' –ಎಂದು ಸಮಾಧಾನ ಸ್ಥಿತಿಯಲ್ಲಿ ಉತ್ತರಿಸಿದ.

ಈಗಲೂ ಜೀವನ್ ತನ್ನ ವಾಸ್ತವ ಬದುಕನ್ನು ಮುಚ್ಚಿಡಲು ಪ್ರಯತ್ನಿಸುತ್ತಿದ್ದ. ಇದು ನೇಪಾಳಿಗಳ ಒಂದು ವಿಶಿಷ್ಟ ನಮೂನೆ. ಯಾರು ಎಷ್ಟೇ ತೊಂದರೆ ಇದ್ದರೂ ಧೈರ್ಯಗೆಡುವುದಿಲ್ಲ. ಅವರು 'ಮರ್ಯಾದೆ'ಗೆ ಹೆದರುತ್ತಾರೆ. ಅವರ ನಿಜಜೀವನ ಮಾತ್ರ ಯಾರಿಗೂ ಗೊತ್ತಾಗದಂತೆ ನೋಡಿಕೊಳ್ಳಬಯಸುತ್ತಾರೆ. ಇದು ಎಷ್ಟು ದಿನ ಸಾಧ್ಯ?

ನನ್ನ ಬಗ್ಗೆ ಜೀವನ್ ಅನೇಕ ಪ್ರಶ್ನೆಗಳನ್ನು ಕೇಳಿದ. ನಾನು ನನ್ನದೇ ರೀತಿಯಲ್ಲಿ ಉತ್ತರಿಸಿದೆ. ಆದರೆ ಜೀವನ್ ನನ್ನ ಉತ್ತರದಿಂದ ಸಮಾಧಾನಪಟ್ಟಂತೆ ಕಾಣಲಿಲ್ಲ. ನಾನು ಆತನನ್ನು ನೋಡಲು ಬಂದುದಕ್ಕೆ ಯಾವುದೇ ನಿಶ್ಚಿತ ಕಾರಣವಿರಲಿಲ್ಲ. ಕೇವಲ ಕುತೂಹಲದಿಂದ ಆತನನ್ನು ನೋಡಲು ಬಯಸಿದ್ದೆ; ಅದನ್ನು ಬಹಿರಂಗಮಾಡಲಾಗಲಿಲ್ಲ. ಆದರೆ ನಮ್ಮ ಸಂಭಾಷಣೆಗಳು ಆತ್ಮೀಯ ಹಾಗೂ ಸ್ನೇಹಪೂರ್ಣವಾದಾಗ ಆತನ ಅನುಮಾನಗಳು ದೂರವಾದವು. ಈಗ ಫೈಲಿನೊಂದಿಗೆ ಆತ ಬಾಸ್‌ನ ಬಳಿ ಹೋಗಬೇಕಿತ್ತು. ಸ್ವಲ್ಪ ಹೊತ್ತು ಕಾಯುವಂತೆ ತಿಳಿಸಿ, ಮಾತನ್ನು ಆತುರಾತುರವಾಗಿ ಮುಗಿಸಿ, ಮಾಯವಾದ.

ಮತ್ತೆ ರೂಮಿನಲ್ಲಿ ನಾನು ಏಕಾಂಗಿಯಾದೆ. ಕೃಷ್ಣಬಹದ್ದೂರ್‌ಗಾಗಿ ಹುಡುಕಾಡಿದೆ. ಸ್ವಲ್ಪ ಸಮಯದ ನಂತರ ಕೃಷ್ಣಬಹದ್ದೂರ್ ಕಾಣಿಸಿಕೊಂಡ. 'ಕೃಷ್ಣಬಹದ್ದೂರ್ ನೀವು ಟೀ ಮಾಡುವುದರಲ್ಲಿ ಪರಿಣಿತರು' ಎಂದು ಆತನನ್ನು

ಮಾತಿಗೆಳೆದು ರೂಮಿನಲ್ಲಿ ಉಳಿಸಿಕೊಳ್ಳಲು ಬಯಸಿದೆ.

'ಅಯ್ಯೋ ಇಲ್ಲ ಸಾರ್!' ಹತ್ತಿರ ಬಂದು ವಿನಯವಾಗಿ ಮಾತನಾಡಿದ, 'ನಾನು ಪರಿಣತನಲ್ಲ, ಪರಿಣತರು ರೆಸ್ಟೋರೆಂಟಿನಲ್ಲಿ ಇದ್ದಾರೆ! ಸಾಹೇಬರು ಯಾವಾಗಲೂ ಬಯ್ಯುತ್ತಾರೆ; ನಾನು ಕೆಟ್ಟ ಟೀ ಮಾಡುವವನೆಂದು!'

'ಸರಿ! ಅದು ಬಿಡಿ, ಬಯ್ಯುವುದು ಸಾಹೇಬರ ಅಭ್ಯಾಸ; ನಿಜವಾಗಿಯೂ ಚೆನ್ನಾಗಿತ್ತು.'

ಆತನ ಮುಖದಲ್ಲಿ ಮಂದಹಾಸದ ಹೊನಲು ಮೂಡಿತು. ಏನೋ ಹೇಳಲು ಮತ್ತು ಏನನ್ನೋ ಕೇಳಲು ಬಯಸಿ ರೂಮಿನ ಸುತ್ತ ನೋಡಿದ. ಅಲ್ಲಿಯೆ ಸಮೀಪದಲ್ಲಿದ್ದ ಕುರ್ಚಿಯಲ್ಲಿ ಕೂರುವಂತೆ ನಾನು ವಿನಂತಿಸಿದೆ. ಆದರೆ ಕುರ್ಚಿಯನ್ನು ಸ್ವಲ್ಪ ದೂರ ತಳ್ಳಿ ತನ್ನ ಎರಡು ಕಾಲುಗಳ ಮೇಲೆ ಸಮೀಪದಲ್ಲಿ ಕೂತು ಹೇಳಿದ, 'ಸಾರ್ ನೀವು ಇಂದು ಇಡೀ ದಿನ ಇಲ್ಲೇ ಇದ್ದೀರಿ. ಈ ಕಛೇರಿಯ ಹಿರಿಯ ಕಿರಿಯ ಹಾಗೂ ಸಿಬ್ಬಂದಿಗಳ ಪರಿಚಯವಾಗಿದೆ, ಆದರೆ ಇಂದು ಬೆಳಗ್ಗೆ ಜೀವನ್ ಸಾಹೇಬರನ್ನು ಮಾತ್ರ ಹುಡುಕುತ್ತಿದ್ದಿರಿ.' ನಾನು ಆತನ ಮಾತನ್ನು ಒಪ್ಪುವಂತೆ 'ಕೃಷ್ಣಬಹದ್ದೂರ್ ನೀವು ಈ ರೂಮಿನಲ್ಲಿ ೨೫ ವರ್ಷ ಕೆಲಸ ಮಾಡಿದ್ದೀರಿ ಅಲ್ಲವಾ?'

ನನ್ನ ಪ್ರಶ್ನೆ ಆತನನ್ನು ನಗುವಂತೆ ಮಾಡಿತು. ಆತ ತನ್ನ ನಗುವನ್ನು ನಿಯಂತ್ರಿಸಿಕೊಂಡಂತೆ ಮಾಡಿ ಹೇಳಿದ; ಇದೊಂದೆ ರೂಮಾ. ಯಾಕೆ? ನಾನು ಇಲ್ಲಿ ಕಳೆದ ಮೂರುವರ್ಷದಿಂದ ಇದ್ದೇನೆ. ನಾನು ಜವಾನನಾಗಿ ಬೇರೆ ಬೇರೆ ಕಛೇರಿಯಲ್ಲಿ ಕೆಲಸಮಾಡಿದ್ದೇನೆ. ನಾನು ಕೆಲವು ಕಾರ್ಯದರ್ಶಿಗಳ ಬಳಿ ಕೆಲಸ ಮಾಡಿದ್ದೇನೆ. ಈಗಾಗಲೇ ನಾಲ್ಕು ಜನ ಕಾರ್ಯದರ್ಶಿಗಳನ್ನು 'ಮುಗಿಸಿದ್ದೇನೆ'. ನಾನು ಹೀಗೆಯೇ ಎಷ್ಟು ದಿನ ಬದುಕಬೇಕೋ ಆಶ್ಚರ್ಯವಾಗುತ್ತದೆ.

'ನಿನ್ನ ಸಂಬಳ ಎಷ್ಟು?'

'ಆರಂಭದಲ್ಲಿ ನಾನು ತಾತ್ಕಾಲಿಕ ಸೇವಕನಾಗಿ ಸೇರಿದೆ! ಆನಂತರ ಖಾಯಂ ಆಯಿತು. ಎಲ್ಲಾ ಸೇರಿಸಿದರೆ ೨೦೦ ರೂಪಾಯಿಗೆ ಸ್ವಲ್ಪ ಕಡಿಮೆ ಬರುತ್ತೆ. ಅಂದ್ರೆ ೨೦೦ ಅಲ್ಲ. ನಾಲ್ಕು ವರ್ಷವಾದ ಮೇಲೆ ೨೦೦ ಬರುತ್ತೆ.

ನೀನು ಎಲ್ಲಿರೋದು?

'ದಹಚೌಕ್‌ದಲ್ಲಿ. ವೇಗವಾಗಿ ನಡೆದರೆ ನಿಮಗೆ ಮೂರು ಗಂಟೆಯ ದಾರಿ. ನನಗೆ ೨ ಗಂಟೆ ಸಾಕು.'

'ಓ ದಿನಾ ನೀನು ಅಲ್ಲಿಂದ, ಅಷ್ಟು ದೂರದಿಂದ ಬರಬೇಕಾ?'

'ಹೌದು, ಬರಬೇಕು, ವಿಧಿಯಿಲ್ಲ. ನಾನು ದೊಡ್ಡ ಸಾಹೇಬನಲ್ಲವಲ್ಲಾ'

'ಹಾಗಂದರೆ? ನೀನು ಸಾಹೇಬನಾಗಿದ್ದರೆ; ನೀನು ಈ ರೀತಿ



ಇರ್ತಾಯಿರಲಿಲ್ಲಾ......?'

'ಅದೆಲ್ಲ ಸಾಹೇಬರಿಗೆ ಸೇರಿದ್ದು. ಬಂದ್ರೂ ಸರಿ ಬರದೆಯಿದ್ದರೆ, ಅದೂ ಸರಿ. ಅವರೇನು ನಡೆದುಕೊಂಡು ಬರಬೇಕಾ. ಅವರಿಗೆ ಸರ್ಕಾರಿ ವಾಹನವಿದೆ. ಆದರೂ ಯಾವ ಅಧಿಕಾರಿಯೂ ಕೂಡ ೧೧.೦೦ ಗಂಟೆಗೆ ಮುಂಚೆ ಕಛೇರಿಗೆ ಬರುವುದಿಲ್ಲ. ಅದೂ ಅಲ್ಲದೆ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಿದರೆ ಮುಗಿಯಿತು. ಅನಿರೀಕ್ಷಿತ ತನಿಖೆಯೇನಿದ್ದರೂ ಸಣ್ಣ ನೌಕರರ ಮೇಲೆ, ದೊಡ್ಡ ಅಧಿಕಾರಿಗಳಿಗಲ್ಲ!

ನಾನು ಕೃಷ್ಣಬಹದ್ದೂರ್‌ನ ಸಂಭ್ರಮದ ಮಾತುಗಳನ್ನು ಕೇಳುತ್ತಿದ್ದರೆ ಏನನ್ನೊ ಕಳೆದುಕೊಂಡಂತೆ ಅನ್ನಿಸುತ್ತಿತ್ತು. ಈತ ೨೫ ವರ್ಷಗಳು ವಿವಿಧ ಸರ್ಕಾರಿ ಕಛೇರಿಗಳಲ್ಲಿ ಸೇವೆ ಸಲ್ಲಿಸಿ; ಬಗೆ ಬಗೆಯ ಉನ್ನತ ಅಧಿಕಾರಿಗಳು ಬಂದು ಹೋಗಿರುವುದನ್ನು, ಅವರ ಏಳು ಬೀಳುಗಳನ್ನು, ಕಂಡಿರುವ ದೀರ್ಘ ವ್ಯಾವಹಾರಿಕ ಜ್ಞಾನವಿರುವ ಪ್ರಾಪಂಚಿಕ ಜ್ಞಾನವುಳ್ಳ ಬುದ್ಧಿವಂತನೆಂದು ಅನಿಸಿತು. ಆತನ ಅಭಿಪ್ರಾಯದಲ್ಲಿ ಸ್ಫಟಿಕದಂಥ ಪಾರದರ್ಶಕತೆಯಿತ್ತು. ಆತನ ಅನುಭವ, ಅವನಿಗೆ ಬದುಕೆಂದರೆ ಏನೆಂದು ತಿಳಿಸಿಕೊಟ್ಟಿದ್ದರಿಂದಾಗಿ ಆತ ನಿರ್ಭೀತಿಯಿಂದ ಸ್ವತಂತ್ರವಾಗಿ ಇದ್ದಂತೆ ಕಾಣುತ್ತಿತ್ತು. ಅಥವಾ ಆತನ ಸಾಹೇಬರು ಇಲ್ಲದಿದ್ದುದರಿಂದ ಸ್ವತಂತ್ರವಾಗಿ ಮನಬಿಚ್ಚಿ ಮಾತನಾಡ ಬೇಕೆನಿಸಿದಂತೆ ಕಾಣುತ್ತಿತ್ತು.

'ಕೃಷ್ಣಬಹದ್ದೂರ್‌ಜಿ, ನಿಮ್ಮ ಸಂಬಳ ನಿಮ್ಮ ಜೀವನಕ್ಕೆ ಸಾಕಾಗುತ್ತಾ'? ನಾನೊಂದು ಮುಖ್ಯ ಪ್ರಶ್ನೆಹಾಕಿದೆ.

ಕೃಷ್ಣಬಹದ್ದೂರ್ ನನ್ನ ಕಡೆ ನೋಡಿ ಜೋರಾಗಿ ನಕ್ಕು 'ನೀವು ಏನೂ ತಿಳಿಯದವರಂತೆ ನನಗೆ ಈ ಪ್ರಶ್ನೆ ಕೇಳುತ್ತಿದ್ದೀರಿ'. ಕೃಷ್ಣಬಹದ್ದೂರ್ ಒಬ್ಬಂಟಿಯಲ್ಲ, ಸಂಸಾರಸ್ಥ, ಮಕ್ಕಳಿದ್ದಾರೆ. ಆದರೆ ನೀವು ಈ ರೀತಿ ಪ್ರಶ್ನೆ ಕೇಳಬೇಕಿತ್ತು. 'ನಿಮ್ಮ ಸಂಬಳ ಉಪ್ಪು ಎಣ್ಣೆ ಖರೀದಿಸಲು ಸಾಕಾಗುತ್ತಾ?' ಎಂದು.

ಕೃಷ್ಣಬಹದ್ದೂರನ ತೀಕ್ಷ್ಣ ಪ್ರತಿಕ್ರಿಯೆಯನ್ನು ಕಂಡು ನಾನು ಸ್ವಲ್ಪ ಗಾಬರಿಯಾದೆ. ನನ್ನ ಒಂದು ಪ್ರಶ್ನೆಗೆ ಆತ ಒಂದೇ ಸಮನೆ ನೀಡಿದ ಹಲವು ಉತ್ತರಗಳು ನನ್ನನ್ನು ಅಧೀರನನ್ನಾಗಿ ಮಾಡಿ ಮತ್ತೆ ತಕ್ಷಣ ಪ್ರಶ್ನೆ ಕೇಳಬೇಕೆನ್ನಿಸಲಿಲ್ಲ. ನಾನು ಆತನನ್ನು ಕುತೂಹಲದಿಂದ ನೋಡಿ, ವಿಷಯಾಂತರ ಮಾಡಿ ಕೇಳಿದೆ – 'ನೀವು ಇಷ್ಟು ದೀರ್ಘ ಕಾಲ ಸರ್ಕಾರಿ ಸೇವೆಯಲ್ಲಿದ್ದೀರಿ, ನಿಮಗೆ ನೇಪಾಳದ ದೊಡ್ಡ ದೊಡ್ಡ ಕುಳಗಳು ಗೊತ್ತಿರಬಹುದು, ಅಲ್ಲವಾ?'

'ಯಾಕಿಲ್ಲ, ಸಚಿವರು, ಕಾರ್ಯದರ್ಶಿಗಳು, ನಿರ್ದೇಶಕರುಗಳು–ಈವರೆಗೆ ಸೇವೆ ಸಲ್ಲಿಸಿದ ಸಾಹೇಬರುಗಳು ಲೆಕ್ಕವಿಲ್ಲ. ಅವರೆಲ್ಲ ನನಗೆ ಚೆನ್ನಾಗಿ ಗೊತ್ತು! ಸ್ವಲ್ಪ ಮೌನ ತಾಳಿ ಮತ್ತೆ ಹೇಳಿದ, 'ಆದರೆ ಅವರಿಂದ ಗರೀಬರಿಗೆ ಉಪಯೋಗವಿಲ್ಲ. ನಾವು ಯಾರಿಗೂ ಬೇಕಿಲ್ಲ. ನನಗೆ ಅನೇಕ ಸಾಹೇಬರ ಗುಟ್ಟು ಗೊತ್ತಿದೆ. ನಾನು

ಎಲ್ಲಿ ಎಲ್ಲವನ್ನು ಹೇಳಿಬಿಡುತ್ತೇನೋ ಎಂದು ಅವರಿಗೆ ಭಯ. ನನ್ನನ್ನು ನೋಡಿದರೆ, 'ಕೃಷ್ಣಬಹದ್ದೂರ ನೀನು ಇನ್ನೂ ಸರ್ವೀಸಿನಲ್ಲಿದ್ದೀಯಾ? ಎಂದು ಕೇಳಿ ಕೆಲವು ರೂಪಾಯಿಗಳನ್ನು ಕೈಗಿಟ್ಟು ಏನಾದರೂ ತೆಗೆದುಕೋ' ಎಂದು ಹೇಳುತ್ತಾರೆ.

ನನ್ನ ಈ ಕೈಗಳು ಎಷ್ಟುಜನ ಸಾಹೇಬರನ್ನು ಸ್ವಾಗತಿಸಿ ಬರಮಾಡಿಕೊಂಡಿವೆ ಎನ್ನುವುದು ನೆನಪಿಲ್ಲ, ಎಂದು ಆತ ಮುಂದುವರೆದು ಹೇಳಿದ: 'ಬಂದ ಹೊಸದರಲ್ಲಿ ಅವರಿಗೇನೂ ಗೊತ್ತಿರೋಲ್ಲ. ಅವರಿಗೆ ಅನೇಕ ವಿಷಯಗಳ ಬಗ್ಗೆ ತಿಳಿಸಬೇಕಾಗುತ್ತೆ. ಅದಕ್ಕೆ ಕೃಷ್ಣಬಹದ್ದೂರನ ಹೆಸರು ಅವರ ನಾಲಿಗೆ ಮೇಲೆ ಇರುತ್ತೆ. ಅವರಿಗೆ ವಿಚಾರಗಳು ಅರ್ಥವಾಗಿ ಅವರು ಚೆನ್ನಾಗಿ ಕೊಬ್ಬಿದ ಮೇಲೆ; ಕರೆಗಂಟೆಯನ್ನು ಮರೆತು, 'ಇಡಿಯಟ್' ಬೆಲ್ ಮಾಡಿದ್ದು ಕೇಳಿಸಲಿಲ್ವಾ? ಎಂದು ನನ್ನನ್ನು ಬೈಯ್ಯಲು ಆರಂಭಿಸುತ್ತಾರೆ. ಆಮೇಲೆ ಅವರ ತಾಳಕ್ಕೆ ತಕ್ಕ ಹಾಗೆ ನಾನು ಕುಣಿಯಬೇಕು' ಎಂದು ಕೃಷ್ಣಬಹದ್ದೂರ್ ಮಾತು ಮುಂದುವರೆಸಿದ.

'ಅಂದರೆ ನೀವು ಅವರಿಗೆ ಅವರ ಕಛೇರಿ ಕೆಲಸಗಳನ್ನು ಹೇಳಿಕೊಡಬೇಕು?' ನಾನು ಮುಗ್ಧನಂತೆ ಹೇಳಿದೆ.

'ಹೊಸದಾಗಿ ಬಂದಾಗ' ಏನು ಗೊತ್ತಿಲ್ಲದೆ ಇರುವ ಅನೇಕ ಜನರನ್ನು ನೋಡಿದ್ದೇನೆ. ಅದೂ ಅಲ್ಲದೆ, ಒಬ್ಬ ಸಾಹೇಬ ಇನ್ನೊಬ್ಬ ಸಾಹೇಬನಿಗೆ ಏನನ್ನೂ ತಿಳಿಸದೆಯಿರುವುದನ್ನೂ ನಾನೇ ಕಂಡಿದ್ದೇನೆ. ನಾವು ಹೊಸದಾಗಿ ಬಂದ ಸಾಹೇಬರಿಗೆ ತಿಂಗಳಾನುಗಟ್ಟಲೆ ಹೇಳಿಕೊಡಬೇಕಾಗುತ್ತೆ. ಫೈಲು ಎಲ್ಲಿದೆ ಎನ್ನುವುದನ್ನು ನಾವು ತಿಳಿಸಿಕೊಡಬೇಕು. ಯಾವ ಸಾಹೇಬರು ಎಲ್ಲಿ ವಾಸವಾಗಿದ್ದಾರೆ, ಯಾವ ಸಾಹೇಬ ಯಾವ ಸಾಹೇಬರಿಗೆ ಆತ್ಮೀಯ, ಯಾರಿಗೆ ಯಾರ್‍ಯಾರ ಸಂಬಂಧವಿದೆ ಇತ್ಯಾದಿ–ಇತ್ಯಾದಿ, ಎಲ್ಲ ನಾವೇ ಹೇಳಬೇಕು. ಆರಂಭದಲ್ಲಿ ಅವರ ನಡತೆ ಒಂದು ಥರಾ ಇದ್ದರೆ, ಅವರು ಕೊಬ್ಬಿದಂತೆ ಅವರ ನಡತೆಯೂ ಬದಲಾಗುತ್ತದೆ'.

ಕೃಷ್ಣಬಹದ್ದೂರ್ ಹಣೆಬರಹದಲ್ಲಿ ನಂಬಿಕೆಯಿರುವವ. ಆತನ ದಾರಿದ್ರ್ಯವನ್ನು ಅವನೇ ತೀಕ್ಷ್ಣವಾಗಿ ಟೀಕೆ ಮಾಡಿಕೊಂಡನಾದರೂ ಆತನ ಇಂದಿನ ಸ್ಥಿತಿಯ ಬಗ್ಗೆ ಅವನ ಕೆಲಸದ ಬಗ್ಗೆ ಅಷ್ಟೇನು ಅಸಂತೋಷವನ್ನು ತೋರಿಸಲಿಲ್ಲ. ಯಾರಾದರೂ ಅವನಿಗಿಂತ ಶ್ರೀಮಂತನಾದರೆ ಈತ ಅಸೂಯೆಪಟ್ಟವನಲ್ಲ. ಆತನ ಶ್ರಮಕ್ಕೆ ಸರಿಯಾದ ವೇತನವಿಲ್ಲದಿದ್ದರೂ, ಅದಕ್ಕೆ ಬೇರೆ ಪರಿಹಾರವಿಲ್ಲ. ಇದ್ದುದರಲ್ಲಿಯೆ ತೃಪ್ತಿಪಟ್ಟವ. ಇದು ಸಾಮಾಜಿಕ ವ್ಯವಸ್ಥೆಯ ಸದ್ಗುಣ ಅಥವಾ ಘೋರ ಕೃತ್ಯ ಎಂದೂ ಹೇಳಲು ಸಾಧ್ಯವಿಲ್ಲ.

ಯಾವ ಕಛೇರಿಯಲ್ಲಿ ದುಡ್ಡು ಮಾಡಬಹುದು ಎನ್ನುವುದು ಕೃಷ್ಣಬಹದ್ದೂರ್‌ಗೆ ಗೊತ್ತಿಲ್ಲ. ಆದರೆ ಯಾವ ಅಧಿಕಾರಿ ಎಷ್ಟು ದುಡ್ಡು ಸಂಪಾದಿಸಿದ್ದಾನೆ ಎನ್ನುವುದು ಮಾತ್ರ ಚೆನ್ನಾಗಿ ಗೊತ್ತು. ಅವನಿಗೆ ಸಾಹೇಬರ ಹಳೆಮನೆ ಹಾಗೂ ಹೊಸಮನೆಯ



ಒಳಗು ಹೊರಗು ಚೆನ್ನಾಗಿ ತಿಳಿದಿದೆ. ಅವನಿಗೆ ಗೊತ್ತು ಸಾಹೇಬರಾಗಬೇಕಾದರೆ ಅದೃಷ್ಟ ಬೇಕು ಎಂದು. ಪ್ರತಿಯೊಬ್ಬ ಸಾಹೇಬರು ದೈವಾಂಶಸಂಭೂತರೆಂದು ತಿಳಿದಿದ್ದ. ಅವರ ಸಾಹೇಬರು ಇವನನ್ನು ಸಿಕ್ಕಾಪಟ್ಟೆ ಬೈದದ್ದರಿಂದ ಆತನ ಖಾಯಿಲೆ ಗುಣವಾದ ಪವಾಡವನ್ನು ಹೇಳಿದ.

ಅವನು ಒಂದು ಘಟನೆಯನ್ನು ನಿವೇದಿಸಿದ. ಆತ ಅನಾರೋಗ್ಯದಿಂದ ಬಳಲುತ್ತಿದ್ದಾಗ, ಏನೂ ತಿನ್ನಲು ಸಾಧ್ಯವಿಲ್ಲದಾಗ, ನಾಲ್ಕು ನಾಲ್ಕು ಗಂಟೆ ಕುದುರೆ ಸವಾರಿ ಮಾಡಿಕೊಂಡು ಕಛೇರಿಗೆ ಹೋಗಬೇಕಾಗಿ ಬಂದದ್ದು. ಇನ್ನೊಂದು ಸಂದರ್ಭ, ಮಗಳ ಮದುವೆ ಸಂದರ್ಭದಲ್ಲಿ ಅವನು ಎದುರಿಸಿದ ಕಷ್ಟ. ಮದುವೆ ವಿಫಲವಾಗಿ ಮಗಳು ಈತನ ಜೊತೆಯಲ್ಲಿಯೆ ವಾಸವಾಗಿದ್ದಾಳೆ. ಇಂಥ ಕಷ್ಟ ಹಾಗೂ ತೊಂದರೆಗಳ ನಡುವೆಯು ಈತ ಸಾಹೇಬನಾದರೆ 'ಸಾಹೇಬರಗಿರಿ'ಯನ್ನು ಚೆನ್ನಾಗಿ ನಿಭಾಯಿಸಬಲ್ಲೆನೆಂಬ ನಂಬಿಕೆ ಹಾಗೂ ವಿಶ್ವಾಸ ಕೃಷ್ಣಬಹದ್ದೂರ್‌ಗೆ ಇದೆ.

ಸಾಮಾನ್ಯ ಜವಾನನಾಗಿ ಕೆಲಸ ಮಾಡುವ ಒಬ್ಬ ವ್ಯಕ್ತಿಗೆ ಅವಕಾಶ ಸಿಕ್ಕರೆ ಸಾಹೇಬರ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ ಕೃಷ್ಣಬಹದ್ದೂರ್ ಅಷ್ಟೊಂದು ಆತ್ಮವಿಶ್ವಾಸದಿಂದ ಹೇಳಿದ ಮಾತುಗಳು ನನಗೆ ಆಶ್ಚರ್ಯ ವನ್ನುಂಟುಮಾಡಿದವು. ಬಹುಶಃ ಆತನ ಅನುಭವ ಸಾಹೇಬರ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಬಹುದೆಂಬ ನಂಬಿಕೆಯನ್ನು ಮೂಡಿಸಿರಬಹುದು. ಆತನ ಲೆಕ್ಕಾಚಾರ ಸರಳವಾಗಿತ್ತು. ಸ್ವಲ್ಪ ಮಾತಾಡಲು, ನೇಪಾಳಿಯನ್ನು ಓದಲು ಬರೆಯಲು ಬಂದರೆ ಮತ್ತು ಕಡತಗಳಲ್ಲಿ ಸಹಿಮಾಡುವುದು ಬಂದರೆ ಸಾಕು, ಬಹುಮಟ್ಟಿನ ಎಲ್ಲಾ ಕೆಲಸಗಳನ್ನು ಅಧೀನ ಅಧಿಕಾರಿ ಹಾಗೂ ಸಿಬ್ಬಂದಿ ಮಾಡುತ್ತಾರೆ. ಅದು ಅಲ್ಲದೆ ಯಾರೂ ಯಾವ ಜವಾಬ್ದಾರಿಯನ್ನೂ ಹೊರುವುದಿಲ್ಲ' ಏನಾದರೂ ಹೆಚ್ಚು ಕಡಿಮೆಯಾದರೆ ಮೇಲಿನ ಅಧಿಕಾರಿಯ ಮೇಲೆ ಹೇಳುತ್ತಾರೆ. ಆದರೆ ಮೇಲಧಿಕಾರ ಎಲ್ಲಿದೆ? ಮೇಲಧಿಕಾರ ಎಷ್ಟು ದೊಡ್ಡದು?'ಮೇಲಧಿಕಾರಕ್ಕೆ ಯಾವುದಾದರೂ ಮಿತಿಯಿದೆಯೆ? ಸಾಹೇಬರುಗಳು ಮಾಡುವುದು ಮತ್ತು ಹೇಳುವುದು ಇಷ್ಟೆ, ಇದೇ ರೀತಿ ಮಾಡುವುದನ್ನು ಹಾಗೂ ಹೇಳುವುದನ್ನು ನೋಡಿದ್ದೇನೆ. ಅವರುಗಳು ಮಾಡೋದು ಹೇಳೋದೆಲ್ಲ ಇಷ್ಟೇ ಆದರೆ ನಾನೂ ಕೂಡ ಸಾಹೇಬರ ಕೆಲಸ ಮಾಡಬಹುದು ಅಲ್ಲವಾ? ತಾವೇ ಯೋಚನೆ ಮಾಡಿ.'

'ಏನೇ ಆದರೂ, ಇದು ಒಂಥರಾ ತಾರಾಬಲದ ಹುಡುಕಾಟ ಅಷ್ಟೆ. ತಾನು ಒಬ್ಬ ಸಾಮಾನ್ಯ ಜವಾನ. ನನ್ನ ಜಾತಿಯೂ ಜವಾನ. ನಮ್ಮ ತಂದೆ ತಾಯಿಯಿಂದ ಯಾವುದೇ ಜಾತಿಯು ನನಗೆ ಬಂದಿದ್ದರೂ, ನನಗೆ ಜಾತಿಯನ್ನು ನಿಗದಿಪಡಿಸಿರುವುದು ಸಂದರ್ಭ. ಅವರು ನನ್ನನ್ನು ಕಳೆದ ೨೫ ವರ್ಷದಿಂದ

ಜವಾನ ಎಂದು ಕರೆಯುತ್ತಿದ್ದಾರೆ. ಈಗ ಯಾವುದಕ್ಕಾದರೂ ನಾನು ಯಾಕೆ ಹೆದರಬೇಕು? ಇನ್ನು ಎಷ್ಟು ವರ್ಷ ಈ ಜಗತ್ತಿನಲ್ಲಿ ಬದುಕಬೇಕಿದೆ? ಇನ್ನು ಸ್ವಲ್ಪ ವರ್ಷಗಳು ಅಷ್ಟೆ. ಆದ್ದರಿಂದ ಈ ಜವಾನನ ಜಾತಿಯನ್ನು ನಿಂದಿಸಬಾರದು. ನಾನು ಜವಾನ. ನಾನು ಎಲ್ಲಿದ್ದೇನೊ ಅಲ್ಲೇ ಚೆನ್ನಾಗಿದ್ದೀನಿ'ಎಂದು ಕೃಷ್ಣ ಬಹದ್ದೂರ್ ಹೆಮ್ಮೆಯಿಂದ ಹೇಳಿದ.

ಜೀವನ್ ಬಂದಾಗ ಕೃಷ್ಣಬಹದ್ದೂರ್ ತನ್ನ ಮಾತುಗಳನ್ನು ಇನ್ನೂ ಮುಗಿಸಿರಲಿಲ್ಲ. ಆತ ಸಂತಸದಲ್ಲಿ ಇದ್ದಂತೆ ಕಂಡ. 'ಕಾರ್ಯದರ್ಶಿಯವರ ಕೊಠಡಿಗೆ ಹೋಗಲು ಕ್ಯೂ ನಿಲ್ಲಬೇಕಾಗಿತ್ತು ಎಂದು ಹೇಳಿದ. ತಡವಾಯಿತು ಕ್ಷಮೆಯಿರಲಿ' ಎಂದು ಆತನ ಟೇಬಲ್ ಕಡೆ ಹೆಜ್ಜೆಹಾಕುತ್ತಾ ಹೇಳಿದ.

ಜೀವನ್ ಉಲ್ಲಾಸದಿಂದ ಕೂಡಿದ್ದ. ಬೆಳಗ್ಗೆಗಿಂತ ಈಗ ಹೆಚ್ಚು ಸಂತೋಷದಲ್ಲಿದ್ದಂತೆ ಕಾಣುತ್ತಿದ್ದ. ಇಷ್ಟೊಂದು ಗಮನಾರ್ಹವಾದ ಬದಲಾವಣೆಯಾಗಬೇಕಿದ್ದರೆ, ಏನೋ ನಡೆದಿರಬೇಕು? ಆತನ ಬರಡು ಜೀವನದಲ್ಲಿ ಗುಲಾಬಿಯ ಮೊಗ್ಗು ಅರಳಲು ಆರಂಭಿಸಿರಬೇಕು.  ಕಾರ್ಯದರ್ಶಿಯವರು ಸಂತುಷ್ಟರಾಗಿರುವುದು ಆತನ ಮುಖದಲ್ಲಿ ಎದ್ದು ಕಾಣುತ್ತಿತ್ತು. ನಾನು ಕೇಳಿದೆ, 'ನಿಮ್ಮ ಸಾಹೇಬರು ನಿಮ್ಮ ಕೆಲಸದ ಬಗ್ಗೆ ತೃಪ್ತರಾಗಿರಬೇಕಲ್ಲಾ'?

ಜೀವನ್‌ಗೆ ದಿಗ್ಭ್ರಮೆಯಾಯಿತು. ತುಟಿಗಳು ಕಂಪನಗೊಳ್ಳತೊಡಗಿದವು. ಆತನ ಮುಖದಲ್ಲಿ ಆಶ್ಚರ್ಯದ ಭಾವ ಕಾಣಿಸಿತು.

ಏನೋ ಇರುಸು ಮುರುಸಾದವನಂತೆ ಗೊಣಗುತ್ತ ಹೇಳಿದ 'ಇದೆಲ್ಲ ನಿನಗೆ ಹೇಗೆ ತಿಳಿಯಿತು?' ನಾನು ನಗುತ್ತಾ ಹೇಳಿದೆ 'ಇದರಲ್ಲೇನಿದೆ? ನಿಮ್ಮ ಬಾಸ್ ಏನು ಹೇಳಿದರು ಅನ್ನೋದನ್ನು ನನಗೇಕೆ ಹೇಳಬಾರದು?'

ಕೃಷ್ಣಬಹದ್ದೂರಗೆ ಹೊರಹೋಗುವಂತೆ ಸೂಚನೆ ನೀಡಿ ಹೇಳಿದ, – 'ನಾನು ಹಿಂದೆ ಯಾವತ್ತೂ ಕಾರ್ಯದರ್ಶಿಯವರನ್ನು ಇವತ್ತಿನಷ್ಟು ಸಂತೋಷವಾಗಿರುವುದನ್ನು ನೋಡಿರಲಿಲ್ಲ. ನಾನು ಫೈಲನ್ನು ನೀಡಿದೆ, ಕಣ್ಣಾಡಿಸಿದರು, ಅವರ ಟೇಬಲ್ಲಿನ ಡ್ರಾಯರಿನಲ್ಲಿಡುವಂತೆ ಹೇಳಿದರು. ಹಾಗೆ ಮಾಡಿ, ಅಲ್ಲಿಯೆ ನಿಂತಿದ್ದೆ. ಅವರ ಮುಂದಿನ ಆದೇಶಕ್ಕಾಗಿ ಕಾಯುತ್ತಿದ್ದೆ. ಬಾಸ್ ಹೇಳಿದರು 'ನೀವು ನಿಮ್ಮ ಸೇವಾ ಆರಂಭದಿಂದಲೂ ಇಲ್ಲೇ ಇದ್ದೀರಾ?' ಎಂದು. ನಾನು ಉತ್ತರಿಸುವ ಮೊದಲೇ! ಅವರೇ ಕೇಳಿದರು ನೀವು ಯಾವ ಕಛೇರಿಗೆ ವರ್ಗಾವಣೆ ಹೊಂದಲು ಬಯಸುತ್ತೀರಿ? ಎಂದು. ಯಾವಾಗ ಅನಿರೀಕ್ಷಿತವಾಗಿ, ಬಾಸ್‌ನಿಂದ ಆ ಮಾತು ಕೇಳಿದೆನೋ? ನನಗೆ ನಡುಕ ಶುರುವಾಯಿತು! ಏನೆನ್ನೋ ಹೇಳಲು ಪ್ರಯತ್ನಿಸಿದೆ, ಒಂದು ಶಬ್ದವೂ ಹೊರಬರಲಿಲ್ಲ. ಏನನ್ನೂ ಹೇಳುವ ಸ್ಥಿತಿಯಲ್ಲಿಲ್ಲದ ನಾನು, ಕರಜೋಡಿಸಿ, ತಲೆಬಾಗಿ ಸುಮ್ಮನೆ ನಿಂತಿದ್ದೆ!



ಕಾರ್ಯದರ್ಶಿಯವರ ಕೊಠಡಿಯಲ್ಲಿ ನಡೆದ ಘಟನೆಯನ್ನು ವಿವರಿಸುವಾಗ, ಇನ್ನೂ ಕಾರ್ಯದರ್ಶಿಯವರ ಕೊಠಡಿಯಲ್ಲಿಯೆ ಇರುವಂತೆ ಆತ ಇನ್ನೂ ನಡುಗುತ್ತಲೆ ಇದ್ದ.  ಏನನ್ನೊ ಹೇಳುತ್ತಿದ್ದವನು, ತಕ್ಷಣ ಸುಮ್ಮನಾದ. ಆತ ಏನನ್ನೂ ಹೇಳದಿದ್ದರೂ, ಆತನ ಮುಖಭಾವದಲ್ಲಾದ ಬದಲಾವಣೆಗಳು ಎಲ್ಲವನ್ನು ನೇರವಾಗಿ ತಿಳಿಸುತ್ತಿದ್ದವು.

ನಾನು ಆತನ ಬೆನ್ನ ಮೇಲೆ ಕೈಯಾಡಿಸಿ ಕೇಳಿದೆ 'ಜೀವನ್ ಹೇಳಿ ನಿಮ್ಮ ಕಾರ್ಯದರ್ಶಿಯವರು ಏನು ಹೇಳಿದರು?'

ಜೀವನ್ ನೆನಪು ಮಾಡಿಕೊಳ್ಳುತ್ತಾ ಹೇಳಿದ. ಹೌದು, ಬಾಸ್ ನನ್ನನ್ನು 'ಅಯ್ಯೋ ದಡ್ಡಾ' ಎಂದರು. ನಾನು ಮೌನವಾಗಿದ್ದೆ. ನೋಡಿ 'ನಿಮಗೆ ನೀವೇ ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ನೀಡಿದ್ದೇನೆ' ಎಂದರು ಉದಾರ ಮನಸ್ಸಿನಿಂದ. ನನಗೆ ಚಿಂತೆ ಶುರುವಾಯಿತು. ಯಾವುದೂ ಒಳ್ಳೆಯ ಜಾಗ ಯಾವುದು ಅಲ್ಲ ಎಂದು. ನಾನು ಕೆಲಸ ಮಾಡುವ ಜಾಗವನ್ನು ಬಿಟ್ಟು ಬೇರೆ ಎಲ್ಲಾ ಜಾಗ ಒಳ್ಳೆಯವಂತೆ ಕಂಡವು. ನಾನು ಒಳ್ಳೆಯ ಜಾಗವನ್ನು ಆಯ್ಕೆ ಮಾಡಿಕೊಳ್ಳಬೇಕು. ಮತ್ತೆ ಜೀವನದಲ್ಲಿ ಇಂಥ ಅವಕಾಶ ಸಿಗೊಲ್ಲ.  ಇಂಥ ಅವಕಾಶ ಜೀವನದಲ್ಲಿ ಒಂದು ಬಾರಿ ಮಾತ್ರ ಸಿಗುತ್ತೆ. ಆದರೆ ನನಗೆ ಒಳ್ಳೆಯ ಜಾಗಗಳು ಹೊಳೆಯುತ್ತಿಲ್ಲ. ನಾನು ಇಷ್ಟಂತು ಹೇಳಬಲ್ಲೆ 'ನಾನು ತುಂಬಾ ತೊಂದರೆಯಲ್ಲಿದ್ದೇನೆ ಸಾರ್!' ನೀವು ಎಲ್ಲಿಗೆ ಹೋಗೆಂದು ಆದೇಶ ಮಾಡಿದರೂ 'ಹೋಗುತ್ತೇನೆ'. ಬಾಸ್ ಹೇಳಿದರು ಟ್ಯಾಕ್ಸ್ ಆಫೀಸ್‌ಗೆ ಹೋಗಬೇಕೂಂತ ಇದ್ದೀರಾ?  ಆ ವಿಷಯ ಬಿಡಿ, ನೀವು ಮಾರವಾಡಿಗಳನ್ನು ನಿಭಾಯಿಸಲು ಆಗೋಲ್ಲ! ನನ್ನ ಮನದಲ್ಲಿ ಆತಂಕ ಶುರುವಾಯಿತು. ಒಂದು ಸುವರ್ಣಾವಕಾಶ ಬಂದು, ಕ್ಷಣಾರ್ಧದಲ್ಲಿ ಮಾಯವಾಯಿತು. ನಂತರ ಯೋಚಿಸಿದೆ. ನನಗೆ ಇಷ್ಟವಿಲ್ಲದ ಕಂದಾಯ ಕಛೇರಿಗೆ ಹೋಗು ಎಂದು ಹೇಳಿದರೆ? ನಂತರ ಸಮಾಧಾನಗೊಂಡು ಹೇಳಿದೆ. ನಾನು ಕಸ್ಟಂ ಕಚೇರಿಗೆ ಹೋದರೆ ಹೇಗೆ? ಬಾಸ್ ನಕ್ಕು ಹೇಳಿದರು – 'ಅಯ್ಯೊ ಮೂರ್ಖ! ಮೊದಲೆ ಇದನ್ನು ಯಾಕೆ ಹೇಳಲಿಲ್ಲ. ನಾನು ಏನನ್ನು ಹೇಳಬೇಕೊ ಅದನ್ನು ಅಂತಿಮವಾಗಿ ಹೇಳಿದೆ. ಉತ್ತರ ಭಾಗದ ಕಸ್ಟಂ ಕಛೇರಿಗೆ ಹೋಗೆಂದರೆ ಎಂದು ನನಗೆ ಚಿಂತೆ ಶುರುವಾಯಿತು. ಯಾಕೆಂದರೆ ಅದು ನನ್ನ ಸುವರ್ಣಾವಕಾಶವನ್ನು ತಪ್ಪಿಸುವಂತಿತ್ತು.

ನಾನು ಹೇಳಬೇಕಾದದ್ದನ್ನು ಹೇಳಲಾರದೆ ತೊದಲುತ್ತ ಗಮಾರನಂತೆ ಒದ್ದಾಡಿದೆ. ಮತ್ತೆ ಬಾಸ್ – 'ಜಿಲ್ಲಾ ಕಸ್ಟಂ ಕಛೇರಿಗೆ ಹೋಗಲು ಇಚ್ಛಿಸುತ್ತೀರಾ?' ಎಂದರು. ಅವರ ಮಾತುಗಳು ತಕ್ಷಣ ನನ್ನ ಯಾತನೆಯನ್ನು ನೀಗಿದವು. ಒಂದುಹೆಜ್ಜೆ ಹಿಂದೆ ಸರಿದು ಕೈಜೋಡಿಸಿ ಹೇಳಿದೆ, – ಸಾರ್ ನಾನು ಕಟ್ಮಂಡು ವಿಮಾನ ಕಸ್ಟಮ್ ಕಛೇರಿಗೆ ಹೋಗುವಂತಾದರೆ, ತಮಗೆ ನಾನು ಬಹಳ ಬಹಳ ಋಣಿಯಾಗಿರುತ್ತೇನೆ ಎಂದೆ.  ನನ್ನ ಮಾತು ಮುಗಿಯುವ ಮುನ್ನವೆ ಬಾಸ್ ಹೇಳಿದರು, ಓ! ನೀವು

ಅಲ್ಲಿಗೆ ಹೋಗಬೇಕಾ? ಆದರೆ ನಿಮಗೆ ಗೊತ್ತಾ ಅದು ಎಂಥ ಜಾಗ ಎಂದು? ಅವರ ಮಾತಿನ ಅರ್ಥವನ್ನು ಪೂರ್ಣಗ್ರಹಿಸದೆ ಹೋದರೂ ನಾನು ಅವರ ಮಾತನ್ನು ಅರ್ಥಮಾಡಿಕೊಂಡೆ. ತಲೆದೂಗಿ ನನ್ನ ಒಪ್ಪಿಗೆಯನ್ನು ಸೂಚಿಸಿದೆ. ಮತ್ತೆ ಮೃದುವಾಗಿ ಹೇಳಿದರು – ಶಿವನಾಥರಿಗೆ ನಾನು ಹೇಳಿದ್ದನ್ನು ಹೇಳಿ, ನಾಳೆ ಆತನ ಅಭಿಪ್ರಾಯದೊಂದಿಗೆ ಬರುವಂತೆ ಹೇಳಿ?.

'ನನಗೆ ಉಂಟಾದ ಸಂತೋಷದ ಭರದಲ್ಲಿ ಹೆಜ್ಜೆಮುಂದಿಡಲಾಗಲಿಲ್ಲ. ನಿಧಾನವಾಗಿ ಹಿಂದೆ ಹಿಂದೆ ಸರಿಯುತ್ತಾ ರೂಮಿನಿಂದ ಹೊರಗೆ ಬಂದೆ.'

ಈ ಮಾತುಗಳನ್ನು ಮುಗಿಸಿದಾಗ, ಆತನ ಮೈನಡುಕ ನಿಂತು ಸ್ಥಿಮಿತಕ್ಕೆ ಬರುತ್ತಿರುವುದು ಕಾಣುತ್ತಿತ್ತು. ಆತ ತುಂಬ ಸಂತೋಷದಲ್ಲಿರುವಂತೆ ಕಂಡ. ನಾನು ಆ ಸಮಯದಲ್ಲಿ ಅಲ್ಲಿರದಿದ್ದರೆ ಅವನ ಈ ಲಜ್ಜೆಗೇಡಿ ಅಭಿನಯವನ್ನು ನನಗೆ ಆತ ಮತ್ತೆ ಹೇಳುತ್ತಿರಲಿಲ್ಲ. ನಾನು ಮತ್ತೆ ಇದಕ್ಕಿಂತ ಹೆಚ್ಚಿಗೆ ಅವನನ್ನು ಕೇಳಬೇಕೆನಿಸಲಿಲ್ಲ. ಆತನ ಸಂಭ್ರಮದಲ್ಲಿ ನಾನೂ ಸೇರಿಕೊಂಡು ಹೇಳಿದೆ 'ಇಂದು ನಿನಗೆ ಒಳ್ಳೆಯದಾಯಿತು, ಇನ್ನು ಮೇಲೆ ಏರ್‌ಪೋರ್ಟ್ ಕಸ್ಟಂ ಕಛೇರಿಯಲ್ಲಿ ಭೇಟಿಯಾಗೋಣ'.

ಬರಿ ಒಳ್ಳೆಯದಷ್ಟೆ ಅಲ್ಲ, ತಕ್ಷಣ ಜೀವನ್ ಹೇಳಿದ – 'ತುಂಬ ತುಂಬಾ ಬಹಳಾ ಒಳ್ಳೆಯದು, ಎಂದು ಹೇಳಿ, ನಿಮಗೆ ಗೊತ್ತಿಲ್ಲ ನಾನು ಎಂಥಾ ದಾರುಣ ದಿನಗಳನ್ನು ಕಳೆದಿದ್ದೇನೆ ಎನ್ನುವುದು. ಈಗ ಎಲ್ಲ ದೈವೇಚ್ಛೆ! ನನ್ನ ತಲೆಯ ಮೇಲೊಂದು ಸೂರು ಕಟ್ಟಿಕೊಳ್ಳಬಹುದು'.

ಜೀವನ್ ತನ್ನ ಹಿಂದಿನ ಜೀವನದ ಮೂರ್ಖತನಗಳನ್ನೆಲ್ಲ ಒಂದೊಂದಾಗಿ ಬಿಚ್ಚತೊಡಗಿದ. ನೋಡು ನಾನು ಯಾವ ಫೈಲಿನ ಬಗ್ಗೆ ಏನನ್ನು ಬರೆಯಲು ಇಷ್ಟಪಡುತ್ತಿರಲಿಲ್ಲವೋ ಅದೇ ಫೈಲು ನನ್ನ ಜೀವನ ಗತಿಯನ್ನೇ ಬದಲಿಸಿತು. ನನಗೆ ಈಗ ಗೊತ್ತಾಯಿತು ನಾನು ಯಾಕೆ ಇಷ್ಟೊಂದು ತೊಂದರೆ ಅನುಭವಿಸಿದೆ ಎಂದು. ನಾನು ಇದನ್ನು ಮೊದಲೇ ಮಾಡಬೇಕಿತ್ತು. ನಾವು ಸರ್ಕಾರಿ ಸೇವೆಯಲ್ಲಿರುವಾಗ ನಮ್ಮ ಆದರ್ಶ ಮತ್ತು ಆತ್ಮಸಾಕ್ಷಿಯನ್ನು ಮರೆತು ಆದೇಶಗಳನ್ನು ಪಾಲಿಸುವುದೇ ಸರಿಯಾದ ಕ್ರಮ.

ಜೀವನ್ ಒಬ್ಬ ಗೃಹಿಣಿಯಂತೆ ತನ್ನ ಭವಿಷ್ಯದ ಯೋಜನೆ ಬಗ್ಗೆ ಹರಟತೊಡಗಿದ. ಮತ್ತು ಭಯವನ್ನೂ ಹೇಳಿದ – 'ಆ ಜಾಗ ತುಂಬಾ ತಾಪತ್ರಯದ್ದು ಎಂದು ಹೇಳುತ್ತಾರೆ', ಅಲ್ಲಿ ಬಹಳ ಸ್ಟ್ರಿಕ್ಟ್‌ಆಗಿ ಚೆಕಿಂಗ್ ಕೂಡ ಮಾಡುತ್ತಾರೆ. ಆದರೂ ಪರವಾಗಿಲ್ಲ. ಎಲ್ಲರಿಗೂ ಅದೇ ಬೇಕು. ನಿಮಗೆ ಅದು ಸಿಕ್ಕಿದರೆ ಯಾರೂ ನಿಮಗೆ ಏನೂ ಮಾಡೋಕಾಗಲ್ಲ.

ಸುಮಾರು ಹತ್ತಿರ ಹತ್ತಿರ ಒಂದು ದಿನ ಜೀವನ್‌ನ ರೂಮಿನಲ್ಲಿ ಇದ್ದೆ.



ನಾನು ಹೊರಡುವುದಾಗಿ ಜೀವನ್‌ಗೆ ಹೇಳಿದೆ. ಆದರೆ ನನ್ನನ್ನು ಅಲ್ಲಿಯೆ ಇಟ್ಟುಕೊಳ್ಳಲು ಬಯಸಿದ. ಕೊನೆಗೆ ಒಂದು ಕಪ್ಪು ಟೀ ಕುಡಿದು ಹೋಗಬಹುದೆಂದು ಒಪ್ಪಿಕೊಂಡೆ. ನಾನು ಟೀ ಯನ್ನು ಬೇಡ ಎನ್ನಲಾಗಲಿಲ್ಲ.

ಜೀವನ್ ಕೃಷ್ಣಬಹದ್ದೂರ್‌ಗೆ ಟೀ ಮಾಡಲು ಹೇಳಿದ.

ರಾತ್ರಿ ಹತ್ತುಗಂಟೆ ನಾನು ಮಲಗುವ ಸಮಯ. ಹಾಸಿಗೆಯ ಮೇಲೆ ಮೈಚಾಚಿದೆ. ಆದರೆ ನನಗೆ ನಿದ್ದೆ ಬರಲಿಲ್ಲ. ನನ್ನ ಕಣ್ಣ ಮುಂದೆ ಒಂದಾದರೊಂದರಂತೆ ಜೀವನ್‌ನ ಮನೆಯಿಂದ ಆತನ ಕಛೇರಿಯವರೆಗೆ ನಡೆದ ಘಟನೆಗಳು, ಆತನ ಕಾರ್ಯದರ್ಶಿಯವರು ಅವನಿಗೆ ನೀಡಿದ ಭರವಸೆ, ಇದರಿಂದ ಆತನಲ್ಲುಂಟಾದ ಬದಲಾವಣೆ–ಎಲ್ಲವೂ ನನ್ನ ಕಣ್ಣಮುಂದೆ ಹಾದು ಹೋದವು. ಜವಾಬ್ದಾರಿಯುತ ಶಿವನಾಥ ಹಾಗೂ ಕೃಷ್ಣಗೋಪಾಲರ ಮನೋವೃತ್ತಿ ನೆನಪು ಮಾಡಿಕೊಂಡು ಗಾಬರಿಗೊಂಡೆ. ನನ್ನ ದೇಹ ಯಾತನೆಯಿಂದ ಬಳಲುತ್ತಿತ್ತು. ಕೃಷ್ಣಬಹದ್ದೂರನ ವಿಷಯವನ್ನೇ ಗಂಟೆಗಟ್ಟಲೆ ಯೋಚಿಸಿದೆ. ನಂತರ ಜೀವನ್ ನನ್ನ ಮನಸ್ಸಿನಲ್ಲಿ ಸುತ್ತತೊಡಗಿದ. ನನಗೆ ಭಯವಾಗತೊಡಗಿತು. ನನ್ನ ಮನಸ್ಸು ಸರಿಯಾಗಿದೆಯಾ? ಎಂದು ಚಿಂತೆ ಶುರುವಾಯಿತು.

n

# ಸೋಮವಾರ

**ಈ** ದೇಶದಂತೆ, ನನ್ನ ಮನೆಯೂ ಕೂಡ ಬಡತನ ಹಾಗೂ ಹಸಿವಿನಿಂದ ಪೀಡಿತವಾಗಿದೆ. ಕಾಡುವ ನನ್ನ ಹೆಂಡತಿ ಪ್ರತಿದಿನ ಹಿಂಸೆ ಕೊಡುತ್ತಾಳೆ. ಇವತ್ತು ಉಪ್ಪಿಲ್ಲ, ಮತ್ತೆ ನಾಳೆ ಅಡಿಗೆ ಎಣ್ಣೆಯಿಲ್ಲ, ಕೆಲವೊಮ್ಮೆ ಸೌದೆಯಿಲ್ಲಾಯೆಂದು ದೂರಿದರೆ, ಮತ್ತೆ ಕೆಲವೊಮ್ಮೆ ಅಕ್ಕಿಯಿಲ್ಲ, ಅದಿಲ್ಲ–ಇದಿಲ್ಲ ಎಂದು ದೂರುತ್ತಾಳೆ. ನಾನು ತಿಂಗಳಿಗಾಗುವಷ್ಟು ಸಾಮಾನುಗಳನ್ನು ಖರೀದಿಸಬೇಕೆಂದರೂ, ಒಂದೇ ಸಮಯದಲ್ಲಿ ಎಲ್ಲಾ ವಸ್ತುಗಳು ಸಿಗುವುದಿಲ್ಲ. ಬಳಿಕೆ ವಸ್ತುಗಳ ಬೆಲೆಯನ್ನು ಸರ್ಕಾರ ಹೊಸದಾಗಿ ಜಾರಿಮಾಡಿದಾಗಲೆಲ್ಲ ನನ್ನ ಆಯವ್ಯಯದಲ್ಲಿಯೂ ಏರುಪೇರಾಗುತ್ತದೆ. ನಾನೇನಾದರೂ ಮನೆಗೆ ಕಡಿಮೆ ಸಾಮಾನು ತಂದರೆ ಅದಕ್ಕೆ ಅರ್ಥವಿಲ್ಲ. ಅದು ಏನು ಇಲ್ಲದೆ ಇದ್ದಂತೆಯೇ. ಸರ್ಕಾರವೇ ಸಾಮಾನುಗಳು ಲಭ್ಯವಿಲ್ಲವೆಂದು ಘೋಷಿಸುವವರೆಗೆ ನಾನು ಹೇಳಿದರೂ ನನ್ನ ಹೆಂಡತಿ ನಂಬುವುದಿಲ್ಲ. ನಾನು ಮನೆಯ ಬೇಕು–ಬೇಡಗಳ ಬಗ್ಗೆ ಸರಿಯಾಗಿ ಗಮನ ಹರಿಸುವುದಿಲ್ಲವೆಂದು ಆಕೆ ನಂಬಿದ್ದಾಳೆ.

ಇಂದು ಬೆಳಗ್ಗೆ 'ಸಕ್ಕರೆಯಿಲ್ಲ'ವೆಂದು ತಿಳಿಯಿತು. ನಾನು ಅಂದುಕೊಂಡೆ ಇದು 'ಪ್ರತಿದಿನ ನಾನು ಕೇಳುವ ಸುದ್ದಿಯಂತೆ' ಇದೂ ಒಂದು ಎಂದು. ನಾನು ಕ್ಯೂನಲ್ಲಿ ನಿಂತು ಅರ್ಧ ಕೆ.ಜಿ. ಸಕ್ಕರೆಯನ್ನು ತಂದಿದ್ದು ಇಂದು ಖಾಲಿಯಾಗಿದೆ ಎಂದು ಕೇಳಿದಾಗ ಆಶ್ಚರ್ಯವಾಗಲಿಲ್ಲ. ದೇಶದಲ್ಲೆಲ್ಲಾ ಇಲ್ಲದೆ ಇರುವುದು ನನ್ನ ಮನೆಯಲ್ಲೂ ಇಲ್ಲಾ! ಆಶ್ಚರ್ಯಪಡಲು ಅದರಲ್ಲೇನಿದೆ? ಎರಡು ವಾರಗಳಲ್ಲಿ ಸಕ್ಕರೆಯ ಬೆಲೆ ದುಪ್ಪಟ್ಟಾಗಿದೆ. ಮೊದಲು ಅಕ್ಕಿಯ ಬೆಲೆ ಪ್ರತಿಶತ ೧೦ರಷ್ಟು ಹೆಚ್ಚಾಗಿತ್ತು. ಆನಂತರ ಪ್ರತಿಶತ ೪೫. ನನಗನ್ನಿಸುತ್ತೆ ಇಷ್ಟೊಂದು ಬೆಲೆ ಜಾಸ್ತಿಯಾದರೂ ಕೂಡ ಮಾರುಕಟ್ಟೆಯಲ್ಲಿ ಸಾಮಾನುಗಳ ಅಭಾವ ಏಕೆ?

ಬೆಲೆಯ ಹೆಚ್ಚಳ ವಸ್ತುಗಳ ಅಭಾವದಿಂದ ಎಂದು ಸರ್ಕಾರಿ ಗೆಜೆಟ್ ಹೇಳಿಲ್ಲ. ಇಷ್ಟಾದರೂ ಎಲ್ಲಾಕಡೆ 'ಸಕ್ಕರೆ ದೊರೆಯುತ್ತದೆ' ಎಂದು ಬೋರ್ಡ್ ಹಾಕಿದ್ದಾರೆ. ಆದ್ದರಿಂದ ಸಾಮಾನ್ಯ ಗೃಹಿಣಿಯಾದ ನನ್ನ ಹೆಂಡತಿ ಮಾರುಕಟ್ಟೆಯಲ್ಲಿ ಸಕ್ಕರೆಯ ಅಭಾವವಿದೆ ಎಂದರೆ ಹೇಗೆ ನಂಬುತ್ತಾಳೆ? ಆದರೆ ಈ ದೇಶದಲ್ಲಿ ವಾಸ್ತವಕ್ಕೂ ಮತ್ತು ವ್ಯವಹಾರಕ್ಕೂ ಒಂದಕ್ಕೊಂದು ಹೊಂದಾಣಿಕೆಯಾಗದಿರುವುದು



ಮಾತ್ರ ನಿಜ. ನಾವು ಈ ವಿಷಯವನ್ನು ಅವಳ ಹತ್ತಿರ ಚರ್ಚೆಮಾಡಲು ಆಗುವುದಿಲ್ಲ ಮತ್ತು ಅವಳಿಗೆ ಇದನ್ನು ಅರ್ಥಮಾಡಿಸಲು ಸಾಧ್ಯವಿಲ್ಲ. ಅವಳಲ್ಲಿ ಇದಕ್ಕೆ ಆಧಾರವಿರುತ್ತೆ. ನನ್ನ ಹತ್ತಿರ ಇಲ್ಲ. ಆದ್ದರಿಂದ ನಾನು ಈ ಆಭಾವದ ಮನಸ್ಸಿನೊಂದಿಗೆ ತೊಳಲಾಡುತ್ತಿರುತ್ತೇನೆ.

ನಮ್ಮ ಮನೆಯ ಸಮೀಪವಿರುವ ಪ್ರತಿಯೊಂದು ಅಂಗಡಿಗೂ ಹೋದೆ. ನನ್ನ ಕಾಲುಗಳು 'ಇಲ್ಲ' 'ಇಲ್ಲ' ಎಂದು ತಲೆ ಒಗೆಯುತ್ತಿರುವ ಅಂಗಡಿಯವರ ಅಂಗಡಿಗಳ ಗುಂಟ ಸಾಗುತ್ತಿದ್ದವು. ಕೆಲವು ಅಂಗಡಿಯವರು ನನನ್ನು ನೋಡಿ ನಕ್ಕರು, ಕೆಲವರು ಮುಖಸಿಂಡರಿಸಿಕೊಂಡು 'ಇಲ್ಲ' ಎಂದು ಹೇಳಿದರು. ಇನ್ನು ಕೆಲವರು ತಲೆಯನ್ನೂ ಆಡಿಸಲಿಲ್ಲ. ನಾನು ಸಕ್ಕರೆಯನ್ನು ತರಲೇ ಬೇಕಾದ್ದರಿಂದ, ಒಂದು ಅಂಗಡಿಯನ್ನೂ ಬಿಡುವಂತೆ ಇರಲಿಲ್ಲ. ವಿಚಾರಿಸಿ ವಿಚಾರಿಸಿ ಸಾಕಾಯಿತು. ಪ್ರತಿಯೊಂದು ಅಂಗಡಿಯಲ್ಲಿಯೂ ವಿಚಾರಿಸುತ್ತಾ ಹೋದೆ. 'ಸಾಲ್ಟ್ ಟ್ರೇಡಿಂಗ್ ಕಾರ್ಪೊರೇಷನ್ನಿನ ಸಕ್ಕರೆ ಹಾಗೂ ಉಪ್ಪು ಇಲ್ಲಿ ದೊರೆಯುತ್ತದೆ. ಸಕ್ಕರೆಯ ಬೆಲೆ....ಕೆ.ಜಿ.ಗೆ....ಉಪ್ಪಿನ ಬೆಲೆ ಕೆಜಿಗೆ.....' ಎಂದು ದಪ್ಪ ಅಕ್ಷರಗಳಲ್ಲಿ ಬರೆದಿದ್ದ ಬೋರ್ಡ್ ಒಂದು ನನ್ನ ಕಣ್ಣಿಗೆ ಇದ್ದಕ್ಕಿದ್ದ ಹಾಗೆ ಕಾಣಿಸಿಕೊಂಡಿತು. ಬೆಲೆಯೆನ್ನುವ ಜಾಗದಲ್ಲಿ ತೆಳುವಾದ ಪೇಪರ್ ಪೀಸಿನಲ್ಲಿ ಅಂಟಿಸಿದ್ದರು. ನಾನು ಸಮಾಧಾನದ ನಿಟ್ಟುಸಿರು ಬಿಟ್ಟು, ಹಣಕ್ಕಾಗಿ ನನ್ನ ಪರ್ಸ್‌ನಲ್ಲಿ ತಡಕಾಡಿದೆ. ಉಪ್ಪನ್ನು ಖರೀದಿಸಬಹುದು ಅಂದುಕೊಂಡೆ. ನನ್ನ ಕೈಚೀಲವನ್ನು ತೆಗೆದು ಅಂಗಡಿಯವನಿಗೆ ಹೇಳಿದೆ 'ಎರಡು ಕೆಜಿ ಸಕ್ಕರೆ ನಾಲ್ಕು ಕೆಜಿ' ಉಪ್ಪನ್ನು ಕೊಡಿ ಎಂದು. ಆದರೆ ಅಂಗಡಿಯಾತ ನನ್ನನ್ನು ಆಪಾದಮಸ್ತಕ ನೋಡಿ, ವ್ಯಂಗ್ಯವಾಗಿ ಹೇಳಿದ – ಸಕ್ಕರೆ 'ಸ್ಟಾಕ್ ಇಲ್ಲ' ಅನ್ನೋದು ನಿಮಗೆ ಗೊತ್ತಿಲ್ಲವಾ?'

ಕ್ಷಣಕಾಲ ಆತನ ಮಾತು ನನಗೆ ಅರ್ಥವಾಗಲಿಲ್ಲ. ನಿನ್ನ ಅಂಗಡಿಗೆ ಈಗ ತಾನೇ ಬಂದಿದ್ದೀನಿ – 'ಸಕ್ಕರೆ ಸ್ಟಾಕ್ ಇಲ್ಲ' ಅನ್ನುವುದು ನನಗೆ ಹೇಗೆ ಗೊತ್ತಾಗಬೇಕು? ಎಂದು ಹೇಳಿದೆ.

'ಸ್ಟಾಕ್ ಇಲ್ಲಾಂತ' ಗೊತ್ತಿದ್ದರೂ ಕೂಡ ಸುಮ್ಮನೆ ಅರ್ಥವಿಲ್ಲದ ಮಾತುಗಳಿಂದ ನಮ್ಮನ್ನು ಯಾಕೆ ಪೀಡಿಸುತ್ತೀರಿ! ಎಂದು ತಣ್ಣಗೆ ಉತ್ತರಿಸಿದ. 'ನಾನು ಬೇರೆ ಸಾಮಾನುಗಳನ್ನು ಮಾರದೆಯಿದ್ದರೆ, ಅಂಗಡಿಯ ಬಾಗಿಲನ್ನು ಮುಚ್ಚಿರುತ್ತಿದ್ದೆ'.

ನಾನು ಆತನ ಗೊಣಗಾಟವನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ನಾನು ಅಲ್ಲಿಯೆ ಸಮೀಪವಿದ್ದ ಸ್ಟೂಲ್ ಮೇಲೆ ಕುಳಿತು, ಹೇಳಿದೆ 'ಅಲ್ಲಿ ತೂಗು ಹಾಕಿರುವ ಬೋರ್ಡ್ 'ಸಕ್ಕರೆಯಿಲ್ಲ' ಎಂದು ಹೇಳಿಲ್ಲವಲ್ಲ' ಎಂದೆ. ಅಲ್ಲಿರುವ ಬೋರ್ಡ್ ನೋಡಿ ನಿಮ್ಮ ಅಂಗಡಿಗೆ ಬಂದೆ'. ಸಕ್ಕರೆಯಿಲ್ಲಾ ಅನ್ನೋದು ನನಗೆ ಹೇಗೆ

ಗೊತ್ತಾಗಬೇಕು?

ಅಂಗಡಿಯಾತ ನನ್ನೊಂದಿಗೆ ಮಾತನಾಡಲು ಸ್ವಲ್ಪವೂ ಮನಸ್ಸಿಲ್ಲದವನಂತೆ ಕಂಡ. ಈಗಾಗಲೇ ಅನೇಕ ಗ್ರಾಹಕರೊಂದಿಗೆ ನನ್ನಂತೆಯೆ ಇದೇ ರೀತಿಯ ವಾದ ಮಾಡಿರಬಹುದು. ನಾನೇ ಸಕ್ಕರೆಗಾಗಿ ಅನೇಕ ಅಂಗಡಿಗಳಿಗೆ ಅಲೆದಾಡಿದ್ದೇನೆ. ಇದನ್ನು ಹೇಗೆ ಅವನಿಗೆ ಅರ್ಥಮಾಡಿಸುವುದು? ಸ್ವಲ್ಪ ಸಮಯದ ನಂತರ ಸಮಾಧಾನಗೊಂಡು ಹೇಳಿದ 'ಇವತ್ತೆ ಅಲ್ಲ ಬಹಳ ದಿನಗಳಿಂದ ಸಕ್ಕರೆ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ'. ನಿಮಗೆ ಅರ್ಥವಾಗೋಲ್ಲ. ಸುಮ್ಮನೆ ಬೋರ್ಡಿನ ಕಥೆ ಹೇಳುತ್ತೀರಿ. ನಾವು ಬೇಕೂಂತ ಬೋರ್ಡನ್ನು ನೇತಾಕಿಲ್ಲ. ಸಾಲ್ಟ್ ಟ್ರೇಡಿಂಗ್ ಕಾರ್ಪೊರೇಷನ್ನಿನವರು, ನಮ್ಮ ಅಂಗಡಿಯಲ್ಲೂ ನೇತು ಹಾಕಿರುವ ಹಾಗೆ ಎಲ್ಲಾರ ಅಂಗಡಿಯಲ್ಲಿಯೂ ಬೋರ್ಡನ್ನು ಹಾಕಿದ್ದಾರೆ ನೋಡಿ!

ನಾವು ಅವರ ಡೀಲರ್ ಅಲ್ಲ ಅಂತ ಹೇಳಲ್ಲ,ಗ್ರಾಹಕರಿಗೆ ಮಾರಲು ಬೇಕಾದಾಗ ಸರಬರಾಜು ಮಾಡಬೇಕಾದ್ದು ಅವರ ಕರ್ತವ್ಯ ಅಲ್ಲವಾ? ಅವರು ಒಳ್ಳೆ ಸಿಂಹಾಸನದ ಮೇಲೆ ಹವಾನಿಯಂತ್ರಿತ ಕುರ್ಚಿಯಲ್ಲಿ ಆರಾಮವಾಗಿ ಕುಳಿತಿದ್ದಾರೆ. ನಾನು ಇಲ್ಲಿ ಗ್ರಾಹಕರ ಮಾತುಗಳನ್ನು ಕೇಳುತ್ತಾ ಅವರ ಸಮಸ್ಯೆಗಳಿಗೆ ಉತ್ತರಿಸಬೇಕಾಗಿದೆ. ಇದು ಅಯ್ಯೋ ಪಾಪ ಅನ್ನಿಸಲ್ಲವಾ!

ನಿಜವಾಗಿಯೂ 'ನಿಮ್ಮಲ್ಲಿ ಸಕ್ಕರೆ ಇಲ್ಲವಾ?'

'ಕ್ಷಮಿಸಿ ಇಲ್ಲ' – ಇದ್ದರೆ ನಾನ್ಯಾಕೆ ಇಲ್ಲಾಂತಿದ್ದೆ, ವ್ಯಾಪಾರ ಮಾಡುತ್ತಿದ್ದೆ. ಆದರೆ ನಿಜವಾಗಿಯೂ ಸಕ್ಕರೆ ಇಲ್ಲ.

'ಯಾಕೆ ಅಭಾವ? ಕಾರಣವೇನು?'

'ಕಾರಣ ಏನೂಂತ ನಮಗೆ ಗೊತ್ತಾಗೋಲ್ಲಾ. ಬೆಲೆ ಹೆಚ್ಚಳದ ನಂತರ, ಸಿಗಬೇಕಾಗಿತ್ತು. ಮೊನ್ನೆ ಎಂದೋ ನಾನು ಸಾಲ್ಟ್ ಟ್ರೇಡಿಂಗ್ ಕಾರ್ಪೊರೇಷನ್ನಿನ ಕಛೇರಿಗೆ ಸಕ್ಕರೆಗಾಗಿ ಹೋಗಿದ್ದೆ. ಅವರು ನಾನು ದುಡ್ಡನ್ನು ಡಿಪಾಸಿಟ್ ಮಾಡುವಂತೆ ನನಗೆ ಹೇಳಿದರು. ನಾನು ೨೦ ಚೀಲ ಸಕ್ಕರೆಗೆ ದುಡ್ಡನ್ನು ಡಿಪಾಸಿಟ್ ಮಾಡಿದ್ದೇನೆ. ನಾನು ಪ್ರತಿನಿತ್ಯ ಕಾರ್ಪೊರೇಷನ್ ಕಛೇರಿಗೆ ಅಲೆಯುತ್ತಿದ್ದೇನೆ. ಆದರೆ ಸಕ್ಕರೆ ಮಾತ್ರ ಎಲ್ಲಿಯೂ ಕಾಣುತ್ತಿಲ್ಲ. ಆದರೆ ಎಲ್ಲ ಡೀಲರ್‌ಗಳಿಗೂ ಸಕ್ಕರೆಯನ್ನು ವಿತರಿಸುತ್ತಾರೆ ಎಂಬ ರೂಮರ್ ಇದೆ. ಒಂದು ಚೀಲ ಕೊಟ್ರು ಪರವಾಗಿಲ್ಲ ಬೇಕಾದಷ್ಟಾಗುತ್ತೆ. ನಾವು ಅರ್ಧ ಕೇಜಿನೊ ಕಾಲು ಕೇಜಿನೊ ನಮ್ಮ ಗ್ರಾಹಕರಿಗೆ ವಿತರಿಸಬಹುದು.'.

ನಾನು ಆಗ ಹೇಳಿದೆ ಸಂಜೆ ವೇಳೆಗೆ ನನಗೂ ಅರ್ಧ ಕೆ.ಜಿ. ಸಿಗಬಹುದಾ ಸಾರ್? ಎಂದು.

ಆತ ವ್ಯಂಗ್ಯವಾಗಿ ನಕ್ಕು ಹೇಳಿದ, 'ಈ ಜನರನ್ನು ನಂಬಕಾಗೋಲ್ಲ ನೋಡಿ,



ಹತ್ತು ದಿನಗಳ ಹಿಂದೆ ದುಡ್ಡು ಕಟ್ಟಿಸಿಕೊಂಡ್ರು. ಆದರೆ ಈವರೆಗೆ ಒಂದು ಸ್ವಲ್ಪವೂ ಕೂಡ ಡಿಲಿವರಿಯಾಗಿಲ್ಲ. ಆದ್ದರಿಂದ ಅವರನ್ನು ನಂಬೋದು ಹ್ಯಾಗೆ! ನಾನು ಈ ಜನರಿಂದ ರೋಸಿಹೋಗಿದ್ದೇನೆ. ಅವರು ವ್ಯಾಪಾರಿಗಳಲ್ಲ. ಸ್ವಲ್ಪ ಗುಮಾಸ್ತರ ಕೆಲಸ ಮಾಡೋದರಿಂದ ವ್ಯಾಪಾರಿಗಳಾಗೋಕಾಗಲ್ಲ. ಹಾಗೇನಾದರೂ ಆಗಿದ್ದರೆ, ಪ್ರತಿಯೊಬ್ಬರೂ ಲಕ್ಷಾಧಿಪತಿಗಳೊ, ಕೋಟ್ಯಾಧಿಪತಿಗಳೊ ಆಗಿರುತ್ತಿದ್ದರು. ನೇಪಾಳದಲ್ಲಿ ಸರಿಯಾದ ವ್ಯಕ್ತಿಗಳನ್ನು ಸರಿಯಾದ ಕೆಲಸಕ್ಕೆ ಅಥವಾ ಹುದ್ದೆಗೆ ಆಯ್ಕೆ ಮಾಡೋಲ್ಲ. ಇಲ್ಲಿ ಯಾರು ಏನು ಬೇಕಾದರೂ ಮಾಡಬಹುದು. ಅಥವಾ ಏನಾದರೂ ಆಗಿರಬಹುದು. ನೀವೆ ಯೊಚನೆ ಮಾಡಿ'! ಅಂಗಡಿಯವನು ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಿದ್ದ ರೀತಿ ನನಗೆ ಬಹಳವಾಗಿ ಮೆಚ್ಚುಗೆ ಯಾಯಿತು. ನನ್ನ ಮಾತುಗಾರಿಕೆ ಆತ ಈ ರೀತಿ ಮುಂದುವರೆದು ಮಾತನಾಡಲು ಸಹಾಯವಾಗಿರಬಹುದು. ಆತ ಮಾತು ಮುಂದುವರಿಸಿ ಹೇಳಿದ – 'ಅವರು ವಾದ ಮಾಡುತ್ತಾರೆ ಅಭಾವಕ್ಕೆ ಆ ಡೀಸೆಲ್ ಕಾರಣ ಅಂತ. ಈಗ ಈ ವಾರದಲ್ಲಿ ಡೀಸೆಲ್ ಬೆಲೆಯೂ ಹೆಚ್ಚಾಗಿರುವುದನ್ನು ಕೇಳಿದ್ದೇವೆ. ಈ ಕಾರ್ಪೊರೇಷನ್ನಿನವರು ಜನರಿಗೆ ಮೋಸ ಮಾಡೋಕಾಗಲ್ಲ. ಅವರ ತರ್ಕ ನಂಬುವಂತಹುದಲ್ಲ. ಅದೂ ಅಲ್ಲದೆ, ನಮಗೆ ಸಾಗಾಣಿಕೆಗೆ ಬೇರೆ ದಾರಿಯಿದೆ–ರೋಪ್‌ವೇ ಇದೆ. ಈಗ ರೋಪ್‌ವೇ ಕೆಲಸ ಮಾಡುತ್ತಿದೆ. ನಿಜ ಹೇಳಬೇಕಂದ್ರೆ ವ್ಯಾಪಾರ ವ್ಯಾಪಾರಿಗಳಿಂದ ನಡೆಯುತ್ತಿಲ್ಲ, ಅದು ಬೇಜವಾಬ್ದಾರಿಯ ನೌಕರರಿಂದ ನಡಿತಾಯಿದೆ. ವ್ಯಾಪಾರಿಗಳೆ ದಿನಸಿಯನ್ನು ಗ್ರಾಹಕರಿಗೆ ಸಿಗುವಂತೆ ಮಾಡುವುದಿದ್ದರೆ ಅದು ಅವರ ಮರ್ಯಾದೆ ಪ್ರಶ್ನೆಯಾದ್ದರಿಂದ, ಹೇಗಾದರೂ ಮಾಡಿ ಸಿಗುವಂತೆ ಮಾಡುತ್ತಿದ್ದರು. ಈ ಸಮಸ್ಯೆಗೆ ಪರಿಹಾರ ಈ ಅನುಭವವಿಲ್ಲದ ಸಿಬ್ಬಂದಿಯ ಕೈಯಲ್ಲಿದೆ. ಅಭಾವವಿದ್ದಾಗ ಈ ಸಿಬ್ಬಂದಿಗೆ ಪ್ರಾಮುಖ್ಯತೆ ಬರುತ್ತದೆ. ಸಣ್ಣಪುಟ್ಟ ವ್ಯಾಪಾರಿಗಳು ಅವರ ಸುತ್ತಾ ಸೇರಿ ಅವರಿಗೆ ಬೆಣ್ಣೆ ಹಚ್ಚುತ್ತಾರೆ, ಹೊಗಳುತ್ತಾರೆ. ದೊಡ್ಡ ವ್ಯಾಪಾರಿಗಳು ಅವರನ್ನು ಪಂಚತಾರಾ ಹೋಟೇಲ್‌ಗೆ ಕರೆದು ಆತಿಥ್ಯ ನೀಡುತ್ತಾರೆ. ಅವರು ಬೇಕಾದವರಿಗೆ ಪಕ್ಷಪಾತಮಾಡೋದು, ಸಂಬಂಧಿಗಳಿಗೆ ಅನುಕೂಲ ಮಾಡಲು ಮುಂದಾಗುತ್ತಾರೆ. ಅಭಾವ ಇಲ್ಲದಾಗಲೂ, ಅವರು ಕೃತಕ ಅಭಾವವನ್ನು ಸೃಷ್ಟಿ ಮಾಡುತ್ತಾರೆ.

ಇದ್ದಕ್ಕಿದ್ದ ಹಾಗೆ ಮಾತು ನಿಲ್ಲಿಸಿ, ನನ್ನ ಮೈಮುಟ್ಟುವುದರ ಮೂಲಕ ಗಮನ ಸೆಳೆದು, ರಸ್ತೆಯ ಕಾಲುದಾರಿಯಲ್ಲಿ ಹೋಗುತ್ತಿದ್ದ ಮನುಷ್ಯನನ್ನು ತೋರಿಸಿ ಹೇಳಿದ – 'ಆತ ನಿಮಗೆ ಗೊತ್ತೆ?' ಎಂದು.

ನಾನು ಆತನ ಮಾತುಗಳಲ್ಲಿ ಲೀನವಾಗಿದ್ದರಿಂದ, ಅವನು ಯಾರನ್ನು ಕುರಿತು ಹೇಳುತ್ತಿದ್ದಾನೆಂದು ತಿಳಿಯಲಿಲ್ಲ. ನನಗೆ ದಿಕ್ಕು ತೋಚದಂತಾಗಿ– ಯಾರು? ಆತ ಯಾರು? ಎಂದು ಕೇಳಿದೆ.

'ಅಗೊ ಅಲ್ಲಿ ಆ ದಢೂತಿ ಮನುಷ್ಯ'

'ಓ ಆತ ನನಗೆ ಗೊತ್ತಿಲ್ಲ'

'ಓ ನಿಮಗೆ ಆ ಥರದ ಜನ ಗೊತ್ತಿಲ್ಲವಾ'?

'ನಾನು ಆತನನ್ನು ನೋಡಿಯೆ ಇಲ್ಲ'

'ನೀವು ಎಲ್ಲಿ ವಾಸ ಮಾಡುತ್ತೀರಿ?'

'ನಾನು ಕಟ್ಮಂಡುವಿನಲ್ಲಿ ವಾಸಿಸುತ್ತೇನೆ'

'ಹಾಗಿದ್ದರೆ ನೀವು ಆತನನ್ನು ನೋಡಿರುತ್ತೀರಿ'

'ಅರ್ಧಮಿಲಿಯನ್ ಜನ ಕಟ್ಮಂಡುವಿನಲ್ಲಿ ವಾಸಮಾಡುತ್ತಾರೆ. ಅವರೆಲ್ಲರನ್ನು ನೋಡಿರುವುದು ಸಾಧ್ಯವೇ ಇಲ್ಲ, ನಿಮಗೆ ಹತ್ತಿರವಾದವರನ್ನು ಮಾತ್ರ ನೀವು ನೋಡಿರುತ್ತೀರಿ.'

'ಸರಿ! ನೀವು ಆತನನ್ನು ನೋಡಿಲ್ಲದೆ ಇರಬಹುದು' ನನ್ನ ಅಜ್ಞಾನವನ್ನು ಪೂರ್ಣ ಒಪ್ಪಿದ ಆತ; ನಿಟ್ಟುಸಿರುಬಿಟ್ಟು, ಮುಖವನ್ನು ಗಂಟು ಹಾಕಿಕೊಂಡು ಹೇಳಿದ, 'ಒಂದು ರೀತಿಯಲ್ಲಿ ನೀವೂ ಕೂಡ ನನಗೆ ಗೊತ್ತಿಲ್ಲ.'

ಸ್ವಲ್ಪ ಸಮಯದ ನಂತರ, ನಮ್ಮ ಸಂಭಾಷಣೆ ಹೊಸ ರೂಪು ಪಡೆಯಿತು. ನನಗೆ ಈಗ ಆ ಮನುಷ್ಯನ ಬಗ್ಗೆ ತಿಳಿದುಕೊಳ್ಳಬೇಕೆನಿಸಿತು. ಆ ಮನುಷ್ಯ ತುಂಬಾ ದೊಡ್ಡವನಿರಬೇಕೆನಿಸಿತು. ಆ ಅಂಗಡಿಯಾತನನ್ನು ಕೇಳಿದೆ.

'ಆತ ಯಾರು'?

'ಆತ ಈ ಹಿಂದೆ ಫುಡ್ ಕಾರ್ಪೊರೇಷನ್ನಿನ ಬಾಸ್ ಆಗಿದ್ದ' ನೇರವಾಗಿ ಉತ್ತರಿಸಿದ.

'ಅದ್ಯಾಕೆ ನಡೆದುಕೊಂಡು ಹೋಗುತ್ತಿದ್ದಾನೆ? ಸರ್ಕಾರಿ ವಾಹನ ಇಲ್ಲವಾ?'

'ಆತ ಮಾಜಿ ಬಾಸ್. ಆತ ಅಧಿಕಾರದಲ್ಲಿದ್ದಾಗ, ಓ ದೇವರೆ! ಅಮಾವಾಸ್ಯೆಗೋ ಪೂರ್ಣಿಮೆಗೋ ಆತ ಕಾಣಿಸಿಕೊಳ್ಳುತ್ತಿದ್ದ. ಬಾಸ್ ದರ್ಶನ ಹಾಗಿರಲಿ, ಆತನ ಸಹಾಯಕನನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಈಗ ಸಾಮಾನ್ಯ ಜನರೊಂದಿಗೆ ಬೆರೆಯುವ ಉದ್ದೇಶದಿಂದ ರಸ್ತೆ ಬದಿಯಲ್ಲಿ ನಡೆಯಲು ಆರಂಭಿಸಿರಬೇಕು, ಆತ ನಡೆಯುತ್ತಿರುವುದರಿಂದ ಆತನಿಗೆ ಕಾರ್ ಇಲ್ಲವೆಂದು ತಿಳಿಯಬೇಡ' – ಮಾತು ಮುಂದುವರಿಸಿದ. ಇಂಥವರೆ, ಸಾಮಾನ್ಯಜನರ ಆರ್ಥಿಕ ಸ್ಥಿತಿಯನ್ನು ಹಳ್ಳಕ್ಕೆ ತಳ್ಳಿರೋದು! ಎಂದು ಮಾತು ಮುಂದುವರಿಸಿದ. ಇವರೆ ಕಾರ್ಪೊರೇಷನ್ ಪಾಪರ್ ಮಾಡಿರೋರು. ಇವರು ಸಮಾಜದಲ್ಲಿ ದೊಡ್ಡವರಂತೆ, ಗೌರವಾನ್ವಿತ ವ್ಯಕ್ತಿಗಳಂತೆ ತಲೆಯೆತ್ತಿ ಮೆರೆದಾಡುವವರು. ಅವರಿಗೆ ನಾಚಿಕೆಯೆಂಬುದೇ ಇಲ್ಲ! ಮಿಗಿಲಾಗಿ ಅವರನ್ನು ನೋಡಿದ ನಮಗೆ ನಾಚಿಕೆಯಾಗುತ್ತೆ! ನಾಚಿಕೆಯಾಗಬೇಕು?

ಕೆಲವು ದಿನಗಳ ಹಿಂದೆ ಒಂದು ಸರ್ಕಾರಿ ವಾರ್ತಾಪತ್ರದಲ್ಲಿ ಪ್ರಕಟವಾದ



ಒಂದು ಸಮಾಚಾರವನ್ನು ನಾನು ನೆನಪು ಮಾಡಿಕೊಂಡೆ. ವ್ಯಾಪಾರಿಯ ಪ್ರತಿಕ್ರಿಯೆಯನ್ನು ತಿಳಿಯುವ ಕುತೂಹಲದಿಂದ– 'ನಾನು ಕೆಲವು ತಿಂಗಳುಗಳ ಹಿಂದೆ ಒಂದು ಸರ್ಕಾರಿ ವಾರ್ತಾಪತ್ರದಲ್ಲಿ ಯಾರೊ ಒಬ್ಬ ವ್ಯಾಪಾರಿ ಎಂಥದ್ದೋ ಖಾದ್ಯಯೋಗ್ಯವಲ್ಲದ ತೈಲವನ್ನು ಮಾರಿದ್ದರಿಂದ ಆತನ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಆತನನ್ನು ಬಂಧಿಸಿದ ವಿಚಾರವನ್ನು ಓದುವ ಅವಕಾಶ ಸಿಕ್ಕಿತ್ತು. ಅದೇ ಕಾರ್ಪೊರೇಷನ್ನಿನ ವಿಷಯವನ್ನು ತಾನೆ ನೀನು ಈಗ ಹೇಳುತ್ತಿರುವುದು?' ಎಂದೆ.

ಹೌದು! ಅದೇ ಕಾರ್ಪೊರೇಷನ್. ಅಡಿಗೆ ಎಣ್ಣೆ ವಿಷಯ ಹೇಳಿದೆಯಲ್ಲಾ, ಅದೂ ಕೂಡ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ಈ ದೇಶದಲ್ಲಿ ಕಲಬೆರಕೆ ವಸ್ತುಗಳಿಗೂ ಕೂಡ ಅಭಾವ!

ವ್ಯಾಪಾರಿ ೫೦–೫೫ ವರ್ಷದವನಿರಬಹುದು. ಒಳ್ಳೆಯ ಸೀದಾ ಸಾದ ಮನುಷ್ಯ. ಆತ ಯಾವ ಅಡೆತಡೆಯೂ ಇಲ್ಲದೆ ನನ್ನೊಂದಿಗೆ ಸಂತೋಷವಾಗಿ ಹರಟೆ ಹೊಡಿಯುತ್ತಿದ್ದ. ಆಗ ಬೆಳಗಿನ ೧೧.೦೦ ಗಂಟೆ. ಈಗ ಆತ ವಿರಾಮವಾಗಿದ್ದ. ವ್ಯಾಪಾರಕ್ಕೆ ಅಂಥ ರಶ್‌ಯಿರಲಿಲ್ಲ.

ಅಂಗಡಿಯಾತ ಈ ಹಿಂದೆ ಯಾವ ವ್ಯಕ್ತಿಯನ್ನು ಕುರಿತು ಮಾತನಾಡಿದ್ದನೊ ಆತನ ಬಗ್ಗೆ ನನಗೆ ಕುತೂಹಲವಿತ್ತು. ಮತ್ತೆ ಹಿಂದಿನ ವಿಷಯವನ್ನೂ ಪ್ರಸ್ತಾಪಿಸಿ ಮಾತಿಗಾರಂಭಿಸಿದೆ – 'ನೀವು ಈ ಹಿಂದೆ ಹೇಳಿದ ಆ ವ್ಯಕ್ತಿಯ ವಿಷಯವನ್ನು ಇನ್ನೂ ನಾವು ಮುಗಿಸಿಲ್ಲ ಎಂದೆ'.

'ಓ! ಹೌದು! ಇಂಥ ವಂಚಕವ್ಯಕ್ತಿಗಳ ವಿಷಯ ಕುರಿತು ಬರೀ ಮಾತಾಡಿ ಏನು ಪ್ರಯೋಜನ? ನಾನು ಆತನನ್ನು ನಿನಗೆ ತೋರಿಸಬೇಕಿತ್ತು ಅಷ್ಟೆ. ನನಗೆ ಇಂಥ ಜನರನ್ನು ನೋಡಿದರೆ, ಕೋಪ ಬರುತ್ತೆ, ರಕ್ತ ಕುದಿಯುತ್ತೆ. ಒಂದು ಮೊಂಡು ಕತ್ತಿ ತಗೊಂಡು ಈ ತಿಗಣೆಗಳನ್ನು ಸಾಯೋತನಕ ತಿವಿಯಬೇಕೆನಿಸುತ್ತದೆ! ಆದರೆ ನಾನು ಅಸಹಾಯಕ! ನನಗೆ ಅಧಿಕಾರವಿಲ್ಲ! ನಾನೇನಾದರು ಇಂಥ ಕೆಲಸ ಮಾಡಿದರೆ, ಜನ ನನಗೆ ಹುಚ್ಚಿಡಿದಿದೆ ಎಂದು ತಿಳಿಯುತ್ತಾರೆ. ಆದ್ದರಿಂದ ನಾನೇನು ಮಾಡಲಿ? ನಿರಾಸೆ ಹಾಗೂ ಅಸಹಾಯಕತೆ ಯನ್ನು ವ್ಯಕ್ತಪಡಿಸುವುದನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲ?

ಆತ ದುರ್ಬಲ ಹಾಗೂ ವಯಸ್ಸಾದವನಂತೆ ಕಂಡರೂ, ಆತನ ಕೋಪದಿಂದ ಕೂಡಿದ ವಾದದಲ್ಲಿ, ಅಂತರಂಗದಲ್ಲಿ ಅಡಗಿರುವ ಹೋರಾಟದ ಮನಸ್ಸು ಹೊರಹೊಮ್ಮಿ ಅವಕಾಶ ಕೊಟ್ಟರೆ ಹೋರಾಟ ಮಾಡಲು ಸಿದ್ಧವಿರುವಂತೆ ಕಾಣುತ್ತಿದ್ದವು. ವ್ಯಾಪಾರವೊಂದೇ ಅವನ ಜೀವನದ ಮಾರ್ಗವಾಗಿತ್ತು. ಆತ ಏನು ಹೇಳುತ್ತಿದ್ದರೂ ಅದು ಪೂರ್ಣ ಸ್ವಾರ್ಥ ರಹಿತವಾದ ಅನುಭವದಿಂದ ಹೇಳುತ್ತಿದ್ದ.

ನಾನು ಅಂಗಡಿಯಲ್ಲಿ ಕುಳಿತಿದ್ದ ಸಮಯದಲ್ಲಿ ಅನೇಕ ಜನ ಬಂದು ಸಕ್ಕರೆಯನ್ನು ವಿಚಾರಿಸಿ ವಾಪಸ್ಸಾದರು! ಸಕ್ಕರೆಯನ್ನು ಅವಲಂಬಿಸಿರುವ ಜನರ ಅಸಹಾಯಕತೆಯನ್ನು ಕುರಿತು ಯೋಚಿಸಿದೆ. ಸಕ್ಕರೆಯಿಲ್ಲದೆ ಬದುಕಲು ಸಾಧ್ಯವಿಲ್ಲವೆ? ನಾನೇ ಇದಕ್ಕೆ ಉತ್ತರ. ನನ್ನ ಸಮಯವನ್ನು ವ್ಯಯ ಮಾಡುತ್ತಿದ್ದೇನೆ ಅನ್ನಿಸಿತು.

ಈ ಸಂದರ್ಭದಲ್ಲಿ ನಾನು ಹೇಳಿದೆ – 'ಸರ್ಕಾರ ಯಾವಾಗ ಸಕ್ಕರೆಯ ಬೇಡಿಕೆಯನ್ನು ಪೂರೈಸಲು ಸಾಧ್ಯವಿಲ್ಲವೊ ಆಗ ಹೇಳಬೇಕು ನಮಗೆ ಇದು ಸಾಧ್ಯವಿಲ್ಲವೆಂದು. ಆಗ ಜನ ಬೇರೆ ಮಾರ್ಗ ಹುಡುಕುತ್ತಾರೆ. ಹೌದಲ್ಲವಾ'?

'ಹೌದು! ನೀವು ಹೇಳುವುದು ಸರಿ! ಜನರ ಸಂಕಷ್ಟಗಳಿಗೆ ಸರ್ಕಾರದ ಪಾಲಿಸಿಯೆ ಕಾರಣ. ಯಾವುದು ಸಿಗುವುದಿಲ್ಲವೊ ಅದಕ್ಕೆ ಜನ ಪರಿಹಾರವನ್ನು ಹುಡುಕಿಕೊಳ್ಳುತ್ತಾರೆ. ಅದು ಮಾನವಸಹಜ ಗುಣ. ಆದರೆ ಇಲ್ಲಿ ಈ ದೇಶದಲ್ಲಿ, ಜನರನ್ನು ದರೋಡೆ ಮಾಡೋಕೆ ಅವರನ್ನು ಅಂಧಕಾರದಲ್ಲಿಟ್ಟು, ಗೊಂದಲವನ್ನುಂಟು ಮಾಡುತ್ತಾರೆ'.

ಅಂಗಡಿಯಾತ ಮುಂದುವರೆದು ಹೇಳಿದ! 'ಅವರು ಗ್ರಾಹಕರ ಯಾವುದಾದರೊಂದು ದಿನಸಿಯ ಕೃತಕ ಅಭಾವವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾದರೆ, ೨೪ ಗಂಟೆಗಳೊಳಗೆ ಕಟ್ಟುಂಡುವೊಂದರಲ್ಲಿಯೆ, ಲಕ್ಷ ರೂ.ಗಳನ್ನು ಬಳಕೆದಾರರಿಂದ ದೋಚಿಕೊಳ್ಳಬಹುದು ಗೊತ್ತಾ' ಎಂದ. ಈ ರೀತಿಯ ಕಾಳಸಂತೆಯ ವ್ಯಾಪಾರದಿಂದ ಹಣ ಸಂಗ್ರಹಿಸಿ ಅಧಿಕಾರಿಗಳು ಹಾಗೂ ದೊಡ್ಡ ದೊಡ್ಡ ವ್ಯಾಪಾರಿ ಕುಳಗಳು ಬೆಳಕಾಗುವುದರೊಳಗೆ ಕೋಟ್ಯಾಧಿಪತಿ ಗಳಾಗುತ್ತಾರೆ. ಕೇಳಿ, ಇದು ಆಶ್ಚರ್ಯವೆನ್ನಿಸಬಹುದು! ಕೆಲವು ದಿನಗಳ ಹಿಂದೆ, ಸಕ್ಕರೆಯ ಬೆಲೆ ಹೆಚ್ಚಾದಾಗ, ಒಬ್ಬ ವ್ಯಾಪಾರಿ ಪ್ರಥಮ ಬಾರಿಗೆ ಅರ್ಧ ಮಿಲಿಯನ್ ಮಾಡಿಕೊಂಡ. ಎರಡನೆ ಭಾರಿ ಎರಡು ಮಿಲಿಯನ್ ಮಾಡಿಕೊಂಡ. ಇದನ್ನೆಲ್ಲ ಯಾರು ತಡೆಯುತ್ತಾರೆ? ಮಾರುಕಟ್ಟೆಯಲ್ಲಿ ಸಕ್ಕರೆಯ ಅಭಾವ ಒಂದು ಸಹಜ ಅನಿಷ್ಟ ಸತ್ಯ. ಸಕ್ಕರೆಯಿಲ್ಲದೆ ಬದುಕಲು ಆಗದವರು, ಎಷ್ಟಾದರೂ ಕೊಟ್ಟು ಕೊಂಡುಕೊಳ್ಳುತ್ತಾರೆ. ಸಕ್ಕರೆಯನ್ನು ಬಳಸುವ ಜನ ಇದೇ ರೀತಿ ಮಾಡುತ್ತಾರೆ. ನಿಮಗೆ ವ್ಯತ್ಯಾಸ ಕೇವಲ ೨ ಅಥವಾ ೩ ರೂಪಾಯಿಗಳು, ನೀವು ಅದಕ್ಕೆಲ್ಲ ಕೇರ್ ಮಾಡೋಲ್ಲ?

ನಾನು ಅನುಮೋದಿಸುವಂತೆ ತಲೆದೂಗಿದೆ. ಅವನು ಹೇಳುತ್ತಾ ಹೋದ 'ಈ ದೇಶಕ್ಕೆ ಕೇವಲ ನೌಕರರು ಬೇಕಾಗಿದ್ದಾರೆ. ಈ ದೇಶದಲ್ಲಿ ಅಧಿಕಾರ ಮಾಡುವವರು ಅಧಿಕಾರಿಗಳು ಮಾತ್ರ. ಕೈಗಾರಿಕೆಯನ್ನು ನಡೆಸುವವರು ಅಧಿಕಾರಿಗಳು, ಎಲ್ಲಾ ಗುತ್ತಿಗೆಗಳನ್ನು ನಿಭಾಯಿಸುವವರು ಅಧಿಕಾರಿಗಳು, ವ್ಯಾಪಾರ ಮಾಡುವವರು ಅಧಿಕಾರಿಗಳು ಅಂದರೆ ಸಾಮಾಜಿಕ – ಆರ್ಥಿಕ– ವಲಯ ಅಧಿಕಾರಿಗಳಿಂದ ನಿಯಂತ್ರಿತವಾಗಿದೆ, ಅಧಿಕಾರಿಗಳ ನಿಯಂತ್ರಣ ಇಲ್ಲದೆ ಇರೋ ಒಂದು ವಸ್ತುವನ್ನ



ಹೇಳಿ?'

'ಕಳ್ಳ ವ್ಯಾಪಾರ' ನಾನು ಸೇರಿಸಿದೆ.

'ಇದು ಅಧಿಕಾರಿಗಳ ಶಾಮೀಲಿಲ್ಲದೆ ನಡೆಯುತ್ತದೆ ಎಂದು ನಿಮಗನ್ನಿಸುತ್ತದೆಯಾ?

ಈ ಪ್ರಶ್ನೆಗೆ ನನ್ನಲ್ಲಿ ಉತ್ತರವಿರಲಿಲ್ಲ. ಅವನಿಗೆ ನನ್ನೊಂದಿಗೆ ಮಾತನಾಡುವ ಉತ್ಸಾಹ ಇನ್ನೂ ಇದ್ದಂತೆ ಕಂಡುಬಂದಿತು. ಇದು'ಅಕ್ಕಿಯ ಬೆಲೆ ಕಡಿಮೆಯಾಗುವ ಕಾಲ' ಎಂದು ಆತ ಹೇಳಿದ. ಆದರೆ ಬೆಲೆ ಜಾಸ್ತಿಯಾಗುತ್ತಿದೆ. ಮಳೆಗಾಲದವರೆಗೆ ಬೆಲೆ ಈ ರೀತಿ ಮೇಲೇರುತ್ತಾ ಹೋದರೆ ಬಡವರು ಅಕ್ಕಿ ಖರೀದಿಸಲು ಸಾಧ್ಯವಿಲ್ಲ. ನೋಡಿ ತರಕಾರಿ, ಬೇಳೆಗಳು, ಕಳೆದ ವರ್ಷಕ್ಕೆ ಹೋಲಿಸಿದರೆ, ಬೆಲೆ ದುಪ್ಪಟ್ಟು ಹೆಚ್ಚಿದೆ. ಬೆಲೆ ಹೆಚ್ಚುತ್ತಿರುವುದರಿಂದ ವ್ಯಾಪಾರ ಮಾಡೋದು ಕಷ್ಟವಾಗಿದೆ. ನಾವು ಸಾಮಾನ್ಯ ವ್ಯಾಪಾರಿಗಳು. ನಾವು ಕೊಳ್ಳುವ ಮತ್ತು ಮಾರುವ ಬೆಲೆಗಳಲ್ಲಿ ಪರಸ್ಪರ ಹೊಂದಾಣಿಕೆ ಇರಬೇಕು. ನನಗೆ ಸಮಾಧಾನವಿಲ್ಲ.

ನಿಮಗೆ ಸಮಾಧಾನವಿಲ್ಲದಾಗ, ನೀವೇನು ಮಾಡಲು ಸಾಧ್ಯ? ಇದು ಕೇವಲ ನನ್ನ ದೌರ್ಬಲ್ಯವಲ್ಲ, ಇದು ಎಲ್ಲರ ದೌರ್ಬಲ್ಯ.

ನಾನು ಅಂಗಡಿಯಾತನನ್ನು ಕೇಳಿದೆ. 'ನೀವು ಎಷ್ಟು ದಿನದಿಂದ ಈ ವ್ಯಾಪಾರ ಮಾಡುತ್ತಿದ್ದೀರಿ?'

'ಕೇವಲ ಐದು ವರ್ಷಗಳಿಂದ'

'ಅದಕ್ಕೆ ಮೊದಲು ಏನು ಮಾಡುತ್ತಿದ್ದಿರಿ?'

'ಆಡಿಟರ್ ಜನರಲ್ ಕಛೇರಿಯಲ್ಲಿ ನಾನು ಸರ್ಕಾರಿ ಕೆಲಸದಲ್ಲಿದ್ದೆ. ನಾನು ಕೇವಲ ಗುಮಾಸ್ತನಾಗಿದ್ದೆ.'

ರಾಣ ವಂಶದವರೊಬ್ಬರು ಪ್ರಧಾನ ಮಂತ್ರಿಯಾಗಿದ್ದಾಗ ನಾನು ಸರ್ಕಾರಿ ಸೇವೆಯಲ್ಲಿ ಸುದೀರ್ಘ ಸೇವೆ ಮಾಡಿದೆ. ನಾನು ಪಿಂಚಣಿ ಪಡೆಯುವ ವಯಸ್ಸನ್ನು ತಲುಪಿದಾಗ ರಾಜೀನಾಮೆ ನೀಡಿದೆ.

ಹೌದಾ!

'ನಾನು ರಾಜೀನಾಮೆ ನೀಡಿದ್ದಕ್ಕೆ ಒಂದು ಕಾರಣವಿದೆ. ಹಿಂದಿನ ಬಾಗಿಲಿನ ಕಳ್ಳವ್ಯವಹಾರ ನನಗೆ ಇಷ್ಟವಾಗೋಲ್ಲ. ನೋಡಿ ಜವಾಬ್ದಾರಿಯೆಂದು ಕರೆಯುವ ಯಾವುದೂ ನಮ್ಮ ಕಛೇರಿಗಳಲ್ಲಿ ಇಲ್ಲ. ಎಷ್ಟೇ ಆದರೂ ಅದು ಸರ್ಕಾರಿ ದುಡ್ಡು. ನೀವು ಅಲಕ್ಷ್ಯದಿಂದ ಸುಮ್ಮನೆ ಕೂರಲು ಬರುವುದಿಲ್ಲ. ನಿಮ್ಮ ಮನಸ್ಸು ಇದಕ್ಕೊಪ್ಪುವುದಿಲ್ಲ. ಕೆಲಸಕ್ಕೆ ಹೋದರೆ ಎಲ್ಲಿಂದ ಆರಂಭಿಸುತ್ತೀರಿ? ಮೊದಲಿನಿಂದ? ಕೊನೆಯಿಂದ? ನೀವು ಅಸಹಾಯಕ ರಾಗುತ್ತೀರಿ. ಸ್ವಲ್ಪ ನಿಗಾ ಇಟ್ಟು ನೋಡಿದರೆ ನಿಮಗೆ ಕಾಣುತ್ತೆ, ಎಷ್ಟೋ ಲೆಕ್ಕಗಳು ಶತಮಾನ ಕಳೆದರೂ ಮುಗಿಯೋದಿಲ್ಲ.

ಪ್ರತಿದಿನ ನಾನು ಸರ್ಕಾರಿ ಲೆಕ್ಕಕ್ಕೆ ಮೋಸ ಮಾಡುತ್ತಿದ್ದೇನೆ ಅಂತ ಗೊತ್ತಾದ ದಿನ ಕೆಲಸ ಬಿಡಬೇಕೆಂದು ತೀರ್ಮಾನಿಸಿದೆ. ರಾಜೀನಾಮೆ ನೀಡಿದ ಮೇಲೆ ಏನು ಮಾಡುವುದು ಅನ್ನಿಸಿತು? ಕೈಗಾರಿಕೋದ್ಯಮಿಯಾಗಲು ಕೆಲವು ದಿನ ಪ್ರಯತ್ನಿಸಿದೆ. ಕೈಗಾರಿಕಾ ಇಲಾಖೆಗೆ ಓಡಾಡಿ ಬಂದೆ. ನಾನು ರಾಜೀನಾಮೆ ನೀಡಿದ್ದರಿಂದ ಸರ್ಕಾರದಿಂದ ಬಂದ ಹಣದಿಂದ ಕೈಗಾರಿಕೆಯನ್ನು ಆರಂಭಿಸುವವನಿದ್ದೆ. ನಾನು ಯಾವ ಕೈಗಾರಿಕೆಯನ್ನು ಪ್ರಾರಂಭಿಸಬಯಸಿ ಪರವಾನಗಿಯನ್ನು ಕೇಳಿದೆನೊ, ಅಂಥ ಕೈಗಾರಿಕೆಗಳನ್ನು ನಿಷೇಧಿಸಲಾಗಿದೆ ಎಂದು ತಿಳಿಸಿದರು. ನೇಪಾಳದಲ್ಲಿ ಮಾರುಕಟ್ಟೆಯಿಲ್ಲದ ಕೈಗಾರಿಕೆಯನ್ನು ಪ್ರಾರಂಭಿಸುವುದು ಅರ್ಥವಿಲ್ಲವೆಂದು ತೀರ್ಮಾನಿಸಿದೆ. ದೇಶೀಯ ಮಾರುಕಟ್ಟೆಯಿರುವ ಕೈಗಾರಿಕೆಗಳನ್ನು ದೊಡ್ಡದೊಡ್ಡ ವ್ಯಾಪಾರಿ ಕುಳಗಳಿಗೆ ಪರವಾನಗಿ ನೀಡಿಯಾಗಿದೆ. ಸರ್ಕಾರಿ ನಿಯಮದ ಪ್ರಕಾರ ಈಗಾಗಲೆ ಒಂದು ಕೈಗಾರಿಕೆ ಒಂದು ಸ್ಥಳದಲ್ಲಿ ಪ್ರಾರಂಭವಾಗಿದ್ದರೆ, ಅದೇ ಜಾಗದಲ್ಲಿ ಅದೇ ರೀತಿಯ ಕೈಗಾರಿಕೆಯನ್ನು ಯಾರೊಬ್ಬರೂ ಪ್ರಾರಂಭಿಸುವಂತಿಲ್ಲ. ಅನೇಕ ವರ್ಷ ಪ್ರಯತ್ನಿಸಿದರೂ ಈ ನಿಯಮದಡಿಯಲ್ಲಿ – ನಾನು ಯಶ ಕಾಣಲಿಲ್ಲ. ಕೈಗಾರಿಕಾ ಕ್ಷೇತ್ರದಲ್ಲಿ ತಮ್ಮ ಬಿಗಿಮುಷ್ಟಿ ಹೊಂದಿರುವುದು ಕೇವಲ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಮಾತ್ರ ಸಾಧ್ಯ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಕೈಗಾರಿಕಾ ಇಲಾಖೆಯ ಅನೈತಿಕ ಸಂಬಂಧದೊಂದಿಗೆ ಏನೆಲ್ಲ ನಡೆಯುತ್ತದೆ ಎನ್ನುವುದನ್ನು ಅರ್ಥಮಾಡಿಕೊಂಡ ಮೇಲೆ, ಆ ಕ್ಷೇತ್ರದ ಬಗ್ಗೆ ಆಸಕ್ತಿ ಕಡಿಮೆಯಾಗಿ, ಅಂತಿಮವಾಗಿ ವ್ಯಾಪಾರಕ್ಕೆ ಬರಬೇಕಾಯಿತು.

ನಮ್ಮ ಈ ಸಂಭಾಷಣೆಯಿಂದಾಗಿ, ವ್ಯಾಪಾರಿಯೊಂದಿಗೆ ಆತ್ಮೀಯ ಸಂಬಂಧ ಸ್ಥಾಪಿತವಾಯಿತು. ಇದಕ್ಕೆ ಆತನ ಪ್ರಾಮಾಣಿಕತೆ ಕಾರಣ. ಆತನ ಬಗ್ಗೆ ನನ್ನ ಭಾವನೆಯಲ್ಲಿ ಬದಲಾವಣೆ ಕಂಡಿತು. ಆತನನ್ನು ಗೌರವಿಸತೊಡಗಿದೆ. ನನ್ನ ಹೆಸರನ್ನು ಹೇಳಿ ಆತನ ಹೆಸರನ್ನು ತಿಳಿದುಕೊಂಡೆ.

ಇಂಥ ಅನುಭವಿ ಸಂಭಾವಿತ ವ್ಯಾಪಾರಿ ಕಟ್ಮಂಡುವಿನಲ್ಲಿ ಇರುವುದು ಅಪರೂಪ ವೆನಿಸಿತು. 'ಬೆಲೆಯ ಹೆಚ್ಚಳ ನಮಗೆ ದಿಗಿಲು ಬರಿಸುತ್ತದೆ. ಈ ರೀತಿಯ ಅಂಗಡಿಗಳಲ್ಲಿ ಮನಬಂದಂತೆ ಬೆಲೆಗಳನ್ನು ನಿಗದಿಪಡಿಸುತ್ತಾರೆ.' ನಿಮಗೆ ಒಂದು ಉದಾಹರಣೆ ಕೊಡುತ್ತೇನೆ. ಎಲೆಕ್ಟ್ರಾನಿಕ್ ವಾಚ್ ಈಗ ಒಂದು ನೂರು ರೂಪಾಯಿಗಳಿಗೆ ಮಾರಾಟವಾಗುತ್ತಿರುವುದು, ಈ ಹಿಂದೆ ಎಂಟುನೂರ ಐವತ್ತು ರೂಪಾಯಿಗಳಿಗೆ ಮಾರಾಟವಾಗಿದೆ. ಯೋಚನೆ ಮಾಡಿ ಅವರು ಎಷ್ಟು ಲಾಭ ಮಾಡುತ್ತಾರೆ? ಎನ್ನುವುದನ್ನು. ಈಗ ಹೋಗಿ ನೋಡಿ, ಎಲ್ಲಾ ವಸ್ತುಗಳೂ ಇದೇ ರೀತಿ ಮಾರಾಟವಾಗುತ್ತವೆ. ವಿದೇಶಿ ವಸ್ತುಗಳ ವಿಷಯ ಬೇಡ, ನಮ್ಮ ದೇಶದ ವಸ್ತುಗಳೇ ಹೇಗೆ ಮಾರಾಟವಾಗುತ್ತಿವೆ ನೋಡಿ, ಇಂಡಿಯಾದ ಮತ್ತು ನೇಪಾಳಿ



ವಸ್ತುಗಳನ್ನೇ ಅರ್ಧಕ್ಕರ್ಧ ಲಾಭಕ್ಕೆ ಮಾರುತ್ತಾರೆ. ಜಪಾನ್ ಮತ್ತು ಹಾಂಕಾಂಗ್‌ನಿಂದ ಬಂದ ವಸ್ತುಗಳಿಂದ ಎಷ್ಟು ಲಾಭ ಮಾಡುತ್ತಾರೆ ಗೊತ್ತಾ? ನೂರಕ್ಕೆ ನೂರು? ನಮ್ಮ ಸರ್ಕಾರ ಕುರುಡಾಗಿದೆ. ಅವರಿಗೆ ಕಣ್ಣೇ ಇಲ್ಲ ಇದನ್ನೆಲ್ಲ ನೋಡೋಕೆ. ಸರ್ಕಾರ ತಾನು ಮಾಡಿದ ನೀತಿ ನಿಯಮಗಳನ್ನು ಪಾಲಿಸಲು ಸಾಧ್ಯವಿಲ್ಲದಾಗ ಅವುಗಳನ್ನು ಯಾಕಾದರೂ ಹೊರಡಿಸುತ್ತದೆ?

ಆತನ ಮಾತುಗಳನ್ನು ಗಮನಿಸುತ್ತಾ ಹೋದಂತೆ ಆತ ಈ ನಗರದ ಇತರ ಪಾಕಡ ವ್ಯಾಪಾರಿಗಳಿಗಿಂತ ಭಿನ್ನ ಎನ್ನಿಸಿತು. ಈತನಂತೆಯೆ ಎಲ್ಲ ವ್ಯಾಪಾರಿಗಳೂ ಇದ್ದರೆ, ನಮ್ಮ ವ್ಯಾಪಾರ–ವ್ಯವಹಾರ ಎಷ್ಟು ಆದರ್ಶ ಪ್ರಾಯವಾಗುತ್ತದೆ. ಈ ರೀತಿಯ ಬೆಲೆಯುಬ್ಬರವನ್ನು ತಡೆಯುವ ರೀತಿಯ ಬಗ್ಗೆ ವಿಚಾರಿಸಲಾಗಿ, ಆತ ಹೇಳಿದ – 'ಸರ್ಕಾರದ ವೈಫಲ್ಯವೇ ಇದಕ್ಕೆ ಕಾರಣ ಮತ್ತು ಸರ್ಕಾರದ ನೀತಿಯೆ ಇದಕ್ಕೆ ನೆರವಾಗಿದೆ. ಸರ್ಕಾರಕ್ಕೆ ಮಾರುಕಟ್ಟೆಯ ಬೆಲೆಯನ್ನು ನಿಯಂತ್ರಿಸಲು ಪೂರ್ಣ ಅಧಿಕಾರವಿದೆ. ಆದರೆ ಅದು ಏನೂ ಕ್ರಮ ಕೈಗೊಳ್ಳುತ್ತಿಲ್ಲ. ಸರ್ಕಾರಕ್ಕೆ ಒಂದು ತೊಂದರೆಯಿದೆ, ಅದೇಂದರೆ ಈ ದೇಶದ ಕಮರ್ಷಿಯಲ್ ಕಾರ್ಪೊರೇಷನ್ ಮನಸ್ಸಿಗೆ ಬಂದಂತೆ ಬೆಲೆಯನ್ನು ನಿಗದಿಪಡಿಸುತ್ತಿರುವುದೇ ಇದಕ್ಕೆಲ್ಲಾ ಕಾರಣವೆನ್ನಬಹುದು. ಮಾರುಕಟ್ಟೆಯಲ್ಲಿ ಕೆಲವು ವಸ್ತುಗಳು ಮನಸ್ಸಿಗೆ ಬಂದ ಬೆಲೆಯಲ್ಲಿ ಮಾರಾಟವಾಗುತ್ತವೆ. ಇದನ್ನು ಕೂಡ ಸರ್ಕಾರ ನಿಯಂತ್ರಣ ಮಾಡಿಲ್ಲ. ಕೋಪದಿಂದ ಹೇಳಿದ – ನೀವು ಬೇಕಾದರೆ ಹೋಗಿ ನೋಡಿ, ಅನೇಕ ವಸ್ತುಗಳು ದುಪ್ಪಟ್ಟು ಬೆಲೆಗೆ ಮಾರಾಟವಾಗುತ್ತಿವೆ. ವಿದೇಶಿ ವಸ್ತುಗಳನ್ನು ಮಾರುವ ಅಂಗಡಿಗಳು ನಮ್ಮಂಥ ಸಾಮಾನ್ಯರಿಗಲ್ಲ'.

ಸರ್ಕಾರಿ ವಾರ್ತಾಪತ್ರದಲ್ಲಿ ಆಗಿಂದಾಗ್ಗೆ ಬರುತ್ತಿದ್ದ ಸಮಾಚಾರ ನೆನಪಾಗಿ ಕೇಳಿದೆ, ನಾನು 'ಕಾಳಸಂತೆಕೋರರಿಗೆ ಶಿಕ್ಷೆ'ಯ ವಿಷಯವನ್ನು ಓದಿದೆ. ನೀವು ಈಗ ಹೇಳುತ್ತೀರಿ ಏನೂ ಕ್ರಮ ಕೈಗೊಳ್ಳಲಿಲ್ಲ ಎಂದು. ಏನು ಹಾಗಂದರೆ? ನನಗೆ ಅರ್ಥವಾಗುವುದಿಲ್ಲ'.

ಕಾಳಸಂತೆಕೋರರಿಗೆ ಹತ್ತು ಸಾವಿರ, ಐದುಸಾವಿರ ಕೊನೆಗೆ ಒಂದು ಸಾವಿರ ರೂಪಾಯಿಗಳ ದಂಡ ಹಾಕಿರುವ ಸಮಾಚಾರ ಪ್ರಕಟವಾಗಿದ್ದನ್ನು ಎಲ್ಲಾದರೂ ಓದಿದ್ದೀರಾ?

'ಇಲ್ಲ ಐದರಿಂದ ಐವತ್ತು ರೂಪಾಯಿಗಳ ದಂಡ ಹಾಕಿದ ಬಗ್ಗೆ ಸುದ್ದಿ ಹೇಳುತ್ತದೆ'.

ಅಂದರೆ, ಈ ಐವತ್ತು ಮತ್ತು ನೂರು ರೂಪಾಯಿಗಳ ಫೈನು ನಮ್ಮಂಥ ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ಬೀದಿಲಿ ಮಾರುವವರಿಗೆ ಮಾತ್ರ. ದೊಡ್ಡ ವ್ಯಾಪಾರಿಗಳಿಗಲ್ಲ. ಅವರನ್ನು ಯಾರೂ ಮುಟ್ಟಲಿಕ್ಕಾಗಲ್ಲ. ಒಂದು, ಅವರು

ದೊಡ್ಡ ದೊಡ್ಡ ಶ್ರೀಮಂತರು; ಎರಡು, ನಮ್ಮ ಸರ್ಕಾರದ ನೀತಿ ನಿಯಮಗಳು ಸುಲಭವಾಗಿ ದುರುಪಯೋಗಪಡಿಸಿ ಕೊಳ್ಳಬಹುದಾದವುಗಳು. 'ಅಯ್ಯೋ, ನಮಗ್ಯಾಕೆ ಇದೆಲ್ಲ, ಬಿಟ್ಟುಬಿಡಿ'.

ಮತ್ತೆ ಅಂಗಡಿಯಾತ ಹೇಳಿದ – 'ನಾವು ಸರ್ಕಾರಿ ಪಾಲಿಸಿ ಬಗ್ಗೆ ಯೋಚನೆ ಮಾಡೋಣ. ನೇಪಾಳ ಒಂದು ಬಡದೇಶ. ಇಲ್ಲಿ ಬೆಳೆಯುವ ಆಹಾರಧಾನ್ಯಗಳು ಈ ದೇಶಕ್ಕೆ ಮಾತ್ರ ಸಾಕಾಗುತ್ತವೆ. ಆದರೆ ಡಾಲರ್ ಸಂಪಾದನೆಗೋಸ್ಕರ ಇವುಗಳನ್ನು ರಫ್ತು ಮಾಡಲು ಸರ್ಕಾರ ಅನುಮತಿ ನೀಡುತ್ತದೆ. ಇದರಿಂದ ಕೆಲವರು ಲಾಭ ಮಾಡಿಕೊಳ್ಳಲು ಅನುಕೂಲವಾಗಿದೆ. ಇದರಿಂದ ಬಹಳಷ್ಟು ಜನರು ಆಹಾರವಿಲ್ಲದೆ ಬದುಕಬೇಕಾಗಿದೆ. ರಫ್ತು ಮಾಡಬೇಕಾದ ಬೇಳೆಕಾಳು, ಸೋಯಾಬೀನ್, ಮೆಣಸಿನಕಾಯಿ, ಬೆಳ್ಳುಳ್ಳಿ ಮುಂತಾದ ಖಾದ್ಯವಸ್ತುಗಳ ಬೆಳೆ ಇಲ್ಲಿ ತೀರಾ ಸೀಮಿತ'.

ಅಂಗಡಿಯಾತ ಅನುಭವಿಯಂತೆ ಕಾಣಿಸಿದ. ಆಡಳಿತದಲ್ಲಿ ಹಾಗೂ ಸರ್ಕಾರದ ನೀತಿಗಳ ವಿಚಾರದಲ್ಲಿ ಒಳ್ಳೆಯ ಅನುಭವವನ್ನು ಹೊಂದಿರಬಹುದು ಅನ್ನಿಸುತ್ತದೆ. ಆತ ಅನೇಕ ಕಛೇರಿಗಳಲ್ಲಿ ಕೆಲಸ ಮಾಡಿ ಅನೇಕ ಜನರನ್ನು ನೋಡಿರುವ ಅನುಭವಿ.

ಆತನಿಂದ ಇನ್ನೂ ಹೆಚ್ಚಿನ ವಿಷಯ ತಿಳಿಯಬಯಸಿದ ನಾನು, 'ಬೆಲೆ ಏರಿಕೆಯನ್ನು ತಡೆಯಲು ಸಾಧ್ಯವಿಲ್ಲವೆ?' ಎಂದೆ.

'ಓ ಯಾಕಿಲ್ಲ, ಆತ ತಕ್ಷಣ ಉತ್ತರಿಸಿದ. ನಿಮಗೆ ಗೊತ್ತೆ, ನಮ್ಮ ವ್ಯಾಪಾರ ವಹಿವಾಟನ್ನು ಯಾರು ನಿಯಂತ್ರಿಸುತ್ತಿದ್ದಾರೆ ಎನ್ನುವುದು? ಈ ಆರ್ಥಿಕ ಗೊಂದಲಕ್ಕೆ ಕಾರಣರಾದವರು ಇವರೇ. ಅಂದರೆ ಜನಸಾಮಾನ್ಯರಿಗೆ ಆರ್ಥಿಕ ಸಂಕಷ್ಟ ತಂದವರು ದೇಶದ ಉದ್ದಗಲಕ್ಕೂ ಎಲ್ಲಾ ಭಾಗದಲ್ಲಿಯೂ ನಮ್ಮ ಆರ್ಥಿಕತೆಯನ್ನು ಆಳುವವರೇ ಅವರು. ರಾಜ್ಯದ ರಾಜಧಾನಿ ಕಟ್ಮಂಡುವಿ ನಲ್ಲೂ ಅವರದೇ ಆಡಳಿತ. ಹಣ ಮಾಡಿ ಅದನ್ನು ಮನೆಗೆ ಸಾಗಿಸೋದೆ ಅವರ ಮುಖ್ಯ ಉದ್ದೇಶ. 'ಈ ದೇಶದ ನಾಗರಿಕರಾಗಿ ನಮಗಿರುವಷ್ಟೇ ಹಕ್ಕು ಅವರಿಗೂ ಇದೆ'. ಅಲ್ಲದೆ ಅವರಿಗೆ ರಕ್ಷಣೆಯಿದೆ. ಎರಡು ಪಟ್ಟು ಲಾಭ ಇದೆ, ಎಂದು ಅಂಗಡಿಯಾತ ಮಾತು ಮುಂದುವರೆಸಿದ. ಅವರು ಯಾರಿಗೂ ನಿಷ್ಠರಲ್ಲ. ಅವರು ಹಣಕ್ಕೆ ಮಾತ್ರ ನಿಷ್ಠರು. ಆದ್ದರಿಂದ, ನಾವು ಮೊದಲು ಮಾಡಬೇಕಾದ ಕೆಲಸ ಇಂಥ ಜನರನ್ನು ನಿಯಂತ್ರಿಸಬೇಕು. ಇದು ಆತನ ಮಾತುಗಳ ನಿರ್ಣಾಯಕ ಮಾತುಗಳಂತಿದ್ದವು. ನಮ್ಮ ಆಸಕ್ತಿಯನ್ನು ಕಾಪಾಡುವಂಥ ನೀತಿಗಳನ್ನು ಸರ್ಕಾರ ರೂಪಿಸಬೇಕು. ಸರ್ಕಾರ ಕೂಡ ಈ ರೀತಿ ಕಾರ್ಪೊರೇಷನ್ ಅಧಿಕಾರಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬಿಡಬಾರದು. ಅವರಿಗೆ ನಿಯಂತ್ರಣ ಹಾಕಬೇಕು. ಈ ರೀತಿ ಮಾಡುವುದರಿಂದ ಬೆಲೆಯನ್ನು ನಿಯಂತ್ರಿಸಬಹುದು'.



ಆತನ ಉತ್ತರ ನನಗೆ ಸಮಾಧಾನ ನೀಡಿತು. ಮತ್ತೆ ಯಾವ ಪ್ರಶ್ನೆಯನ್ನೂ ಕೇಳುವ ಧೈರ್ಯ ಮಾಡಲಿಲ್ಲ. ನಾನು ಸಕ್ಕರೆಗಾಗಿ ಹುಡಕಾಡಬೇಕಿದೆ. ನಾನು ಸಕ್ಕರೆಯನ್ನು ತೆಗೆದುಕೊಳ್ಳದೆ ಮನೆಗೆ ಬರುವುದಿಲ್ಲವೆಂದು ಹೇಳಿಬಂದಿದ್ದೆ. ನಾನು ಈಗ ಗಂಟೆಗಟ್ಟಲೆ ಅಂಗಡಿಯಲ್ಲಿ ಕುಳಿತು ಅಂಗಡಿಯವನ ಹರಟೆಯ ಮಾತನ್ನು ಕೇಳುತ್ತಿದ್ದೇನೆ. ಏನಾದರೂ ಮಾಡಿ ಸಕ್ಕರೆಯನ್ನು ತೆಗೆದುಕೊಂಡು ಹೋಗಲೇಬೇಕು. ಹೊರಡಲು ಎದ್ದು ನಿಂತು ನಾನು ಹೇಳಿದೆ, 'ಸಾರ್ ನಿಮ್ಮನ್ನು ಭೇಟಿಯಾಗಿದ್ದು ತುಂಬಾ ಸಂತೋಷವಾಯಿತು, ನಾನು ಮತ್ತೆ ನಿಮ್ಮನ್ನು ಭೇಟಿಯಾಗುತ್ತೇನೆ ನೀವು ನೀಡಿದ ಎಲ್ಲಾ ಮಾಹಿತಿಗಾಗಿ ನಿಮಗೆ ವಂದನೆಗಳು. ನಾನು ಸಕ್ಕರೆಯನ್ನು ಹುಡುಕಬೇಕಿದೆ, ನನಗೆ ಹೋಗಲು ಅನುಮತಿ ನೀಡಿ' ಎಂದೆ.

ಅಂಗಡಿಯಿಂದ ಹೊರಬಂದು ಸಕ್ಕರೆಯನ್ನು ಹುಡುಕುವ ಕೆಲಸದಲ್ಲಿ ತೊಡಗಿದೆ. ಸಕ್ಕರೆಗಾಗಿ ಎಲ್ಲಾ ಅಂಗಡಿಗಳನ್ನು ತಡಕಾಡಿದೆ. ನಾನು ಅಲ್ಲಿ ಒಂದು ಅಂಗಡಿಯಿಂದ ಹೊರಬಂದು ಇನ್ನೇನು ಮತ್ತೊಂದು ಅಂಗಡಿಗೆ ಹೋಗುವವನಿದ್ದಾಗ, ಯುವಕನೊಬ್ಬ ನನ್ನ ಗಮನ ಸೆಳೆದು, ಇದು ಆಸಾನ್ ಬಜಾರಾ ಸಾರ್? ಎಂದು ಕೇಳಿದ.

ಇಪ್ಪತ್ತು–ಇಪ್ಪತ್ತೆರಡರ ಯುವಕ, ನೇಪಾಳಿ ಡ್ರೆಸ್‌ನಲ್ಲಿದ್ದ. ಹೆಗಲ ಮೇಲೆ ಒಂದು ಬ್ಯಾಗ್ ನೇತುಹಾಕಿಕೊಂಡಿದ್ದ. ವೇಸ್ಟ್‌ಕೋಟಿನ ಜೇಬಿನ ತುಂಬಾ ಅಸ್ತವ್ಯಸ್ತವಾಗಿ ಏನೇನೊ ತುರುಕಿಕೊಂಡಿದ್ದ. ಸೊಂಟಕ್ಕೆ ಪಟ್ಟಿಯನ್ನು ಕಟ್ಟಿದ್ದ, ಬರಿಗಾಲಿನಲ್ಲಿದ್ದ. ಅಲಂಕಾರಕವಾಗಿ ತಲೆಗೆ ಟೋಪಿಯನ್ನು ಹಾಕಿದ್ದ. ಆತ ಕಟ್ಮಂಡುವಿಗೆ ಹೊಸಬ, ಹಾಗೂ ಆತನಿಗೆ ಕಟ್ಮಂಡು ಹೊಸದು.

'ನಿಮ್ಮದು ಯಾವ ಊರು?'ಯುವಕನನ್ನು ನಾನು ಕೇಳಿದೆ.

'ನಾನು ಗುಡ್ಡಗಾಡಿನವ. ನಾನು ಸೋಲುಖುಂಬುವಿನಿಂದ ಬಂದಿದ್ದೇನೆ' ಎಂದು ಗಾಬರಿಗೊಂಡಂತೆ ಹೇಳಿ, 'ಇದು ಆಸಾನ್ ಬಜಾರಾ?' ಎಂದು ಮತ್ತೆ ಕೇಳಿದ.

'ಇದು ಆಸಾನ್ ಬಜಾರ್ ಅಲ್ಲ'

'ಆಸಾನ್ ಬಜಾರಿನಲ್ಲಿ ಅನೇಕ ಮನೆಗಳು ಮತ್ತು ಅನೇಕ ಅಂಗಡಿಗಳಿವೆಯೆಂದು ಅವರು ಹೇಳುತ್ತಾರೆ. ಇದು ಆಸಾನ್ ಬಜಾರ್ ಅಲ್ಲವಾ ಹಾಗಾದರೆ? ಅದು ಎಲ್ಲಿದೆ'?

'ಅದು ಇಲ್ಲಿಂದ ಇನ್ನೂ ದೂರವಿದೆ. ನೀವು ಕಟ್ಮಂಡುವಿಗೆ ಮೊದಲ ಬಾರಿ ಬಂದಿದ್ದೀರಾ? ಹೌದೆನ್ನುವಂತೆ ತಲೆಯಲ್ಲಾಡಿಸಿದ. 'ಸ್ವಲ್ಪ ತಾಳಿ, ನಾನು ಅಲ್ಲಿಗೆ ಹೋಗುವವನಿದ್ದೇನೆ, ಇಬ್ಬರೂ ಒಟ್ಟಿಗೆ ಹೋಗೋಣ' ಎಂದು ನಾನು ಹೇಳಿದೆ.

ಆತನಿಗೆ ಕಾಯಲು ಹೇಳಿ, ನಾನು ಸಕ್ಕರೆಗಾಗಿ ಇನ್ನು ಕೆಲವು ಅಂಗಡಿಗಳನ್ನು

ಸುತ್ತಾಡಿದೆ. ಎಲ್ಲಿಯೂ ಸಕ್ಕರೆ ಸಿಗಲಿಲ್ಲ. ನಂತರ ನಾನು ಆ ಯುವಕನೊಂದಿಗೆ ಎತ್ತರ ಪ್ರದೇಶಗಳಿಂದ ಇಳಿಯತೊಡಗಿದೆ.

'ಆಸಾನ್ ಬಜಾರಿನಲ್ಲಿ ಏನು ಬೇಕಿದೆ?'

'ಖರೀದಿ ಮಾಡಬೇಕಿದೆ. ನಾನು ಖರೀದಿ ಮಾಡಲೆಂದೇ ಮನೆಯಿಂದ ಬಂದಿದ್ದೇನೆ.'

'ನೀವು ಯಾವಾಗ ಇಲ್ಲಿಗೆ ಬಂದಿರಿ?'

ನೆನ್ನೆ ಬಸ್ಸಿನಲ್ಲಿ ಬರುತ್ತಿದ್ದಾಗ, ದಾರಿಮಧ್ಯದಲ್ಲಿ ನನ್ನನ್ನು ಬಸ್ಸಿನಿಂದ ಹೊರಹಾಕಿದರು. ನಾನು ಇಲ್ಲಿಗೆ ಹೊಸಬ....!'

'ದಾರಿಮಧ್ಯದಲ್ಲಿ ನಿಮ್ಮನ್ನು ಏಕೆ ಹೊರಹಾಕಿದರು? ಬಸ್ ಕೆಟ್ಟುಹೋಯಿತಾ?'

'ನನಗೇನೂ ಗೊತ್ತಿಲ್ಲ. ಕೆಲವರು ಹೇಳುವಂತೆ ಡೀಸೆಲ್ ಮುಗಿದು ಹೋಗಿತ್ತಂತೆ'..... ಬಸ್ಸು ಅಲ್ಲಿಯೆ ನಿಲ್ಲಬೇಕಾಯಿತು. ಎಲ್ಲಾ ಪ್ರಯಾಣಿಕರು ಹೊರಬಂದರು. ಆದರೆ ಪೂರ್ತಿ ಚಾರ್ಜ್ ತಗೊಂಡರು'.

'ನೆನ್ನೆ ರಾತ್ರಿ ಎಲ್ಲಿ ಉಳಿದಿದ್ದಿರಿ?'

'ಒಂದು ಸಣ್ಣ ಬಜಾರಿನಲ್ಲಿ'. ಆದರೆ ಹೆಸರು ನನಗೆ ಗೊತ್ತಿಲ್ಲ. ಅಲ್ಲಿದ್ದ ಜನರು ನನಗೆ ಅರ್ಥವಾಗದ ಭಾಷೆಯನ್ನು ಮಾತನಾಡುತ್ತಿದ್ದರು. ಬಲವಂತವಾಗಿ ನನ್ನ ಬಳಿಯಿದ್ದ ಎಲ್ಲಾ ಕೋಳಿಗಳನ್ನು ಕಸಿದುಕೊಂಡರು.'

'ಏನು? ನಿನ್ನ ಕೋಳಿಗಳನ್ನು ಕಿತ್ತುಕೊಂಡರಾ?'

ಹೌದು, ನನ್ನ ಕೋಳಿಗಳನ್ನು ಅವರಿಗೆ ಮಾರುವುದು ನನಗೆ ಇಷ್ಟವಿರಲಿಲ್ಲ. ಆದರೆ ಅವರು ಬಲವಂತ ಮಾಡಿದರು.'

'ದುಡ್ಡು ಕೊಟ್ಟರಾ?'

'ತುಂಬಾ ಕಡಿಮೆ ಕೊಟ್ಟರು'

'ಎಷ್ಟು ಕೊಟ್ಟರು?'

'ಒಂದುನೂರಾ ಇಪ್ಪತ್ತಾರು ರೂಪಾಯಿಗಳು'

'ನಿಮ್ಮ ಕೋಳಿಗಳೆಷ್ಟಿದ್ದವು'

'ಇಪ್ಪತ್ತು ಮತ್ತು ಒಂದು'

'ಹಾಗಾದರೆ ಅವರು ಅಷ್ಟು ಕಡಿಮೆ ಯಾಕೆ ಕೊಟ್ಟರು?'

'ನಾನು ಅಷ್ಟು ಕಡಿಮೆ ಬೆಲೆಗೆ ಮಾರಲು ಇಷ್ಟಪಡಲಿಲ್ಲ. ಅದಕ್ಕೆ ಸುಮಾರು ಹತ್ತುಜನ ನನ್ನನ್ನು ಸುತ್ತುವರೆದು ತೊಂದರೆಕೊಡಲು ಆರಂಭಿಸಿದರು. ಬಸ್ಸಿನ ಚಾಲಕ ಈ ಕೋಳಿಗಳನ್ನು ಬಸ್ಸಿನಲ್ಲಿ ಸಾಗಿಸಲು ತಕರಾರು ಮಾಡಿದ ಬೇರೆ! ನಾನು ಏಕಾಂಗಿ ಬೇರೆ, ಹೀಗಾಗಿ ಅವರಿಗೆ ಮಣಿಯಬೇಕಾಯಿತು'.

'ಇನ್ನೂ ಹೆಚ್ಚು ಬೆಲೆ ಸಿಟಿಯಲ್ಲಿ ಸಿಗುತ್ತಿತ್ತೆಂದು ನಿನಗೆ ಗೊತ್ತಿರಲಿಲ್ಲವೇ?



'ಹೌದು! ಗೊತ್ತಿತ್ತು. ಅದಕ್ಕೆ ಕೋಳಿಗಳನ್ನು ಇಲ್ಲಿ ಮಾರಲು ತಂದಿದ್ದೆ.'

'ಆದರೆ ಈ ಹಣವಂತರು ನನ್ನನ್ನು ಈ ರೀತಿ ದೋಚುತ್ತಾರೆ ಎಂದು ಗೊತ್ತಿರಲಿಲ್ಲ.'

ಈಗ ಮಾತಾಡಿ ಏನು ಪ್ರಯೋಜನ? ನಿನಗೆ ನಾಲ್ಕರಷ್ಟು ಬೆಲೆ ಇಲ್ಲಿ ಸಿಗುತ್ತಿತ್ತು. ಈಗ ಎಲ್ಲಾ ಮುಗಿದುಹೋಗಿದೆ. ಅದು ಸರಿ, ನೀನು ಕಟ್ಮಂಡುವಿಗೆ ಏಕೆ ಬಂದೆ? ಮನೆಗೆ ಬೇಕಾದ ಸಾಮಾನುಗಳನ್ನು ಖರೀದಿಸಬೇಕಿತ್ತಾ?'

'ಹೌದು! ಉಪ್ಪು, ಕೆರೋಸಿನ್, ವರ್ಷಕ್ಕಾಗುವಷ್ಟು ಬಟ್ಟೆ–ಕೊಳ್ಳಬೇಕಿತ್ತು'

'ಅಂದಹಾಗೆ ನಿಮ್ಮ ಹೆಸರೇನಂದಿರಿ?'

'ನನ್ನ ಹೆಸರು ಟಾಪ್ ಬಹದ್ದೂರ್'

ಮೌಂಟ್ ಎವರೆಸ್ಟಿನ ಮಡಿಲಿನಲ್ಲಿರುವ ಸೊಲುಖುಂಬುವಿನಲ್ಲಿ ಹುಟ್ಟಿ ಬೆಳೆದಿರುವ ಟಾಪ್ ಬಹದ್ದೂರ್, ಸರಳ ಹಾಗೂ ಪರಿಶುದ್ಧ ವ್ಯಕ್ತಿಯಂತೆ ಕಾಣಿಸಿದ. ದ್ವೇಷರಹಿತ ವಂಚನೆಯಿಲ್ಲದ, ಸ್ವಾರ್ಥ ಹಾಗೂ ದುರಾಸೆಯಿಲ್ಲದ ವ್ಯಕ್ತಿಯ ಮುಖಭಾವ ಅವನದಾಗಿತ್ತು. ಆತ ಗ್ರಾಮೀಣ ಪ್ರದೇಶದ ಒಬ್ಬ ಕೂಲಿಕಾರ. ಆತನಲ್ಲಿ ನೇಪಾಳದ ಚಿತ್ರವನ್ನು ಕಂಡಂತೆ ಭಾಸವಾಯಿತು. ಆತನ ಜೇಬಿನಲ್ಲಿದ್ದ ಹಣದಿಂದ ಆತನಿಗೆ ಬೇಕಾದ ಎಲ್ಲ ವಸ್ತುಗಳನ್ನು ಖರೀದಿಸುವುದು ಸಾಧ್ಯವಿಲ್ಲವೆಂದು ಬಹಳ ಸುಲಭವಾಗಿ ಅರ್ಥವಾಯಿತು. ಆತ ಮನೆಯಲ್ಲಿ ಲೆಕ್ಕ ಹಾಕಿದ ರೀತಿಗಿಂತ ಇಲ್ಲಿಯ ಮಾರುಕಟ್ಟೆಯ ಬೆಲೆಯಲ್ಲಿ ಬಹಳ ಅಂತರವಿತ್ತು. ನಾನು ಕುತೂಹಲದಿಂದ 'ನಿನ್ನಲ್ಲಿ ಎಷ್ಟು ಹಣವಿದೆ' ಎಂದು ಕೇಳಿದೆ?

'ನನ್ನ ತಂದೆಗೆ ಅಂಗಿಯನ್ನು ಹೊಲಿಸಲು ಒಟ್ಟೆ ಖರೀದಿಸಬೇಕಿತ್ತು, ತಾಯಿ ಮತ್ತು ತಂಗಿಗಾಗಿ ಕೆಲವು ವಸ್ತುಗಳನ್ನು ಖರೀದಿಸಬೇಕಿತ್ತು. ನನ್ನಲ್ಲಿ ಸಾಕಷ್ಟು ಹಣವಿದ್ದರೆ ಒಂದು ಷರ್ಟು ಮತ್ತು ಪ್ಯಾಂಟ್ ಖರೀದಿಸಬಹುದಿತ್ತು. ಎರಡನ್ನೂ ಖರೀದಿಸಲು ಸಾಧ್ಯ ವಾಗುವುದಿಲ್ಲ; ಒಂದು ಜೊತೆ ಪ್ಯಾಂಟ್ ಮಾತ್ರ ಖರೀದಿಸುತ್ತೇನೆ.

'ಸೀಮೆಎಣ್ಣೆ ಮತ್ತು ಉಪ್ಪನ್ನು ಖರೀದಿಸಬೇಕಿದೆ, ಅಲ್ಲವಾ?'

'ಹೌದು! ಸೀಮೆಯೆಣ್ಣೆ ಮತ್ತು ಉಪ್ಪನ್ನು ಇಡೀ ವರ್ಷಕ್ಕಾಗುವಷ್ಟು ಖರೀದಿಸಬೇಕಿದೆ.'

'ಒಂದು ವರ್ಷಕ್ಕೆ ಎಷ್ಟು ಸೀಮೆಎಣ್ಣೆ ಮತ್ತು ಉಪ್ಪು ಬೇಕಿದೆ?'

'ಸುಮಾರು ೭ ಕೆ.ಜಿ. ಉಪ್ಪು ಮತ್ತು ಇಪ್ಪತ್ತು ಲೀಟರ್ ಕೆರೋಸಿನ್' ಅವನಿಗೆ ಬೇಕಾಗಿರುವ ವಸ್ತುಗಳನ್ನು ಖರೀದಿಸಲು ಆತನ ಜೇಬಿನಲ್ಲಿರುವ ಹಣದ ೫ರಷ್ಟು ಬೇಕಾಗಬಹುದೆಂದು ಲೆಕ್ಕಹಾಕಿದೆ. ಆದರೆ ಅವನಲ್ಲಿರುವ ಹಣದಲಿಯೇ ಎಲ್ಲವನ್ನು ಖರೀದಿಸಬಹುದೆಂಬ ನಂಬಿಕೆ ಆತನಿಗಿದ್ದಂತೆ ಕಾಣುತ್ತಿತ್ತು.

'ನೀನು ಇನ್ನೇನನ್ನು ಖರೀದಿಸಬೇಕು?' ತಮಾಷೆಯಾಗಿ ಕೇಳಿದೆ.

'ನಮ್ಮ ತಂದೆಯವರಿಗಾಗಿ ಸಕ್ಕರೆ ಮತ್ತು ಟೀಪುಡಿಯನ್ನು ಖರೀದಿಸಬೇಕಿದೆ' ಎಂದು ಸಹಜವಾಗಿ ಹೇಳಿದ. 'ತಂದೆಗೆ ಹೊಟ್ಟೆನೋವು ಕಾಣಿಸಿಕೊಂಡಾಗ, ಬಿಸಿಬಿಸಿ ಟೀ ಕುಡಿದರೆ ಸರಿಹೋಗುತ್ತದೆ. ಅವರು ಯಾವಾಗಲೂ ಟೀ ಕುಡಿಯೋಲ್ಲ, ಕೆಲವು ವೇಳೆ ಮಾತ್ರ ಕುಡಿಯುತ್ತಾರೆ. ಆದರೆ ನಾನು ಅದನ್ನೇ ಮರೆತಿದ್ದೆ' ಎಂದ.

ಆತನ ಮಾತು ಕೇಳಿ ನನಗೆ ನಗುಬಂತು. ನಾನು ನಕ್ಕೆ. ನಗುವುದನ್ನು ನಿಲ್ಲಿಸಿ ಆತನನ್ನು ನೋಡಿದೆ. 'ಯಾಕೆ ಸಾರ್? ನಗುತ್ತಿದ್ದೀರಿ. ನನಗೆ ಹೆಚ್ಚಿಗೆ ಬೇಕಿಲ್ಲ. ಕೇವಲ ೨ ಕೆ.ಜಿ. ಮಾತ್ರ, ಎಂದು ನಾಚಿಕೆಪಟ್ಟವನಂತೆ ಹೇಳಿದ.

ನಾನೂ ಕೂಡ ಸಕ್ಕರೆಗಾಗಿ ಹುಡುಕಾಡುತ್ತಿದ್ದೀನಿ. ಆದರೆ ಇನ್ನೂ ಸಿಕ್ಕಿಲ್ಲ.

ಆಸಾನ್ ಬಜಾರ್‌ನಲ್ಲಿ ಸಿಗುತ್ತದೆ, ಅಲ್ಲಿ ವಿಚಾರಿಸಿದಿರಾ?

'ಸರಿ' ನನಗೆ ಗೊತ್ತಿಲ್ಲ. ಪ್ರಯತ್ನಿಸೋಣ'

ನನ್ನನ್ನು ಮೇಲಿಂದ ಕೆಳಗಿನ ತನಕ ನೋಡಿ, 'ಸಾರ್! ನೀವೆಲ್ಲಿ ವಾಸಮಾಡುತ್ತೀರಿ ಎನ್ನುವುದನ್ನು ತಿಳಿಯಬಹುದಾ?'

'ನಾನು ಕಟ್ಮಂಡುವಿನಲ್ಲಿ ವಾಸವಾಗಿದ್ದೇನೆ; ಯಾಕೆ?' ನಾನು ಕೇಳಿದೆ.

'ಯಾಕೂ ಇಲ್ಲ, ನಿಮಗೆ ಮಾರ್ಕೆಟಿನಲ್ಲಿ ಸಕ್ಕರೆ ಸಿಗಲಿಲ್ಲವಾ?'

'ಇಲ್ಲ ಇನ್ನು ಸಿಗಲಿಲ್ಲ.'

'ನಮ್ಮ ತಂದೆ ಆಸಾನ್ ಬಜಾರ್‌ಗೆ ಹೋಗುವಂತೆ ಸೂಚಿಸಿದ್ದಾರೆ. ಅಲ್ಲಿ ಬೇಕಾದ ವಸ್ತುಗಳು ಸಿಗುತ್ತವಂತೆ. ಮೋಸ ಮಾಡುವ ವಿದೇಶಿ ವ್ಯಾಪಾರಿಗಳಿಂದ ಹುಷಾರಾಗಿರುವಂತೆ ಎಚ್ಚರಿಕೆ ನೀಡಿದ್ದರು. ಗುಡ್ಡಗಾಡು ಪ್ರದೇಶದಿಂದ ಬಂದ ಈ ಯುವ ವ್ಯಾಪಾರಿಗಳು ನಮ್ಮ ಭಾಷೆಯಲ್ಲಿ ಮಾತನಾಡುವುದಿಲ್ಲ, ನಮಗೆ ಅರ್ಥವಾಗದ ಭಾಷೆಯಲ್ಲಿ ಮಾತನಾಡುತ್ತಾರೆ' ಎಂದು ಬಹಳ ಜಾಣತನದಿಂದ ಮಾತನಾಡಿದ.

ಆತನ ಮಾತುಗಳು ಸರಳ ಮತ್ತು ನೇರವಾಗಿದ್ದವು. ಆತ ನನ್ನೊಂದಿಗೆ ಆತ್ಮೀಯವಾಗಿದ್ದ. 'ನಾನು ಇಂದು ವ್ಯಾಪಾರ ಮುಗಿಸಿದರೆ ನಾಳೆ ಊರಿಗೆ ಪ್ರಯಾಣ ಬೆಳಸಬಹುದು. ಇನ್ನು ಐದು ದಿವಸಗಳಲ್ಲಿ ಮನೆಯನ್ನು ತಲುಪಬಹುದು' ಎಂದು ಮಾತು ಮುಂದುವರೆಸಿದ.

ಆತನ ಜೇಬಿನಲ್ಲಿರುವ ಹಣ ಮಾರುಕಟ್ಟೆಯ ದರಕ್ಕೆ ಸಾಕಾಗುವುದಿಲ್ಲ ಎನ್ನುವುದೂ ಅರಿಯದ ಮುಗ್ಧ. ಆತ ತನಗೆ ಬೇಕಾದ ಎಲ್ಲಾ ವಸ್ತುಗಳನ್ನು ಈಗಾಗಲೇ ಖರೀದಿಸಿರುವಂತೆ ಭಾವಿಸಿ, ಮನೆಗೆ ಹೊರಡಲು ಸಿದ್ಧವಾಗಿರುವುದು ಕಾಣುತ್ತಿತ್ತು.

ಈಗಾಗಲೇ ಆತ ಮನೆಬಿಟ್ಟು ಐದು ದಿವಸಗಳಾಗಿತ್ತು. ಮನೆಯಿಂದ ದೂರವಾದ ನೋವು ಆತನಲ್ಲಿತ್ತು. ಎಷ್ಟು ಬೇಗ ಮನೆಯನ್ನು ತಲುಪಿ ಕಠ್ಮಂಡುವಿನಿಂದ



ಖರೀದಿಸಿದ ವಸ್ತುಗಳನ್ನು ತಂದೆ ಹಾಗೂ ಸಹೋದರಿಯರಿಗೆ ತೋರಿಸಿ ಸಂತೋಷಪಡಿಸುತ್ತೇನೋ ಎನ್ನುವ ಕಾತುರವಿದ್ದಂತೆ ಕಾಣುತ್ತಿತ್ತು!

'ನಿಮ್ಮ ತಂದೆಯವರು ಎಷ್ಟು ಬಟ್ಟೆಯನ್ನು ಖರೀದಿಸಲು ತಿಳಿಸಿದ್ದಾರೆ'? ನಾನು ಸಹಜವಾಗಿ ಕೇಳಿದೆ.

ನಮ್ಮ ತಂದೆಯವರ ಅಂಗಿಗಾಗಿ ನಾಲ್ಕು ಮೀಟರ್ ಒರಟು ಕಾಟನ್ ಬಟ್ಟೆ ಹಾಗು ಐದು ಮೀಟರ್ ಸಾದಾ ಕಾಟನ್ ಬಟ್ಟೆ ಬೇಕಿದೆ. ಒಂದು ಮೀಟರ್‌ಗೆ ಎರಡುವರೆ ರೂಪಾಯಿಗಳಿಗಿಂತ ಹೆಚ್ಚಿಗೆ ನೀಡಬೇಡ ಎಂದು ಎಚ್ಚರಿಕೆ ನೀಡಿದ್ದಾರೆ. ಕಳೆದ ವರ್ಷದವರೆಗೆ ನಮ್ಮ ತಂದೆಯವರೆ ಖರೀದಿಸಲು ಬರುತ್ತಿದ್ದರು. ಈ ವರ್ಷ ನನ್ನನ್ನು ಕಳುಹಿಸಿದ್ದಾರೆ. ದುಡ್ಡು ಉಳಿದರೆ ನನಗಾಗಿ ಒಳ್ಳೆಯ ಪ್ಯಾಂಟು ಷರಟನ್ನು ಖರೀದಿಸಬೇಕೆಂದಿದ್ದೇನೆ, ದುಡ್ಡು ಸಾಕಾಗದಿದ್ದರೆ ವೇಸ್ಟ್‌ಕೋಟಿಗಾಗಿ ಬಟ್ಟೆಯನ್ನು ಖರೀದಿಸಬೇಕಿದೆ. ಸಿಗರೇಟ್ ಲೈಟರ್ ಖರೀದಿಸಬೇಕಿದೆ. ನನ್ನ ಸ್ನೇಹಿತ ಒಬ್ಬ ಅದನ್ನು ಕೊಂಡುಕೊಂಡಿದ್ದಾನೆ. ಅದು ತುಂಬಾ ಚೆನ್ನಾಗಿದೆ!

ಆತ ತಂದಿರುವ ಹಣ ಆತನ ಲೆಕ್ಕಚಾರದ ಪ್ರಕಾರ ಸಾಕಾಗಬಹುದೆಂದು ಆತ ಭಾವಿಸಿದ್ದ. ಆದ್ದರಿಂದ ಒಂದು ಸಿಗರೇಟ್ ಲೈಟರ್ ಅನ್ನು ಖರೀದಿಸಬಹುದೆಂಬ ಸಂಭ್ರಮ ಆತನಿಗೆ ಇತ್ತು. ಉಪ್ಪು ಮತ್ತು ಕೆರೋಸಿನ್‌ಗೆ ಎಷ್ಟು ಕೊಡಬೇಕೆಂದು ಹೇಳಿದ್ದಾರೆ? ನಾನು ಕೇಳಿದೆ.

'ಉಪ್ಪಿಗೆ ಹತ್ತು ರೂಪಾಯಿಗಳು, ಇಪ್ಪತ್ತು ಲೀಟರ್ ಕೆರೋಸಿನ್‌ಗೆ ಸುಮಾರು ಇಪ್ಪತ್ತು ರೂಪಾಯಿಗಳು ಎಂದು ನೆನಪು ಮಾಡಿಕೊಳ್ಳುತ್ತಾ ಹೇಳಿದ. ನಾಲ್ಕು ಅಥವಾ ಐದು ರೂಪಾಯಿಗಳಿಗೆ ಒಂದು ಖಾಲಿ ಡಬ್ಬವನ್ನು ಖರೀದಿಸಬೇಕಿದೆ' ಎಂದ.

'ನನಗನ್ನಿಸುತ್ತೆ, ನಿಮ್ಮಲ್ಲಿರುವ ಹಣ ನಿಮಗೆ ಬೇಕಾಗಿರುವ ಎಲ್ಲಾ ವಸ್ತುಗಳು ಮಾರುಕಟ್ಟೆಯಲ್ಲಿ ಸಿಕ್ಕರೂ ಕೂಡ, ಕೊಳ್ಳಲು ಸಾಕಾಗುವುದಿಲ್ಲ. ನೀವು ಸರಿಯಾಗಿ ಲೆಕ್ಕ ಹಾಕಿದ್ದೀರಾ?' ನಾನು ಕೇಳಿದೆ.

'ಸರಿ! ನಾನು ಸರಿಯಾಗಿ ಯಾವ ಯಾವುದಕ್ಕೆ ಎಷ್ಟು ಎಂದು ಲೆಕ್ಕ ಮಾಡಿಲ್ಲ. ಆದರೆ ನಾನು ನೆನ್ನೆಯಿಂದ ಈ ಬಗ್ಗೆ ಯೋಚನೆ ಮಾಡುತ್ತಿದ್ದೇನೆ. ನನ್ನಲ್ಲಿರುವ ಹಣ ಸಾಕಾಗಬಹುದೆಂದು ಅನುಮಾನಪಡುತ್ತಿದ್ದೇನೆ. ಈಗ ನನಗನ್ನಿಸಿದೆ, ನನ್ನ ಕೋಳಿಗಳನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡಿದೆನೆಂದು. ಸಾರ್, ನೀವು ನಿಜ ಹೇಳಿ ನನಗೆ ಬೇಕಾದ ವಸ್ತುಗಳನ್ನು ನನ್ನಲ್ಲಿರುವ ಹಣದಿಂದ ಖರೀದಿಸಲು ಸಾಧ್ಯವಿಲ್ಲವೆ?

ನಾನೇನು ಮಾತನಾಡಲಿಲ್ಲ, ಮೌನವಾಗಿದ್ದೆ. ಮತ್ತೆ ಏನೂ ಪ್ರಶ್ನೆ ಕೇಳುವ ಸಾಹಸ ಮಾಡದೆ ರತ್ನ ಪಾರ್ಕಿನ ಬಳಿ ಆತುರದಿಂದ ರಸ್ತೆ ದಾಟಲು ಪ್ರಯತ್ನಿಸುತ್ತಿದ್ದ

ಆತನನ್ನು ನಿಲ್ಲಿಸಿದೆ. ಆತನ ರಟ್ಟೆಯನ್ನು ಹಿಡಿದಿದ್ದೆ. ಒಂದು ಕಾರು ನಮ್ಮ ಮುಂದೆಯೆ ವಿಪರೀತ ವೇಗವಾಗಿ ಚಲಿಸಿತು. 'ಅಯ್ಯೋ! ನಾನು ನೋಡಲೇ ಇಲ್ಲ! ನಮ್ಮ ತಂದೆ ರಸ್ತೆ ದಾಟುವಾಗ ಎಚ್ಚರದಿಂದ ಇರಬೇಕೆಂದು ಸೂಚಿಸಿದ್ದರು' ಎಂದು ಯುವಕ ಹೇಳಿದ.

ನಾನು ಆತನ ಗೊಣಗುಮಾತುಗಳಿಗೆ ಅಷ್ಟಾಗಿ ಗಮನ ನೀಡಲಿಲ್ಲ. ನನಗೆ ಅದರಲ್ಲಿ ಆಸಕ್ತಿಯೂ ಇರಲಿಲ್ಲ. ಆದರೆ ಆತನಲ್ಲಿದ್ದ ಹಣದಿಂದ ಮಾರುಕಟ್ಟೆಯಲ್ಲಿರುವ ಒಂದೂ ವಸ್ತುವನ್ನು ಖರೀದಿಸಲಾಗುವುದಿಲ್ಲವಲ್ಲಾ ಎನ್ನುವ ಚಿಂತೆ ನನ್ನನ್ನು ಕಾಡಿತ್ತು. ಆತನ ತಂದೆ ಕಳುಹಿಸಿದ್ದ ಇಪ್ಪತ್ತೊಂದು ಕೋಳಿಗಳು ಸರಿಯಾದ ಬೆಲೆಗೆ ಮಾರಾಟವಾಗಿದ್ದರೆ, ಮತ್ತು ಮಾರುಕಟ್ಟೆಯಲ್ಲಿ ಬೆಲೆಗಳು ಸ್ಥಿರವಾಗಿದ್ದರೆ ಆತನ ಆಸೆಗಳು ಈಡೇರುತ್ತಿದ್ದವು. ಆದರೆ ಹಾಗಾಗಿಲ್ಲ. ದುರುದೃಷ್ಟವಶಾತ್ ಮಾರುಕಟ್ಟೆಯ ಬೆಲೆ ಕಳೆದ ಎರಡು ತಿಂಗಳಿಂದ ಸ್ಥಿರವಾಗಿಲ್ಲ ಮತ್ತು ಕೋಳಿಗಳು ಸರಿಯಾದ ಬೆಲೆಗೆ ಮಾರಾಟವಾಗಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಕಠ್ಮಂಡುವಿನಲ್ಲಿ ಬೆಲೆಗಳು ವಾಯುವೇಗದಲ್ಲಿ ಇಪ್ಪತ್ತನಾಲ್ಕು ಗಂಟೆಗಳೊಳಗಾಗಿ ನೂರುಪಟ್ಟು ಮುಗಿಲು ಮುಟ್ಟುತ್ತವೆ.

ನಾವು ಭೂತಹಿತಿಯನ್ನು ತಲುಪಿದೆವು. ನಾನು ಅಲ್ಲಿ ಸಕ್ಕರೆಗಾಗಿ ವಿಚಾರಿಸಲು ಪ್ರಾರಂಭಿಸಿದೆ. ಯುವಕ ನನ್ನ ಜೊತೆಯಲ್ಲಿಯೇ ಬರುತ್ತಿದ್ದ. ನಾನು ನಿಂತಲ್ಲಿ ನಿಲ್ಲುತ್ತಿದ್ದ. ನನ್ನಲ್ಲಿ ನೆನ್ನೆಯ ತನಕ ಇತ್ತು' ಒಬ್ಬ ಅಂಗಡಿಯಾತ ಹೇಳಿದ. ಬೆಲೆಗಳು ಹೆಚ್ಚುತ್ತಿರುವುದರಿಂದ ಎಲ್ಲಾ ಸಕ್ಕರೆ ಮಾರಾಟವಾಯಿತು ಎಂದ. ಡೀಲರ್ ಹತ್ತಿರ ಸಕ್ಕರೆ ಇದೆ. ಆತ ನಮಗೆ ಕೊಡುತ್ತಿಲ್ಲ. ಆತ ನಮಗೆ ವಿತರಿಸದೆ ನಾವು ಹೇಗೆ ಮಾರಾಟ ಮಾಡುವುದು?

ನಾನು ಅಂಗಡಿಯಾತನ ಸಮೀಪ ಹೋಗಿ, ವಿನಂತಿಸಿಕೊಂಡೆ, ಕಾಡಿದೆ, ಬೇಡಿದೆ. ನಿಮ್ಮ ಅಂಗಡಿಯಲ್ಲಿ ಸಕ್ಕರೆ ಸಿಕ್ಕುತ್ತದೆಂದು ಹೇಳಿದರು. ನಾನು ಬಹಳ ದೂರದಿಂದ ಬಂದಿದ್ದೇನೆ ಎಂದು ತಿಳಿಸಿದೆ. ನೀವು ಎಷ್ಟು ಬೇಕಾದರು ದುಡ್ಡು ತೆಗೆದುಕೊಳ್ಳಿ ಎಂದೆಲ್ಲಾ ಕೇಳಿದೆ. ಅಂಗಡಿಯಾತ ವಿನಯದಿಂದ ಹೇಳಿದ. 'ದೇವರಾಣೆಗೂ ನನ್ನ ಬಳಿ ಸಕ್ಕರೆ ಇಲ್ಲ. ನನ್ನ ಬಳಿಯಿದ್ದರೆ ವ್ಯಾಪಾರ ಮಾಡುತ್ತಿದ್ದೆ. ನೀವು ಖರೀದಿಸಬಹುದಿತ್ತು. ನಾನೇಕೆ ಬಚ್ಚಿಟ್ಟುಕೊಳ್ಳಲಿ? ನಾನು ಇಲ್ಲಿ ಇರೋದು ವ್ಯಾಪಾರ ಮಾಡಲಿಕ್ಕೆ. ನೀವು ನೆನ್ನೆ ದಿನ ಬಂದಿದ್ದರೆ, ನಿಮಗೆ ಎಷ್ಟುಬೇಕೊ ಅಷ್ಟನ್ನು ಕೊಡುತ್ತಿದ್ದೆ. ಇಂದು ನನ್ನಲ್ಲಿ ಇಲ್ಲ ದಯಮಾಡಿ ನನ್ನನ್ನು ಕ್ಷಮಿಸಿ. ಸಾರ್'! ಎಂದನು.

ನೋಡಿ ಸಾರ್! ಅಂಗಡಿಯಾತ ಹೇಳಿದ– ಸರಕು ಮಾರಾಟ ನಮ್ಮ ಕೆಲಸ. ಸಗಟು ವ್ಯಾಪಾರಿ ನೀಡಿದ ವಸ್ತುಗಳನ್ನು ಅದೇ ಬೆಲೆಗೆ ಸ್ವಲ್ಪ ಲಾಭವಿಟ್ಟು



ಮಾರಿದೆವು. ಈಗ ಬೆಲೆ ಹೆಚ್ಚುತ್ತಿರುವುದರಿಂದ ಆತ ಸರಬರಾಜು ಮಾಡುವುದನ್ನು ನಿಲ್ಲಿಸಿದ್ದಾನೆ. ನೀವೇ ಹೇಳಿ ಈಗ ನಾವೇನು ಮಾಡಬೇಕು. ಹೌದು! ನಮಗೆ ಚೆನ್ನಾಗಿ ಗೊತ್ತು ಗ್ರಾಹಕರು ಬೆಲೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅವರಿಗೆ ಸಾಮಗ್ರಿಗಳು ಬೇಕು ಅಷ್ಟೆ. ಸಗಟು ವ್ಯಾಪಾರಿ ನೂರು ಚೀಲ ಸಕ್ಕರೆಯನ್ನು ನಿಗದಿತ ಬೆಲೆಗಿಂತ ೨೦ ಪರ್ಸೆಂಟ್ ಜಾಸ್ತಿ ಬೆಲೆಗೆ ಸರಬರಾಜು ಮಾಡಿದ್ದ. ನಾನು ಸರ್ಕಾರಿ ನಿಯಮದ ಪ್ರಕಾರ ೨೦ ಪರ್ಸೆಂಟ್‌ಗಿಂತ ಹೆಚ್ಚಾಗದಂತೆ ಮೂರು ದಿವಸಗಳೊಳಗಾಗಿ ಮಾರಾಟ ಮಾಡಿದ್ದೆ. ನನ್ನ ಬಳಿ ಈಗ ಸಕ್ಕರೆಯಿಲ್ಲ. ದಯಮಾಡಿ ನನ್ನನ್ನು ಕ್ಷಮಿಸಿ.

ನಾನು ನಿರಾಸೆಯಿಂದ ನಿಟ್ಟುಸಿರುಬಿಟ್ಟೆ! ನಾನು ಅಷ್ಟು ದೂರ ಸಕ್ಕರೆಯನ್ನು ಹುಡುಕುತ್ತಾ ಬಂದದ್ದು ವ್ಯರ್ಥಪ್ರಯತ್ನವಾಯಿತು. ಸಕ್ಕರೆ ಸಿಗಬಹುದಾದ ಜಾಗವನ್ನಾದರೂ ಅಂಗಡಿಯಾತ ತಿಳಿಸಬಹುದೆಂದು ಆಸೆಯಿಂದ, ಸಕ್ಕರೆ ಎಲ್ಲಿ ಸಿಗುತ್ತದೆ? ಅದನ್ನಾದರೂ ದಯಮಾಡಿ ಹೇಳುತ್ತೀರಾ? ನಾನು ಕೇಳಿದೆ.

'ನಿಜ ಹೇಳಬೇಕೆಂದರೆ, ನನಗೆ ಅದು ಗೊತ್ತಿಲ್ಲ. ಆದರೆ ಆಸಾನ್‌ನ ಸಾಲ್ಟ್ ಟ್ರೇಡಿಂಗ್ ಡಿಪೋದಲ್ಲಿ ಇದೆ ಎನ್ನುವುದು ಗೊತ್ತು. ಆದರೆ ಅವರು ನಿಮಗೆ ಎಷ್ಟುಬೇಕೊ ಅಷ್ಟನ್ನು ಕೊಡುವುದು ಕಷ್ಟ. ಸ್ವಲ್ಪ ಕೊಡಬಹುದು'.

ನಾನು ಅಂಗಡಿಯಿಂದ ಹೊರಬಂದೆ. ಈ ದೃಶ್ಯವನ್ನು ಯುವಕ ಸಂತೋಷದಿಂದ ನೋಡುತ್ತಿದ್ದುದನ್ನು ಗಮನಿಸಿದೆ. ಆಸಾನ್ ಬಜಾರಿಗೆ ನನ್ನ ಮಾರ್ಗದರ್ಶನವಿಲ್ಲದೆ ಹೋಗಬಲ್ಲನೆಂಬುದು ನನಗಾಗಲೇ ಅರಿವಾಗಿತ್ತು. ಆತ ನನಗಾಗಿ ಕಾಯುತ್ತಿದ್ದ. ಆತನನ್ನು ಕರೆದು, 'ಬನ್ನಿ ನೀವು ಹುಡುಕುತ್ತಿರುವ ಆಸಾನ್ ಬಜಾರ್ – ಇಲ್ಲಿಯೆ ಹತ್ತಿರದಲ್ಲಿದೆ, ಬನ್ನಿ ಹೋಗೋಣ' ಎಂದೆ.

ಕೆಲವೆ ಕ್ಷಣಗಳಲ್ಲಿ ನಾವು ಆಸಾನ್ ಬಜಾರ್ ಬಳಿಯಿದ್ದೆವು. ಈ ಹಳ್ಳಿಗಾಡಿನ ಯುವಕನಿಗೆ ಆಸಾನ್ ಬಜಾರ್ ಸರ್ವಸ್ವವೂ ಆಗಿತ್ತು. ಆದರೆ ನನಗೆ ಮಾತ್ರ ಅದೊಂದು ಪ್ರದೇಶ ಮಾತ್ರ. ನಾನು ನನಗೆ ಬೇಕಾದ ವಸ್ತುಗಳನ್ನು ಖರೀದಿಸಲು ಆಸಾನ್ ಬಜಾರಿಗೆ ಹೋಗಬೇಕಾಗಿತ್ತು.

ಮನೆ ಬಿಟ್ಟು ನಾಲ್ಕು ದಿನಗಳ ನಂತರ ಆಸಾನ್‌ಬಜಾರಿಗೆ ಬಂದೆನಲ್ಲ ಎನ್ನುವ ಸಂತೋಷ ಆತನಲ್ಲಿತ್ತು. ಆಸಾನ್ ಬಜಾರ್ ಚೌಕವನ್ನು ಕುತೂಹಲದಿಂದ ನೋಡ ತೊಡಗಿದ. ನಾನು ಹೇಳಿದೆ ಇದು 'ಆಸಾನ್ ಬಜಾರ್' ಎಂದು.

ಗ್ರಾಮೀಣ ಯುವಕ ಅಲ್ಲಿಯ ದಟ್ಟನೆಯ ಜನಸಂದಣಿ, ಹಸುಗಳು, ರಿಕ್ಷಾವಾಲಾಗಳು, ತರಕಾರಿ ಮಾರುವವರು, ಎಲ್ಲರೂ ಆ ಪುಟ್ಟ ಜಾಗದಲ್ಲಿಯೆ ಯಾಂತ್ರಿಕವಾಗಿ ಸುತ್ತುತ್ತಿರುವುದನ್ನು ನೋಡಿದ. ಆತ ಕೇಳಿದ – ಇದೇನಾ ಆಸಾನ್ ಬಜಾರ್? ಎಂದು.

'ಹೌದು! ಇದೆ ಆಸಾನ್ ಬಜಾರ್'

ಗ್ರಾಮೀಣ ಯುವಕನಿಗೆ ಈಗ ನನ್ನ ಬಗ್ಗೆ ನಂಬಿಕೆ ಬಂದಂತಾಗಿತ್ತು. ಈಗ ಯಾವುದೇ ಅನುಮಾನವಿರಲಿಲ್ಲ. ಆತ ನೋಡುತ್ತಿದ್ದ ಆಸಾನ್ ಬಜಾರ್ ಆತನ ಊಹೆಗಿಂತ ಭಿನ್ನವಾಗಿತ್ತು. ನಮ್ಮ ಗ್ರಾಮೀಣಪ್ರದೇಶದ ಜನ ಆಸಾನ್ ಬಜಾರ್ ಇಡೀ ನೇಪಾಳದ ಕೇಂದ್ರಭಾಗವೆಂದು ಭಾವಿಸಿರುತ್ತಾರೆ. ನಿಜವಾಗಿಯೂ ಇದು ನೇಪಾಳದ ಕೇಂದ್ರಭಾಗವೇ. ಮೂವತ್ತು ಸಾವಿರ ಚದರ ಅಡಿ ಅಳತೆಯಲ್ಲಿ ವ್ಯಾಪಿಸಿರುವ ಆಸಾನ್ ಬಜಾರ್‌ನಲ್ಲಿ – ಕೆಲವೆ ಗಂಟೆಗಳಲ್ಲಿ ಲಕ್ಷಾಂತರ ರೂಪಾಯಿ ವ್ಯಾಪಾರವಾಗುತ್ತದೆ. ಈ ರೀತಿ ಕಳೆದ ನೂರುವರ್ಷಗಳಿಂದ ನಡೆಯುತ್ತಾ ಬಂದಿದೆ.

'ಸೀಮೆಎಣ್ಣೆ, ಉಪ್ಪು ಎಲ್ಲಿ ಸಿಗುತ್ತದೆ? ಯುವಕ ನನ್ನನ್ನು ಕೇಳಿದ. ನಾನು ಇಲ್ಲಿಗೆ ಹೊಸಬ, ನನಗೇನು ಗೊತ್ತಿಲ್ಲ'.

ದೂರದ ಒಂದು ಮೂಲೆಯಲ್ಲಿ ನೇಪಾಳ ಆಯಿಲ್ ಕಾರ್ಪೊರೇಷನ್ನಿನ ಬೋರ್ಡ್ ಕಾಣಿಸಿತು. ಅಲ್ಲಿ ಒಂದು ಉದ್ದನೆಯ ಸಾಲು ನಾವು ನಿಂತಿರುವವರೆಗೆ ಇದ್ದುದನ್ನು ನೋಡಿದೆ. ನಾನು ಆ ಯವಕನಿಗೆ ಹೇಳಿದೆ, ಈ ಕ್ಯೂನಲ್ಲಿ ನಿಲ್ಲು; ನಿನ್ನ ಸರತಿ ಬಂದಾಗ ನಿನಗೆ ಸೀಮೆಎಣ್ಣೆ ಸಿಗುತ್ತದೆ ಎಂದು ಹೇಳಿದೆ.

'ಸರಿ ಹಾಗಾದರೆ, ನಾನು ಒಂದು ಖಾಲಿ ಟಿನ್ ಖರೀದಿಸಬೇಕಾಗುತ್ತದೆ' ಎಂದು ಸಂತೋಷದಿಂದ ಹೇಳಿದ.

ನಮ್ಮ ಪಕ್ಕದಲ್ಲಿಯೇ ಒಬ್ಬ ಖಾಲಿ ಟಿನ್‌ಗಳನ್ನು ಮಾರುತ್ತಿದ್ದ. 'ನೋಡು ಇಲ್ಲಿ ಖಾಲಿ ಡಬ್ಬ ಖರೀದಿ ಮಾಡಿ ಕ್ಯೂನಲ್ಲಿ ನಿಲ್ಲು, ಸೀಮೆಎಣ್ಣೆ ಖರೀದಿಸಬಹುದು. ನಾನು ಸಕ್ಕರೆಗಾಗಿ ಹುಡುಕಾಡುತ್ತೇನೆ' – ಎಂದು ಹೇಳಿದೆ.

ನಾನು ಸಾಲ್ಟ್ ಟ್ರೇಡಿಂಗ್ ಕಾರ್ಪೊರೇಷನ್ ಬೋರ್ಡಿದ್ದ ಅಂಗಡಿಯ ಕಡೆ ಹೋದೆ. ನಾನು ಅಲ್ಲಿ ತಲುಪಿದಾಗ ಸಕ್ಕರೆಯನ್ನಾಗಲಿ, ಮಾರಾಟಗಾರರನ್ನಾಗಲಿ, ಕಾಣಲಿಲ್ಲ. ಅಲ್ಲಿಯೆ ಸಮೀಪದಲ್ಲಿದ್ದವರನ್ನು ಕೇಳಲಾಗಿ, ಬಹುಶಃ ವ್ಯಾಪಾರ ಮುಗಿಸಿ ಹೋಗಿರಬಹುದು ಎಂದು ಉತ್ತರ ಬಂತು. ಆತನ ಸೂಚನೆಯ ಮೇರೆಗೆ ಬೇರೊಂದು ಸೇಲ್ಸ್ ಡಿಪೋಗೆ ಹೋಗಲು ತೀರ್ಮಾನಿಸಿದೆ.

ನಾನು ಬೇರೊಂದು ಸೇಲ್ಸ್ ಡಿಪೋಗೆ ಹೋಗಿ ಸಕ್ಕರೆಯನ್ನು ಖರೀದಿಸಲು ಸಕ್ಕರೆಗಾಗಿ ಕ್ಯೂನಲ್ಲಿ ನಿಂತಿದ್ದ ಜನರನ್ನು ಕಂಡೆ. ಕ್ಯೂವನ್ನು ಹಿಂದೆ ಸರಿಸಿ ಮಾರಾಟಗಾರನ ಬಳಿ ಬಂದು ಸಂತಸದಲ್ಲಿ ದಯಮಾಡಿ ಅರ್ಧ ಕೆಜಿ ಸಕ್ಕರೆ ಸಿಗಬಹುದ? ಎಂದು ಕೇಳಿದೆ.

ಮಾರಾಟಗಾರ ಬಹಳ ಬಿಸಿಯಾಗಿದ್ದ; ಅಲ್ಲಿಯೆ ನಿಂತಿದ್ದ ಒಬ್ಬ ನಾಗರಿಕ 'ನಿಮಗೆ ಸಕ್ಕರೆ ಬೇಕಿದ್ದರೆ ಕ್ಯೂನಲ್ಲಿ ನಿಲ್ಲಿ, ನಾವು ಗಂಟೆಗಟ್ಟಲೆ ಸಕ್ಕರೆಗಾಗಿಯೆ ಕ್ಯೂನಲ್ಲಿ ನಿಂತಿದ್ದೇವೆ' ಎಂದು ನನ್ನನ್ನು ತಡೆದ.



ನಾನು ನಾಚಿ ಕೆಂಪಾದೆ. ನಾನು ಮೊದಲೆ ತಿಳಿದುಕೊಳ್ಳಬೇಕಿತ್ತು. ನಾನು ಒಂದೂ ಮಾತನಾಡದೆ, ಕ್ಯೂ ಅನ್ನು ನೋಡಿದೆ. ನೂರಾರು ಜನ ಕ್ಯೂನಲ್ಲಿ ಇದ್ದರು. ನಾನು ಕ್ಯೂನಲ್ಲಿ ಮುಜುಗರದಿಂದ ನಿಂತುಕೊಂಡೆ. ಒಂದು ಗಂಟೆಯ ನಂತರ ಅರ್ಧ ಕೆ.ಜಿ. ಸಕ್ಕರೆಯೊಂದಿಗೆ ಸಾಲಿನಿಂದ ಹೊರಬಂದೆ.

ನಾನು ಆಸಾನ್ ಬಜಾರ್ ಮೂಲಕ ಹೋಗುತ್ತಿದ್ದಾಗ, ಆ ಹಳ್ಳಿಯ ಮುಗ್ಧ ಡಬ್ಬಿ ಹಿಡಿದು ನಿಂತಿರುವುದು ಕಣ್ಣಿಗೆ ಬಿತ್ತು. ಈ ವೇಳೆಗಾಗಲೇ ಸೀಮೆಎಣ್ಣೆ ಖರೀದಿಸಿರಬಹುದೆಂದು ತಿಳಿದು 'ಸೀಮೆಎಣ್ಣೆ ಖರೀದಿಸಿದಿರಾ'? ಎಂದು ಕೇಳಿದೆ.

ಅಸಹಾಯಕತೆಯಿಂದ ಆತ ನನ್ನ ಕಡೆ ನೋಡಿದ. ಕಣ್ಣುಗಳಿಂದ ನೀರು ಬರುತ್ತಿದ್ದುದನ್ನು ಕಂಡೆ. ಆತ ಮಾತಾಡಲಿಲ್ಲ. ನನ್ನ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗಲಿಲ್ಲ. ನಾನು ಆತನ ಗಲ್ಲವನ್ನು ಹಿಡಿದು ನನ್ನ ಕಡೆ ತಿರುಗಿಸಿ ಕೇಳಿದೆ 'ಏನು ಸಮಾಚಾರ? ಏನಾಯಿತು'? ಎಂದು.

ನನ್ನ ಪ್ರಶ್ನೆಗೆ ಉತ್ತರವೆಂಬಂತೆ, ಆತನ ಕಣ್ಣುಗಳಿಂದ ಹನಿಗಳು ತೊಟ್ಟಿಕ್ಕ ತೊಡಗಿದವು. ತನ್ನ ಅಂಗಿಯಿಂದ ಅವುಗಳನ್ನು ಒರೆಸಿಕೊಳ್ಳುತ್ತಾ, ಆತ ಹೇಳಿದ 'ನನ್ನಲ್ಲಿರುವ ಹಣದಿಂದ ಕೆರೋಸಿನ್ ಮಾತ್ರ ಖರೀದಿಸಬಹುದು. ಬೇರೆ ವಸ್ತುಗಳನ್ನು ಖರೀದಿಸಲು ನನ್ನಲ್ಲಿ ಈಗ ಹಣವಿಲ್ಲ! ನಾನು ಖರೀದಿಸಬೇಕಾದ ವಸ್ತುಗಳನ್ನು ಖರೀದಿಸದೆ ಮನೆಗೆ ಹೋಗುವಂತಿಲ್ಲ. ನಮ್ಮ ತಂದೆ ಇಷ್ಟು ಕೋಳಿಗಳನ್ನು ಮಾರಿ ಇಡೀ ವರ್ಷಕ್ಕೆ ಬೇಕಾಗುವಷ್ಟು ವಸ್ತುಗಳನ್ನು ಖರೀದಿಸಲು ಹಣಗಳಿಸುತ್ತಿದ್ದರು' ಎಂದು ಮತ್ತೊಮ್ಮೆ ಕಣ್ಣೊರೆಸಿಕೊಳ್ಳುತ್ತಾ ಹೇಳಿದ, 'ನಾನು ಬರೀ ಕೆರೋಸಿನ್ ಖರೀದಿಸಿ ಯಾವ ಮುಖಾ ಇಟ್ಟುಕೊಂಡು ಮನೆಗೆ ಹೋಗಲಿ! ಅದೂ ಅಲ್ಲದೆ ಮನೆಗೆ ಹೋಗಲು ದುಡ್ಡೂ ಇಲ್ಲ. ನನ್ನಲ್ಲಿದ್ದ ಎಲ್ಲಾ ಹಣವನ್ನು ಅಂಗಡಿಯಾತ ತೆಗೆದುಕೊಂಡ'.

'ಎಷ್ಟು ಸೀಮೆಎಣ್ಣೆ ತಗೊಂಡೆ? ಎಷ್ಟು ಹಣ ನೀಡಿದೆ?' ನಾನು ಕೇಳಿದೆ.

'ಎಂಟು ರೂಪಾಯಿ ಕೊಟ್ಟು ಖಾಲಿ ಡಬ್ಬಿ ಖರೀದಿಸಿ ಕ್ಯೂನಲ್ಲಿ ನಿಂತೆ. ಬಹು ಹೊತ್ತಿನ ನಂತರ ನನ್ನ ಸರದಿ ಬಂತು. ಅಂಗಡಿಯಾತ ಕೇಳಿದ ಎಷ್ಟು ಸೀಮೆಎಣ್ಣೆ ಬೇಕು ಎಂದು. ಇಪ್ಪತ್ತು ಲೀಟರ್ ಎಂದು ನಾನು ಹೇಳಿದೆ. ಡಬ್ಬಕ್ಕೆ ಸೀಮೆಎಣ್ಣೆ ಸುರಿದ ಮೇಲೆ, ನಾನು ಆತನಿಗೆ ಎಷ್ಟು ದುಡ್ಡು ಕೊಡಬೇಕೊ ಅಷ್ಟನ್ನು ಕೊಟ್ಟೆ. ಆಗ ಆತ ಹೇಳಿದ ಇದು ಸಾಲಲ್ಲ ಎಂದು'. ಮತ್ತೆ ನನ್ನಲ್ಲಿದ್ದ ಎಲ್ಲಾ ಹಣವನ್ನು ಕಸಿದುಕೊಂಡ. ಸೀಮೆಯೆಣ್ಣೆ ಡಬ್ಬದ ಮುಚ್ಚಳವನ್ನು ಸೀಲು ಮಾಡಿದವ ಮೂರು ರೂಪಾಯಿ ಕೇಳಿದ. ನನ್ನ ಬಳಿ ಎರಡು ರೂಪಾಯಿ ಮಾತ್ರ ಇದೆ ಎಂದೆ. ನನ್ನ ಕೈಲಿದ್ದ ಎರಡು ರೂಪಾಯಿಗಳನ್ನು ಕಿತ್ತುಕೊಂಡು, ಇನ್ನೊಂದು ರೂಪಾಯಿಯನ್ನು ಆಮೇಲೆ ಕೊಡು ಎಂದ. ನನ್ನತ್ರ ಈಗ ಪೈಸಾನೂ ಇಲ್ಲ.

ಉಳಿದ ವಸ್ತುಗಳನ್ನು ಹೇಗೆ ಕೊಳ್ಳಲಿ? ಮನೆಗೆ ಹ್ಯಾಗೆ ಹೋಗಲಿ?'

'ಸರಿ ಈಗ ಏನ್ಮಾಡಕಾಗುತ್ತೆ? ಈಗ ನಿನ್ನತ್ರ ದುಡ್ಡಿಲ್ಲ. ನಿಮ್ಮ ತಂದೆಗೆ ನಡೆದ ವಿಚಾರವನ್ನು ತಿಳಿಸು. ಅವರು ನಿನ್ನನ್ನು ಕ್ಷಮಿಸುತ್ತಾರೆ' ಸಮಾಧಾನ ಪಡಿಸುತ್ತಾ ನಾನು ಹೇಳಿದೆ.

'ಇಲ್ಲ ನಾನು ಮನೆಗೆ ಹೋಗಕಾಗಲ್ಲ' ಆತ ಹೇಳಿದ.

ಈಗ ಏನಾಡ್ತೀಯಾ? ನಾನು ಆತನ ಸಮಸ್ಯೆಗೆ ಪರಿಹಾರವನ್ನು ಕೇಳಿದೆ.

ನಾನು ಈ ಸೀಮೆಎಣ್ಣೆ ತಗೊಂಡು ಮನೆಗೋಗಲ್ಲ. ಈ ಸೀಮೆಎಣ್ಣೆಯನ್ನು ಯಾರಿಗಾದರೂ ಮಾರುತ್ತೇನೆ. ಒಬ್ಬ ವ್ಯಕ್ತಿಗೆ ಇದನ್ನು ಕೊಂಡುಕೊಳ್ಳಲು ಹೇಳಿದ್ದೇನೆ; ನನ್ನ ಒಬ್ಬ ಅಣ್ಣ ಇಂಡಿಯಾದಲ್ಲಿ – ಆಸಾನ್‌ಸೋಲ್ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ನಾನು ಅಲ್ಲಿಗೆ ಹೋಗುತ್ತೇನೆ. ಕೆಲ ತಿಂಗಳು ಅಲ್ಲಿ ಕೆಲಸ ಮಾಡಿ, ಸಾಕಷ್ಟು ಹಣ ಸಂಪಾದಿಸಿ, ಅಗತ್ಯವಸ್ತುಗಳನ್ನು ಖರೀದಿಸಿ, ಅನಂತರ ಮನೆಗೆ ಹೋಗುತ್ತೇನೆ– ಎಂದು ಹೇಳಿದ.

'ಭಾರತ ಎಲ್ಲಿದೆ? ಆಸಾನ್‌ಸೋಲ್ ಎಲ್ಲಿದೆ? ನೀನು ಅಲ್ಲಿಗೆ ಎಂದಾದರು ಹೋಗಿದ್ದೆಯಾ?' ನಾನು ಕೇಳಿದೆ.

'ಇಲ್ಲ ನಾನು ನೋಡಿಲ್ಲ. ಆದರೆ ಒಮ್ಮೆ ಹೊರಟುಬಿಟ್ಟರೆ ಹೇಗಾದರೂ ನಾನು ಅಲ್ಲಿಗೆ ತಲುಪುತ್ತೇನೆ. ಹೋಗದೆ ಬೇರೆ ದಾರಿಯೇ ಇಲ್ಲ'.

ಸೀಮೆಎಣ್ಣೆಯನ್ನು ಕೊಂಡುಕೊಳ್ಳುವ ವ್ಯಕ್ತಿ ಬಂದು ಕೇಳಿದ. ಏನು ನೀನು ಸೀಮೆಎಣ್ಣೆಯನ್ನು ಮಾರುತ್ತೀಯ? ಹಾಗಾದರೆ ಬೇಗ, ನಾನು ಬೇರೆ ಕಡೆ ಹೋಗಬೇಕಿದೆ ಎಂದ.

ಯುವಕ ಹೌದೆನ್ನುವಂತೆ ತಲೆಯಾಡಿಸಿದ. ಆತನ ಅಂಗಡಿಯನ್ನು ತೋರಿಸಿದ. ನಾನು ಜೊತೆಯಲ್ಲಿರುವಂತೆ ಯುವಕ ವಿನಂತಿಸಿದ. ಆತ ಸೀಮೆಎಣ್ಣೆಯನ್ನು ಅಳತೆ ಮಾಡಬೇಕೆಂದ. ಡಬ್ಬದ ಸೀಲನ್ನು ಒಡೆದು ಅಳತೆಮಾಡಿದ. ಅಲ್ಲಿ ಕೇವಲ ಹದಿನಾರು ಲೀಟರ್‌ಗಳು ಮಾತ್ರ ಇತ್ತು. ಆದರೆ ಹಳ್ಳಿಯ ಯವಕನಿಗೆ ಇಪ್ಪತ್ತೊಂದು ಲೀಟರ್‌ಗಳನ್ನು ಡಬ್ಬಕ್ಕೆ ತುಂಬಿರುವುದಾಗಿ ಈ ಹಿಂದೆ ಮಾರಿದವನು ತಿಳಿಸಿದ್ದ. ಸೀಮೆಎಣ್ಣೆಗೆ ಅರವತ್ತೆರಡು ರೂಪಾಯಿ ಡಬ್ಬಕ್ಕೆ ಏಳು ರೂಪಾಯಿ ಸೇರಿಸಿ ಒಟ್ಟು ಅರುವತ್ತೊಂಬತ್ತು ರೂಪಾಯಿಗಳನ್ನು ಅಂಗಡಿಯಾತ ಯುವಕನ ಕೈಗಿತ್ತ.

ಹಳ್ಳಿಯ ಹುಡುಗ ಅಂಗಡಿಯವನಿಂದ ಮೋಸಹೋಗಿರುವುದನ್ನು ಕಂಡ ನನಗೆ ನನ್ನ ಸಕ್ಕರೆಯ ಅಳತೆಯಲ್ಲಿ ಮೋಸ ಹೋಗಿರಬಹುದೆಂಬ ಅನುಮಾನ ಬಂತು. ಅದು ಕೇವಲ ನಾಲ್ಕು ನೂರು ಐವತ್ತು ಗ್ರಾಂ ಇದ್ದುದು ತಿಳಿಯಿತು. ಮತ್ತೆ ಅಂಗಡಿಗೆ ವಾಪಸ್ಸು ಹೋಗಿ ಉಳಿದ ಐವತ್ತು ಗ್ರಾಂಗಳಿಗಾಗಿ ಕೇಳುವುದು ಮೂರ್ಖತನವೆನಿಸಿತು. ಯಾಕೆಂದರೆ ಅವ ನನ್ನ ಕಣ್ಣೆದುರಿಗೆ ಅಳತೆ ಮಾಡಿದ್ದ.



'ನಿಯಂತ್ರಿತ ಪದಾರ್ಥಗಳು ಇದೇ ರೀತಿ ಅಳತೆಗೊಳ್ಳುತ್ತವೆ' ಎಂದು ನನ್ನನ್ನು ನಾನು ಸಮಾಧಾನ ಪಡಿಸಿಕೊಂಡೆ. ಏನು ಮಾಡಲೂ ಬರುವುದಿಲ್ಲ!

ನಾವಿಬ್ಬರೂ ಆಸಾನ್ ಬಜಾರಿನ ಚೌಕಕ್ಕೆ ಬಂದೆವು. ಈಗ ನಮ್ಮ ಹಳ್ಳಿ ಹುಡುಗನ ಬಳಿ ಎಪ್ಪತ್ತೈದು ರೂಪಾಯಿಗಳಿದ್ದವು. ಆಸಾನ್ ಬಜಾರಿನ ಮೋಸದ ವ್ಯಾಪಾರದಲ್ಲಿ ಅರವತ್ತೊಂಬತ್ತು ರೂಪಾಯಿಗಳನ್ನು ಕಳೆದು ಕೊಂಡಿದ್ದನು.ಇಷ್ಟು ಹಣದಲ್ಲಿ ಆತನ ಅಕ್ಕ ಮತ್ತು ಅಮ್ಮನಿಗೆ ಸ್ವಲ್ಪ ಬಟ್ಟೆಯನ್ನು ಖರೀದಿಸಬಹುದಿತ್ತು. ಆದರೆ ಈ ಬಜಾರಿನಲ್ಲಿ ಅದು ಮಾಯವಾಗಿತ್ತು. ಆತನ ತಂದೆಗೆ ಪ್ಯಾಂಟ್ ಮತ್ತು ಷರಟು ಕೊಂಡುಕೊಳ್ಳುವ ಕನಸು ನುಚ್ಚು ನೂರಾಗಿತ್ತು. ಅವರ ಮನೆ ಕತ್ತಲೆಯ ಕೂಪವಾಗಿ, ವರ್ಷವಿಡೀ ಉಪ್ಪುಯಿಲ್ಲದೆ ಇರಬೇಕಾದ ಸ್ಥಿತಿ ಬಂದಿತ್ತು! ಆ ಯುವಕನಿಗೆ ಅವರ ಮನೆಯಲ್ಲಿರುವ ಅಭಾವದ ಬಗ್ಗೆ ಯೋಚನೆಯೆ ಇರಲಿಲ್ಲ, ಹಣದ ಬಗ್ಗೆ ಯೋಚನೆ ಮಾಡುತ್ತಿದ್ದ. ಅವನ ಮನೆಗೆ ಅಗತ್ಯವಾದ ವಸ್ತುಗಳನ್ನು ಖರೀದಿಸಲು ಬೇಕಾದ ಹಣದ ಬಗ್ಗೆ ಅಗತ್ಯ ಕಾಣುತ್ತಿತ್ತು. ಆದ್ದರಿಂದ ಅಷ್ಟು ಹಣವನ್ನು ಸಂಪಾದಿಸಿದ ಮೇಲೆ ಮಾತ್ರ ಮನೆಗೆ ಹೋಗಬೇಕೆಂದು ತೀರ್ಮಾನಿಸಿದ.

ನಮ್ಮ ಹಳ್ಳಿಯ ಯುವಕ ಆಸಾನ್ ಬಜಾರಿಗೆ ದೂರದಿಂದ ನಡೆದು ಬಂದಿದ್ದ. ಆಸಾನ್ ಬಜಾರಿನ ಬಗ್ಗೆ ಒಂದು ರೀತಿಯ ಪ್ರೀತಿಯನ್ನು ಬೆಳೆಸಿಕೊಂಡಿದ್ದ. ಆದರೆ ಆಸಾನ್ ಬಜಾರ್ ಇದನ್ನು ಅರ್ಥಮಾಡಿಕೊಳ್ಳಲಿಲ್ಲ. ಗುಡ್ಡಗಾಡಿನ ಗ್ರಾಮೀಣ ಪ್ರದೇಶದಿಂದ ಬರುವ ಮುಗ್ಧರನ್ನು ವಂಚಿಸುತ್ತದೆ ಶೋಷಣೆ ಮಾಡುತ್ತದೆ ಎನ್ನುವುದನ್ನು ಮಾತ್ರ ಅರ್ಥಮಾಡಿಕೊಂಡ.

ನಾನು ಹಳ್ಳಿಯ ಯುವಕನಿಗೆ ಆತನ ಅಗತ್ಯವನ್ನು ಪೂರೈಸುವಲ್ಲಿ ಯಾವ ಸಹಾಯವನ್ನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಅದು ಐದು ಅಥವಾ ಹತ್ತು ರೂಪಾಯಿಗಳ ವಿಷಯವಲ್ಲ. ನಾನು ಅಸಹಾಯಕ! ನನ್ನಲ್ಲಿ ಯಾವ ಸಂಪನ್ಮೂಲವೂ ಇಲ್ಲ. ಆತ ವಲಸೆ ಹೋಗುವುದನ್ನು ತಪ್ಪಿಸುವುದೂ ನನ್ನಿಂದ ಆಗುತ್ತಿರಲಿಲ್ಲ!

ಹೀಗಾಗಬಾರದಿತ್ತು 'ಮನೆಗೆ ಹೋಗಿ. ನೀವು ಬೇರೆ ಕಡೆ ಹೋದರೆ ನಿಮ್ಮ ತೊಂದರೆಗಳು ಹೆಚ್ಚಾಗಬಹುದು. ಯಾಕೆಂದರೆ ನೀವು ಯಾವತ್ತೂ ಅಲ್ಲಿಗೆ ಹೋಗಿಲ್ಲ, ದುಡುಕಬೇಡಿ! ನಾಳೆ ಬೆಳಗಿನ ಬಸ್ಸಿನಲ್ಲಿ ಊರಿಗೆ ಹೋಗಿ. ನಿಮ್ಮ ಪೋಷಕರು ಏನೂ ಅನ್ನುವುದಿಲ್ಲ. ನನ್ನ ಮಾತು ಕೇಳಿ. ಊರಿಗೆ ಹೋಗಿ'.

ಆತ ನೋವಿನಿಂದ ಹೇಳಿದ. 'ಮನೆ'? ಇಲ್ಲ, ನಾನು ಮನೆಗೆ ಹೋಗುವುದಿಲ್ಲ. ನಾನು ಹೇಗೆ ಅವರಿಗೆ ಮುಖ ತೋರಿಸಲಿ? ನಾನು ನನ್ನ ಅಣ್ಣ ಇರುವಲ್ಲಿಗೆ ಹೋಗುತ್ತೇನೆ, ದುಡಿಯುತ್ತೇನೆ, ಹಣ ಸಂಪಾದಿಸುತ್ತೇನೆ. ಮನೆಗೆ ಬೇಕಾಗುವಷ್ಟು ಸಾಮಾನುಗಳನ್ನು ತೆಗೆದುಕೊಂಡಾಗ ಮಾತ್ರ ಹೋಗುತ್ತೇನೆ'.

'ಇಂದು ರಾತ್ರಿ ಇಲ್ಲೆ ಇರುತ್ತೀಯ?'

'ಹೌದು. ಇಲ್ಲೆ ಎಲ್ಲಾದರೂ!

'ಸರಿ. ಹಾಗಾದರೆ ನಾನು ಹೋಗಬಹುದಾ?'

'ಸರಿ.'

'ಇಂದು ರಾತ್ರಿ ನೀನು ಇಲ್ಲಿ ಕಾಲ ಕಳೆಯುತ್ತೀಯ?'

'ಹೌದು, ಹಾಗೆ ಅನ್ನಿಸುತ್ತಿದೆ'.

ಆತನಿಂದ ಬೇರೆಯಾಗಿ ನಾನು ಮನೆಯ ಕಡೆ ಹೆಜ್ಜೆಯಿಡುತ್ತಾ ಯೋಚಿಸಿದೆ. ಈ ರೀತಿ ಯುವಕರು ಈ ದೇಶದ ಆರ್ಥಿಕ ಸ್ಥಿತಿಯಲ್ಲಿ ಬದುಕಲಾರದೆ ಮಾರುಕಟ್ಟೆಯಲ್ಲಿ ಗಗನಕ್ಕೇರಿರುವ ಬೆಲೆಯ ವಸ್ತುಗಳನ್ನು ಖರೀದಿಸಲಾಗದೆ ಬೇಸತ್ತು ಬಲವಂತವಾಗಿ ದೇಶ ತೊರೆಯುತ್ತಿದ್ದಾರೆ ಎಂದು. ಇದರಿಂದ ಇಂಥ ಪ್ರಾಮಾಣಿಕ ಶ್ರಮಜೀವಿಯನ್ನು ದೇಶ ಕಳೆದುಕೊಳ್ಳುತ್ತದೆ. ತಂದೆ ತಾಯಿಗಳು ದುಡಿಯುವ ಮಗನನ್ನು ಕಳೆದುಕೊಳ್ಳುತ್ತಾರೆ. ಆತನ ಸಹೋದರಿಯರು ಪ್ರೀತಿಯ ತಮ್ಮನಿಂದ ದೂರವುಳಿಯುತ್ತಾರೆ. ಸ್ನೇಹಿತರಿಗೆ ಒಬ್ಬ ಒಳ್ಳೆಯ ಸ್ನೇಹಿತ ಇಲ್ಲವಾಗುತ್ತಾನೆ!

n



# ಮಂಗಳವಾರ

**ನಾ**ನು ಸರ್ಕಾರಿ ಕಛೇರಿಯ ಒಂದು ರೂಮಿನಲ್ಲಿ ಎರಡು ಗಂಟೆಗಳ ಕಾಲ ಮುಖ ಸಿಂಡರಿಸಿಕೊಂಡು ಕುಳಿತಿದ್ದೆ. ಆದರೆ ನನ್ನ ಡಿಪಾಜಿಟ್ಟನ್ನು ಅವರು ಹಿಂತಿರುಗಿಸುವ ಯಾವ ಕ್ರಮವನ್ನು ಕೈಗೊಳ್ಳುತ್ತಿರಲಿಲ್ಲ. ಈ ನೌಕರರಿಗೆ ನನ್ನ ಜೊತೆ ಮಾತನಾಡುವಷ್ಟು ತಾಳ್ಮೆಯಿರಲಿಲ್ಲ. ನಾವು ನಾಲ್ಕು ಜನ ಅಲ್ಲಿ ಕ್ಯೂನಲ್ಲಿ ನಿಂತಿದ್ದೆವು. ನಾನು ಭೇಟಿ ಮಾಡಿದ ನೌಕರ ಭೇಟಿ ಮಾಡಿದ ತಕ್ಷಣ ಡಿಪಾಜಿಟ್ ಹಿಂದಿರುಗಿಸುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ. ಅದಕ್ಕಾಗಿ ನಾನು ಕಾಯುತ್ತಿದ್ದೇನೆ. ಅಲ್ಲಿ ರೂಮಿನಲ್ಲಿ ಕೇವಲ ಕೆಲವು ಕುರ್ಚಿಗಳು ಮಾತ್ರ ಇದ್ದವು. ಕೆಲವು ಸಾರಿ ಕುರ್ಚಿಯಿಲ್ಲದೆ ನಿಲ್ಲುತ್ತ, ಕುರ್ಚಿ ಖಾಲಿಯಾದ ತಕ್ಷಣ ಕುಳಿತುಕೊಳ್ಳುತ್ತಾ ಕಾಲ ಕಳೆದೆ. ಕೊನೆಗೆ ಆ ಕುರ್ಚಿಯಲ್ಲಿ ಕುಳಿತು ಸಾಕಾಗಿ ಹೊರಗಡೆ ಹೋಗಬೇಕಾಯಿತು.  ಅಷ್ಟರಲ್ಲಿ ಅಲ್ಲಿಯ ನೌಕರರನ್ನು ಬೇಗ ಕೆಲಸ ಮಾಡಿಕೊಡುವಂತೆ ಎರಡು ಬಾರಿ ವಿನಂತಿಸಿದೆ. 'ರೀ ಅದನ್ನೆ ಮಾಡ್ತಾಯಿಲ್ಲವಾ' ನೌಕರ ಕೋಪಿಸಿಕೊಂಡು ವ್ಯಂಗ್ಯವಾಗಿ ಉತ್ತರಿಸಿದ. ಆತನ ಕ್ರೂರ ವರ್ತನೆಯಿಂದ ನನಗೆ ಅವಮಾನವಾಯಿತು. ಅವನನ್ನು ಮತ್ತೆ ಕೇಳಬೇಕೆಂದು ಅನ್ನಿಸಲಿಲ್ಲ.

ನಾನು ಎರಡು ವಾರಗಳ ನಂತರ ಈ ಕಛೇರಿಗೆ ಬಂದಿದ್ದೆ. ಇದು ಕಳೆದ ಅನೇಕ ತಿಂಗಳಿಂದ ಯಾವುದೇ ತೀರ್ಮಾನವಾಗದೆ ಹಾಗೆಯೆ ಇತ್ತು. ಕೆಲಸ ಮಾಡಬೇಕೆಂಬ ಮನಸ್ಸಿದ್ದರೆ ಇಪ್ಪತ್ತು ನಿಮಿಷಗಳಲ್ಲಿ ಅದನ್ನು ಮುಗಿಸಬಹುದಿತ್ತು. ಆದರೆ ನಾನು ಇಪ್ಪತ್ತು ಸಾರಿ ಪ್ರಯಾಸಪಟ್ಟಿದ್ದರೂ ಒಂದು ಸಣ್ಣ ಕೆಲಸವನ್ನು ಮುಗಿಸಿರಲಿಲ್ಲ. ಹೌದು! ಇಪ್ಪತ್ತು ನಿಮಿಷದ ಕೆಲಸಕ್ಕಾಗಿ ಇಪ್ಪತ್ತು ಬಾರಿ ಭೇಟಿ ನೀಡಿದ್ದೆ! ಆದರೆ ಕೆಲಸ ಮಾತ್ರ ಆಗಿರಲಿಲ್ಲ, ಅದ್ಭುತ!

ವಿಷಯ ಅಂಥಾ ದೊಡ್ಡದೇನೂ ಅಲ್ಲ. ಕೆಲ ತಿಂಗಳ ಹಿಂದೆ, ಮೂರು ನೂರಾ ಇಪ್ಪತ್ತೈದು ರೂಪಾಯಿಗಳನ್ನು ಯಾವುದೋ ಒಂದು ವಿಷಯದ ಬಗ್ಗೆ ಈ ಕಛೇರಿಯ ನೌಕರನ ಸಲಹೆಯ ಮೇರೆಗೆ ಡಿಪಾಜಿಟ್ ಮಾಡಿದ್ದೆ. ಆನಂತರ, ಇತ್ತೀಚಿನ ಬದಲಾದ ಸರ್ಕಾರಿ ನೀತಿಯಿಂದ ಅದು ಸಾಧ್ಯವಾಗುವುದಿಲ್ಲ ಎನ್ನುವ ವಿಷಯ ತಿಳಿಯಿತು. ಇದು ಕಾರ್ಯಗತ ವಾಗದಿದ್ದರೆ ಹಣವನ್ನು ಹಿಂತಿರುಗಿಸುವುದಾಗಿ ಮೊದಲೇ ತಿಳಿಸಿದ್ದರು. ಈ ಆಶ್ವಾಸನೆಯ ಮೇರೆಗೆ, ನಾನು

ಈ ಕಛೇರಿಗೆ ನಿರಂತರವಾಗಿ ಭೇಟಿ ನೀಡುತ್ತಿದ್ದೆ. ಅವರು ಹಣವನ್ನು ಕೊಡುವುದಿಲ್ಲ ಎಂದೂ ಹೇಳಲಿಲ್ಲ ಅಥವಾ ಪಾವತಿಸುವ ಕುರಿತು ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಹಣ ಎಷ್ಟೆ ಕಡಿಮೆಯಿದ್ದರೂ ಬೆವರು ಸುರಿಸಿ ಸಂಪಾದಿಸಿದ್ದನ್ನು ಬಿಟ್ಟುಬಿಡಲು ಆಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಅದು ನಾನು ಡಿಪಾಜಿಟ್ ಮಾಡಿದ ಹಣ.

ಇದು ಕೇವಲ ಒಂದು ಸಣ್ಣ ಮೊತ್ತವೆಂದು ನಾನು ಉದಾಸೀನ ಭಾವನೆ ತಾಳಿದ್ದು ಕಾರಣವಿರಬಹುದು ಅಥವಾ ನನ್ನಲ್ಲಿ ಈ ಸರ್ಕಾರಿ ನೌಕರರನ್ನು ಪಳಗಿಸಲು ಬೇಕಾದ ಚಾಲಾಕಿತನದ ಕೊರತೆಯೂ ಇರಬಹುದು. ನನ್ನ ಮೂರುನೂರಾ ಇಪ್ಪತ್ತೈದು ರೂಪಾಯಿಗಳನ್ನು ವಾಪಸ್ಸು ನೀಡಲು ನಾನು ಅವರಿಗೆ ಸ್ವಲ್ಪ ಹಣ ನೀಡಬೇಕೆಂದು ಅವರು ನಿರೀಕ್ಷಿಸುತ್ತಿರಬಹುದು? ನನಗೆ ಸಮಯದ ಬೆಲೆ ಗೊತ್ತಿದ್ದುದರಿಂದ; ಮತ್ತು ಇಲ್ಲಿಗೆ ಬಂದು ಹೋಗಲು ಸ್ವಲ್ಪ ಹಣವನ್ನು ಖರ್ಚು ಮಾಡಬೇಕಿತ್ತು. ಪ್ರತಿಬಾರಿ ಬಂದಾಗಲೂ ಎರಡು ಗಂಟೆ ಕಾಲಹರಣವಾಗುತ್ತಿತ್ತು. ಇಪ್ಪತ್ತು ಸಾರಿ ಬಂದು ಹೋದಾಗಲೂ ಏನೂ ಪ್ರಯೋಜವಾಗದುದನ್ನು ಕಂಡು ನಾನು ಈ ಕಡೆ ಬರುವುದನ್ನೇ ನಿಲ್ಲಿಸಿದೆ. ಆನಂತರ ಸ್ವಲ್ಪ ದಿನಗಳ ಮೇಲೆ ಯೋಚಿಸಿದೆ, ದುಡ್ಡನ್ನು ಯಾಕೆ ಬಿಡಬೇಕು ಎಂದು ಭಾವಿಸಿ ಇಲ್ಲಿ ಬರುವ ಹಣದಿಂದ ಸ್ವಲ್ಪ ಉಪಯೋಗವಾಗಬಹುದೆಂದು, ಮತ್ತೆ ಬರಲು ಆರಂಭಿಸಿದೆ.

ರೂಮಿನಲ್ಲಿ ನನ್ನ ಹಣವನ್ನು ವಾಪಸ್ ಪಡೆಯಲು ನಿಂತಿರುವ ಸಮಯದಲ್ಲಿ, ಅಲ್ಲಿಯ ಸಿಬ್ಬಂದಿ ಫೈಲನ್ನು ಸ್ಟಡೀ ಮಾಡುತ್ತಿದ್ದನು. ಆತ ನನಗಾಗಲಿ, ನನ್ನಂತೆ ಆತನ ಟೇಬಲ್ಲಿನ ಸುತ್ತಾ ಕಾಯುತ್ತಿದ್ದ ಇತರರನ್ನಾಗಲಿ ಗಮನಿಸಲಿಲ್ಲ ಹಾಗೂ ಅವರನ್ನು ವಿಚಾರಿಸುವ ಗೋಜಿಗೆ ಹೋಗಲಿಲ್ಲ. ಇದೇ ಸಮಯದಲ್ಲಿ ಒಬ್ಬ ವ್ಯಕ್ತಿ ದಿಢೀರನೆ ರೂಮಿನೊಳಗೆ ನುಗ್ಗಿ, ರೂಮಿನಲ್ಲಿ ಗದ್ದಲವೆಬ್ಬಿಸಿ 'ಓ! ಸಾರ್! ಕೆಲಸವಿನ್ನು ಮುಗಿದಿಲ್ಲವೆ?' ಎಂದು ಕೊಠಡಿಯ ಶಾಂತಿಯನ್ನು ಕದಡಿದ.

ನಾನು ಆತನನ್ನು ನೋಡಿದ ತಕ್ಷಣ ಗುರುತು ಹಿಡಿದೆ. ಆತ ಮಹೇಶ್‌ಕುಮಾರ್ ಕೆಡಿಯಾ ಎಂದು. ಕಟ್ಮಂಡುವಿಗೆ ಅವನು ಬಂದ ಮೊದಲ ಹತ್ತು ವರ್ಷಗಳಾದಾಗಿನಿಂದಲೂ ಆತನನ್ನು ಬಲ್ಲೆ. ಮಹೇಶ್ ಕುಮಾರನ ಗಟ್ಟಿಧ್ವನಿ ಆ ಅಧಿಕಾರಿ ಕಿವಿಗೆ ಮುಟ್ಟಿದ ತಕ್ಷಣ, ಅಧಿಕಾರಿ ಎದ್ದು ನಿಂತು ಓ! ಬನ್ನಿ, ಬನ್ನಿ, ಮಹೇಶ್‌ಕುಮಾರ್ ಎಂದು ಸ್ವಾಗತಿಸಿದ!

ಅಲ್ಲಿ ಇದ್ದ ಒಂದು ಕುರ್ಚಿ ಎಳೆದು ತೋರಿಸಿ ಕುಳಿತುಕೊಳ್ಳುವಂತೆ ವಿನಂತಿಸಿದ. ಮಹೇಶಕುಮಾರ್ ನನ್ನನ್ನು ತಳ್ಳಿಕೊಂಡು ಆ ಕುರ್ಚಿಯ ಕಡೆ ಧಾವಿಸಿ, ಕುರ್ಚಿಯ ಮೇಲೆ ಕುಳಿತ. ನಾನು ಕಛೇರಿಗೆ ಬಂದಿರುವ ಕಾರಣವನ್ನು ಕೇಳಿದ. ನಾನು ಬಂದ ಕಾರಣವನ್ನು ಹೇಳಿದೆ. ಆತ ಆಮದು ಪರವಾನಗಿ ಪಡೆಯಲು ಈ ಕಛೇರಿಗೆ ಬಂದಿರುವುದಾಗಿ ತಿಳಿಯಿತು.



'ಮಹೇಶ್‌ಕುಮಾರ್, ನೀವು ನಿನ್ನೆಯೆ ಬರುತ್ತೀರೆಂದು ನಿರೀಕ್ಷಿಸಿದ್ದೆ! ಆದರೆ ನೀವು ಬರಲಿಲ್ಲ. ನಿನ್ನೆಯೇ ಎಲ್ಲಾ ರೆಡಿಯಾಗಿತ್ತು. ನಿರ್ದೇಶಕರ ಸಹಿ ಮಾತ್ರ ಬಾಕಿಯಿದೆ'.

'ನಾನು ನಿನ್ನೆ ಬರಲಿಲ್ಲ ಎಂದು ನಗುತ್ತಾ ಮಹೇಶ್‌ಕುಮಾರ್ ಹೇಳಿದ. ಇಂದು ಬಂದಿದ್ದೇನೆ, ದಯವಿಟ್ಟು ಬೇಗ ಮುಗಿಸಿ ಕೊಡುತ್ತೀರಾ'?

ನೌಕರನು ಮಹೇಶಕುಮಾರನ ಆದೇಶದ ಪ್ರತಿಯನ್ನು ಫೈಲಿನಿಂದ ಹೊರತೆಗೆದು, 'ಸಾರ್ ಸ್ವಲ್ಪ ತಾಳಿ, ನಿರ್ದೇಶಕರ ಸಹಿ ಮಾಡಿಸಿ ಸ್ವಲ್ಪ ಸಮಯದಲ್ಲಿ ಬರುತ್ತೇನೆ' ಎಂದು ಹೇಳಿದ.

'ಸರಿ ಆಗಬಹುದು! ತೊಂದರೆಯಿಲ್ಲ'!

ನೌಕರ ಫೈಲನ್ನು ತೆಗೆದುಕೊಂಡು ರೂಮಿನಿಂದ ಹೊರನಡೆದ. 'ಮಹೇಶಕುಮಾರ್, ಏನಾದರೂ ವಿದೇಶಿ ವ್ಯಾಪಾರವನ್ನು ಪ್ರಾರಂಭಿಸಿದ್ದೀರೇನು' ಎಂದು ನಾನು ಮಹೇಶ್‌ಕುಮಾರನನ್ನು ಕುತೂಹಲದಿಂದ ಕೇಳಿದೆ?

ನಾನು ಈಗ ಈ ರೀತಿಯ ಪ್ರಶ್ನೆಗಳನ್ನು ಕೇಳಬಾರದೆಂದು ಸೂಚನೆ ನೀಡಲು ಮಹೇಶಕುಮಾರ್ ನನ್ನ ಕೈಯನ್ನು ಮೆಲ್ಲಗೆ ಅದುಮಿದ. ಆತ ಏನೂ ಹೇಳದಿದ್ದರೂ ನನಗೆ ಆತನ ಬಗ್ಗೆ ಅನುಮಾನ ಶುರುವಾಯಿತು. ಆತ ಮೂರು ತಿಂಗಳ ಹಿಂದೆ ಭಾರತದ ಪಾಸ್‌ಪೋರ್ಟಿನ ಮೇಲೆ ಹಾಂಕಾಂಗ್‌ಗೆ ಹೋಗಿದ್ದುದು ನನಗೆ ಚೆನ್ನಾಗಿ ಅರಿವಿತ್ತು. ಆತ ಕಳೆದ ಹತ್ತು ವರ್ಷಗಳಿಂದಲೂ ಕಠ್ಮಂಡುವಿನಲ್ಲಿ ವಾಸಮಾಡುತ್ತಿದ್ದರೂ, ನೇಪಾಳಿಯ ಪೌರತ್ವವನ್ನು ಪಡೆಯಲು ಯಾವ ಪ್ರಯತ್ನವನ್ನು ಮಾಡಿರಲಿಲ್ಲ. ಬರ್ಮಾದಲ್ಲಿ ಹುಟ್ಟಿ ಆ ದೇಶದಿಂದ ಹೊರದೂಡಲ್ಪಟ್ಟು, ನೇಪಾಳದಲ್ಲಿ ಬಹಳ ವರ್ಷಗಳಿಂದ ವಾಸಿಸುತ್ತಿದ್ದರೂ, ಭಾರತೀಯ ಪ್ರಜೆಯೆಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತಾನೆ. ಅದೂ ಅಲ್ಲದೆ 'ಯಾವ ವಿದೇಶಿಯನೂ ನೇರವಾಗಿ ಅಥವಾ ಪರೋಕ್ಷವಾಗಿ ಈ ಆಮದು ವ್ಯಾಪಾರವನ್ನು ಮಾಡಲು ಬರುವುದಿಲ್ಲ' ಎನ್ನುವ ಸರ್ಕಾರಿ ನಿಯಮ ನನಗೆ ನೆನಪಿದೆ. ಆದರೆ ಈ ಸರ್ಕಾರಿ ಆದೇಶದ ವಿರುದ್ಧವಾಗಿ ವಿದೇಶಿಯನೊಬ್ಬನಿಗೆ ಈ ರೀತಿಯ ಹಾರ್ದಿಕ ಸ್ವಾಗತ! ಅವನಿಗೇಕೆ ಈ ರೀತಿಯ ವಿಶೇಷ ಸವಲತ್ತು? ಉತ್ತರಕ್ಕಾಗಿ ನನ್ನ ಮನಸ್ಸು ಕಾತರಗೊಂಡಿತು.

'ಏನು ಬಹಳ ಕೆಲಸವಿದೆಯಾ'? ಮಹೇಶ್‌ಕುಮಾರ್ ನನ್ನನ್ನು ಕೇಳಿದ.

'ಅಂಥ ವಿಶೇಷವೇನಿಲ್ಲ. ಒಂದು ಸಣ್ಣ ಕೆಲಸಕ್ಕಾಗಿ ಬಂದಿರುವೆ'.

'ಕಾರಿನಲ್ಲಿ ಬಂದಿದ್ದೀರಾ, ನಡೆದುಕೊಂಡು ಬಂದಿದ್ದೀರಾ'?

'ನಡೆದುಕೊಂಡು. ನಮ್ಮಂಥವರು ಸದಾಕಾಲ ಕಾರಿನಲ್ಲಿ ಬರಲಾಗುವುದಿಲ್ಲ. ಅದೂ ಅಲ್ಲದೆ ನಡೆಯುವುದು ಆರೋಗ್ಯಕ್ಕೆ ಒಳ್ಳೆಯದು' ನಾನು ಹೇಳಿದೆ.

ಅದೇ ಸಮಯಕ್ಕೆ ಸರಿಯಾಗಿ ನೌಕರ ರೂಮಿನಿಂದ ಹೊರ ಬಂದು

ಹೇಳಿದ. 'ಮಹೇಶ್‌ಕುಮಾರ್ ಕೆಲಸ ಆಯಿತು ದಯವಿಟ್ಟು ಇದನ್ನು ತೆಗೆದುಕೊಂಡು ಸೆಕ್ಷನ್‌ಗೆ ಕೊಡಿ. ನಿಮ್ಮ ಪೇಪರ್ ಅಲ್ಲಿದೆ. ಅದನ್ನು ಅಲ್ಲಿ ಪಡೆಯಿರಿ' ಎಂದು ಹೇಳಿದ.

ಮಹೇಶಕುಮಾರ್ ಆ ನೌಕರನಿಂದ ಫೈಲನ್ನು ಪಡೆದು ಒಂದು ನಿಮಿಷ ಬರ್ತೀನಿ ಎಂದು ಹೇಳಿ ರೂಮಿನಿಂದ ಫೈಲಿನ ಸಮೇತ ಹೊರನಡೆದ. ನಾನು ನನ್ನ ವಿಷಯ ಕುರಿತು ಆ ನೌಕರನನ್ನು ಕೇಳಿದೆ. ಇಂದು ಬಹಳ ಕೆಲಸವಿದೆ ನಾಳೆ ಅದನ್ನು ನೋಡುವುದಾಗಿ ಆ ನೌಕರ ತಿಳಿಸಿದ. ಆದರೂ ಆತನ ಮಾತಿನಲ್ಲಿ ನನಗೆ ನಂಬಿಕೆ ಬರಲಿಲ್ಲ. 'ಸರಿ'ಯೆಂದು ಹೇಳಿ ನಾನು ರೂಮಿನಿಂದ ಹೊರಬಂದೆ.

ನಾನು ಮೆಟ್ಟಿಲುಗಳನ್ನು ಇಳಿದು ಬಾಗಿಲ ಬಳಿ ನಿಂತಾಗ ಮಹೇಶ್‌ಕುಮಾರ್ ನನ್ನೆದುರಿಗೆ ಕಾಣಿಸಿಕೊಂಡರು. 'ನಿಮ್ಮ ಕೆಲಸವನ್ನು ಬಹುಬೇಗ ಮುಗಿಸಿಕೊಂಡಿರಿ' ನಾನು ಹೇಳಿದೆ.

'ಹೌದು! ಅದೇನು ಅಂತ ವಿಳಂಬ ಮಾಡುವಂಥ ವಿಷಯವಲ್ಲ'.

ಎಷ್ಟು ದಿನಗಳಿಂದ ಹಾಗೇ ಕೂತಿತ್ತು?

'ಮೊನ್ನೆ, ಕೇವಲ ಹಿಂದಿನ ದಿನ ನಾನು ಅರ್ಜಿಸಲ್ಲಿಸಿದ್ದೆ. ಈ ಇಡಿಯಟ್‌ಗಳು ಕೆಲಸವನ್ನು ಬೇಗ ಮುಗಿಸದಿದ್ದರೆ, ಅವರಿಗೆ ಹೊಟ್ಟೆಗೆ ಏನೂ ಇಲ್ಲದೆ ಇರಬೇಕಾಗುತ್ತೆ' ಎಂದು ಹೇಳಿದ.

ನನ್ನ ಪ್ರಯತ್ನಗಳು ವಿಫಲವಾದದ್ದರ ಬಗ್ಗೆ ಸಿಟ್ಟುಗೊಂಡು ನಾನು ನಗುತ್ತಾ ಹೇಳಿದೆ, 'ನೀವು ನಿಮ್ಮ ಕೆಲಸವನ್ನು ಬಹಳ ಬೇಗ ಮುಗಿಸಿದಿರಿ. ನಿಮ್ಮಂಥ ವ್ಯಾಪಾರಿಗಳು ಹೆಚ್ಚಿನ ಸಮಯವನ್ನು ಹಾಳು ಮಾಡುವುದು ಸರಿಯಲ್ಲ. ಸಾಧ್ಯವಾದಷ್ಟು ಬೇಗ ಕೆಲಸವನ್ನು ಮುಗಿಸಿ ಕೊಳ್ಳುವುದು ಒಳ್ಳೆಯದು' ಎಂದು.

'ನಿಮ್ಮ ಕೆಲಸ ಆಯಿತೆ?' ನನ್ನ ಕೆಲಸದ ಬಗ್ಗೆ ವಿಚಾರಿಸಿದ.

'ನಾಳೆ ಮಾಡಿಕೊಡುತ್ತಾರಂತೆ. ಇಂದು ಅವರಿಗೆ ಸಮಯವಿಲ್ಲವಂತೆ'

'ಏನು? ಅವರು ನಿಮ್ಮ ಕೆಲಸವನ್ನು ಮಾಡಿಕೊಡಲಿಲ್ಲವೆ? ನೀವು ನನಗೆ ಹೇಳಿದ್ದರೆ, ನಾನು ಅವರಿಗೆ ಇವರು ನನ್ನ ಪರಿಚಯದವರು ಎಂದು ಹೇಳಿ ನಿಮ್ಮ ಕೆಲಸವನ್ನು ಮಾಡಿಕೊಡುವಂತೆ ಹೇಳುತ್ತಿದ್ದೆನಲ್ಲಾ. ಆದರೆ ನೀವು ನನಗೆ ಹೇಳಲೇ ಇಲ್ಲಾ'!

ಒಬ್ಬ ವಿದೇಶಿ ಪ್ರಜೆ, ತನ್ನದಲ್ಲದ ದೇಶದ ಕಛೇರಿಯಲ್ಲಿ ಆ ದೇಶೀಯ ವ್ಯಕ್ತಿಗೆ ಶಿಫಾರಸು ಮಾಡುವ ವಿಚಾರವನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಆತ ಶಿಫಾರಸು ಮಾಡುತ್ತೇನೆಂದುದು ನನ್ನ ಒಳ್ಳೆಯದಕ್ಕಾಗಿ ಎಂದರೂ ಆತನ ಮಾತುಗಳನ್ನು ಸಹಿಸಿಕೊಳ್ಳಲಾಗಲಿಲ್ಲ. ನನ್ನ ಹಿತಕ್ಕೆ ಧಕ್ಕೆಯಾದರೂ ಆಗಲಿ, ಆದರೆ ಇಂಥ ಪರಿಸ್ಥಿತಿ ನಮ್ಮ ದೇಶದಲ್ಲಿ ಇರಬಾರದು ಎಂದು ನನಗೆ ನಾನೇ ಅಂದುಕೊಂಡೆ.



ನಾನು ಆತನ ಮಾತಿಗೆ ಪ್ರತಿಕ್ರಿಯಿಸಲಿಲ್ಲ. ಮೌನವಾಗಿದ್ದೆ.

'ನೀವು ಈಗ ಎಲ್ಲಿ ಹೋಗುವರಿದ್ದೀರಿ'?

'ನಾನು ಬಹುಶಃ ನನ್ನ ಮನೆಗೆ ಹೋಗುತ್ತೇನೆ'.

'ಈಗಲೇ ಮನೆಗೆ ಹೋಗಿ ಏನು ಮಾಡುತ್ತೀರಿ? ನೀವು ನನ್ನೊಂದಿಗೆ ಯಾಕೆ ಬರಬಾರದು'?

ಎಲ್ಲಿಗೆ?

ನನ್ನ ಕಛೇರಿಗೆ.

ನಾನು ಆತನ ಆಹ್ವಾನವನ್ನು ಒಪ್ಪಿ ಆತನ ಕಾರಿನ ಮುಂದಿನ ಸೀಟಿನಲ್ಲಿ ಕುಳಿತೆ. ಆತನು ಕಾರನ್ನು ಚಾಲನೆ ಮಾಡತೊಡಗಿದ. ಆತನ ಕಛೇರಿಯ ಕಡೆ ಕಾರನ್ನು ಓಡಿಸುತ್ತಾ ಕೇಳಿದ 'ಏನು ನೀವು ವಿದೇಶಿ ವ್ಯಾಪಾರವನ್ನು ಪ್ರಾರಂಭಿಸುವರಿದ್ದೀರಾ'? ಎಂದು.

'ಇನ್ನೂ ಇಲ್ಲ' ಮುಂದೆ ಮಾಡುವವನಿದ್ದೇನೆ. ಆದರೆ ಅದು ನಮ್ಮಂಥವರಿಗೆ ಸಾಧ್ಯವಾಗಲಾರದು ಅನ್ನಿಸಿದೆ'.

ಬಹುಶಃ ಆತ ವಿದೇಶಿ ವ್ಯಾಪಾರ ಕುರಿತು ಸಮಾಲೋಚಿಸಲು ನನ್ನನ್ನು ಆತನ ಕಛೇರಿಗೆ ಕರೆದುಕೊಂಡು ಹೋಗುತ್ತಿರಬೇಕು. 'ನೀವು ವಿದೇಶಿ ವ್ಯಾಪಾರವನ್ನು ಆರಂಭಿಸಿದ್ದೀರಾ'– ನಾನು ಕೇಳಿದೆ.

'ಬಹಳ ದಿನಗಳಿಂದಲೂ ನಾನು ವಿದೇಶಿ ವ್ಯಾಪಾರವನ್ನು ಮಾಡುತ್ತಿದ್ದೇನೆ. ಅದು ನಿಮಗೆ ಚೆನ್ನಾಗಿ ಗೊತ್ತು. ಇದುವರೆಗೆ ನಾನು ಬೇರೆಯವರ ವಿದೇಶಿ ಪರವಾನಗಿಯ ಮೇಲೆ ವಿದೇಶಿ ವ್ಯಾಪಾರವನ್ನು ಮಾಡುತ್ತಿದ್ದೆ. ಆದರೆ ಈಗ ನನ್ನದೆ ಆದ ನೋಂದಾಯಿತ ಫರ್ಮ್ ಇದೆ. ಇಷ್ಟೆ ವ್ಯತ್ಯಾಸ.'

'ನೀವು ಭಾರತೀಯ ಪ್ರಜೆ. ನೀವು ಹೇಗೆ ನಿಮ್ಮ ಫರ್ಮ ಅನ್ನು ಇಲ್ಲಿ ರಿಜಿಸ್ಟರ್ ಮಾಡಿದಿರಿ? ಅಥವಾ ನಿಮ್ಮ ಸ್ನೇಹಿತ ಧಾರಿವಾಲ ಅವರಂತೆ ನೇಪಾಳಿ ಪೌರತ್ವವನ್ನು ಪಡೆದಿರಾ?

'ನಾನು ಅದನ್ನೆಲ್ಲ ಆಮೇಲೆ ಹೇಳುತ್ತೇನೆ'– ನಮ್ಮ ಸಂಭಾಷಣೆಯನ್ನು ಕೊನೆಗೊಳಿಸುತ್ತಾ ಆತ ಹೇಳಿದ. ಆತ ಕಟ್ಮಂಡುವಿನಲ್ಲಿ ಕಳೆದ ಹಿಂದಿನ ಕಷ್ಟದ ದಿನಗಳು ನನಗೆ ಚೆನ್ನಾಗಿ ಗೊತ್ತಿತ್ತು. ಆತ ಕೇವಲ ಎರಡು ನೂರು ರೂಪಾಯಿಗಳ ಸಂಬಳಕ್ಕಾಗಿ ದುಡಿದ ದಿನಗಳು ನನಗೆ ನೆನಪಿದೆ. ಐವತ್ತು ರೂಪಾಯಿಗಳ ಸಾಧಾರಣ ಮನೆಯಲ್ಲಿ ಆತ ವಾಸಮಾಡಿದ್ದನು. ಇಂದು ಮಹೇಶ್‌ಕುಮಾರ್ ಸಾವಿರದ ಎಂಟುನೂರು ರೂಪಾಯಿಗಳ ಬಂಗಲೆಯಲ್ಲಿ ವಾಸಮಾಡುತ್ತಿದ್ದಾನೆ, ಮೂರು ಕಾರುಗಳಿವೆ. ಆತ ನನಗೆ ಎಲ್ಲವನ್ನು ಮುಕ್ತವಾಗಿ ಹೇಳುತ್ತಿದ್ದ. ಆದರೆ ಇಂದು ಆ ಸಲುಗೆಯ ಮಾತುಗಳ ಬದಲು ಬಿಗುವಿನಿಂದ ಇದ್ದಾನೆ. ಈ ರೀತಿ

ಏಕೆ? ಎಂದು ನನಗೆ ಆಶ್ಚರ್ಯವಾಯಿತು.

ಆತನ ಕಛೇರಿ ಸಮೀಪಿಸುತ್ತಿದ್ದಂತೆ, ಕಾರನ್ನು ನಿಲ್ಲಿಸುತ್ತಾ 'ನಾನು ಕೆಲವು ವಿಚಾರಗಳ ಬಗ್ಗೆ ನಿಮ್ಮ ಸಲಹೆ ಕೇಳಬೇಕಾಗಿದೆ, ಮಹಡಿಯ ಮೇಲೆ ಹೋಗೋಣ ಬನ್ನಿ' ಎಂದು ಹೇಳಿದ.

ಆತನ ಕಛೇರಿಗೆ ಹೋದೆವು. ನಾನು ಆತನ ಕಛೇರಿಗೆ ಬಂದು ಮೂರು ತಿಂಗಳ ಮೇಲಾಗಿತ್ತು. ಆತನ ಕಛೇರಿ ಬಹಳಷ್ಟು ಬದಲಾಗಿ ಆಧುನಿಕಗೊಂಡಿತ್ತು. ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಮಹೇಶಕುಮಾರ್‌ನಿಗೆ ಪ್ರತ್ಯೇಕವಾದ ಕ್ಯಾಬಿನ್ ಇತ್ತು. ಆತನ ಕ್ಯಾಬಿನ್ ಅನ್ನು ಪ್ರವೇಶಿಸುತ್ತಿದ್ದಂತೆಯೇ 'ನೀವು ಏನು ಕುಡಿತೀರಿ, ಕಾಫಿ, ಟೀ ಅಥವಾ ತಂಪು ಪಾನೀಯ'?

ಕಛೇರಿಯ ಜವಾನ ಬಹದ್ದೂರ್‌ನನ್ನು 'ಓ! ಬಹದ್ದೂರ್' ಎಂದು ಕೂಗಿ ಕರೆದ!

ಒಬ್ಬ ವ್ಯಕ್ತಿ 'ಬಂದಿದ್ದೀನಿ ಸಾರ್' ಎಂದು ಹೇಳುತ್ತಾ ರೂಮಿನೊಳಗೆ ಪ್ರವೇಶಿಸಿದ.

ಈ ರೀತಿಯ ಹೆಸರಿನವರನ್ನು ನಾನು ಭಾರತದ ನಗರಗಳಾದ ಕಲ್ಕತ್ತ, ಬಾಂಬೆ, ದೆಹಲಿಯಲ್ಲಿ ಮಾತ್ರ ಕೇಳಿದ್ದೆ. ಆದರೆ ಇಂದು ಈ ರೀತಿಯ ಹೆಸರಿನ ವ್ಯಕ್ತಿಗಳನ್ನು ಕಟ್ಮಂಡುವಿನಲ್ಲಿಯೂ ಕಾಣಬಹುದು. ಇಂಥ ಹೆಸರಿನ ವ್ಯಕ್ತಿಗಳನ್ನು ಇಲ್ಲಿ ನೋಡಿದ್ದು ನನಗೆ ಮೊದಲನೆಯದೆನಿಸಿತು. ನನಗೆ ಮಹೇಶ್‌ಕುಮಾರ್ ಬಗ್ಗೆ ಒಂದು ರೀತಿಯ ಹಗೆತನ ಆರಂಭವಾಯಿತು. ಈ ವಿಚಾರದಲ್ಲಿ ಸುಮ್ಮನಿರಲಾಗಲಿಲ್ಲ 'ನಿನ್ನ ಹೆಸರು ಬಹದ್ದೂರ್ ಎಂದು' ಆ ಯುವಕನನ್ನು ಕೇಳಿದೆ?

'ಹೌದು ಸಾರ್'! ಆತ ಉತ್ತರಿಸಿದ.

ನನಗೆ ನಂಬಿಕೆ ಬರಲಿಲ್ಲ 'ಅದ್ಹೇಗೆ ಬಹದ್ದೂರ್, ಇದು ಯಾರದೋ ಹೆಸರಾಗಿರ ಬಹುದು. ಅದು ಹೇಗೆ'?

'ಇಲ್ಲಿ ನನ್ನ ಬಾಸ್ ಬಹದ್ದೂರ್ ಎಂದು ಕರೆಯುತ್ತಾರೆ'.

'ಆದ್ದರಿಂದ ನನ್ನ ಹೆಸರು ಬಹದ್ದೂರ್ ಅಷ್ಟೆ'

'ಇಲ್ಲಿ ಎಷ್ಟು ದಿವಸಗಳಿಂದ ಕೆಲಸ ಮಾಡುತ್ತಿದ್ದೀರಿ'.

'ಸುಮಾರು ಮೂರು ತಿಂಗಳಿಂದ'

'ಈ ಮೊದಲು ನಿನ್ನ ಹೆಸರು ಏನೆಂದು ಇತ್ತು'?

'ನನ್ನ ನಿಜವಾದ ಹೆಸರು ರಾಮಪ್ರಸಾದ್'

'ಮತ್ತೆ ಅವರೇಕೆ ನಿನ್ನನ್ನು 'ಬಹದ್ದೂರ್' ಎಂದು ಕರೆಯುತ್ತಾರೆ. ರಾಮಪ್ರಸಾದ್ ಎಂದೇ ಕರೆಯುವಂತೆ ಹೇಳು'.



ಮಹೇಶಕುಮಾರ್ ನನ್ನ ಮಾತಿನ ಇಂಗಿತವನ್ನು ಅರ್ಥಮಾಡಿಕೊಂಡರು. ರಾಮಪ್ರಸಾದ್ ಎನ್ನುವುದು ಉದ್ದನೆಯ ಹೆಸರು, ಅದಕ್ಕಾಗಿ ಈ ರೀತಿ ಹೇಳಿದೆ ಎನ್ನುವಂತೆ ಮಹೇಶಕುಮಾರ್ ಸ್ವಲ್ಪ ಚಡಪಡಿಸುತ್ತಾ ಹೇಳಿದರು. ನಾನು 'ಕಂಚ' ಎಂದು ಆತನನ್ನು ಕರೆಯಬಹುದು. ಆದರೆ ಈಗಾಗಲೇ ನಮ್ಮ ಕಛೇರಿಯಲ್ಲಿ ಒಬ್ಬ 'ಕಂಚ' ಇದ್ದಾನೆ. 'ಬಹದ್ದೂರ್' ಎನ್ನುವ ಹೆಸರು ಸೂಕ್ತ ಹಾಗೂ ಸರಳವಾಗಿದೆ. ಆದ್ದರಿಂದ 'ಬಹದ್ದೂರ್' ಎಂದು ನಾವು ಕರೆಯುತ್ತೇವೆ'.

ಆತ ಏನಾದರೂ ಪರಾಕ್ರಮವನ್ನು ತೋರಿಸಿದ್ದರೆ, 'ಬಹದ್ದೂರ್' ಎಂದು ಕರೆಯುವುದು ಸರಿ ಅನ್ನಿಸುತ್ತದೆ. ಬಹದ್ದೂರ್ ಎಂದರೆ 'ಪರಾಕ್ರಮಿ,' 'ಸಾಹಸಿ' ಎಂದು. ಆದರೆ ಈತ ಯಾವುದೇ 'ಪರಾಕ್ರಮ' ಅಥವಾ 'ಸಾಹಸದ' ಕಾರ್ಯವೆಸಗಿದ್ದಾನೆ ಎಂದು ಅನ್ನಿಸುವುದಿಲ್ಲ. ಆದ್ದರಿಂದ ಯಾವುದೇ ಪರಾಕ್ರಮವನ್ನು ಎಸಗದವನಿಗೆ 'ಪರಾಕ್ರಮಿ' ಎನ್ನುವ ಹೆಸರನ್ನು ಯಾಕೆ ನೀಡಬೇಕು?

'ಸರಿ. ನೇಪಾಳಿಗಳು ಪರಾಕ್ರಮವನ್ನು ಎಸಗಿದ ಇತಿಹಾಸವಿದೆಯಲ್ಲ ಎಂದು ಮಹೇಶಕುಮಾರ್‌ಗೆ ತನ್ನ ತಪ್ಪಿನ ಅರಿವಾಗಿ ಸಂಕೋಚದಿಂದ ಹೇಳಿದ. ಆದ್ದರಿಂದ ಆತನನ್ನು'ಬಹದ್ದೂರ್' ಅಂದರೆ ಪರಾಕ್ರಮಿಗಳೆಂದು ಕರೆಯುವುದು ಉತ್ತಮ ಹಾಗೂ ಮೆಚ್ಚಬೇಕಾದ ವಿಚಾರ' ಏನಂತಿರಿ? ಅದೂ ಅಲ್ಲದೆ ಅವರ ಸೇವಕರನ್ನು 'ಕಂಚಾ' ಎಂದು 'ಬಹದ್ದೂರ್' ಎಂದೂ ಕರೆಯುತ್ತಾರೆ'.

'ಹೌದು! 'ಬಹದ್ದೂರ್' ಎನ್ನುವ ಪದವೇ ಹಿತಕರವಾಗಿದೆ. ಆದರೆ ನಾವು 'ಬಹದ್ದೂರ್' ಎಂದು ಕರೆಯುವುದನ್ನು ಇಷ್ಟಪಡುವುದಿಲ್ಲ ಗೊತ್ತಾ!

'ಹೋಗಲಿ ಬಿಡಿ! ಈ ವಿಚಾರದ ಚರ್ಚೆ ಬೇಡ; ನೀವು ಇತ್ತೀಚೆಗೆ ಏನು ಕೆಲಸ ಮಾಡುತ್ತಿದ್ದೀರಿ?' ಎಂದು ಆತ ಕೇಳಿದ.

'ಓ! ನಾನು ಹೇಳಿಕೊಳ್ಳುವಂಥ ಯಾವುದೇ ಕೆಲಸದಲ್ಲಿ ತೊಡಗಿಲ್ಲ, ಸುಮ್ಮನೆ ಮನೆಯಲ್ಲಿ ಕಾಲ ಕಳೆಯುತ್ತಿದ್ದೇನೆ'.

ಆತ ತನ್ನ ಕಛೇರಿ ಕಡತಗಳನ್ನು ನೋಡಲು ಆರಂಭಿಸಿದ. ಕೆಲವು ಕ್ಷಣ ಮೌನ. ಆನಂತರ ನಾನು ಕೇಳಿದೆ, 'ಮಹೇಶಕುಮಾರ್ ನೀವು ಈಗ ನಿಮ್ಮ ಫರ್ಮ್ ಮೂಲಕ ವಿದೇಶಿ ವ್ಯವಹಾರವನ್ನು ಮಾಡುತ್ತಿದ್ದೀರಾ'?

'ಹೌದು! ಏನು ಮಾಡುವುದು? ನೇಪಾಲ ಸರ್ಕಾರದ ಪಾಲಿಸಿಗಳು ಸರಿಯಿಲ್ಲ. ಒಂದು ಸಲ ಹಾಗೆ ಹೇಳ್ತಾರೆ ಇನ್ನೊಂದು ಸಲ ಹೀಗೆ. ಅವರು ಅವರ ಪಾಲಿಸಿಂಯುಲ್ಲಿ ಏನು ಬದಲಾವಣೆ ಮಾಡಿದರೂ, ಬದಲಾದ ಪಾಲಿಸಿಗಳಿಗನುಗುಣವಾಗಿ ವ್ಯಾಪಾರ ವಿಧಾನವನ್ನು ನಾವೂ ಬದಲಾವಣೆ ಮಾಡಬೇಕು. ನಾವು ಈ ಹಿಂದೆ ನೂರಾ ಅರವತ್ತು ಪರ್ಸೆಂಟ್‌ಗೆ ಅಮದುಲೈಸೆನ್ಸ್‌ನ ವಿದೇಶಿ ಪರವಾನಗಿಯನ್ನು ಪಡೆದು ವಿದೇಶೀವಸ್ತುಗಳ ವ್ಯಾಪಾರವನ್ನು ಮಾಡುತ್ತಿದ್ದೆವು.

ಈಗ ಸರ್ಕಾರ ತನ್ನ ಪಾಲಿಸಿಯನ್ನು ಬದಲಾಯಿಸಿದೆ. ಈಗ ಅವರು ಎಕ್ಸ್‌ಪೋರ್ಟ್ ಬೋನಸ್ ನೀಡುತ್ತಿಲ್ಲ. ಈಗ ಹೇಳಿ ನಾವು ಹೇಗೆ ಫಾರಿನ್ ಟ್ರೇಡ್ ಬಿಸಿನೆಸ್ ಮಾಡುವುದು? ಸರ್ಕಾರ ತನ್ನ ಪಾಲಿಸಿಯಲ್ಲಿ ಬದಲಾವಣೆ ಮಾಡಿದಂತೆ ನಾವು ನಮ್ಮ ವ್ಯಾಪಾರದ ರೀತಿ ನೀತಿಗಳಲ್ಲೂ ಬದಲಾವಣೆ ತರುತ್ತೇವೆ. ಈ ಕಾರಣದಿಂದಾಗಿ, ನಾನು ಒಂದು ಫರ್ಮ್ ಅನ್ನು ರಿಜಿಸ್ಟರ್ ಮಾಡಿಸಿದೆನು.

'ಸರ್ಕಾರ ತನ್ನ ಪಾಲಿಸಿಗಳನ್ನು ಸದಾ ಬದಲಾಯಿಸುತ್ತಾ ಇರುತ್ತದೆ ಎಂದು ನೀವು ಅಂದುಕೊಂಡಿದ್ದೀರಾ? ನಾನು ಕೇಳಿದೆ'.

'ಹೌದು, ಸರ್ಕಾರದ ಪಾಲಿಸಿ ಯಾವಾಗಲೂ ಒಂದೇ ರೀತಿಯಿರುವುದಿಲ್ಲ' ಆತ ಉತ್ತರಿಸಿದ. ಅದು ಸದಾ ಬದಲಾಗುತ್ತಿರುತ್ತದೆ. ಕೆಲವು ಸಾರಿ ರಫ್ತು ಪರವಾನಗಿಯನ್ನು ಬೋನಸ್ ನೀಡುವಂತೆ ವಿತರಿಸಿದರೆ, ಇನ್ನು ಕೆಲವು ಸಾರಿ ಎರಡು ವಿನಿಮಯ ದರವನ್ನು ಹನ್ನೆರಡು ಮತ್ತು ಹದಿನಾರು ಡಾಲರ್‌ಗಳಿಗೆ ನಿಗದಿಪಡಿಸಿ ಆಮದು ಪರವಾನಗಿಯನ್ನು ಉಚಿತವಾಗಿಸುತ್ತದೆ. ಕೆಲವು ಸಾರಿ ವಿನಿಮಯ ದರವನ್ನು ಹದಿನಾರದಿಂದ ಹದಿನಾಲ್ಕಕ್ಕೆ ಇಳಿಸುತ್ತಾರೆ. ಅವರು ಏನಾದರೂ ಮಾಡಲಿ; ಆದರೆ ನಮಗೆ ಮಾತ್ರ ನಷ್ಟವಾಗುವಂತೆ ಮಾಡಲಾಗುವುದಿಲ್ಲ. ಅವರು ನಮ್ಮ ಸೂಚನೆ ಸಲಹೆಯಿಲ್ಲದೆ ಯಾವುದೇ ಪಾಲಿಸಿಯನ್ನು ರೂಪಿಸುವುದಿಲ್ಲ'.

'ಯಾರು ಈ ರೀತಿಯ ಸಲಹೆ ಸೂಚನೆಗಳನ್ನು ನೀಡುತ್ತಾರೆ'? ನಾನು ಕುತೂಹಲದಿಂದ ಕೇಳಿದೆ.

'ನಾವೇ, ನಮ್ಮ ತಂಡವೇ'.

'ಅದೆಂಥಾ ತಂಡ'?

ಆತ ವ್ಯಂಗ್ಯವಾಗಿ ನಗುತ್ತಾ ಹೇಳಿದ. 'ಅದು ಕಣ್ಣಿಗೆ ಕಾಣುವಂಥಾ ತಂಡವಲ್ಲ. ನಾವು ಇಲ್ಲಿ ಬದುಕುತ್ತಿರುವುದು ನೀವು ತಿಳಿದುಕೊಂಡಷ್ಟು ಸರಳವಾಗಿ ಇಲ್ಲ! ಅದೂ ಅಲ್ಲದೆ ಈ ನನ್ನ ವ್ಯಾಪಾರವನ್ನು ನಾನೊಬ್ಬನೇ ಮಾಡುತ್ತಿಲ್ಲ. ಬಹಳಮುಖ್ಯವಾದ ವ್ಯಾಪಾರಿಗಳಾದ ನಾವು ಸೇರಿಕೊಂಡು ಒಂದು ಗುಂಪಾಗಿ ಸಂಘಟನೆಯನ್ನು ಮಾಡಿಕೊಂಡಿದ್ದೇವೆ ಗೊತ್ತಾ! ಅಗತ್ಯಬಿದ್ದಾಗ ಬಹಳಪ್ರಮುಖವಾದ ಅಧಿಕಾರಿಗಳನ್ನು ಸೇರಿಸಿಕೊಳ್ಳುತ್ತೇವೆ. ಆಗಾಗ ದೂರವಾಣಿಯಲ್ಲಿ ಮಾತನಾಡುತ್ತೇವೆ. ಆದರೆ ಈ ಗುಂಪನ್ನು ನಿನಗೆ ತೋರಿಸಲಾಗುವುದಿಲ್ಲ'.

ನೇಪಾಳದ ಎಲ್ಲಾ ವ್ಯಾಪಾರ ಈ ಗುಂಪಿನ ಹಿಡಿತದಲ್ಲಿದೆ ಎನ್ನುವುದು ಆತನ ಮಾತುಗಳಿಂದ ಅರ್ಥವಾಯಿತು. ಅವರು ಏನು ಬೇಕಾದರೂ ಮಾಡಬಹುದು. ಆತ ಮುಕ್ತವಾಗಿ ನಿರ್ಭೀತಿಯಿಂದ ಹೇಳುತ್ತಿದ್ದುದರಿಂದ ಅನುಮಾನ ಪಡಲು ಕಾರಣವೇ ಇರಲಿಲ್ಲ. ಆತನನ್ನು ಸರ್ಕಾರಿ ಕಛೇರಿಗಳಲ್ಲಿ ಅತಿಯಾಗಿ ಗೌರವಿಸುತ್ತಿದ್ದ ರೀತಿಯನ್ನು ನಾನೇ ನನ್ನ ಕಣ್ಣಾರೆ ನೋಡಿದ್ದೇನೆ. ಅದೂ ಅಲ್ಲದೆ ಆತ ನನ್ನನ್ನು



ತನ್ನ ಪರಿಚಿತ ವ್ಯಕ್ತಿಯೆಂದು ಸರ್ಕಾರಿವಲಯದಲ್ಲಿ ಪರಿಚಯಿಸಿ ನನ್ನ ಕೆಲಸವನ್ನು ಮಾಡಿಸಿಕೊಡುವುದಾಗಿ ಹೇಳಿದ್ದ. ಆದ್ದರಿಂದ ಆತನ ಮಾತುಗಳನ್ನು ನಂಬದೇ ಇರಲು ಅಥವಾ ತಿರಸ್ಕರಿಸಲು ಯಾವುದೇ ಕಾರಣ ಇರಲಿಲ್ಲ. ಆತನ ಸಹಜ ನಿರ್ಭೀತ ಮಾತುಗಳನ್ನು ಮಂಕುಬಡಿದವನಂತೆ ನಾನು ಕೇಳುತ್ತಾ ಹೋದೆ.

'ಅವರ ಕೈಯಲ್ಲಿ ಹೇಗೆ ಕೆಲಸ ಮಾಡಿಸ್ತೀನಿ ಎನ್ನುವುದನ್ನು ನೀನೆ ನೋಡಿದ್ದೀಯ. ನಾನು ಅಲ್ಲಿ ಹಾಜರಾದ ತಕ್ಷಣ, ಕೂಡಲೇ ಕೆಲಸಗಳು ಹೇಗೆ ತಕ್ಷಣ ನಡೆಯುತ್ತವೆ. ನಾವು ಕಾಲಹರಣ ಮಾಡಲು ಬರುವುದಿಲ್ಲ ಗೊತ್ತಾ? ನಾವು ಅಗತ್ಯ ಬಿದ್ದಾಗ ಇಲಾಖೆ ಮುಖ್ಯಸ್ಥರನ್ನು ದೂರವಾಣಿಯ ಮೂಲಕ ಸಂಪರ್ಕಿಸುತ್ತೇವೆ. ನಾವು ಕಾಲಹರಣ ಮಾಡುವುದನ್ನು ದ್ವೇಷಿಸುತ್ತೇವೆ. ನಾವು ಅವರಿಗೆ ಎಷ್ಟು ಬೇಕೋ ಅಷ್ಟನ್ನೂ ಕೊಡಲು ಸಿದ್ಧರಿದ್ದೇವೆ. ಆದರೆ ಅವರು ನಮ್ಮ ಕೆಲಸವನ್ನು ಬೇಗ ಮುಗಿಸಿಕೊಡಬೇಕು'.

'ನಿಮ್ಮ ಕೆಲಸ ಕಛೇರಿಯಲ್ಲಿ ಬಹಳ ದಿವಸಗಳಿಂದ ತೀರ್ಮಾನವಾಗದೆ ಉಳಿದಿರಬೇಕು. ಹೌದು ತಾನೆ? ಏನು ಅದು? ನನಗೆ ಹೇಳಬಹುದಾ'? ಆತ ಉತ್ಸಾಹದಿಂದ ಕೇಳಿದ.

ಆತ ಅಷ್ಟೊಂದು ಮುಕ್ತವಾಗಿರುವುದರಿಂದ ಅವರಿಂದ ಏನನ್ನೂ ಬಚ್ಚಿಡುವುದು ಅಗತ್ಯವಿಲ್ಲ ಎಂದು ಭಾವಿಸಿದೆ. 'ಅಂಥ ಪ್ರಮುಖವಾದ ವಿಚಾರವೇನಲ್ಲ' ನಾನು ಹೇಳಿದೆ. 'ನಾನು ಮೂರುನೂರಾ ಇಪ್ಪತ್ತೈದು ರೂಪಾಯಿಗಳನ್ನು ಒಂದು ಉದ್ದೇಶಕ್ಕಾಗಿ ಪಾವತಿ ಮಾಡಿದ್ದೆ. ಅದು ಯಾವುದೋ ನಿಯಮದ ಪ್ರಕಾರ ಕಾರ್ಯಗತವಾಗುವುದಿಲ್ಲವೆಂದು ತಿಳಿದು ಬಂತು. ಮತ್ತು ಆ ಕೆಲಸ ಕಾರ್ಯಗತವಾಗದ ಕಾರಣ ಆ ಹಣವನ್ನು ನಿಯಮಾನುಸಾರ ಹಿಂತಿರುಗಿಸುತ್ತಾರೆ ಎನ್ನುವುದೂ ತಿಳಿಯಿತು. ಅದಕ್ಕಾಗಿ, ನಾನು ಆ ಹಣವನ್ನು ವಾಪಸ್ಸು ಪಡೆಯಲು ಹೋಗಿದ್ದೇ ಅಷ್ಟೆ'.

'ಎಷ್ಟು ಸಾರಿ ನೀವು ಆ ಕಛೇರಿಗೆ ಹೋಗಿದ್ದೀರಿ'?

'ಅನೇಕ ಬಾರಿ'

'ಅಂದರೆ ನಾಲ್ಕು–ಐದು ಬಾರಿ'?

'ಇಲ್ಲ. ಅದಕ್ಕಿಂತ ಹೆಚ್ಚು ಸಾರಿ'

'ಅಂದರೆ ನೀವು ಆ ಹಣವನ್ನು ಹಿಂದಕ್ಕೆ ಪಡೆಯುವುದು ಅಷ್ಟು ಸುಲಭವಲ್ಲ. ನೀವು ನಿಮಗೆ ಬರಬೇಕಾದ ಹಣದಲ್ಲಿ ಹತ್ತು ಅಥವಾ ಹದಿನೈದು ಪರ್ಸೆಂಟ್ ಅವರಿಗೆ ಕೊಡಲು ಸಿದ್ಧವಾದರೆ ನೀವು ನಿಮ್ಮ ಹಣವನ್ನು ಬಹಳ ಬೇಗ ಹಿಂದಕ್ಕೆ ಪಡೆಯುತ್ತೀರಿ'.

'ನಾನು ನನ್ನ ಹಣವನ್ನು ವಾಪಸ್ ಪಡೆಯಲು ಅವರಿಗೇಕೆ ಪರ್ಸೆಂಟೇಜ್

ನೀಡಬೇಕು'?

'ಇನ್ನು ಏನು ಮಾಡುತ್ತೀರಿ? ಇಲ್ಲ ಸ್ವಲ್ಪ ಪರ್ಸೆಂಟೇಜ್ ಕೊಡಲು ಸಿದ್ದವಾಗಿ, ಅಥವಾ ಅದನ್ನು ಬಿಟ್ಟುಬಿಡಿ, ಬೇರೆ ದಾರಿಯೇ ಇಲ್ಲ. ಇದೇ ನಿಮ್ಮ ಕಛೇರಿಗಳ ನಿಯಮ'.

'ಅದನ್ನು ನಾನು ಕಛೇರಿಯಲ್ಲಿ ಹೇಗೆ ತಿಳಿಸಲಿ'?

'ನೇರವಾಗಿ ಅಥವಾ ಪರೋಕ್ಷವಾಗಿ ಹೇಳಿಬಿಡಿ. ನೀವು ಎಲ್ಲಿಯವರೆಗೆ ಅವರಿಗೆ ಇದನ್ನು ತಿಳಿಸುವುದಿಲ್ಲವೊ, ಅಲ್ಲಿಯವರೆಗೆ ಅವರು ಇದನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅಲ್ಲಿಯವರೆಗೆ ನಿಮ್ಮ ಕೆಲಸ ಆಗುವುದಿಲ್ಲ. ಅವರು ಕಛೇರಿಯಲ್ಲಿ ಒಬ್ಬರೆ ಇರುವುದನ್ನು ನೋಡಿ ಹೇಳಿ ಅಥವಾ ಹೊರಗಡೆ ಸಿಕ್ಕಾಗ ತಿಳಿಸಿ. ಆದರೆ ಯಾವ ರೀತಿಯಾದರೂ ಹೇಳಿ. ನೀವು ಈ ರೀತಿ ಮಾಡಿದರೆ ಮ್ಯಾಜಿಕ್‌ನ ರೀತಿಯಲ್ಲಿ ಕೆಲಸವಾಗುತ್ತದೆ. ಕೆಲಸವನ್ನು ಬಹಳ ಬೇಗ ಮಾಡಿ ಮುಗಿಸುತ್ತಾರೆ. ನಾನು ನನ್ನ ಕೆಲಸವಿದ್ದಾಗ ನಾನು ಅವರನ್ನು ನನ್ನ ಕಛೇರಿಗೆ ಕರೆದು ಕೆಲಸ ಮಾಡಿಸಿಕೊಳ್ಳುತ್ತೇನೆ'.

ಆತ ಮಾಡಿದ್ದನ್ನು ನಾನು ಮಾಡಲಾಗುವುದಿಲ್ಲ. ಅವನಿಗೆ ಗೊತ್ತಿರುವುದು ನನಗೆ ಗೊತ್ತಿಲ್ಲ. ಹೀಗಾಗಿ ಆತನಿಗೂ ನನಗೂ ತುಂಬಾ ವ್ಯತ್ಯಾಸವಿದೆ. ಆತ ಐದು ವರ್ಷಗಳಲ್ಲಿ ಸಾಧಿಸಿದ ಸಾಧನೆಯನ್ನು ನಾನು ನನ್ನ ಜೀವಮಾನದಲ್ಲಿ ಮಾಡಲು ಸಾಧ್ಯವಿಲ್ಲ. ನಿಜ, ಆತ ಏನೇ ಹೇಳಿದರೂ, ಅದು ನನ್ನ ಒಳಿತಿಗಾಗಿಯೆ. ಆದರೆ ಆತ ಸೂಚಿಸಿರುವಂತೆ ಮಾಡಲು ನನಗೆ ಧೈರ್ಯವಿದೆಯೆ? ನನ್ನ ಶಕ್ತಿಯನ್ನು ಮೀರಿ ಏನನ್ನೂ ಮಾಡಲು ಆಗುವುದಿಲ್ಲ. 'ನೀವು ನಿಮ್ಮ ಕೆಲಸ ಮಾಡಿಸಿಕೊಳ್ಳಲು ಸರ್ಕಾರಿ ನೌಕರರನ್ನು ನಿಮ್ಮ ಕಛೇರಿಗೆ ಕರೆಯುತ್ತೀರಾ? ಒಂದು ರೀತಿಯ ಅತೃಪ್ತಿಯ ಧ್ವನಿಯಲ್ಲಿ ಆತನನ್ನು ಕೇಳಿದೆ?

ಆತ ನಗುತ್ತಾ ಹೇಳಿದ, 'ನೀವು ನಂಬುವುದಿಲ್ಲ ಅವರು ಬರಲೇಬೇಕು. ಅವರು ಬರದೆ ಬೇರೆ ದಾರಿಯೆ ಇಲ್ಲ. ನಾವು ಅವರನ್ನು ಹಣಕೊಟ್ಟು ಪಳಗಿಸಿದ್ದೇವೆ! ನಿಮಗೆ ಗೊತ್ತಾ, ನಮ್ಮ ವ್ಯವಹಾರಕ್ಕೆ ಸಹಾಯ ಮಾಡಲಿ ಎಂದು ಅವರಿಗೆ ಹಣ ನೀಡುತ್ತೇವೆ. ಅಂದರೆ ನಾವು ಅವರಿಗೆ ಸಂಬಳ ನೀಡುತ್ತಿಲ್ಲ'.

'ನಾವು ಅವರಿಗೆ ಹಣ ನೀಡದಿದ್ದರೆ, ನಮ್ಮ ವ್ಯವಹಾರಗಳೆಲ್ಲ ನಿಂತು ಹೋಗುತ್ತವೆ. ವ್ಯವಹಾರ ನಿಧಾನಗತಿಯಲ್ಲಿ ಸಾಗಿದರೆ ಎಲ್ಲ ಅಸ್ತವ್ಯಸ್ತ ಗೊಳ್ಳುತ್ತದೆ. ವ್ಯಾಪಾರದಲ್ಲಿ ಬಹಳ ಚುರುಕಾಗಿರಬೇಕು ಗೊತ್ತಾ? ಅದೂ ಅಲ್ಲದೆ ನಾವು ಮಾತನಾಡುತ್ತಿರುವುದು ಸರ್ಕಾರಿ ನೌಕರರ ಬಗ್ಗೆ. ಅವರು ಯಾಕೆ ಕಛೇರಿಗೆ ಬರಬಾರದು? ಈಗ ನೀವು ನಮ್ಮ ಕಛೇರಿಗೆ ಬಂದಿರುವಂತೆ ಅವರೂ ಬರುತ್ತಾರೆ ಅಷ್ಟೆ. ಅವರು ನಮ್ಮ ಸ್ನೇಹಿತರಿದ್ದಂತೆ. ನನಗೆ ಪರಿಚಯವಿರುವ ಯಾವುದೇ



ಕಛೇರಿಯಿಂದ ನೌಕರರನ್ನು ನಾನು ಈಗ ಕರೆಯಬೇಕೆಂದು ನೀನು ಇಚ್ಛಿಸುತ್ತೀಯಾ? ನಾನು ಅವರನ್ನು ಕರೆದರೆ, ಎಲ್ಲಾ ಕೆಲಸವನ್ನು ಬದಿಗೊತ್ತಿ ಓಡಿ ಬರುತ್ತಾರೆ. ಈ ರೀತಿ ಅವರು ಲಾಭ ಪಡೆಯುತ್ತಾರೆ. ಅವರು ನಮ್ಮಲ್ಲಿಗೆ ಹೆಚ್ಚು ಭಾರಿ ಬಂದರೆ ಅವರಿಗೆ ಹೆಚ್ಚು ಹಣ ಸಿಗುತ್ತದೆ. ಏನು ತಿಳಿದಿದ್ದೀರಿ?

ದೂರವಾಣಿ ಮೊಳಗಿತು. ಮಾತು ನಿಲ್ಲಿಸಿದ. ಫೋನ್ ಕರೆಯನ್ನು ಆಲಿಸುತ್ತಾ. 'ಹಲ್ಲೋ! ಏನು.....ಒಂದು ಮಿಲಿಯನ್.....ಸರಿ......ಸರಿ......ನೂರು ಸಾವಿರ ನಷ್ಟ! ಯಸ್....ಯಸ್....ಓಕೆ.....ಆಲ್‌ರೈಟ್.....ಆಲ್‌ರೈಟ್.....ಬೈ....

ನಾವು ಮಾತನಾಡುತ್ತಿರುವ ಸಮಯದಲ್ಲಿ ಕಾಫಿ ಬಂತು.

ದೂರವಾಣಿಯನ್ನು ಅದರ ಜಾಗದಲ್ಲಿ ಇಡುತ್ತಾ, ಕಾಫಿಯನ್ನು ಸೇವಿಸುವಂತೆ ಸೂಚಿಸಿದರು. ನಾನು ಕಾಫಿಯನ್ನು ಕುಡಿಯುತ್ತಾ ಹೇಳಿದೆ 'ಮಹೇಶ್‌ಕುಮಾರ್ ಈಗ ತಕ್ಷಣಕ್ಕೆ ಯಾರಾದರೊಬ್ಬ ಸರ್ಕಾರಿ ನೌಕರರನ್ನು ಕರೆಯುತ್ತೀರಾ'? ಎಂದು.

'ಯಾಕೆ? ನನ್ನಲ್ಲಿ ನಂಬಿಕೆಯಿಲ್ಲವೆ'?

'ಅಲ್ಲ, ಅದು ಹಾಗಲ್ಲ. ಕಛೇರಿ ಸಮಯದಲ್ಲಿ ಸರ್ಕಾರಿ ನೌಕರ ಹೇಗೆ ಬರುತ್ತಾನೆ ಎನ್ನುವುದು ನನ್ನ ಗುಮಾನಿ? ಅದು ಸಾಧ್ಯವಿಲ್ಲ? ನನಗೆ ಈ ಬಗ್ಗೆ ಅನುಮಾನವಿದೆ'.

'ಸರಿ! ಹೇಳಿ ಯಾವ ಅಧಿಕಾರಿಯನ್ನು ಕರೆಯಬೇಕು'?

ಯಾವ ಅಧಿಕಾರಿಯನ್ನು ಕರೆಯಲಿ? ಎಂದು ನನ್ನನ್ನೆ ಪ್ರಶ್ನಿಸುತ್ತಾನೆ. ಅಂದರೆ ಆತನಿಗೆ ಎಲ್ಲಾ ಸರ್ಕಾರಿ ಅಧಿಕಾರಿಗಳ ಸಂಪರ್ಕವಿದೆ ಎಂದು ಅರ್ಥವಾಯಿತು. ಅದು ನನಗೆ ಸ್ವಲ್ಪ ತೊಂದರೆಯಾಯಿತು. ನಾನು ಯಾವ ಕಛೇರಿಯ ನೌಕರರನ್ನು ಸೂಚಿಸುವುದು? ಎಂದು ನಿರ್ಣಯಿಸಲಾಗಲಿಲ್ಲ.

ನಾನು ಮತ್ತೆ ಕೇಳಿದೆ– 'ನಿಮ್ಮ ದೃಷ್ಟಿಯಲ್ಲಿ ಯಾವುದೇ ಕಛೇರಿ ಅಂದರೆ ನೇಪಾಳದ ಯಾವುದೇ ಕಛೇರಿಯ ಅಧಿಕಾರಿ ಅಥವಾ ನೌಕರರು ಆಗಬಹುದಾ?'

'ಅಲ್ಲ ಹಾಗಲ್ಲ, ನೀವು ವಿಶ್ವವಿದ್ಯಾನಿಲಯದಿಂದ ಅಧ್ಯಾಪಕರನ್ನು ಕರೆಯಿರಿ ಎಂದರೆ ಅದು ಆಗುವುದಿಲ್ಲ. ಯಾವುದೇ ಕಛೇರಿ ಅಂದರೆ ನಾವು ಯಾವ ಕಛೇರಿಯಲ್ಲಿ ನಮ್ಮ ವ್ಯಾಪಾರ ವ್ಯವಹಾರವನ್ನು ನಡೆಸುತ್ತೇವೆಯೋ ಆ ಕಛೇರಿ ಎಂದು'.

ತತ್‌ಕ್ಷಣಕ್ಕೆ ನಾನು ಇಂದು ಈ ಹಿಂದೆ ಹೋಗಿ ಬಂದ ಕಛೇರಿ ನೆನಪುಮಾಡಿಕೊಂಡು, 'ಸರಿ ಹಾಗಾದರೆ ನಾವು ಇಂದು ಭೇಟಿಯಾದ ಕಛೇರಿಯಿಂದ ಒಬ್ಬ ಅಧಿಕಾರಿಯನ್ನು ದಯವಿಟ್ಟು ಕರೆಯಿರಿ' ಎಂದೆ. 'ಆದರೆ ಆತ ನೌಕರನಾಗಿರಬಾರದು ಅಧಿಕಾರಿಯೆ ಇರಬೇಕು'.

'ಯಾವ ಅಧಿಕಾರಿ'?

ಆತ ಮತ್ತೆ ನನ್ನನ್ನು ಸಮಸ್ಯೆಗೆ ಸಿಕ್ಕಿಸಿದ! ಯಾವ ಅಧಿಕಾರಿಯ ಹೆಸರನ್ನು ಹೇಳಲಿ? ಅಲ್ಲಿ ನನಗೆ ಯಾರೂ ಗೊತ್ತಿಲ್ಲ! ಗುಮಾಸ್ತರಿಗಿಂತ ಮೇಲಿನವರಾದರೆ ಮೂರುನೂರು ಇಪ್ಪತ್ತೈದು ರೂಪಾಯಿಗಳನ್ನು ಹಿಂತಿರುಗಿ ಪಡೆಯಲು ಸುಲಭವಾಗುತ್ತದೆ ಎಂದು ನಾನು ಆಲೋಚಿಸಿದೆ. ದಯಮಾಡಿ ಗುಮಾಸ್ತರಿಗಿಂತ ಮೇಲಿನ ಯಾರಾದರೂ ಆಗಬಹುದು. ನಿಮ್ಮ ಕರೆಯನ್ನು ಕೇಳಿದ ತಕ್ಷಣ ಬರುವಂತೆ ನೌಕರರನ್ನು ಕರೆಯಿರಿ ಎಂದು ನಾನು ಹೇಳಿದೆ.

'ಸರಿ ನಿಮ್ಮ ಅನುಮಾನವನ್ನು ಪರಿಹರಿಸುತ್ತೇನೆ ಎಂದು, ದೂರವಾಣಿಯನ್ನು ಡಯಲ್ ಮಾಡತೊಡಗಿದ. ದೂರವಾಣಿಯಲ್ಲಿ ಮಾತನಾಡುತ್ತಾ 'ಹಲೊ! ಯಾರು ಮಾತನಾಡು ತ್ತಿರುವುದು? ನಾನು ಯಾರಾದರೊಬ್ಬ ಅಧಿಕಾರಿಯ ಜೊತೆ ಮಾತನಾಡಬಹುದೇ?..... ಸರಿ ನಾನು ಮಹೇಶ್‌ಕುಮಾರ್ ನ್ಯೂ ರೋಡ್‌ನಿಂದ ಮಾತನಾಡುತ್ತಿದ್ದೇನೆ.....ನೀವು ಈಗಲೇ ನಮ್ಮ ಕಛೇರಿಗೆ ಬರುತ್ತೀರಾ? ದಯಮಾಡಿ ಬನ್ನಿ.....ನಾನು ನಿಮಗಾಗಿ ಕಾಯುತ್ತಿರುತ್ತೇನೆ, ಧನ್ಯವಾದಗಳು.'

ದೂರವಾಣಿಯನ್ನು ಇಡುತ್ತಾ...ಹೇಳಿದ 'ಕೆಲವು ಅಧಿಕಾರಿಗಳು ಮೀಟಿಂಗ್‌ಗಾಗಿ ಹೊರಗೆ ಹೋಗಿದ್ದಾರೆ. ಒಬ್ಬರು ಸಿಕ್ಕರು, ನಾನು ಆತನಿಗೆ ಬರುವಂತೆ ಹೇಳಿದ್ದೇನೆ. ಆತ ಇನ್ನೇನು ಬಂದುಬಿಡುತ್ತಾನೆ'.

ಅಧಿಕಾರಿಯ ನಿರೀಕ್ಷೆಯಲ್ಲಿ, ಯಾರೊಂದಿಗೋ ವ್ಯಾಪಾರಕ್ಕೆ ಸಂಬಂಧಿಸಿದ ಸಂಭಾಷಣೆಗಿಳಿದ. ಈ ಅವಕಾಶಗಳಿಗಾಗಿ ಆತ ಬಹಳ ದಿನಗಳಿಂದಲೂ ಕಾಯುತ್ತಿದ್ದ. ನನ್ನ ಬಗ್ಗೆ ಅನುಕಂಪವನ್ನು ತೋರಿಸುವಂತೆ, ನಾನು ಕೂಡ ಈ ರೀತಿಯ ವಿದೇಶಿ ವ್ಯಾಪಾರಕ್ಕೆ ಇಳಿಯುವಂತೆ ಸೂಚನೆ ನೀಡಿದ. 'ನೀವು ನಮ್ಮೊಂದಿಗೆ ಕೆಲಸ ಮಾಡುವಂಥ ಅವಕಾಶವನ್ನು ಕಳೆದು ಕೊಳ್ಳಬಾರದು, ನೀವು ಬರುವುದು ನಮಗೆಲ್ಲ ಹೆಚ್ಚು ಲಾಭದಾಯಕ' ಎಂದ.

ಆತ, ನಾನು ಅವರೊಂದಿಗೆ ಸೇರಿ ಸರ್ಕಾರಿ ಪಾಲಿಸಿಗಳಿಗೆ ವಿರುದ್ಧವಾಗಿ, ಮತ್ತು ನನಗೆ ಸಾಧ್ಯವಾಗದ ಕೆಲಸವನ್ನು ಮಾಡುವಂತೆ ಉತ್ತೇಜನ ನೀಡುತ್ತಿದ್ದುದು ನನಗೆ ಅರ್ಥವಾಯಿತು. ನಾನು ಆತನ ಮನಸ್ಸಿನ ಇಂಗಿತವನ್ನು ಅರ್ಥಮಾಡಿಕೊಂಡು; ಆತನಿಗೆ ನೇರವಾಗಿ ಹೇಳಿದೆ – ನಾನು ಇಂಥದ್ದನ್ನು ಮಾಡಲು ಸಾಧ್ಯವಿಲ್ಲ ದಯಮಾಡಿ ಕ್ಷಮಿಸಿ! ಅದೂ ಅಲ್ಲದೆ ನನಗೆ ಈ ರೀತಿಯ ಹಣ ಸಂಪಾದಿಸುವ ಅಗತ್ಯವಿಲ್ಲ! ನನ್ನ ಉತ್ತರ ಆತನ ಪ್ರಯತ್ನಕ್ಕೆ ವಿರಾಮ ನೀಡಲಿಲ್ಲ. ಬದಲಾಗಿ ಆತ ಉತ್ಸಾಹದಿಂದ ಹಿಂದಿಯಲ್ಲಿ ಹಣದ ಪ್ರಾಮುಖ್ಯತೆಯನ್ನು ಕುರಿತು ಭಾಷಣ ಮಾಡಿದ.

ನಾವು ಮಾತಿನಲ್ಲಿ ಮುಳುಗಿದ್ದಾಗ, ನಮ್ಮ ರೂಮಿಗೆ ಒಬ್ಬ ಅಪರಿಚಿತ ವ್ಯಕ್ತಿ ಬಂದನು. ಮಹೇಶಕುಮಾರ್ ಆತನನ್ನು ಬರಮಾಡಿಕೊಳ್ಳುತ್ತ. 'ಬನ್ನಿ ಬನ್ನಿ, ನೀವು ಇಷ್ಟುಬೇಗ ಬಂದಿರಾ! ದಯಮಾಡಿ ಕುಳಿತುಕೊಳ್ಳಿ' ಎಂದ.



ಮಹೇಶ್‌ಕುಮಾರ್ ನನ್ನನ್ನು ಆತನಿಗೆ ಪರಿಚಯಿಸಿದರು. ನನಗೆ ತಿಳಿಯಿತು ಆತ ನಾನು ಯಾವ ಕಛೇರಿಗೆ ಅನೇಕ ಬಾರಿ ಭೇಟಿ ನೀಡಿದ್ದೆನೋ ಮತ್ತು ಯಾವ ಅಧಿಕಾರಿಗೂ ಒಂದು ನಿಮಿಷ ಕೂಡ ನಮ್ಮ ಕಡೆ ಗಮನ ಹರಿಸಲು ಸಾಧ್ಯವಾಗಿರಲಿಲ್ಲವೊ ಅದೇ ಕಛೇರಿಯ ಶಾಖಾಧಿಕಾರಿಯೆಂದು.

ಮಹೇಶ್‌ಕುಮಾರ್ ನನಗೆ ಸಂಬಂಧಿಸಿದ ವಿಚಾರಗಳನ್ನು ಆತನಿಗೆ ವಿವರಿಸಿ ಹೇಳಿದರು. ಹಾಗೂ ಸಾಧ್ಯವಾದರೆ ಕೂಡಲೇ ಕೆಲಸವನ್ನು ಮಾಡಿ ಕೊಡುವಂತೆ ಸೂಚನೆಯನ್ನು ನೀಡಿದರು.

ಅಧಿಕಾರಿ ನನ್ನ ಕಡೆ ತಿರುಗಿ 'ಎಷ್ಟು ದಿನದಿಂದ ಮತ್ತು ಯಾವ ಶಾಖೆಯಲ್ಲಿ ಅದು ಇತ್ಯರ್ಥವಾಗದೆ ಉಳಿದಿದೆ?' ಎಂದು ವಿಚಾರಿಸಿದ.

ನಾನು ಹಣವನ್ನು ಡಿಪಾಜಿಟ್ ಮಾಡಿ ಮೂರು ತಿಂಗಳಾಯಿತು. ಕಳೆದ ಎರಡುವರೆ ತಿಂಗಳಿನಿಂದ ಹಣವನ್ನು ಹಿಂತಿರುಗಿಸುವುದಾಗಿ ಹೇಳುತ್ತಿದ್ದಾರೆ. ನಾನು ಈಗಾಗಲೇ ಅನೇಕ ಭಾರಿ ಈ ಉದ್ದೇಶಕ್ಕಾಗಿ ಕಛೇರಿಗೆ ಭೇಟಿ ನೀಡಿದ್ದೇನೆ. ನಾಳೆ ಬನ್ನಿ ಎಂದು ಹೇಳಿದ್ದಾರೆ. ನೋಡಬೇಕು ನಾಳೆ ಸಹಾಯ ಮಾಡುತ್ತಾರೋ ಎಂದು?

'ನಾಳೆ ನೀವು ಕಛೇರಿಗೆ ಬಂದರೆ ದಯಮಾಡಿ ನನ್ನನ್ನು ನೋಡಿ. ಅದು ಯಾವ ಶಾಖೆಯಲ್ಲಿಯಾದರೂ ಇತ್ಯರ್ಥವಾಗದೆ ಉಳಿದಿರಲಿ, ನಾನು ಸಹಾಯ ಮಾಡುತ್ತೇನೆ'.

ನಿಮ್ಮ ಸಮಸ್ಯೆ ಪರಿಹಾರವಾಯಿತು. ಮಾಡಿಕೊಡುವುದಾಗಿ ಹೇಳಿದ್ದಾರೆ ಎಂದು ಮಹೇಶ್‌ಕುಮಾರ್ ನನ್ನನ್ನು ನೋಡಿ ಹೇಳಿದರು. ನೀವು ಮೊದಲು ಕಛೇರಿಗೆ ಹೋದ ತಕ್ಷಣ ಇವರನ್ನು ಭೇಟಿಯಾಗಿ–ಎಲ್ಲಾ ಕೆಲಸವಾಗುತ್ತದೆ!

ಮಹೇಶಕುಮಾರ್‌ನ ಮಾತನ್ನು ಅನುಮೋದಿಸುವಂತೆ ಅಧಿಕಾರಿ ಹೇಳಿದರು 'ಹೌದು! ಎಲ್ಲಾ ಕೆಲಸವಾಗುತ್ತದೆ. ಯಾವುದೇ ಸಮಸ್ಯೆ ಇಲ್ಲ' ಎಂದರು.

'ನಾನು ಯಾವುದನ್ನು ಆಗಬಾರದೆಂದು ಆತ್ಮಸಾಕ್ಷಿಯಾಗಿ ಅಂದು ಕೊಂಡಿದ್ದೆನೊ, ಅದು ಆಗಿಹೋಯಿತು. ಇಂಥ ಪರಿಸ್ಥಿತಿ ಉದ್ಭವಿಸ ಲಾರದೆಂದು ನಾನು ಅಂದುಕೊಂಡಿದ್ದೆ. ಆದರೆ ಅದು ಯಾವ ಉದ್ದೇಶವಿಲ್ಲದೆ ಸಹಜವಾಗಿ ಜರುಗಿಹೋಯಿತು'.

ಮಹೇಶಕುಮಾರ್ ಮತ್ತು ಅಧಿಕಾರಿ ಅವರಿಬ್ಬರ ಕೆಲಸಗಳ ಬಗ್ಗೆ ಪರಸ್ಪರ ಮಾತನಾಡತೊಡಗಿದರು. ಅವರ ಸಂಭಾಷಣೆ ಅವರ ಗಾಢ ಸ್ನೇಹವನ್ನು ಹೇಳುವಂತಿತ್ತು. ಮಹೇಶಕುಮಾರ್ ಕಛೇರಿಗೆ ಭೇಟಿ ನೀಡಿದ ವಿಚಾರ ಹಾಗೂ ನಿರ್ದೇಶಕರನ್ನು ನೋಡಲಾಗದಿದ್ದಕ್ಕಾಗಿ ವಿಶಾದವನ್ನು ವ್ಯಕ್ತಪಡಿಸಿದ. ಅಧಿಕಾರಿಯ ಪ್ರಶ್ನೆಗಳಿಗೆ ಉತ್ತರಿಸಿದ ಮಹೇಶಕುಮಾರ್ ಯಾವುದಾದರು ಗಮನಿಸಬೇಕಾದ

ತುರ್ತು ಕೆಲಸವಿದೆಯೆ ಎಂದು ಕೇಳಿದ; ನನ್ನ ಸ್ನೇಹಿತರಿಗೆ ಸಹಾಯಮಾಡಲು ನಿಮಗೆ ತೊಂದರೆ ನೀಡಿದೆ. ವಂದನೆಗಳು.

ಅಧಿಕಾರಿಯನ್ನು ಮಹೇಶಕುಮಾರ್‌ನ ಕಛೇರಿಗೆ ಕರೆಸಿದ ಕಾರಣ ಏನೇ ಇದ್ದರೂ ಇಂಥ ವಿಷಯಗಳನ್ನು ದೂರವಾಣಿಯಲ್ಲಿ ಮಾತನಾಡಬಾರದು; ಅದಕ್ಕಾಗಿ ನಿಮ್ಮನ್ನು ಇಲ್ಲಿಗೆ ಬರುವಂತೆ ಮಾಡಿದೆ, ತೊಂದರೆ ಕೊಟ್ಟೆ ಎಂದು ಮಹೇಶಕುಮಾರ್ ಜಾಣತನದಿಂದ ನುಡಿದರು.

ಹೌದು! ನೀವು ಮಾಡಿದ್ದು ಸರಿ. ಕೆಲವು ವಿಚಾರಗಳನ್ನು ಮುಖತಃ ಮಾತನಾಡಬೇಕು ಎಂದು ಅಧಿಕಾರಿ ಉತ್ತರಿಸಿದರು.

ಅಧಿಕಾರಿಯನ್ನು ಟೀ ಕುಡಿದು ಹೋಗಬೇಕೆಂದು ಮಹೇಶಕುಮಾರ್ ವಿನಂತಿಸಿದರು. ಆದರೆ ಆತ ವಿನಯವಾಗಿ ಬೇಡವೆಂದು ಹೇಳಿ ಹೊರಡಲು ಸಿದ್ಧವಾದ. ಆತನೊಂದಿಗೆ ಮಹೇಶಕುಮಾರ್‌ನಿಗೆ ಈಗ ಯಾವುದೇ ಕೆಲಸವಿರಲಿಲ್ಲ. ನನ್ನ ಅನುಮಾನವನ್ನು ಪರಿಹರಿಸಲು ಆತನನ್ನು ಬರಮಾಡಿಕೊಂಡಿದ್ದ. ಕಛೇರಿಯಲ್ಲಿ ಇತ್ಯರ್ಥವಾಗಬೇಕಾದ ನನ್ನದೊಂದು ಕೆಲಸವಿತ್ತು, ಏನೂ ಇಲ್ಲದಿದ್ದರೆ ಈ ನಾಟಕ ಹೀಗೆಯೆ ನಡೆಯುತ್ತಿತ್ತು. ಹಾಗಿಲ್ಲದಿದ್ದರೆ ನನ್ನ ಕೆಲಸ ಇನ್ನು ಎಷ್ಟು ದಿವಸ ಇತ್ಯಾರ್ಥವಾಗದೆ ಉಳಿಯುತ್ತಿತ್ತೋ, ದೇವರಿಗೆ ಗೊತ್ತು'?

ಅಧಿಕಾರಿಯನ್ನು ಬೀಳ್ಕೊಡುತ್ತಾ ಮಹೇಶಕುಮಾರ್ ಹೇಳಿದರು 'ದಯಮಾಡಿ ನಾಳೆ ಸಂಜೆ ನನ್ನ ಮನೆಗೆ ಬನ್ನಿ. ನಾನು ನಿರ್ದೇಶಕರಿಗೆ ಏನನ್ನೊ ನೀಡಬೇಕಿದೆ'.

'ನಾಳೆ ಸಂಜೆ ತಾನೆ? ಆಗಲಿ' ಎಂದು ಆ ಅಧಿಕಾರಿ ರೂಮಿನಿಂದ ಹೊರಗೆ ನಡೆದ.

ಸ್ವಲ್ಪ ಸಮಯದ ಮೌನದ ನಂತರ ಮಹೇಶಕುಮಾರ್ ಹೇಳಿದ, 'ನೋಡಿದಿರಾ ಹಣದ ಅಧಿಕಾರವನ್ನು'?

ನನಗೆ ಮಾತೇ ಬರಲಿಲ್ಲ. ನಾನು ದಿಗ್ಭ್ರಮೆಗೊಂಡಿದ್ದೆ. ಮಹೇಶಕುಮಾರ್ ನತ್ತ ನೇರ ನೋಟ ಬೀರಿದೆ. ಆತ ಏನು ಹೇಳಿದನೋ ಹಾಗೆಯೇ ಆಯಿತು. ನನ್ನ ಅನುಮಾನ ಮಾಯವಾಯಿತು. ಸಿನಿಮಾದ ಪರದೆಯ ಮೇಲೆ ಚಲಿಸುವಂತೆ ಹಿಂದಿನ ಮಹೇಶ್‌ಕುಮಾರ್ ಮತ್ತು ಇವತ್ತಿನ ಮಹೇಶಕುಮಾರ್‌ನ ಚಿತ್ರಗಳು ಚಲಿಸತೊಡಗಿದವು. ಒಬ್ಬ ವಿದೇಶೀಯ ತನ್ನ ಪ್ರತಾಪವನ್ನು ಇಷ್ಟೊಂದು ನಿರ್ಭಯವಾಗಿ ನಮ್ಮ ದೇಶದಲ್ಲಿ ಕೊಚ್ಚಿಕೊಳ್ಳುತ್ತಿದ್ದಾನಲ್ಲ ಎಂದು ಕೆಲಕಾಲ ನಾನು ಮೂಕನಾದೆ; ಇದು ಅನಿವಾರ್ಯವೆ ಅಥವಾ ವಿರೋಧಿಸಬಹುದೆ ಎಂದು ಗೊಂದಲವಾಗಿ ಏನನ್ನೂ ನಿರ್ಣಯಿಸಲಾಗಲಿಲ್ಲ. ನನ್ನ ಮೌನವನ್ನು ದೂರ ಮಾಡಿ ಆತ ಹೇಳಿದ – ಏನಾದರೂ ಮಾಡಿ, ಏನಾದರೂ ಮಾಡದಿದ್ದರೆ ಮುಂದೆ ನೀವು ಪಶ್ಚಾತ್ತಾಪ ಪಡುತ್ತೀರಿ. ನಿಮ್ಮ ಮಕ್ಕಳು ನಿಮಗೆ ಶಾಪ ಹಾಕುತ್ತಾರೆ!



ನಾನು ಮೃದು ಮಾತಿನಲ್ಲಿ ಹೇಳಿದೆ – 'ನಾನು ಏನಾದರು ಮಾಡಲು ಇಚ್ಛಿಸುತ್ತೇನೆ' ಎಂದು– 'ಆದರೆ ನಾನು ನೀವು ಹೇಳಿದ ಕೆಲಸವನ್ನು ಮಾಡಲಾರೆ. ಅಥವಾ ನನಗೆ ಅದನ್ನು ಮಾಡುವ ಧೈರ್ಯ ಇಲ್ಲ ಎಂದು ಹೇಳಲೆ? ನೀವು ನನಗೆ ಇನ್ನೂ ಉತ್ತಮವಾದ ಹಾಗೂ ಸರಳವಾದ ಯಾವುದಾದರು ಕಾರ್ಯಸಾಧ್ಯವಾದ ಕೆಲಸವನ್ನು ಸೂಚಿಸಿ ಅದಕ್ಕೆ ನಾನು ಸಿದ್ಧ' ಎಂದೆ. 'ನಾನು ಒಬ್ಬನೇ ಮಾಡಬೇಕೊ ಅಥವಾ ನಿಮ್ಮ ಜೊತೆಗೂಡಿ ಮಾಡಬೇಕೊ ಎನ್ನುವುದನ್ನು ಅಮೇಲೆ ಹೇಳುತ್ತೇನೆ. ನಾನು ಏನಾದರೂ ವ್ಯಾಪಾರ ಮಾಡಬೇಕು. ಏನೂ ವ್ಯಾಪಾರ ಮಾಡದೆ ಕುಟುಂಬವನ್ನು ಸಾಕುವುದು ಕಷ್ಟ' ಎಂದೆ.

ನನ್ನ ಮಾತನ್ನು ಮೊಟಕುಗೊಳಿಸಿ ಆತ ಹೇಳಿದ– 'ನೀವು ಪ್ರಾಮಾಣಿಕ ವಾಗಿದ್ದರೆ ಬಂಗಾರವನ್ನು ಕರಗಿಸಲು ಆಗುವುದಿಲ್ಲ, ನಿಮಗೆ ಗೊತ್ತಾ! ನೀವು ಸ್ವಲ್ಪ ಮೋಸದ ಮಾರ್ಗವನ್ನು ಅನುಸರಿಸಿದರೆ ಏನಾದರೂ ಸಾಧಿಸಬಹುದು' ಎಂದು ಉಪದೇಶ ನೀಡಿದ. ಆದ್ದರಿಂದ ನಾನೇನು ಹೇಳುತ್ತೇನೋ ಅದನ್ನು ಒಪ್ಪಿಕೊಳ್ಳಿ, ಇಲ್ಲದಿದ್ದರೆ ಕೆಲ ದಿನಗಳ ನಂತರ ನಿಮ್ಮ ಕಾರನ್ನು ಮಾರಬೇಕಾಗುತ್ತದೆ. ಆನಂತರ ನಿಮ್ಮ ಮನೆಯನ್ನು ಹರಾಜಿಗಿಡಬೇಕಾಗುತ್ತದೆ. ಇದರಿಂದ ನಿಮ್ಮ ಕುಟುಂಬ ತೊಂದರೆಗೆ ಸಿಲುಕುತ್ತದೆ. ನೀವು ಈಗ ಕಾರನ್ನು ತಂದಿಲ್ಲ; ಕಾರಣ ನಿಮ್ಮಲ್ಲಿ ಪೆಟ್ರೋಲ್ ಖರೀದಿಸಲು ಹಣವಿಲ್ಲ. ಅದೇ ರೀತಿ ನಾಳೆ ನಿಮ್ಮ ಕಾರನ್ನು ಬಳಸಲು ಸಾಧ್ಯವಾಗುವುದಿಲ್ಲ. ಇದೆಲ್ಲ ನನಗೆ ಗೊತ್ತಾಗುತ್ತದೆ. ಆದ್ದರಿಂದ ಕಣ್ಣು ಮುಚ್ಚಿಕೊಂಡು ನಮ್ಮ ಜೊತೆಗೂಡಿ ವ್ಯಾಪಾರ ಮಾಡಿ ಎಂದ.

ಆತನ ಸಲಹೆಗಳಿಗೆ ಪ್ರತಿಕ್ರಿಯಿಸುತ್ತಾ ನಾನು ಹೇಳಿದೆ – ನೋಡಿ ಮಹೇಶ್‌ಕುಮಾರ್! ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ. ಹಣವೇ ಸರ್ವಸ್ವ. ಆದರೂ ಕೂಡ ನೀವು ಹೇಳಿದ ಎಲ್ಲವನ್ನು ಮಾಡಲು ನಾನು ಅಸಮರ್ಥ. ಕಾರಣ ಇದು ನಾನು ಹುಟ್ಟಿದ ಜಾಗ. ಇಲ್ಲಿ ನನ್ನ ಸಂಬಂಧಿಗಳು, ಸ್ನೇಹಿತರು ಮತ್ತು ಪರಿಚಯಸ್ಥ ವ್ಯಕ್ತಿಗಳು ಇದ್ದಾರೆ. ಇಲ್ಲಿ ನಾನು ಊಹಿಸಲಸಾಧ್ಯವಾದ ಕೆಲಸ ಮಾಡಿ ನನ್ನ ಮರ್ಯಾದೆಯನ್ನು ಹರಾಜಿಗಿಡಲಾರೆ. ಮರ್ಯಾದೆ ಹೋದರೆ ಎಲ್ಲವೂ ಹೋದಂತೆ. ಅಂಥ ಸಂದರ್ಭದಲ್ಲಿ ನೀರಿಗೆ ಹಾರುವುದೇ ಒಳ್ಳೆಯದು, ಅಂದರೆ ನಾನು ನನ್ನ ಸಮಾಜದಿಂದ ಬಹಿಷ್ಕಾರಗೊಂಡು ಒಬ್ಬಂಟಿಯಾಗಿರಲಾರೆ! ಅಂದರೆ ನನ್ನ ಉದ್ದೇಶ ಪ್ರಾಮಾಣಿಕವಾಗಿ ದುಡಿಯಬೇಕೆಂಬುದು ಮತ್ತು ಅದರಿಂದ ಏನು ಬರುತ್ತದೆ ಎನ್ನುವುದು ನನಗೆ ಮುಖ್ಯವಲ್ಲ. ನೀವು ನಿಮ್ಮ ದೇಶ ಮತ್ತು ಸಮಾಜದಿಂದ ಹೊರಗಿದ್ದೀರಿ. ನಿಮ್ಮ ಉದ್ದೇಶ ಒಂದೇ– ಹಣಮಾಡುವುದು'.

ಇಪ್ಪತ್ನಾಲ್ಕುಗಂಟೆಗಳೂ ನೀವು ಮಾನಸಿಕವಾಗಿ ಮತ್ತು ದೈಹಿಕವಾಗಿ ನಿಮ್ಮನ್ನು ಹಣಕ್ಕಾಗಿ ಸಮರ್ಪಣೆ ಮಾಡಿಕೊಂಡಿದ್ದೀರಿ. ನಿಮ್ಮ ಗೌರವಕ್ಕೆ ಕುಂದು ಬಂದರೂ

ಇಲ್ಲಿ ಅದು ಗೌಣ. ಅಂಥದೇನೂ ಆಗುವುದಿಲ್ಲ. ಯಾಕೆಂದರೆ ನೀವು ಇಲ್ಲಿರುವುದು ಯಾರಿಗೂ ಗೊತ್ತಿಲ್ಲ ಮತ್ತು ಯಾರೂ ಗಮನಿಸುವುದಿಲ್ಲ. ನೀವು ಹಣದೊಂದಿಗೆ ನಿಮ್ಮ ಊರಿಗೆ ಹೋದಾಗ ನಿಮ್ಮ ಗೌರವವೂ ಹೆಚ್ಚುತ್ತದೆ. ಆದ್ದರಿಂದ ಮಹೇಶಕುಮಾರ್ ಅವರೆ ನೀವು ನಿಮಗೆ ಮನಬಂದಂತೆ ಇಲ್ಲಿ ಯಾವ ಚಿಂತೆಯೂ ಇಲ್ಲದೆ ಕೆಲಸ ಮಾಡಬಹುದು. ಆದರೆ ಅದು ನನಗೆ ಆಗುವುದಿಲ್ಲ. ಇದನ್ನೇ ಬೇಕಾದರೆ ನೀವು ನನ್ನ ದೌರ್ಬಲ್ಯವೆನ್ನಬಹುದು ಅಥವಾ ನನ್ನ ಸಿದ್ಧಾಂತವೆನ್ನಬಹುದು. ನೀವು ಏನಾದರೂ ತಿಳಿಯಬಹುದು ಅಥವಾ ನಿಮಗೆ ತಿಳಿದಂತೆ ಭಾವಿಸಬಹುದು – ಎಂದು ನಾನು ನನ್ನ ಮಾತನ್ನು ಮುಂದುವರಿಸುತ್ತಾ ಹೇಳಿದೆ.

ಮಹೇಶಕುಮಾರ್ ಅವರಿಗೆ ನನ್ನ ವಿಷಯವನ್ನು ವಿವರಿಸಿ ಹೇಳುತ್ತಿದ್ದ ಸಮಯದಲ್ಲಿಯೆ ಇಬ್ಬರು ಕೊಠಡಿಯನ್ನು ಪ್ರವೇಶಿಸಿದರು. ಅವರು ಮಹೇಶ ಕುಮಾರನ ಬಂಧುಗಳಂತೆ ಕಾಣಿಸಿದರು. ಟೇಬಲ್ಲಿನ ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕುಳಿತರು. ಅವರು ಅವರದೇ ಆದ ಭಾಷೆಯಲ್ಲಿ ಮಾತಿಗಾರಂಭಿಸಿದರು. ನಾನು ಮೌನವಾಗಿ ಅವರನ್ನು ಗಮನಿಸಿದೆ. ಒಂದು ಐದು ನಿಮಿಷದ ಹರಟೆಯ ನಂತರ ಅವರು ನನ್ನನ್ನು ದಿಟ್ಟಿಸಿ ನೋಡಿದರು.

'ಈ ವ್ಯಕ್ತಿ ಯಾರು? ಎಂದು ಅವರಲ್ಲಿ ಒಬ್ಬ ನನ್ನ ಬಗ್ಗೆ ಮಹೇಶ ಕುಮಾರನನ್ನು ವಿಚಾರಿಸಿದ. ಅವರ ಈ ಪ್ರಶ್ನೆಯನ್ನು ನಾನು ಕೇಳಿಸಿಕೊಂಡಿಲ್ಲ ವೆನ್ನುವಂತೆ ನಟಿಸಿದೆ. ಮಹೇಶಕುಮಾರ್ ಹೇಳಿದರು 'ಈತ ಈ ಮಣ್ಣಿನ ಮಗ, ನಾವು ಈತನನ್ನು ನಮ್ಮ ಬೇಕು ಬೇಡಗಳನ್ನು ಆಗು ಮಾಡಿಕೊಳ್ಳಲು ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದು. ಆದರೆ 'ಈ ಮೂರ್ಖ' ನಮ್ಮ ಮಾತನ್ನು ಕೇಳುತ್ತಿಲ್ಲ. ಅರ್ಥಮಾಡಿಕೊಳ್ಳುವಂತೆ ಹೇಳುತ್ತಿದ್ದೇನೆ. ಈತನನ್ನು ಒಪ್ಪಿಸಿದರೆ ನಾವು ನಮ್ಮ ಕೆಲಸಗಳನ್ನು ಸುಲಭವಾಗಿ ಸಾಧಿಸಬಹುದು. ನಾವು ಎಲ್ಲರನ್ನು ನಂಬಲು ಆಗುವುದಿಲ್ಲ. ಹಾಗೇನಾದರೂ ಮಾಡಿದರೆ ನಾವು ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತೇವೆ. ನಾನು ಈತನ ಮೂಲಕ ಕೆಲಸ ಮಾಡಿಸಬೇಕೆಂದು ಆಲೋಚಿಸುತ್ತಿದ್ದೇನೆ' ನಾನು ಈತನನ್ನು ಅನೇಕ ವರ್ಷಗಳಿಂದ ಬಲ್ಲೆ. ನಾವು ನಮ್ಮ ಹಣಕಾಸಿನ ಜವಾಬ್ದಾರಿಯನ್ನು ಈತನಿಗೆ ನೀಡಬಹುದು. ಈತ ನಂಬಿಕಸ್ಥ'.

ಹೌದು ಈತ ನೀವು ಹೇಳಿದ ಹಾಗೆ ನಂಬಿಕಸ್ಥನ ಹಾಗೆ ಕಾಣುತ್ತಾನೆ. ಇನ್ನೊಬ್ಬ ವ್ಯಕ್ತಿ ಹೇಳಿದರು.

ಅವರ ಮಾತು ಮುಗಿದ ಮೇಲೆ ಮಹೇಶ್‌ಕುಮಾರ್ ಅವರಿಗೆ ನನ್ನನ್ನು ಪರಿಚಯಿಸಿದ 'ಈ ಇಬ್ಬರು ಕಠ್ಮಂಡುವಿನ ಬಹಳ ದೊಡ್ಡ ವ್ಯಾಪಾರಿಗಳು. ಈತ ಮಿ॥ ಶಾಂತರಾಮ್ ಜತಿಯ ಮತ್ತು ಈತ ಕಿಷನ್ ಕೆಬ್ಡಿವಾಲ. ಈಗ ಅವರು ನೇಪಾಳದ ದೊಡ್ಡ ವ್ಯಾಪಾರಸ್ಥರ ಪಟ್ಟಿಯಲ್ಲಿದ್ದಾರೆ'.



ಮಹೇಶ್‌ಕುಮಾರ್ ಈಗ ಬರ್ಮಿಭಾಷೆಯಲ್ಲಿ ಮಾತನಾಡತೊಡಗಿದ. ಅವರೆಲ್ಲರೂ ಬರ್ಮಿಭಾಷೆಯಲ್ಲಿಯೆ ಮಾತನಾಡತೊಡಗಿದರು. ಅವರು ಅದೇ ಗುಂಪಿಗೆ ಸೇರಿರಬಹುದೆಂದು ನನಗೆ ಸುಲಭವಾಗಿ ಅರ್ಥವಾಯಿತು. ಅವರೆಲ್ಲರೂ ಒಟ್ಟಿಗೆ ಕಟ್ಮಂಡುವಿಗೆ ಬಂದಿರುವುದು. ಸುಮಾರು ಒಂದು ಹದಿನೈದು ನಿಮಿಷ ಬರ್ಮಿಭಾಷೆಯಲ್ಲಿಯೆ ಮಾತನಾಡಿದರು. ಅವರು ಏನು ಮಾತನಾಡಿದರು ಎನ್ನುವುದು ಒಂದು ಶಬ್ದವೂ ನನಗೆ ಅರ್ಥವಾಗಲಿಲ್ಲ. ಅವರ ರಹಸ್ಯವಾದ ಮಾತುಗಳನ್ನು ಆ ವೇಳೆಗೆ ಮುಗಿಸಿರಬಹುದು. ಅಥವಾ ಮಹೇಶಕುಮಾರ್‌ಗೆ ನಾನು ತಪ್ಪಾಗಿ ತಿಳಿಯಬಹುದೆಂಬ ಅರಿವಾಗಿ ನಂತರ ಹಿಂದಿಭಾಷೆಗೆ ಬದಲಾಯಿಸಿದರು.

'ಕಿಷನ್ ಅವರ ವಿದೇಶಿ ಸರಕು ಹಡಗಿನಲ್ಲಿ ಕಳವಾಗಿದ್ದವು. ಈಗ ವಿಮಾಕಂಪನಿಯಿಂದ ಅವುಗಳ ಮೇಲೆ ಪರಿಹಾರವನ್ನು ಪಡೆಯಬಯಸುವುದು ಸೂಕ್ತವಾಗಲಾರದು. ಕಾರಣ ಆ ಸರಕು ಕದ್ದ ಮಾಲುಗಳಾಗಿದ್ದವು. ಆ ಸರಕುಗಳ ನಿಜವಾದ ಬೆಲೆ ೫ ಮಿಲಿಯನ್. ಆದರೆ ಅವುಗಳ ಬೆಲೆಯನ್ನು ಅರ್ಧ ಮಿಲಿಯನ್ ಎಂದು ನಮೂದಿಸಲಾಗಿತ್ತು. ಪರಿಹಾರವನ್ನೇನಾದರು ಪಡೆಯಲು ಬಯಸಿದ್ದರೆ, ವಿಮಾ ಕಂಪನಿಯವರು ಐದು ಮಿಲಿಯನ್ ಬೆಲೆಯ ಸರಕುಗಳನ್ನು ಪರಿಶೀಲಿಸಿ ಅರ್ಧ ಮಿಲಿಯನ್ ಬೆಲೆಯನ್ನು ತೋರಿಸಿದ್ದಾರೆ ಎಂದು ಹೇಳುತ್ತಿತ್ತು. ತನಿಖೆ ಮಾಡಿ ಪರಿಶೀಲಿಸಿದ ನಂತರ ವಿಮಾ ಕಂಪನಿಯು ಅರ್ಧ ಮಿಲಿಯನ್ ಪಾವತಿಸಲು ಮನಸ್ಸು ಮಾಡುತ್ತಿತ್ತು. ಆದುದರಿಂದ ಪರಿಹಾರವನ್ನು ವಿಮಾ ಇಲಾಖೆಯಿಂದ ಪಡೆಯ ಬಯಸುವುದು ಅರ್ಥವಿಲ್ಲದ್ದು.

ನಾನು ಈ ಎಲ್ಲಾ ಸಂಭಾಷಣೆಯನ್ನು ಕೇಳುತ್ತಿದ್ದ ಹಾಗೆ, ನನಗೆ ಮಂಕು ಕವಿದಂತಾಯಿತು! ಕಿಷನ್ ನಾಲ್ಕುವರೆ ಮಿಲಿಯನ್ ರೂಪಾಯಿಗಳನ್ನು ಕಳೆದುಕೊಂಡು ಎಷ್ಟು ನಿರಾಳವಾಗಿ ಮಾತನಾಡುತ್ತಿದ್ದಾನೆ. ನಾನೇನಾದರು ಒಂದು ರೂಪಾಯಿ ಕಳೆದುಕೊಂಡಿದ್ದರೆ ನಾಲ್ಕೂವರೆ ಮಿಲಿಯನ್ ರೂಪಾಯಿಗಳನ್ನು ಕಳೆದುಕೊಂಡ ಕಿಷನ್‌ನಷ್ಟೇ ನಿರಾಳವಾಗಿರಲು ಸಾಧ್ಯವಾಗುತ್ತಿರಲಿಲ್ಲ. ಅವರ ವಿವರಣೆಯ ಪ್ರಕಾರ ಅರ್ಧ ಮಿಲಿಯನ್ ರೂಪಾಯಿಗಳನ್ನು ವಿಮಾ ಕಂಪನಿಯಿಂದ ಅವರು ಪಡೆಯುವುದಿಲ್ಲವಂತೆ. ಶಾಂತಾರಾಮ್ ಶೇಕಡ ಹತ್ತರಷ್ಟು ಸರಕುಗಳನ್ನು ಮಾತ್ರ ಕಳೆದುಕೊಂಡಿದ್ದರು. ಆತನ ಸರಕುಗಳು ಭಾರತ–ನೇಪಾಳದ ಗಡಿ ತಲುಪಿದಾಗ ಆತನಿಗೆ ಈ ವಿಷಯ ತಿಳಿಯಿತು. ಶಾಂತರಾಮ್ ಏಳು ಲಕ್ಷ ರೂಪಾಯಿಗಳ ನಷ್ಟ ಅನುಭವಿಸಿದ್ದ. ಈ ಏಳು ಲಕ್ಷ ರೂಪಾಯಿಗಳು ನಷ್ಟ ಏನೂ ಅಲ್ಲವೇನೋ ಅನ್ನುವಂತೆ ಶಾಂತರಾಮ ನಿರ್ಲಿಪ್ತವಾಗಿದ್ದ.

ಹಡಗಿನಲ್ಲಿ ಕಳೆದುಹೋದ ಸರಕುಗಳ ಬಗ್ಗೆ ಮಾತನಾಡುತ್ತಾ ಕಿಷನ್ ಹೇಳಿದ – 'ಹಾಂಕಾಂಗಿನಿಂದ ಬರುತ್ತಿದ್ದ ಹಡಗು ಮೂರು ತಿಂಗಳ ಕಾಲ

ಸಮುದ್ರದಲ್ಲಿ ಕಳೆದುಹೋಗಿತ್ತು. ನನಗೆ ಆಗಲೇ ನನ್ನ ಸರಕುಗಳ ಹಣದ ಬಗ್ಗೆ ನಂಬಿಕೆ ಹೋಗಿತ್ತು. ಬಹುಶಃ ಕೊರಿಯಾದಲ್ಲಿ ಸರಕುಗಳನ್ನು ಇಳಿಸುವಾಗ ಕಳೆದುಹೋಗಿರಬಹುದೆಂದು ತಿಳಿದಿದ್ದೆ. ಆದರೆ ಅದನ್ನು ಹೇಗೆ ಪತ್ತೆ ಹಚ್ಚುವುದು? ಅದೂ ಅಲ್ಲದೆ, ಸರಕುಗಳನ್ನು ಇಳಿಸಿ ಕೊರಿಯಾದಿಂದ ಹೊರಟ ಹಡಗಿನಲ್ಲಿ ನಮ್ಮ ಸರಕುಗಳು ಸುರಕ್ಷಿತವಾಗಿರುತ್ತವೆಂದು ನಿರೀಕ್ಷಿಸುವುದು ಅರ್ಥಹೀನ. ನಮ್ಮ ಎಲ್ಲಾ ನಂಬಿಕೆಗಳನ್ನು ಬಿಟ್ಟು ಬಿಡುವುದಲ್ಲದೆ ಬೇರೆ ಏನೂ ಮಾಡಲಾಗುವುದಿಲ್ಲ.'

ನಾನು ಇಂಥ ಒಬ್ಬ ದೊಡ್ಡ ವ್ಯಾಪಾರಿ ನೇಪಾಳದಲ್ಲಿ ಇದ್ದಾನೆ ಎಂದು ನಿರೀಕ್ಷಿಸಿರಲಿಲ್ಲ. ಕಠ್ಮಂಡು ಹೊರನೋಟಕ್ಕೆ ಸಣ್ಣ ಊರಿನಂತೆ ಕಾಣುತ್ತದೆ.

ಅವರು ಒಬ್ಬರನ್ನೊಬ್ಬರು ಸಮಾಧಾನ ಮಾಡಿಕೊಳ್ಳುತ್ತಿದ್ದರು. ಆತನ ಈವರೆಗಿನ ದುಡಿಮೆಯಲ್ಲಿ ಹತ್ತು ಪರ್ಸೆಂಟ್ ಮಾತ್ರ ನಷ್ಟವಾಗಿರುವುದು ಎಂದು ಕಿಷನ್ ಹೇಳುತ್ತಿದ್ದ. ಶಾಂತರಾಮನಿಗೆ ಲಾಟರಿ ಹೊಡೆದಿತ್ತು. ಆತ ಈ ಮುಂಚೆ ಹಣ ಮಾಡಿದ್ದ, ಈಗಲೂ ಹಣ ಮಾಡಿದ್ದಾನೆ. ಸಂಪಾದಿಸಿದ್ದಾರೆ. ಯಾರೂ ಹೇಳದಿದ್ದರೂ ಮಹೇಶಕುಮಾರನ ಸ್ಥಿತಿಯು ಇದೇ ರೀತಿ, ಅಂದರೆ ಆತನ ಸ್ನೇಹಿತರ ಪರಿಸ್ಥಿತಿಯಂತೆಯೆ ಇರಬಹುದೆಂದು ಊಹಿಸಬಹುದಿತ್ತು?

ಅಷ್ಟರಲ್ಲಿ ದೂರವಾಣಿ ಕರೆ ಮೊಳಗಿತು. ಎಲ್ಲರೂ ಎಚ್ಚರಗೊಂಡರು. ಶಾಂತರಾಮನಿಗೆ ರಿಸೀವರ್ ಅನ್ನು ಕೊಟ್ಟ ಮಹೇಶಕುಮಾರ್ ಕೇಳಿದ– ನೀನು ಇಲ್ಲಿರುವುದಾಗಿ ಹೇಳಿದ್ದೆಯಾ? ಎಂದು.

ದೂರವಾಣಿಯಲ್ಲಿ ಮಾತನಾಡುತ್ತಾ ಹಲೋ! ಮಿ. ಶರ್ಮ ಏನಾಯಿತು? ಓ.....ಅಂದರೆ.....ಅವರು ಏನು ಮಾಡುವುದಿಲ್ಲವಾ?..... ಈಡಿಯಟ್‌ಗೆ ಎರಡು ಹಾಕಿ.....ಅಲ್ಲಿಗೂ ಬಗ್ಗದಿದ್ದರೆ....ಮೂರು ....ಹೆಚ್ಚಿಗೆ ಬೇಡ......ನಾನು ಮಹೇಶ ಅವರ ಕಛೇರಿಯಲ್ಲಿದ್ದೇನೆ, ನೀವು–ಬರುವುದಾದರೆ....ಬನ್ನಿ......ಸರಿ. ವಂದನೆಗಳು!

'ಆ ಈಡಿಯಟ್ಸ್‌ಗಳ ಬಾಯಿ ಯಾವಾಗಲೂ ಹಿಗ್ಗುತ್ತಲಿರುತ್ತದೆ. ಹಿಂದೆ ಒಂದು ಸಾವಿರಕ್ಕೆ ಮಾಡಿಕೊಡುತ್ತಿದ್ದ ಕೆಲಸಕ್ಕೆ ಈಗ ಒಂದು ಲಕ್ಷ ತೆಗೆದುಕೊಳ್ಳುತ್ತಾರೆ' ಎಂದು ಶಾಂತರಾಮ್ ಹೇಳಿದರು.

'ನೀವೇ ಅವರಿಗೆ ಈ ಒಂದು ಲಕ್ಷಗಳಿಸುವ ತಂತ್ರವನ್ನು ಹೇಳಿಕೊಟ್ಟದ್ದು. ಆದ್ದರಿಂದ ಅವರು ಈ ರೀತಿ ಮಾಡುತ್ತಾರೆ. ನೀವು ಹತ್ತು ಲಕ್ಷ ಸಂಪಾದಿಸಿ ಅವರಿಗೆ ಒಂದು ಲಕ್ಷ ಕೊಡಿ? ಅದರಲ್ಲಿ ತಪ್ಪೇನಿದೆ? ಕಿಷನ್ ಹೇಳಿದ.

'ತೊಂಬತ್ತು ಪರ್ಸೆಂಟ್ ಲಾಭಬರುವುದು ಕೂಡ ಅಸಾಧ್ಯವಾಗಿ ತೋರುತ್ತಿದೆ' ಮೂರು ತಿಂಗಳ ಹಿಂದೆ ಹತ್ತು ಲಕ್ಷ ರೂಪಾಯಿಗಳಿಗೆ ಸಿಮೆಂಟ್ ಪರವಾನಿಗಿಯ ಮಾತಾಗಿತ್ತು. ಆನಂತರ ಕಾರ್ಯದರ್ಶಿಯರ ಹಾಗೂ ಸಚಿವಾಲಯದ ಹಂತದಲ್ಲಿ ವಿಳಂಬ ಮಾಡಿ ಕೊನೆಗೆ ಮೂವತ್ತು ಲಕ್ಷಕ್ಕೆ ತೀರ್ಮಾನವಾಯಿತು. ನಾನು ಆಗ



ಲೆಕ್ಕಹಾಕಿ ನೋಡಿದೆ, ಲಾಭ ಕೇವಲ ಇಪ್ಪತ್ತೈದು ಲಕ್ಷಮಾತ್ರ. ಅದಕ್ಕಿಂತ ಹೆಚ್ಚಿರಲಿಲ್ಲ ಎಂದು ಶಾಂತರಾಮ್ ಹೇಳಿದ.

ಮಧ್ಯಪ್ರವೇಶಿಸಿ ಮಹೇಶ್‌ಕುಮಾರ್ ಹೇಳಿದ 'ಇಪ್ಪತ್ತೈದು ಲಕ್ಷಕ್ಕೆ ತೆಗೆದುಕೊಳ್ಳುತ್ತೇನೆ. ನೀವು ಕೊಡಲು ಸಿದ್ದವಾ?'

ಶಾಂತರಾಮ್ ನಗುತ್ತಾ ಹೇಳಿದ 'ಅದು ಹೇಗೆ ನಾನು ಕೊಡಲಿ? ಕೆಲವು ತಿಂಗಳ ಹಿಂದೆಯಷ್ಟೆ ಬ್ಯಾಂಕಿನಲ್ಲಿ L.C.ಯನ್ನು ತೆರೆಯಲಾಗಿದೆ. ಬ್ಯಾಂಕ್ ಕಮಿಷನ್, ಹಣದ ಮೇಲಿನ ಬಡ್ಡಿ, ಕೆಲಸಗಾರರ ಸಂಭಾವನೆ, ಮತ್ತು ಇತರೆ ಖರ್ಚುಗಳು– ಇವನ್ನೆಲ್ಲ ಲೆಕ್ಕ ಹಾಕೋಣ, ಇವುಗಳನ್ನೆಲ್ಲ ಯಾರು ಕೊಡುತ್ತಾರೆ? ನಾನು ಏನು ಹೇಳುತ್ತೇನೆಂದರೆ ಈ ಎಲ್ಲಾ ಖರ್ಚುಗಳನ್ನು ಲೆಕ್ಕ ಹಾಕಿದರೆ, ಲಾಭ ಕೇವಲ ಇಪ್ಪತ್ತೈದು ಲಕ್ಷ ಮಾತ್ರ. ಆದ್ದರಿಂದ ನಾನು ಅದು ಹೇಗೆ ನಿನಗೆ ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಕೊಡಲಿ? ನೀವು ಇದನ್ನು ತೆಗೆದುಕೊಳ್ಳಬೇಕೆಂದರೆ ಈ ಈಡಿಯಟ್‌ಗಳಿಗೆ ಮೂರು ಮಿಲಿಯನ್, ಬ್ಯಾಂಕಿನ ಮೂರು ತಿಂಗಳ ಬಡ್ಡಿ ಮತ್ತು ಕಮಿಷನ್‌ಗೆ ಒಂದು ಮಿಲಿಯನ್ ಕೆಲಸಗಾರರ ಸಂಭಾವನೆಯನ್ನು ಹೊರತುಪಡಿಸಿದರೂ ಇತರೇ ಖರ್ಚುಗಳು ಅರ್ಧಮಿಲಿಯನ್. ಎರಡೂವರೆ ಮಿಲಿಯನ್ ನನ್ನ ನಿವ್ವಳದ ಲಾಭ ಮತ್ತು ಹಿರಿಯ ಅಧಿಕಾರಿಗಳಿಗೆ ಉಡುಗೊರೆಯಾಗಿ ನೀಡಿದ ಒಂದು ಮಿಲಿಯನ್– ಎಲ್ಲಾ ಸೇರಿ ಎಂಟು ಮಿಲಿಯನ್ ಆಗುತ್ತದೆ. ನೀವು ಎಂಟು ಮಿಲಿಯನ್ ನೀಡಲು ಸಿದ್ಧವಿದ್ದರೆ ನಾನು ನಿಮಗೆ ನೀಡಲು ಸಿದ್ಧನಿದ್ದೇನೆ. ನೀನು ನೀಡಲು ಸಿದ್ಧವಾ?

ಕಿಶನ್, ಮಹೇಶ್‌ಕುಮಾರನನ್ನು ಪ್ರಚೋದಿಸುತ್ತಿದ್ದ. ಆತ ಹೇಳಿದ– 'ಮಹೇಶ್ ಎಪ್ಪತ್ತು ಮಿಲಿಯನ್‌ಗೆ ತೆಗೆದುಕೊಳ್ಳಿ....ನೀವು ನೂರರಷ್ಟು ಲಾಭಮಾಡಬಹುದು. ನೀವು ಯಾವುದೇ ಚಿಂತೆಯನ್ನು ಮಾಡಬೇಕಿಲ್ಲ. ಸಿಮೆಂಟಿನ ಬೆಲೆ ಜಾಗತಿಕಮಾರುಕಟ್ಟೆಯಲ್ಲಿ ಏರುತ್ತಿರುವ ವಿಷಯ ನಿಮಗೆ ಗೊತ್ತಿದೆಯೆ? ಜಾಗತಿಕಮಾರುಕಟ್ಟೆಯಲ್ಲಿ ಸಿಮೆಂಟ್ ಬೆಲೆ ಹೆಚ್ಚುತ್ತಿರುವುದರಿಂದ ಇಲ್ಲಿಯ ಫ್ಯಾಕ್ಟರಿಗಳು ಸಿಮೆಂಟಿನ ಬೆಲೆಯನ್ನು ಹೆಚ್ಚಿಸಲೇ ಬೇಕು. ಅವರೇನಾದರು ಬೆಲೆಯನ್ನು ಹೆಚ್ಚಿಸದಿದ್ದರೆ, ಹೆಚ್ಚಳ ಮಾಡುವಂತೆ ಮಾಡುವ ಕ್ರಮ ನಮಗೆ ಗೊತ್ತು?'

ಶಾಂತರಾಮನ ಸಿಮೆಂಟ್ ಹಳೆಯ ದರದಲ್ಲಿ ಈಗಾಗಲೇ ಬಂದಿದೆ. ಅದನ್ನು ಗೋಡೌನಿನಲ್ಲಿ ಒಂದು ತಿಂಗಳು ಇಟ್ಟರೆ ಹದಿನೈದರಿಂದ ಇಪ್ಪತ್ತು ಪರ್‌ಸೆಂಟ್ ಬೆಲೆ ಹೆಚ್ಚಾಗುತ್ತದೆ. ಆಗ ನಿಮ್ಮ ನಿವ್ವಳ ಲಾಭ ಎಂಟರಿಂದ ಒಂಭತ್ತು ಮಿಲಿಯನ್. ಈ ಬಗ್ಗೆ ಚಿಂತಿಸುವ ಅಗತ್ಯವೇ ಇಲ್ಲ. ಲಾಭ ಬಂದಿದೆ ಎಂಬಂತೆ ನಿಶ್ಚಿಂತೆಯಿಂದಿರು. ನೇಪಾಳದ ಸಿಮೆಂಟ್ ಅಗತ್ಯವನ್ನು ಇಲ್ಲಿಯ ಫ್ಯಾಕ್ಟರಿಗಳು ಮೂವತ್ತು ಪರ್ಸೆಂಟ್ ಕೂಡ ಪೂರೈಸಲು ಸಾಧ್ಯವಿಲ್ಲ. ಎಪ್ಪತ್ತು ಪರ್‌ಸ್ಟೆಂಟ್ ಜನರಿಗೆ ಬೇಕಾದ ಸಿಮೆಂಟ್

ನಿನ್ನ ಕೈಯಲ್ಲಿದೆ. ನಾವು ಸಿಮೆಂಟಿನ ದರವನ್ನು ಹೇಗಾದರೂ ನಿಗದಿಪಡಿಸಬಹುದು ಹೆದರಬೇಡ! ತೆಗೆದುಕೊ!

ಮಹೇಶಕುಮಾರ್ ಹೇಳಿದ – 'ಕಿಶನ್ ಫಿಫ್ಟಿ ಫಿಫ್ಟಿ ಹೇಗೆ? ನೀನು ಒಪ್ಪಿದರೆ, ನಾನು ತೆಗೆದುಕೊಳ್ಳುತ್ತೇನೆ'.

ಕಿಶನ್ ತಕ್ಷಣ ಒಪ್ಪಿಕೊಂಡನು. ಶಾಂತರಾಮನಿಗೆ ಲಕ್ಷಾಂತರ ರೂಪಾಯಿ ಲಾಭ ತಕ್ಷಣದಲ್ಲಿಯೆ ಲಭಿಸಿತು. ಇವರ ಮಾತುಗಳನ್ನು ಕೇಳುತ್ತಿದ್ದ ನಾನು ಸುಮ್ಮನೆ ಗಾಬರಿಗೊಂಡೆ. ಅವರೇನು ವ್ಯಾಪಾರದ ಬಗ್ಗೆ ಗಂಭೀರವಾಗಿ ಮಾತನಾಡುತ್ತಿದ್ದಾರೆ ಎಂದು ನನಗನಿಸಲಿಲ್ಲ. ಅವರು ಸುಮ್ಮನೆ ಕಾಡು ಹರಟೆ ಹೊಡೆಯಲು ಸೇರಿದ್ದಾರೇನೋ ಎಂಬಂತಿತ್ತು.

ಶಾಂತರಾಮ್ ನಿಟ್ಟುಸಿರು ಬಿಟ್ಟು ಹೇಳಿದ – 'ನಾನು ಯಾವಾಗ ಹಣವನ್ನು ಪಡೆಯಬಹುದು'?

ಮಹೇಶ್‌ಕುಮಾರ್ ಮತ್ತು ಕಿಶನ್ ಒಬ್ಬರನ್ನೊಬ್ಬರು ನೋಡಿದರು. ಮಹೇಶ್‌ಕುಮಾರ್ ಚೆಕ್‌ಪುಸ್ತಕವನ್ನು ತೆಗೆದುಕೊಂಡು ಶಾಂತರಾಮನ ಹೆಸರಿಗೆ ಮುಂಗಡವಾಗಿ ಒಂದು ಮಿಲಿಯನ್ ರೂಪಾಯಿಗಳಿಗೆ ಚೆಕ್ ಬರೆದನು. ಇದೇ ಸಮಯಕ್ಕೆ ಸರಿಯಾಗಿ ಒಬ್ಬ ವ್ಯಕ್ತಿ ರೂಮಿಗೆ ಆಗಮಿಸಿದನು. ಆತ ಶರ್ಮ ಎಂದು ನಾನು ಸಹಜವಾಗಿ ಗುರುತಿಸಿದೆ. ಆತ ೪೫–೫೦ರ ವಯೋಮಿತಿಯ ವ್ಯಕ್ತಿ. ಆತನನ್ನು ಗೌರವದಿಂದ ವಂದಿಸಿದೆ. ಆತ ನನ್ನ ಪಕ್ಕದ ಕುರ್ಚಿಯಲ್ಲಿ ಕುಳಿತ. ಆತ ಕೆಲ ದಿನಗಳ ಹಿಂದೆ ಸರ್ಕಾರಿ ಸೇವೆಯಲ್ಲಿದ್ದ. ಆತನನ್ನು ಸರ್ಕಾರಿ ನೌಕರನನ್ನಾಗಿ ನಾನು ಬಲ್ಲೆ, ಆತ ಅಧೀನ ಕಾರ್ಯದರ್ಶಿಯಾಗಿ, ಸಹ ಕಾರ್ಯದರ್ಶಿಯಾಗಿ, ಹಾಗೂ ಕೆಲವು ಇಲಾಖೆಗಳ ನಿರ್ದೇಶಕನಾಗಿ ಕೆಲಸ ಮಾಡಿದ್ದಾನೆ. ಆತ ಒಬ್ಬ ಪ್ರಾಮಾಣಿಕ ನುರಿತ ಆಡಳಿತಾಧಿಕಾರಿಯೆಂಬುದು ನನ್ನ ತಿಳುವಳಿಕೆಯಾಗಿತ್ತು. ಆತ ನಿವೃತ್ತಿಯ ನಂತರ ವ್ಯಾಪಾರಿ ಕ್ಷೇತ್ರದಲ್ಲಿ ತೊಡಗಿಕೊಂಡಿರ ಬಹುದೆಂದು ನಾನು ವಿಚಾರಿಸಿದೆ.

ಶರ್ಮ ಕುರ್ಚಿಯಲ್ಲಿ ಕುಳಿತ ತಕ್ಷಣ ಆತನ ಬ್ರೀಫ್‌ಕೇಸನ್ನು ತೆರೆದು ಅದರಿಂದ ಕೆಲವು ಪೇಪರ್‌ಗಳನ್ನು ಹೊರತೆಗೆದು ಶಾಂತರಾಮನಿಗೆ ನೀಡಿದ. ಶಾಂತರಾಮ ಆ ಪತ್ರಗಳನ್ನು ಎಚ್ಚರಿಕೆಯಿಂದ ನೋಡುತ್ತಾ ಅವುಗಳಲ್ಲಿ ತಲ್ಲೀನನಾದ. ಶರ್ಮ ನನ್ನ ಕಡೆ ತಿರುಗಿ 'ಹೇಗಿದ್ದೀರಿ ಗೆಳೆಯರೆ, ಇಲ್ಲಿ ಏನಾದರೂ ಕೆಲಸವಿತ್ತೆ'? ಎಂದು ಕೇಳಿದ.

'ಓ, ಚೆನ್ನಾಗಿದ್ದೀನಿ. ವಂದನೆಗಳು! ನಾನು ಮಹೇಶ್‌ಕುಮಾರ್ ಅವರನ್ನು ನೋಡಲು ಬಂದಿದ್ದೆ ಎಂದೆ.

'ಏನಾದರೂ ವ್ಯಾಪಾರ ಮಾಡುತ್ತಿದ್ದೀರಾ'?



'ಇಲ್ಲ, ಏನೂ ಇಲ್ಲ'.

'ನೀವು ಸುಮ್ಮನಿರಬಾರದು. ಏನಾದರೂ ಮಾಡಬೇಕು'.

'ಯೋಚಿಸುತ್ತಿದ್ದೇನೆ. ಸರಿ ಬೆಳಗಾಗುವುದರೊಳಗೆ ಏನನ್ನು ಸಾಧಿಸಲಾಗುವುದಿಲ್ಲ ಅಲ್ಲವೆ?

'ಶರ್ಮ, ನಿಮಗೆ ಇವರು ಗೊತ್ತಾ? ಶಾಂತರಾಮ್ ಕೇಳಿದ. ಓ, ಶರ್ಮರಿಗೆ ಕಟ್ಮಂಡುವಿನಲ್ಲಿ ವೆಂಕ, ನಾಣಿ, ಶಿವ ಪ್ರತಿಯೊಬ್ಬರೂ ಗೊತ್ತು ಎನ್ನುವುದು ನಿಮಗೆ ಗೊತ್ತಿಲ್ಲವೆ? ಆತ ಮುಂದುವರೆದು ಹೇಳಿದ ಅವರು 'ಮೂರು ಲಕ್ಷಕ್ಕೆ ಒಪ್ಪುತ್ತಿಲ್ಲವೇ?

'ಇಲ್ಲ ಸಾರ್'!

'ಹಾಗಾದರೆ ಅವರಿಗೆ ಎಷ್ಟು ಬೇಕಂತೆ?

'ಒಂದು ಮಿಲಿಯನ್'

'ಓ!.....ಆ ಕೆಲಸಕ್ಕೆ ಒಂದು ಮಿಲಿಯನ್'?

'ಸರಿ ನಾವು ಆ ವ್ಯಾಪಾರವನ್ನು ತೆಗೆದುಕೊಳ್ಳುತ್ತಿಲ್ಲ, ಬಿಟ್ಟುಬಿಡಿ. ಬೇರೆ ಯಾರಾದರೂ ಮಾಡಲಿ, ಎಂದು ಶಾಂತರಾಮ ಕೆರಳಿ ಹೇಳಿದ. ನಮಗೆ ಬೇರೆ ಏನು ಕೆಲಸವಿಲ್ಲ. ಹಾಗಾಗಿ ನಾವು ಅವರ ಹಿಂದೆ ಬಿದ್ದಿದ್ದೇವೆ ಎಂದು ಅವರು ತಿಳಿದುಕೊಂಡಿರಬೇಕು. ನಮಗೆ ಈಗ ವ್ಯಾಪಾರದ ಅಗತ್ಯವಿಲ್ಲ ಎಂದೂ ಸೇರಿಸಿದ. ನಾನು ಒಂದು ಮಿಲಿಯನ್ ಅನ್ನು ಕೊಡುವುದಿಲ್ಲ. ಎರಡು ವರ್ಷಗಳ ಹಿಂದೆ ನನ್ನ ಒಬ್ಬ ಸ್ನೇಹಿತ ಒಂದು ಲಕ್ಷದಲ್ಲಿ ಕೆಲಸ ಮಾಡಿಸಿಕೊಂಡ. ಕಳೆದ ವರ್ಷ ಇನ್ನೊಬ್ಬ ವ್ಯಾಪಾರಿ ಎರಡು ಲಕ್ಷದಲ್ಲಿ ವ್ಯವಹಾರ ಕುದುರಿಸಿದ. ಈ ವರ್ಷ ನಾನು ಮೂರು ಲಕ್ಷ ನೀಡುತ್ತೇನೆ. ಅವರೇಕೆ ನನ್ನ ಕೆಲಸವನ್ನು ಪರಿಗಣಿಸಬಾರದು? ಬಿಟ್ಟು ಬಿಡಿ ಶರ್ಮ ಅವರೆ, ನಾವು ಈ ವ್ಯಾಪಾರದ ಉಸಾಬರಿಯ ತಂಟೆಗೆ ಹೋಗುವುದು ಬೇಡ'.

ಶರ್ಮ ನಯವಾಗಿ ಹೇಳಿದ – 'ನಾವು ಹೇಗಾದರು ಮಾಡಿ ಪರವಾನಗಿಯನ್ನು ಪಡೆಯುತ್ತೇವೆ ಎಂದು. ನಾವು ಬೇಳೆಕಾಳುಗಳನ್ನು ರಾಷ್ಟ್ರದ ಎಲ್ಲ ಭಾಗಗಳಿಂದ ಸಂಗ್ರಹಿಸಿದ್ದೇವೆ. ಬೇರೆ ಯಾರಾದರೂ ಪರವಾನಗಿಯನ್ನು ಪಡೆದರೆ ಆತ ಬೆಲೆಯನ್ನು ನಿಗದಿಪಡಿಸುತ್ತಾನೆ. ನಾವು ಆಗ ಆತ ನಿಗದಿಪಡಿಸಿದ ಬೆಲೆಗೆ ನಮ್ಮ ಬೇಳೆಯನ್ನು ಮಾರುವುದು ಅನಿವಾರ್ಯವಾಗುತ್ತದೆ. ನಾವು ಒಂದು ವರ್ಷದ ಕಾಲ ಗೋಡೌನ್‌ನಲ್ಲಿ ದಾಸ್ತಾನಿಡಲು ಆಗುವುದಿಲ್ಲ. ಅದೂ ಅಲ್ಲದೆ ಸಿಂಗಪೂರ್ ಪಾರ್ಟಿಯಿಂದ ೨ ಲಕ್ಷ ಡಾಲರ್ ಹಣವನ್ನು ಮುಂಗಡವಾಗಿ ಪಡಿದಿದ್ದೇವೆ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಹೇಗಾದರು ಮಾಡಿ ಪರವಾನಗಿಯನ್ನು ಪಡೆಯುವುದು ಸೂಕ್ತ. ಬೇರೆ ಯಾರೋ ಪರವಾನಗಿಯನ್ನು ಪಡೆಯಲು ಬಿಡುವುದು ಸರಿಯಲ್ಲ'.

ಶರ್ಮನ ತರ್ಕ ಶಾಂತರಾಮನನ್ನು ಸಂದಿಗ್ಧದಲ್ಲಿ ಸಿಲುಕಿಸಿತು. ಆತ

ಉದ್ವೇಗದಲ್ಲಿ ವಿಚಾರ ಮಾಡದೆ ಆತುರದಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಪುನರ್ ಪರಿಶೀಲಿಸಲೇ ಬೇಕಾಯಿತು. ಕ್ಷಣ ಕಾಲ ಆಲೋಚಿಸಿ ಹೇಳಿದ – ಮೇಲಿನಿಂದ ಕೆಳಗಿನ ಎಲ್ಲಾ ಸಿಬ್ಬಂದಿಗಳಿಗಾಗಿ ಒಂದು ಲಕ್ಷ ಕೇಳುತ್ತಿದ್ದಾರೆ? ಮತ್ತೆ ನಾವು ಯಾರಿಗೂ ಹೆಚ್ಚಿಗೆ ಕೊಡಬೇಕಾಗಿಲ್ಲವಾ?

ಹೌದು! ಯಾವ ಎಕ್ಸ್‌ಟ್ರಾ ಪೇಮೆಂಟೂ ಇಲ್ಲ. ನನಗೆ ಹಾಗೆ ಅನ್ನಿಸಿದೆ.

'ಸರಿ, ನೀವು ಈಗಾಗಲೇ ತೀರ್ಮಾನಿಸಿದ್ದರೆ, ಎಂಟು ಲಕ್ಷಕ್ಕೆ ನಿಗದಿಪಡಿಸಿ. ಆದರೆ ಅವರು ಎಕ್ಸ್‌ಪೋರ್ಟ್ ಲೈಸನ್ಸ್ ಅನ್ನು ತಕ್ಷಣ ನೀಡಬೇಕು'.

'ಆಗಬಹುದು ಸಾರ್ ನಾನು ಪ್ರಯತ್ನಿಸುತ್ತೇನೆ'– ಶರ್ಮ ಹೇಳಿದ. ಅವರು ಅದಕ್ಕೆ ಒಪ್ಪಬಹುದೆಂಬ ನಂಬಿಕೆ ನನಗಿದೆ. ಸಾರ್, ನಾನು ಈಗ ಹೋಗಬಹುದೆ?

ಶರ್ಮ ನಮ್ಮಿಂದ ಬೀಳ್ಕೊಂಡರು. ಶರ್ಮ ರೂಮಿನಿಂದ ಹೊರ ನಡೆದ ಮೇಲೆ ಶಾಂತರಾಮನನ್ನು ನಾನು ಕೇಳಿದೆ– 'ಶರ್ಮರೊಂದಿಗೆ ನೀವು ಪಾಲುದಾರರ? ಎಂದು.

ಆತ ನಗುತ್ತಾ ಹೇಳಿದ – 'ಆತ ನಮ್ಮಲ್ಲಿಯ ಕೆಲಸಗಾರ'.

'ಕೆಲಸಗಾರ'! ನಾನು ಆಶ್ಚರ್ಯದಿಂದ ಹೇಳಿದೆ.

'ಹೌದು ಹೌದು ಕೆಲಸಗಾರ! ನಮ್ಮ ಕಛೇರಿಯ ಸಿಬ್ಬಂದಿಯಲ್ಲಿ ಒಬ್ಬರು. ನಮ್ಮ ಕಛೇರಿಯ ವ್ಯವಹಾರವನ್ನು ನೋಡಿಕೊಳ್ಳುತ್ತಾರೆ. ಆತ ನನ್ನ ತುಂಬಾ ಹಳೆಯ ಸ್ನೇಹಿತ ಕೂಡ. ನಿವೃತ್ತಿ ಹೊಂದಿದ್ದಾರೆ. ಆತನ ನಿವೃತ್ತಿವೇತನ ಆತನ ಕುಟುಂಬವನ್ನು ನಡೆಸಲು ಸಾಕಾಗುತ್ತಿಲ್ಲ. ಆತ ನನಗೆ ಈ ವಿಷಯವನ್ನು ಹೇಳಿದಾಗ, ನಾನು ಸಹಾನುಭೂತಿಯಿಂದ ಕೆಲಸಕ್ಕೆ ನೇಮಕ ಮಾಡಿಕೊಂಡೆ. ಆತನಿಗೆ ಕೈತುಂಬಾ ಸಂಬಳ ನೀಡುತ್ತಿದ್ದೇನೆ'.

'ಆತನ ಸಂಬಳ ಎಷ್ಟು'?

'ತಿಂಗಳಿಗೆ ಹದಿನೆಂಟು ನೂರು ರೂಪಾಯಿಗಳು, ಇದೂ ಅಲ್ಲದೆ ಕಚೇರಿ ಕೆಲಸದ ಓಡಾಟಕ್ಕೆ ಒಂದು ವಾಹನವನ್ನು ನೀಡಿದ್ದೇನೆ. ಕಛೇರಿ ಕೆಲಸಗಳ ನಿರ್ವಹಣೆಗೆ ಆತನಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದೇನೆ. ಆತ ಅತ್ಯಂತ ಪ್ರಾಮಾಣಿಕ ವ್ಯಕ್ತಿ'.

ಬೇರೆಯವರಿಗೆ ಹದಿನೆಂಟು ಲಕ್ಷ ಮಾಡಿಕೊಳ್ಳಲು ಅವಕಾಶ ನೀಡಿ ತಾನು ಮಾತ್ರ ಹದಿನೆಂಟು ನೂರು ಪಡೆಯುತ್ತಾನೆ. ಶರ್ಮ ಒಬ್ಬ ಮೂರ್ಖ ಎಂದು ಮನಸ್ಸಿನಲ್ಲಿಯೆ ಅಂದುಕೊಂಡೆ. ಒಳ್ಳೆಯ ಆಡಳಿತಾಧಿಕಾರಿ ಯಾಗಿದ್ದವನು ಅದು ಹೇಗೆ ಒಬ್ಬ ವ್ಯಾಪಾರಿಯ ಬಳಿ ಹೋಗಿ ಆತನ ಕೆಲಸಗಾರನಾಗಿ ದುಡಿಯಲು ಒಪ್ಪಿಕೊಂಡ? ನಾಚಿಕೆಯಾಗುತ್ತದೆ!

ನನ್ನ ಕುತೂಹಲಕ್ಕೆ ಶಾಂತರಾಮನನ್ನು ಮೆಲುದನಿಯಲ್ಲಿ ಕೇಳಿದೆ, 'ಮಿ. ಶಾಂತಾರಾಮ್, ನೀವು ಈ ದೇಶದ ನಾಗರಿಕರಾಗಿ ಪೌರತ್ವವನ್ನು ಪಡೆಯದೆ,



ನೀವು ಹೇಗೆ ವ್ಯಾಪಾರವನ್ನು ಮಾಡುತ್ತೀರಿ'?

ನನ್ನ ಈ ಮಾತುಗಳನ್ನು ಕೇಳುತ್ತಿದ್ದಂತೆಯೆ ಆತನಿಗೆ ವಿಪರೀತ ಕೋಪ ಬಂದು ನನ್ನನ್ನು 'ನೀನೊಬ್ಬ ಮೂರ್ಖ! ಏನು ಮಾತನಾಡುತ್ತಿದ್ದೀಯ? ನನ್ನನ್ನು ಈವರೆಗೆ ಯಾರೂ ಇಂಥ ಪ್ರಶ್ನೆಗಳನ್ನು ಕೇಳಿರಲಿಲ್ಲ. ನೀನು ಯಾರು ಈ ಪ್ರಶ್ನೆ ಕೇಳಲು'? ಎಂದು ಗುಡುಗಿದ.

ಆತ ತನ್ನ ತಾಳ್ಮೆಯನ್ನು ಕಳೆದುಕೊಂಡು ನನ್ನನ್ನು ನಿಂದಿಸಿದರೂ, ನಾನು ಯಾವುದಕ್ಕೂ ಕೇರ್ ಮಾಡಲಿಲ್ಲ ಹಾಗೂ ಆ ಬಗ್ಗೆ ಯೋಚಿಸಲಿಲ್ಲ. ನಾನು ನಗುನಗುತ್ತಲೆ ಹೇಳಿದೆ 'ಮಿ॥ ಶಾಂತರಾಮ್, ನಾನು ಮೂರ್ಖನೆ ಇರಬಹುದು, ಇಡಿಯಟ್ ಇರಬಹುದು. ಆದರೆ ನಾನು ಈ ಪ್ರಶ್ನೆಯನ್ನು ಯಾವ ದುರುದ್ದೇಶದಿಂದಲೂ ಕೇಳಲಿಲ್ಲ. ನಿನಗೆ ನನ್ನ ಪ್ರಶ್ನೆ ಇಷ್ಟವಾಗದಿದ್ದರೆ, ವಾಪಸ್ಸು ಪಡೆಯುತ್ತೇನೆ. ಆದರೆ ದಯಮಾಡಿ ಅನ್ಯಥಾ ಭಾವಿಸಬೇಡಿ'.

ಆತ ತಕ್ಷಣ ಹೇಳಿದ– 'ಯಾರು ಈ ದೇಶದ ಪ್ರಜೆಗಳು, ಯಾರು ಇಲ್ಲ. ಹಣವುಳ್ಳವರೇ ಈ ದೇಶದ ಪ್ರಜೆಗಳು. ಯಾರಲ್ಲಿ ಹಣವಿಲ್ಲವೊ ಅವರು ಈ ದೇಶದ ಪ್ರಜೆಗಳಲ್ಲ. ಅರ್ಥವಾಯಿತು? ರಂಗತ, ಅಗರವಾಲ್, ದುಗಡ್, ಪುಗಡ್ ಅಥವಾ ರುನಿಹರ್, ಪುನಿಹರ್, ಕೆಬದಿವಾಲ ಅಥವಾ ತಿಬ್ದಿಲಾಲ ಮಾತ್ರ ಈ ದೇಶದ ಪ್ರಜೆಗಳೆಂದು ಯೋಚಿಸುವ ತಪ್ಪುಮಾಡಬೇಡ. ಅವರು ಸಾಮಾಜಿಕ ಹಾಗೂ ವೈವಾಹಿಕ ಸಂಬಂಧವನ್ನು ಇಲ್ಲಿ ಹೊಂದಿದ್ದಾರೆಯೆಂದು ತಿಳಿದಿರುವೆಯಾ? ಇಲ್ಲ, ಅವರು ಹೊಂದಿಲ್ಲ. ಅವರು ಅವರ ವ್ಯಾಪಾರವನ್ನು ಮಾತ್ರ ಹೊಂದಿದ್ದಾರೆ. ಅವರಿಗೆ ಈ ದೇಶ, ಹಣಮಾಡುವ ಜಾಗ ಮಾತ್ರ ಎಂದು ಮಾತು ಮುಂದುವರೆಸಿದ. ಅವರು ಇಲ್ಲಿ ಸಾಕಷ್ಟು ಮಾಡಲು ತುದಿಗಾಲಲ್ಲಿ ನಿಂತಿರುತ್ತಾರೆ. ಅವರ ಮನೆಗಳು ತೋರಿಕೆಗೆ ಮಾತ್ರ, ಮನೆ ಬಾಡಿಗೆಗಳಿಗೆ ದುಂದುವೆಚ್ಚ ಮಾಡುತ್ತಾರೆ. ನೀನು ಭಾರತಕ್ಕೆ ಹೋಗಿ ನೋಡು, ಅವರು ಎಲ್ಲಿಯವರು ಎಂದು ಗೊತ್ತಾಗುತ್ತದೆ. ಅವರ ಮನೆ ಮಡದಿ ಮಕ್ಕಳು ಎಲ್ಲಿದ್ದಾರೆ ಎಂದು ತಿಳಿಯುತ್ತದೆ; ಆದ್ದರಿಂದ ನಾನು ನಿನಗೆ ಸೂಚಿಸುವುದೇನೆಂದರೆ, ಯಾರನ್ನೂ ನೀವು ಈ ದೇಶದ ಪ್ರಜೆ ಹೌದೊ ಅಲ್ಲವೋ ಎಂದು ಪ್ರಶ್ನಿಸಬೇಡಿ ಗೊತ್ತಾಯಿತಾ? ಎಂದು ಗಡಸುಧ್ವನಿಯಲ್ಲಿ ಅಬ್ಬರಿಸಿದ.

ಶಾಂತರಾಮನನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಾ ಮಹೇಶಕುಮಾರ್ ಹೇಳಿದ– ಶಾಂತರಾಮ್ ಸಮಾಧಾನ ಮಾಡಿಕೊಳ್ಳಿ! ನಿಮಗೆ ರಕ್ತದೊತ್ತಡ ಇದೆ, ನೀವು ಹೆಚ್ಚು ಮಾತನಾಡಬಾರದು. ಅವರೇನೂ ದುರುದ್ದೇಶದಿಂದ ನಿಮ್ಮನ್ನು ಈ ರೀತಿ ಪ್ರಶ್ನಿಸಲಿಲ್ಲ. ನಿಮ್ಮ ಬಗ್ಗೆ ಗೊತ್ತಿಲ್ಲದಿದ್ದುದರಿಂದ ಈ ರೀತಿ ಪ್ರಶ್ನೆ ಕೇಳಿದರು. ಅದರಲ್ಲಿ ತಪ್ಪೇನಿದೆ.

ಶಾಂತರಾಮನು ಸಮಾಧಾನಗೊಂಡಂತೆ ಕಾಣಲಿಲ್ಲ. ಆತ ಇನ್ನೂ ಹೆಚ್ಚು ಉದ್ವೇಗದಿಂದ ಹೇಳಿದ, 'ನಿಮಗೆ ಗೊತ್ತಾ? ಈ ನೇಪಾಳದಲ್ಲಿ ಈ ವಿದೇಶಿ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿದವರು ಯಾರು ಎಂದು. ಹತ್ತು ವರ್ಷಗಳ ಹಿಂದೆ ವಿದೇಶಿ ವ್ಯಾಪಾರ ಇಂದು ಇರುವಂತೆ ಇತ್ತಾ? ಸಾಧ್ಯವೇ ಇಲ್ಲ. ನೀವು ಮಾರುಕಟ್ಟೆಯಲ್ಲಿ ನೋಡುತ್ತಿರುವ ಹಣ ನಮ್ಮ ಕಾರಣದಿಂದ. ಹೋಗಿ ಸರ್ಕಾರಿ ದಾಖಲೆಗಳನ್ನು ನೋಡಿ ನಿಮಗೆ ತಿಳಿಯುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ವಿದೇಶಿ ವ್ಯಾಪಾರದಲ್ಲಿ ಎಷ್ಟು ಪ್ರಗತಿಯಾಗಿದೆ ಎನ್ನುವುದನ್ನು. ಇಲ್ಲಿಯ ಭೂತಿಯಾಗಳಿಗೆ, ವಿದೇಶ ವ್ಯಾಪಾರವನ್ನು ಮಾಡುವುದು ಹೇಗೆ ಎನ್ನುವುದನ್ನು ಕಲಿಸಿದವರು ನಾವು ಎನ್ನುವುದು ನಿಮಗೆ ಗೊತ್ತಾ! ಇಂದು ಕಠ್ಮಂಡುವನ್ನು ಮತ್ತೊಂದು ಹಾಂಕ್‌ಕಾಂಗ್ ಮಾಡಿದವರು ನಾವುಗಳು. ನೀವು ನನ್ನನ್ನು ಪ್ರಶ್ನೆ ಮಾಡುತ್ತಿದ್ದೀರಿ ನಾನು ಈ ದೇಶದ ಪ್ರಜೆಯೆ?' ಎಂದು ಮತ್ತೊಮ್ಮೆ ಗುಡುಗಿದ.

ಮಹೇಶ್‌ಕುಮಾರ್ ನಮ್ಮಿಬ್ಬರ ಮಾತುಗಳನ್ನು ನಿಲ್ಲಿಸುವಂತೆ,– 'ಶಾಂತರಾಮ್ ಹೆಚ್ಚು ಮಾತಾಡಬೇಡ. ಆತ ಯಾರು ಎನ್ನುವುದು ನಿನಗೆ ಗೊತ್ತಿಲ್ಲ. ಆತ ನಿನ್ನನ್ನೇನು ವಿರೋಧಿಸುವ ಧ್ವನಿಯಲ್ಲಿ ಪ್ರಶ್ನಿಸಲಿಲ್ಲ. ಆತನನ್ನು ಅರ್ಥಮಾಡಿಕೊಳ್ಳಿ, ಹೆಚ್ಚಿಗೆ ಮಾತುಬೇಡ.'

ಶಾಂತರಾಮ್ ಮತ್ತೆ ಕಟುವಾಗಿ ಆಕ್ಷೇಪಿಸುತ್ತ ಆತ ಮಾತನಾಡಿದ ರೀತಿ ಆಕ್ಷೇಪಣೀಯವಾಗಿತ್ತು ಎಂದು ಹೇಳಿದ. ನಾನು ಬಾಯಿ ಮುಚ್ಚಿಕೊಂಡು ಇರಲು ಸಾಧ್ಯವಿಲ್ಲ. ನಾನು ಈ ದೇಶದಲ್ಲಿ ಸುಮ್ಮಸುಮ್ಮನೆ ವಾಸಿಸುತ್ತಿಲ್ಲ. ಅವರ ವಿನಂತಿಯ ಮೇರೆಗೆ ವಾಸಿಸುತ್ತಿದ್ದೇನೆ. ಪ್ರತಿವರ್ಷ ಇಪ್ಪತ್ತೆರಡು ಮಿಲಿಯನ್ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಪಾವತಿಸುತ್ತಿದ್ದೇನೆ. ನಾನೇಕೆ ಸುಮ್ಮನಿರಲಿ. ಅಲ್ಲದೆ ನನ್ನ ಹಾಗೆ ನನ್ನಷ್ಟೆ ವರಮಾನ ತೆರಿಗೆ ಪಾವತಿಸುವವರು ಇಲ್ಲಿದ್ದಾರೆ. ನಾವು ಪಾವತಿಸುವ ವರಮಾನವನ್ನು ಲೆಕ್ಕಹಾಕಿದರೆ ಎಷ್ಟು ಮಿಲಿಯನ್ನುಗಳಾಗುತ್ತದೆ. ಈ ದೇಶದ ಖಜಾನೆಗೆ ಹಣವನ್ನು ತುಂಬುವವರು ನಾವು. ನಿಮಗೆ ಗೊತ್ತಾ! ನಾವು ಇಲ್ಲಿ ಸುಮ್ಮಸುಮ್ಮನೆ ಏನು ಇಲ್ಲದೆ ವಾಸಿಸುತ್ತಿಲ್ಲ?

ಮಹೇಶಕುಮಾರ್ ಆತನ ಬಾಯಿಮುಚ್ಚಿಸಲು ಪ್ರಯತ್ನಿಸಿ 'ಸರಿ! ಸರಿ! ಈಗ ಇಷ್ಟುಸಾಕು! ನೀನು ೨೨ ಮಿಲಿಯನ್ ಪಾವತಿ ಮಾಡುತ್ತೀಯ ಕಾರಣ ನೀನು ಮಿಲಿಯಗಟ್ಟಲೆ ಸಂಪಾದಿಸುತ್ತೀಯ. ನೀನು ಈ ದೇಶಕ್ಕಾಗಿ ಯಾವ ಉಪಕಾರವನ್ನೂ ಮಾಡಿಲ್ಲ. ಅಲ್ಲದೆ ಈ ದೇಶವೇ ನಿನಗೆ ಉಪಕಾರ ಮಾಡಿದೆ. ಸದ್ಯ ನಿನ್ನ ಮಾತನ್ನು ನಿಲ್ಲಿಸು'.

ಶಾಂತರಾಮ್ ಮಹೇಶಕುಮಾರ್‌ನ ಕಡೆ ತಿರುಗಿ ಹೇಳಿದ 'ಏನು ಹೇಳಿದೆ? ಈ ದೇಶವೇ ನನಗೆ ಉಪಕಾರ ಮಾಡಿದೆಯಾ? ಯಾವ ಆಧಾರದ ಮೇಲೆ ಈ



ರೀತಿ ಹೇಳಿದೆ? ಅದನ್ನು ರುಜುವಾತು ಮಾಡು!'

ಮಹೇಶಕುಮಾರ್ ನಮ್ಮ ವಾದವನ್ನು ನಿಲ್ಲಿಸಲು ಪ್ರಯತ್ನಿಸಿದರು, ಅವರು ನನ್ನ ಸ್ಥಾನದಲ್ಲಿ ನಿಂತು ವಾದ ಮಾಡಿ ಶಾಂತರಾಮನ ಕೋಪದ ಬಿಸಿತಾಪವನ್ನು ಅನುಭವಿಸಬೇಕಾಯಿತು. ಬಹುಶಃ ಮಹೇಶಕುಮಾರ್‌ನಿಗೆ ಶಾಂತರಾಮನ ನಿರ್ದಯ ಹಾಗೂ ಒರಟುನಡತೆಯಿಂದ ಬೇಸರವಾಗಿರ ಬೇಕು. ನಾನು ಮಹೇಶ್ ಕುಮಾರನ ಕಛೇರಿಗೆ ಅತಿಥಿಯಾಗಿ ಬಂದಿದ್ದೆ.

ಶಾಂತರಾಮನ ಕಟ್ಮಂಡುವಿನ ಹಿಂದಿನ ದಿನಗಳನ್ನು ನೆನಪು ಮಾಡುತ್ತ ಮಹೇಶಕುಮಾರ್ ಹೇಳಿದ – 'ನೀನು ಇಂದು ಇಲ್ಲಿ ಪಶುಪತಿನಾಥನ ಆಶೀರ್ವಾದದಿಂದ ಭಾಗ್ಯಶಾಲಿಯಾಗಿರುವೆ. ಇದು ನಿನ್ನ ಭಾಗ್ಯವಲ್ಲವೆ? ಇದು ನಿನಗೆ ಹೆಮ್ಮೆ ಅನ್ನಿಸುವುದಿಲ್ಲವೆ? ಈ ದೇಶ ನಿನಗಾಗಿ ಖಂಡಿತಾ ಸಾಕಷ್ಟು ಸಹಾಯ ಮಾಡಿದೆ. ಅನ್ಯಥಾ ಭಾವಿಸಬೇಡ, ಕಠ್ಮಂಡುವಿನಲ್ಲಿ ನೆಮ್ಮದಿಯ ಸಂತಸದ ಬದುಕನ್ನು ಅನುಭವಿಸಿದ್ದೀಯ. ಇದನ್ನು ನೀನು ಒಪ್ಪಲೇಬೇಕು. ನಾನು ಸದಾ ಪಶುಪತಿನಾಥನ ಪೂಜೆಮಾಡುತ್ತೇನೆ. ಆತನ ಆಶೀರ್ವಾದಕ್ಕಾಗಿ ಬೇಡುತ್ತೇನೆ, ನಾನು ನನ್ನ ಇಡೀ ಜೀವಮಾನವನ್ನು ಈ ರೀತಿಯ ವ್ಯಾಪಾರದಲ್ಲಿ ಕಳೆಯಬೇಕೆಂದು. ಇಡೀ ಪ್ರಪಂಚದಲ್ಲಿ ಕರೆನ್ಸಿ ನೋಟುಗಳನ್ನು ಇಲ್ಲಿ ಪಡೆದಷ್ಟು ಸುಲಭವಾಗಿ ಬೇರೆ ಯಾವ ದೇಶದಲ್ಲೂ ಪಡೆಯಲು ಸಾಧ್ಯವಿಲ್ಲ.

ಶಾಂತರಾಮ ಕೆಲಕಾಲ ಮೌನವಾದ. ಕಿಶನ್‌ಕುಮಾರ್ ಮಹೇಶ್‌ಕುಮಾರನನ್ನು ಬೆಂಬಲಿಸುತ್ತಾ ಹೇಳಿದ– 'ನಾವು ಈ ಜನ ಎಚ್ಚೆತ್ತುಗೊಳ್ಳುವ ಮುನ್ನ ನಮ್ಮ ಕೆಲಸಗಳನ್ನು ಮುಗಿಸಿಕೊಂಡು ಲಾಭಮಾಡಿಕೊಳ್ಳಬೇಕು'.

ಕ್ಷಣಕಾಲದ ಮೌನದ ನಂತರ ಶಾಂತರಾಮ್ ಹೇಳಿದ – 'ಈ ದೇಶದ ಪ್ರಮುಖ ಪ್ರಾಧಿಕಾರವು ಈ ದೇಶದ ಜನಜೀವನದ ಅಭಿವೃದ್ಧಿಗಾಗಿ ನಾವು ಇಲ್ಲಿ ಇರಲೇಬೇಕಾದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡಿದೆ. ಆದ್ದರಿಂದ ನಾವು ಇಲ್ಲಿ ಇದ್ದೇವೆ. ಕೆಲಸ ಮಾಡುತ್ತಿದ್ದೇವೆಂದರೆ, ಅದು ಎರಡು ದೇಶಗಳಿಗೂ ಲಾಭವಾಗುವ ರೀತಿಯಲ್ಲಿ ನಾವು ಕೆಲಸ ಮಾಡುತ್ತೇವೆ. ಆದ್ದರಿಂದ ನಾವು ಕೇವಲ ನಮ್ಮ ಲಾಭಕ್ಕಾಗಿ ಕೆಲಸ ಮಾಡುತ್ತಿದ್ದೇವೆಂದು ತಪ್ಪು ತಿಳಿಯುವುದು ಸರಿಯಲ್ಲ. ಈ ದೇಶದ ಆರ್ಥಿಕ ನೀತಿಗಳು ಹೇಗಿವೆ ನಿನಗೆ ಗೊತ್ತಾ? ಅವು ಮರಳಿನಲ್ಲಿ ಕಟ್ಟಿರುವ ಮನೆಗಳಂತೆ ಎಂದು ನಾನು ಹೇಳಬಲ್ಲೆ. ಅವು ಯಾವಾಗ ಬೇಕಾದರೂ ಬೀಳಬಹುದು. ಆದ್ದರಿಂದ ಬಿದ್ದುಹೋಗುವ ಮನೆಗಳಿಗೆ ಗಾರೆ ಕೆಲಸ ಮಾಡಲು ನಮ್ಮ ಸಹಕಾರ ಹಾಗು ಇರುವಿಕೆ ಬಹಳ ಮುಖ್ಯ. ಅದೂ ಅಲ್ಲದೆ ನಾನು ಈ ದೇಶದ ಪ್ರಜೆಯೊ ಅಲ್ಲವೊ ಎನ್ನುವುದನ್ನು ನೀನು ಕೇಳಿದೆ. ನಾನು ಈಗ ನಿನ್ನ ಅನುಮಾನವನ್ನು ಪರಿಹರಿಸುತ್ತೇನೆ ಕೇಳು. ಅವರು ನನಗೆ ಎರಡು ಭಾರಿ ಈ

ದೇಶದ ಪೌರತ್ವವನ್ನು ನೀಡಲು ಮುಂದೆ ಬಂದಿದ್ದರು. ಆದರೆ ನಾನು ಅಷ್ಟು ಸಲೀಸಾಗಿ ಆಗ ಆ ಪೌರತ್ವವನ್ನು ಒಪ್ಪಲಿಲ್ಲ. ಕಳೆದ ವರ್ಷ ಅವರು ರಫ್ತು ತೆರಿಗೆಯ ಮೇಲೆ ಬೋನಸ್ ಅನ್ನು ರದ್ದು ಪಡಿಸಿದಾಗ ಪೌರತ್ವವನ್ನು ಒಪ್ಪಿಕೊಂಡೆ. ಆದ್ದರಿಂದ ನನಗೆ ನಿನಗೆ ಇರುವ ಹಾಗೆ ಈ ದೇಶದ ಮೇಲೆ ಎಲ್ಲಾ ಹಕ್ಕುಗಳು ಇವೆ. ಗೊತ್ತಾ! ತಿಳಿಯಿತಾ! ಅರ್ಥವಾಯಿತಾ! ನಾನು ಈ ದೇಶದ ಪ್ರಜೆ. ನಾನು ಬಯಸುವವರೆಗೆ ಇರಬಹುದು. ಮತ್ತೆ ಇನ್ನೇನು ಬೇಕು'.

ನಾನು ನಗುತ್ತಾ ಹೇಳಿದೆ – 'ನನಗೆ ಬೇಕಾಗಿದ್ದುದು ಅಷ್ಟೆ, ನನ್ನ ಉದ್ದೇಶವೂ ಅಷ್ಟೆ. ನೀವು ವಿದೇಶಿ ವ್ಯಾಪಾರವನ್ನು ನೇಪಾಳಿ ಪ್ರಜೆಯಾಗಿ ನಡೆಸುತ್ತಿರಬಹುದು. ನೀವು ಒಬ್ಬ ವಿದೇಶಿಯಾಗಿ ವಿದೇಶಿ ವ್ಯಾಪಾರ ಮಾಡುತ್ತಿದ್ದೀರಿ ಎಂದು ನಾನು ಭಾವಿಸುವುದಿಲ್ಲ. ನೀವು ನನ್ನನ್ನು ತಪ್ಪು ತಿಳಿದು ವಿನಾಕಾರಣ ಕೋಪ ಮಾಡಿಕೊಂಡಿರಿ'.

ಇದು ಆತನ ದೌರ್ಬಲ್ಯ, ಎಂದು ನನ್ನನ್ನು ಬೆಂಬಲಿಸುವಂತೆ ಕಿಷನ್‌ಕುಮಾರ್ ಹೇಳಿದರು. 'ಆತನಿಗೆ ರಕ್ತದೊತ್ತಡ ಬೇರೆಯಿದೆ. ಬಹಳ ಬೇಗ ಕೋಪಮಾಡಿಕೊಳ್ಳುತ್ತಾನೆ. ಕೋಪದಲ್ಲಿ ಆಡಿದ ಮಾತುಗಳಿಗೆ ತಪ್ಪು ತಿಳಿಯಬೇಡಿ. ನಾವು ವ್ಯಾಪಾರಸ್ತರು ಕೋಪತಾಪ ಗಳಿಗೆ ಗುರಿಯಾಗಬಾರದು'.

ದೂರವಾಣಿಯ ಕರೆಯನ್ನು ಕೇಳಿ ಮಹೇಶ್‌ಕುಮಾರ್ ದೂರವಾಣಿಯ ರಿಸೀವರ್ ಅನ್ನು ತೆಗೆದು ಶಾಂತರಾಮನಿಗೆ ನೀಡಿದ. ಮಾಜಿ ಮಂತ್ರಿಯೊಬ್ಬರು ಶಾಂತರಾಮನನ್ನು ನೋಡಲು ಬಂದಿರುವುದಾಗಿ ಹಾಗೂ ಆತ ಶಾಂತರಾಮನ ಕಛೇರಿಯಲ್ಲಿ ಕುಳಿತಿರುವುದಾಗಿ ತಿಳಿಯಿತು. ಸುದ್ದಿ ತಿಳಿದ ತಕ್ಷಣ ಶಾಂತರಾಮ ಮತ್ತು ಕಿಶನ್ ಹೊರಟುಹೋದರು.

ಶಾಂತರಾಮ್ ನನ್ನೊಂದಿಗೆ ಒಂದೂ ಮಾತನಾಡದೆ ಹೊರಟುಹೋದ. ಆದರೆ ಆತನ ಕಣ್ಣುಗಳು ಮಾತನಾಡಿದವು. ಶಾಂತರಾಮನ ಕಣ್ಣುಗಳಲ್ಲಿ ಹಣದ ಶಕ್ತಿ ಕುಣಿದಾಡುತ್ತಿದ್ದುದನ್ನು ಕಂಡೆ. ನಾನು ಮಹೇಶ್‌ಕುಮಾರನ ಕಛೇರಿಯಲ್ಲಿ ಆತನ ಜೊತೆಯಲ್ಲಿ ಇಲ್ಲದೆ ಇದ್ದರೆ, ನಾನು ನೇಣು ಹಾಕಿಕೊಳ್ಳಬೇಕಾಗುತ್ತಿತ್ತು. ಸರಿ, ಏನು ಮಾಡುವುದು, ಇಂಥದ್ದಕ್ಕೆಲ್ಲ ನಾವು ಸಿದ್ಧರಾಗಿರಬೇಕು ಇರಲಿ ಅಂದುಕೊಂಡೆ.

'ಓ! ನೀವೇಕೆ ಇಂಥ ವಿವಾದಾತ್ಮಕ ವಿಚಾರಗಳನ್ನು ತೆಗೆದು ಆತನೊಂದಿಗೆ ವಾದಕ್ಕಿಳಿದಿರಿ' ಎಂದು ಮಹೇಶ್‌ಕುಮಾರ್ ಹೇಳಿದ.

ಈ ವಿಷಯ ಸದಾ ನನ್ನ ಮನಸ್ಸಿನಲ್ಲಿ ಕಾಡುತ್ತಿರುತ್ತದೆ. 'ನಿಮ್ಮನ್ನು ಈ ವಿಷಯದ ಬಗ್ಗೆ ಕೇಳಿದ್ದೆ ನೆನಪಿದೆಯಾ'? ಆದರೆ ನೀವು ಈ ರೀತಿ ಪ್ರತಿಕ್ರಿಯಿಸಿರಲಿಲ್ಲ' ಎಂದು ನಾನು ಹೇಳಿದೆ.

'ಹೌದು' ಎಂದು ಆತ ನಗುತ್ತಾ ಹೇಳಿದ– 'ಈ ವಿಷಯವಾಗಿ ನನ್ನನ್ನು



ಕೇಳಿದ್ದಿರಿ. ಆದರೆ ನಾನು ಏನೂ ಹೇಳಿರಲಿಲ್ಲ ಮತ್ತು ಹೇಳುವ ಅಗತ್ಯವಿದೆಯೆಂದು ನನಗೆ ಅನ್ನಿಸಿರಲಿಲ್ಲ ಮತ್ತು ನಾನು ಹೇಳುವವರೆಗೆ ನಿಮಗೆ ಗೊತ್ತಾಗುವುದಿಲ್ಲ. ನಿಮಗೆ ತಿಳಿಯುವವರೆಗೆ ನಮ್ಮ ವ್ಯಾಪಾರ ಗುಟ್ಟಾಗಿ ಉಳಿಯುತ್ತದೆ. ವ್ಯಾಪಾರಿಗೆ ಬಹುಮುಖ್ಯವಾಗಿ ಬೇಕಾಗಿರುವುದು ಆತನ ವ್ಯಾಪಾರವನ್ನು ಗುಟ್ಟಾಗಿಡುವುದು. ಈ ಗುಟ್ಟು – ರಟ್ಟಾದರೆ ಆತನ ವ್ಯಾಪಾರ ಮುಗಿದಂತೆ' ಎಂದ.

'ಹಾಗಾದರೆ ನಾನು ಏನನ್ನೂ ಕೇಳುವುದಿಲ್ಲ' – ಎಂದೆ.

'ಹೌದು, ಕೇಳದೆ ಇರುವುದೇ ಒಳ್ಳೆಯದು' ಎಂದು ಮಹೇಶಕುಮಾರ್ ಹೇಳಿದ. 'ನಾನು ಇಂದು ಭಾರತೀಯ ಪ್ರಜೆ. ನಾಳೆಯೂ ಕೂಡ ಭಾರತೀಯ ಪ್ರಜೆಯಾಗಿ ಇರುತ್ತೇನೆ. ನಾನು ಶಾಂತರಾಮನ ರೀತಿ ಕಾನೂನುಬಾಹಿರ ಪ್ರಜೆಯಾಗಲು ಬಯಸುವುದಿಲ್ಲ. ಅಂಥ ಪ್ರಸಂಗ ಬಂದರೆ ನಾನು ಭಾರತೀಯ ಪೌರತ್ವವನ್ನು ತೊರೆದು ನೇಪಾಳಿ ಪೌರತ್ವವನ್ನು ಪ್ರಾಮಾಣಿಕವಾಗಿ ಪಡೆಯುತ್ತೇನೆ. ನಾನು ಯಾವುದೇ ಕಾರಣಕ್ಕೂ ಎರಡು ದೋಣಿಗಳಲ್ಲಿ ನನ್ನ ಕಾಲುಗಳನ್ನು ಇಡುವುದಿಲ್ಲ'.

'ಹೌದು! ಒಳ್ಳೆ ಐಡಿಯಾ!'

'ನಾವು ಇಲ್ಲಿ ಸ್ವತಂತ್ರವಾಗಿ, ಯಾವ ಅಡಚಣೆಯೂ ಇಲ್ಲದೆ ಸಂತೋಷವಾಗಿ ನಮ್ಮ ವ್ಯಾಪಾರವನ್ನು ಮುಂದುವರೆಸುತ್ತೇವೆ ಎನ್ನುವ ಭಾವನೆಯಲ್ಲಿದ್ದೇವೆ. ಅದು ಅಲ್ಲದೆ ಇಲ್ಲಿಯ ಜನ ನಮಗೆ ಬೇಕಾದ ಎಲ್ಲ ರೀತಿಯ ಸಹಾಯ ಹಾಗೂ ಸಹಕಾರವನ್ನು ನೀಡಿದ್ದಾರೆ. ಎಲ್ಲಾ ವರ್ಗದವರಲ್ಲಿ ಸಹಕಾರವನ್ನು ಪಡೆದಿದ್ದೇವೆ. ನಮ್ಮ ಬಗ್ಗೆ ಯಾರೂ ಯಾವ ಆಕ್ಷೇಪಣೆಯನ್ನೂ ಮಾಡದಂತೆ ಎಲ್ಲರೊಂದಿಗೆ ಬೆರೆತು ಹೋಗಿದ್ದೇವೆ'.

ಆತ ಈಗ ಕೈಗೆತ್ತಿಕೊಂಡಿರುವ ಹೊಸ ಯೋಜನೆಯ ಮೇಲೆ ಒತ್ತು ಕೊಡುತ್ತಾ, ನೀವು 'ನಮ್ಮ ಜೊತೆ ಸೇರಿದರೆ' ಬಹಳ ಒಳ್ಳೆಯದು ಎಂದು ಹೇಳಿದ. ಶಾಂತರಾಮ್ ಯಾವ ರೀತಿ ಮೆರೆಯುತ್ತಿದ್ದಾನೆ ನೀನು ನೋಡಿದೆಯಲ್ಲ. ಇದು ಕೇವಲ ಹಣದ ಶಕ್ತಿ ಅಷ್ಟೆ' ಎಂದು ಹೇಳಿದ.

'ಮಿ. ಮಹೇಶ್ ಕುಮಾರ್! ಯಾವುದೇ ಒಂದು ಕೆಲಸ ಮಾಡುವ ಮುನ್ನ ಸರ್ಕಾರದ ನೀತಿ ನಿಯಮಗಳ ವಿರುದ್ಧ ಹೋಗುವುದು ಅಪಾಯ ಎನ್ನುವ ತಿಳುವಳಿಕೆ ಇರಬೇಕು. ಆದ್ದರಿಂದ ತಕ್ಷಣಕ್ಕೆ ನಾನು ನಿಮ್ಮ ಯೋಜನೆಯನ್ನು ಒಪ್ಪಿಕೊಳ್ಳುವ ಬಗ್ಗೆ ಸದ್ಯಕ್ಕೆ 'ಆಗಲಿ' ಎಂದು ಹೇಳುವ ಸ್ಥಿತಿಯಲ್ಲಿ ಇಲ್ಲ' ಎಂದೆ.

'ನಾನು ಇಷ್ಟೆಲ್ಲ ವಿವರಿಸಿ ಸಲಹೆ ನೀಡಿದರೂ ಅಭಿಪ್ರಾಯ ತಿಳಿಸಿದರೂ ನಿಮಗೆ ಒಪ್ಪಿಗೆಯಾಗದಿದ್ದರೆ ಬೇಡ. ಸರಿ ನೀವು ಸಮಾಧಾನವಾಗಿ ಯೋಚಿಸಿ ಒಂದೆರಡು ದಿನಗಳಲ್ಲಿ ನಿಮ್ಮ ಉತ್ತರವನ್ನು ನೀಡಿರಿ, ಸರಿಯಾ? ಆಗಬಹುದಾ?'

ಮಹೇಶ್‌ಕುಮಾರನ ಜೊತೆಯಲ್ಲಿ ಅನೇಕ ಗಂಟೆಗಳನ್ನು ನಾನು ಕಳೆದಿದ್ದೆ. ನಾನು ಹೋಗಲು ಸಿದ್ಧನಾಗಿ– 'ಮಹೇಶಕುಮಾರ್ ನಾನು ಈಗ ಹೋಗಲು ಅನುಮತಿ ನೀಡಿ' ಎಂದೆ.

'ಸರಿ, ಹೋಗಿ ನೀವು ನನ್ನ ಯೋಜನೆಯ ಬಗ್ಗೆ ಯೋಚಿಸಿ, ನಾಳೆಯೊಳಗೆ ತೀರ್ಮಾನವನ್ನು ಹೇಳಿ' ಎಂದು ಹೇಳಿದರು.

ಹೊರಡಲು ಸಿದ್ದನಾಗಿ 'ಬಹಳ ವಂದನೆಗಳು' ನಿಮ್ಮ ಕಾಫಿಗೆ ಹಾಗು ಅನೇಕ ವಿಚಾರಗಳನ್ನು ನಾನು ಇಲ್ಲಿ ಇದ್ದ ಸಮಯದಲ್ಲಿ ತಿಳಿಯಲು ಸಾಧ್ಯವಾಗಿದ್ದಕ್ಕಾಗಿ ಮತ್ತೊಮ್ಮೆ ಧನ್ಯವಾದಗಳು.

ನಾನು ಹೊರಟು ಬಾಗಿಲ ಬಳಿ ನಿಂತಿದ್ದಾಗ 'ದಯಮಾಡಿ ಶಾಂತರಾಮ್‌ನ ಮಾತುಗಳಿಗೆ ಏನೂ ತಿಳಿದುಕೊಳ್ಳಬೇಡಿ ಮತ್ತು ನಾಳೆ ಉತ್ತರಿಸುವುದನ್ನು ಮರೆಯಬೇಡಿ' ಎಂದು ನೆನಪು ಮಾಡಿದ.

'ಪರವಾಗಿಲ್ಲ, ಅದೇನು ಅಂಥ ಗಂಭೀರವಾದ ವಿಚಾರವಲ್ಲವೆಂದು ಹೇಳಿ ನಾನು ರೂಮಿನಿಂದ ಹೊರನಡೆದೆ. ಹೊರಗಡೆಯ ಕೊಠಡಿಯಲ್ಲಿ ಮೂರು ನೇಪಾಳಿಗಳು ಅವರವರ ಟೇಬಲ್ಲಿನ ಮೇಲೆ ಕೆಲಸ ಮಾಡುತ್ತಿದ್ದುದು ಕಾಣಿಸಿತು. ಅವರಲ್ಲಿ ನನಗೆ ಚೆನ್ನಾಗಿ ಪರಿಚಯವಿರುವ ಹುಡುಗಿಯೊಬ್ಬ ಳಿದ್ದಳು. ಮಿಸ್ ಶಶಿರಾಣ – ಎಂ.ಎ. (ಅರ್ಥಶಾಸ್ತ್ರ) ಆಕೆ ಬಹಳ ದಿನಗಳಿಂದಲೂ ಕೆಲಸವಿಲ್ಲದೆ ಕಾಲ ಕಳೆಯುತ್ತಿದ್ದಳು. ಅವರನ್ನು ನೋಡಿದ ನಾನು ಆಕೆಯ ಟೇಬಲ್ಲಿನ ಕಡೆ ಸಹಜವಾಗಿ ಹೆಜ್ಜೆಹಾಕಿದೆ. ಹಲೊ! ಮಿಸ್. ರಾಣ ನೀವು ಇಲ್ಲಿ ಕೆಲಸ ಮಾಡುತ್ತಿದ್ದೀರಾ? ಎಂದು ನಾನು ಕೇಳಿದೆ.

'ನಮಸ್ಕಾರ, ನಿಮ್ಮನ್ನು ಇಲ್ಲಿ ನೋಡಿದ್ದು ಸಂತೋಷವಾಯಿತು. ಇತ್ತೀಚೆಗೆ ನಾನು ಇಲ್ಲಿ ಕೆಲಸ ಮಾಡುತ್ತಿದ್ದೇನೆ, ನೀವೇನಿಲ್ಲಿ? ಏನಾದರೂ ಕೆಲಸವಿತ್ತಾ'? ಆಕೆ ಕೇಳಿದಳು.

'ಓ! ನಾನು ಮಹೇಶಕುಮಾರ್‌ನನ್ನು ನೋಡಲು ಬಂದಿದ್ದೆ. ನಾನು ಈಗ ಹೋಗುತ್ತಿದ್ದೇನೆ. ನೀವು ಎಷ್ಟು ದಿನದಿಂದ ಇಲ್ಲಿದ್ದೀರಿ'?

'ಮೂರು ತಿಂಗಳಿಂದ ಇಲ್ಲಿದ್ದೀನಿ. ನಾನು ಸುಮಾರು ಒಂದು ವರ್ಷ ಕಾಲ ಕೆಲಸವಿಲ್ಲದೆ ಇದ್ದೆ. ಕೊನೆಗೆ ಇಲ್ಲಿ ಕೆಲಸ ಸಿಕ್ಕಿತು'.

'ಒಳ್ಳೆದು. ನಾನು ಇಲ್ಲಿ ನಿಮ್ಮನ್ನು ನೋಡಿದ್ದು ಸಂತೋಷವಾಯಿತು. ಸರಿ, ನಮಸ್ತೆ' ನಾನು ಬರ್ತೀನಿ.

ನಾನು ರಸ್ತೆಯಲ್ಲಿ ಹೋಗುತ್ತಿದ್ದರೂ ಮನಸ್ಸೆಲ್ಲಾ ಮಹೇಶಕುಮಾರನ ಕಛೇರಿಯಲ್ಲಿಯೆ ಇತ್ತು. ಅಲ್ಲಿ ಚರ್ಚಿತವಾದ ವಿಷಯಗಳು ನನ್ನ ಮನಸ್ಸಿನಲ್ಲಿಯೇ ಸುತ್ತುತ್ತಿದ್ದವು. ತುಂಬಾ ನಿಷ್ಠೆಯಿಂದ ಮಹೇಶ್‌ಕುಮಾರನ ಸೇವೆ ಮಾಡುತ್ತಿರುವ



ನೇಪಾಳಿಯ 'ಬಹದ್ದೂರ್', ಶಾಂತರಾಮನಲ್ಲಿ ಸೇವೆ ಮಾಡುತ್ತಿರುವ ಬಹಳ ಅನುಭವಿ ಶರ್ಮನಂಥ ನೇಪಾಳಿ, ಕೇವಲ ಮಾತಿನಿಂದಲೇ ಲಕ್ಷಾಂತರ ರೂಪಾಯಿಗಳ ವ್ಯಾಪಾರ, ಎಲ್ಲವೂ ಒಂದು ರೀತಿಯ ಪವಾಡ. ನನಗೆ ಅವುಗಳಲ್ಲಿನ ವಾಸ್ತವಗಳು, ರಹಸ್ಯಗಳು ಅರ್ಥವಾಗಲಿಲ್ಲ.

ನನ್ನ ಕಣ್ಣ ಮುಂದೆ 'ಬಿಸಾಲ್ ಬಜಾರಿನ' ಸೂಪರ್ ಮಾರ್ಕೆಟ್‌ನ ನಾಮಫಲಕ ನೆನಪಾಯಿತು. ನಾನು ಆದು ಆರಂಭವಾದಾಗಿನಿಂದ ಅಲ್ಲಿಗೆ ಹೋಗಿರಲಿಲ್ಲ. ನನ್ನ ಕಾಲುಗಳು ಸಹಜವಾಗಿ ಯಾವುದೇ ಪ್ರಯತ್ನವಿಲ್ಲದೆ ಸೂಪರ್ ಮಾರುಕಟ್ಟೆಯ ಕಡೆ ನಡೆದವು. ಅಲ್ಲಿಯ ಬಣ್ಣದ ಲೋಕವನ್ನು ಕುತೂಹಲದಿಂದ ನೋಡಿದೆ. ನಾವು ಕಠ್ಮಂಡುವನ್ನು 'ಮತ್ತೊಂದು ಹಾಂಕಾಂಗನ್ನಾಗಿ ಮಾಡಿದ್ದೇವೆ' ಎಂದು ಶಾಂತರಾಮ್ ಹೇಳಿದ ಮಾತುಗಳು ನನ್ನ ಮನದಾಳದಲ್ಲಿ ಮೊಳಗಿದವು.

n

## ಬುಧವಾರ

**ಏ**ನಾಯಿತು! ಏನು ಅಪರಾಧವಾಯಿತು?

ಈ ಶಬ್ದಗಳು ನನ್ನ ಕಿವಿಯಲ್ಲಿ ಮೊಳಗತೊಡಗಿದವು. ನಾನು ಗಾಬರಿಯಿಂದ ಎದ್ದೆ! ನನ್ನ ಮುಂದೆ ಗಾಬರಿಗೊಂಡಂತೆ ಕಂಡ ನನ್ನ ಸಹೋದರ ನಿಂತಿದ್ದನು. ಆತ ಮತ್ತೆ ಕೇಳಿದ – 'ಏನಾಯಿತು? ಏನು ಸಮಾಚಾರ?

ನನಗೆ ಯೋಚಿಸಲಾಗುತ್ತಿಲ್ಲ......ನನ್ನ ಮನಸ್ಸಿನಿಂದ ಯಾವ ಆಲೋಚನೆಯೂ ಬರುತ್ತಿಲ್ಲ...... ಆತ ಯಾಕೆ ಕೇಳುತ್ತಿದ್ದಾನೆ? ನಾನು ಹೇಳುವಂಥದ್ದು ಏನು ಇಲ್ಲ. ನಾನು ಗಡಿಯಾರವನ್ನು ನೋಡಿದೆ. ಆರು ಗಂಟೆಗೆ ಇನ್ನೂ ಹದಿನೈದು ನಿಮಿಷಗಳು ಮಾತ್ರ ಇತ್ತು. ನಾನು ಸಾಮಾನ್ಯವಾಗಿ ಆರುಗಂಟೆಗೆ ಏಳುತ್ತಿದ್ದೆ. ನಾನು ಪ್ರತಿದಿನ ಏಳುತಿದ್ದ ಸಮಯಕ್ಕೆ ಹದಿನೈದು ನಿಮಿಷಗಳ ವ್ಯತ್ಯಾಸ. ಹಾಸಿಗೆಯ ದಿಂಬಿನಿಂದ ತಲೆಯನ್ನು ಮೇಲೆತ್ತಿ ಕೇಳಿದೆ – ಯಾಕೆ? ಏನಾಯಿತು?

ನೀನು ಯಾರ ಜೊತೆಯಲ್ಲಿ ಮಾತನಾಡುತ್ತಿದ್ದೆ? ಆತ ಕುತೂಹಲದಿಂದ ಕೇಳಿದ ನಾನು ಈ ಕೊಠಡಿಯನ್ನು ಪ್ರವೇಶ ಮಾಡಿದಾಗ ನೀನು ಹೇಳ್ತಾಯಿದ್ದೆ – 'ನಮಸ್ತೆ ಸಾರ್! ನಮಸ್ತೆ! ನೀವು ನನ್ನನ್ನು ಗುರುತು ಹಿಡಿದಿರಾ? ನೀವು ನನ್ನನ್ನೂ ಮರೆತಿರಾ'? ಎಂದು. ನೀನು ಯಾರೊಂದಿಗೆ ಮಾತನಾಡುತ್ತಿದ್ದೆ?

ನನ್ನ ಸಹೋದರನ ಪ್ರಶ್ನೆಗಳು ನನ್ನನ್ನು ಕುತೂಹಲದಲ್ಲಿ ಮುಳುಗಿಸಿದವು. ನಾನು ಈ ಸಮಯದಲ್ಲಿ ಯಾರೊಂದಿಗೂ ಮಾತನಾಡಿದ ನೆನಪಿಲ್ಲ. ಅದೂ ಅಲ್ಲದೆ ಇಂಥ ಬೆಳಗಿನ ಸಮಯದಲ್ಲಿ ಯಾರ ಭೇಟಿಯೂ ಸಾಧ್ಯವಿಲ್ಲ. ಬಹುಶಃ ನಾನು ಕನಸು ಕಂಡಿರಬೇಕು. ಆ ಕನಸಿನಲ್ಲಿ ಯಾರೊಂದಿಗೋ ಮಾತನಾಡುತ್ತಿರಬೇಕು. ನಾನು ಕನಸಿನ ಚಿತ್ರಗಳನ್ನು ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದೆ. ಮತ್ತು ಕನಸಿನ ಚಿತ್ರಗಳು ನನ್ನ ಮನಸ್ಸಿನ ತೆರೆಯ ಮೇಲೆ ಕಾಣಿಸಿಕೊಳ್ಳತೊಡಗಿದವು. 'ನಾನೊಂದು ಕನಸ ಕಂಡಿದ್ದೇನೆ'. ಎಂದು ನನ್ನ ಸಹೋದರನಿಗೆ ಹೇಳಿದೆ.

'ನೀನು ಎಂಥಾ ಕನಸು ಕಂಡೆ. ಆ ಕನಸಿನಲ್ಲಿ ನಮಸ್ತೆ ಎಂದು ಹೇಳುತ್ತಿದ್ದೆ' ಎಂದು ನನ್ನ ಸಹೋದರ ನಗುತ್ತಾ ಹೇಳಿದ. 'ನೀನು ಯಾರೋ ಬಹಳ ಮುಖ್ಯವಾದ ವ್ಯಕ್ತಿಯನ್ನು ಭೇಟಿ ಮಾಡಿರಬೇಕು'.

ನನ್ನ ಮಾತು ನನ್ನ ಸಹೋದರನಲ್ಲಿ ಕುತೂಹಲವನ್ನು ಮೂಡಿಸಿದವು.



ನನ್ನ ಹಾಸಿಗೆಯ ಮೇಲೆ ಕೂರಲು ಬಂದನು. ನಾನು ಕಾಲುಗಳನ್ನು ಹಿಂದಕ್ಕೆ ಸರಿಸಿ ಕೂರಲು ಅವಕಾಶ ಮಾಡಿಕೊಟ್ಟೆನು. 'ನೀನು ರಾತ್ರಿ ಯಾವುದಾದರೂ ಹೋಟೇಲ್‌ಗೆ ಹೋಗಿದ್ದೆಯಾ?' ಎಂದು ನನ್ನ ಸಹೋದರ ಕೇಳಿದನು.

'ಹೌದು. ನಿನ್ನೆ ಒಂದು ಹೋಟೆಲ್‌ನಲ್ಲಿ ಬಹಳ ಪ್ರಮುಖವಾದ ವ್ಯಕ್ತಿಯನ್ನು ಭೇಟಿ ಮಾಡಿದ್ದೆ. ಆತ ಒಬ್ಬ ಮಾಜಿಮಂತ್ರಿ, ಆತ ಅನೇಕ ಬಾರಿ ಮಂತ್ರಿಯಾಗಿದ್ದವನು. ಆತ ಮತ್ತೆ ಮಂತ್ರಿಯಾಗುವುದಾಗಿ ಹೇಳಿದ. ನಾನು ಆ ಮಂತ್ರಿಯ ಬಗ್ಗೆ ಕನಸು ಕಂಡೆ.'

'ಹೌದು! ಧೃವನಾಥ್ ನನ್ನನ್ನು ಹೊಸ ರಸ್ತೆಯಲ್ಲಿರುವ ಹೋಟೆಲೊಂದಕ್ಕೆ ಊಟಕ್ಕೆ ಆಹ್ವಾನಿಸಿದ್ದನು.'

ನನ್ನ ಸಹೋದರ ಸಂಜೆ ವಿಳಂಬವಾಗಿ ಮನೆಗೆ ಬರುವುದು ರೂಢಿ. ಈಗ ಆತ ಪರೀಕ್ಷೆಗಾಗಿ ಸಿದ್ಧತೆ ನಡೆಸುತ್ತಿದ್ದ. ನಾವು ಸಾಮಾನ್ಯವಾಗಿ ಬೆಳಗಿನ ಸಮಯದಲ್ಲಿ ಭೇಟಿಯಾಗುತ್ತೇವೆ. ನಮ್ಮ ಇಡೀ ದಿನದ ಕಾರ್ಯಕ್ರಮಗಳನ್ನು ಆತ ಆಗ ಸಿದ್ಧಪಡಿಸುತ್ತಾನೆ. ಯಾವಾಗ ಆತನಿಗೆ ಪರಿಚಯವಿರುವ ಹೆಸರನ್ನು ಆತ ಕೇಳಿದನೋ– ಆತ ಹೇಳಿದ 'ಮಿ॥ ಧೃವನಾಥ್ ಅಲ್ಲವಾ ನೀನು ಹೇಳಿದ್ದು?

ಹೌದು! ಆತನಿಗೆ ಪ್ರಮೋಷನ್ ಬಂದಿದೆ. ಅದಕ್ಕಾಗಿ ಆತ ನನ್ನನ್ನು ಊಟಕ್ಕೆ ಕರೆದಿದ್ದ.

'ನೀವಿಬ್ಬರೆ ಹೋಗಿದ್ದಿರಾ?'

'ಹೌದು! ನಾವಿಬ್ಬರೇ'.

'ಹಾಗಾದರೆ, ನೀನು ಯಾವ ಮಿನಿಸ್ಟರ್ ವಿಚಾರ ಮಾತಾನಾಡುತ್ತಿದ್ದುದು?'

ಆತ ನಿನ್ನೆ ರಾತ್ರಿ ನಡೆದ ಎಲ್ಲಾ ವಿಚಾರವನ್ನು ಹೇಳುವಂತೆ ಒತ್ತಾಯ ಮಾಡುತ್ತಿದ್ದ. ನಾವು ಕುಡಿಯಬೇಕಿದ್ದ ಟೀ ಇನ್ನೂ ಬರಬೇಕಿತ್ತು. ಟೀಗಾಗಿ ಕಾಯುತ್ತಿದ್ದೆವು. ಕಳೆದ ರಾತ್ರಿ ನಡೆದ ಘಟನೆ ಇನ್ನೂ ನನ್ನ ಮನಸ್ಸಿನಲ್ಲಿ ಹಸಿರಾಗಿಯೇ ಇತ್ತು.

ನನ್ನ ಸ್ನೇಹಿತ ಧೃವನಾಥ್ ಆತನ ಪ್ರಮೋಷನ್ ಅನ್ನು ಸಂತೋಷವಾಗಿ ಆಚರಿಸಲು ಒಂದು ಒಳ್ಳೆಯ ಹೋಟೆಲ್‌ಗೆ ಆಹ್ವಾನಿಸಿದ್ದ. ಇದ್ದಕ್ಕಿದ್ದಂತೆ ಸಂಜೆ ಎಂಟು ಗಂಟೆಗೆ ಬಂದು ಯಾವುದಾದರೂ ಹೋಟೆಲ್‌ಗೆ ಹೋಗೋಣವೆ ಎಂದು ಕೇಳಿದ. ನಾನು ಈ ಸಂಜೆ ಬಿಡುವಾಗಿದ್ದೇನೆ. ನಾನು ಮುಂದಿನ ಹದಿನೈದು ದಿನ ಬಿಡುವಾಗಿರುವುದಿಲ್ಲ. ನಾನು ಬೇರೆ ಯಾವುದಾದರೂ ದಿನಗಳಲ್ಲಿ ಊಟವನ್ನು ಏರ್ಪಡಿಸಿದರೆ ನಿನಗೆ ಬೇಜಾರಾಗಬಹುದು. ಆದ್ದರಿಂದ ಇಂದು ಸಂಜೆಯೇ ಎಲ್ಲಾದರು ಹೋಗೋಣವೆಂದು ತೀರ್ಮಾನಿಸಿದ್ದೇನೆ ಎಂದ. ನನಗೆ ಒಂದು ರೀತಿಯ ಉಭಯ ಸಂಕಟವಾಯಿತು. ಆದರೆ ನಾನು ಆತನ ಆಹ್ವಾನವನ್ನೂ

ತಿರಸ್ಕರಿಸುವಂತಿರಲಿಲ್ಲ.

ನಾವು ಹೋಟೆಲ್ ಅನ್ನು ತಲುಪಿದಾಗ ರಾತ್ರಿ ೯ ಗಂಟೆಯಾಗಿತ್ತು. ಹೋಟೆಲ್ ವಿದೇಶಿಯ ಪ್ರವಾಸಿಗರು ಹಾಗೂ ನೇಪಾಳದ ಅತಿಥಿಗಳಿಂದ ತುಂಬಿಹೋಗಿತ್ತು. ನಮಗೆ ಜಾಗವೆ ಸಿಗಲಿಲ್ಲ. ನಾವು ಸ್ವಾಗತಗಾರನ ಬಳಿ ಹೋಗಿ ಈ ವಿಚಾರವನ್ನು ತಿಳಿಸಿದೆವು. ಆತ ಒಬ್ಬನೇ ಒಬ್ಬ ಅತಿಥಿ ಕುಳಿತಿರುವ ಜಾಗವನ್ನು ತೋರಿಸಿದ. ಅಲ್ಲಿ ಜಾಗವಿತ್ತು. ನಾವು ಆ ಜಾಗಕ್ಕೆ ಹೋಗಿ– ಕುಳಿತುಕೊಳ್ಳಬಹುದೆ ಎಂದು ಆ 'ಜಂಟಲ್‌ಮೆನ್' ನನ್ನು ಕೇಳಿದೆವು. ಆತ ಮೊದಲು ನಮ್ಮನ್ನು ಆಪಾದಮಸ್ತಕ ನೋಡಿದ. ಆಮೇಲೆ ಸುತ್ತಲೂ ನೋಡಿದ. ಯಾವುದೇ ಜಾಗ ಖಾಲಿಯಿಲ್ಲದುದನ್ನು ಗಮನಿಸಿ, ಕುಳಿತುಕೊಳ್ಳಲು ಅನುಮತಿ ನೀಡಿದ.

ಆ ಟೇಬಲ್ಲಿನ ಮೇಲೆ ಮೂರು ತಟ್ಟೆಗಳಿದ್ದವು. ಒಂದು ಆತನ ಮುಂದೆ, ಇನ್ನೊಂದು ನಮ್ಮಗಳ ಮುಂದೆ. ಒಂದು ಅರ್ಧ ಪೆಗ್ ವಿಸ್ಕಿಯಿಂದ ತುಂಬಿದ ಗ್ಲಾಸನ್ನು ಹಿಡಿದುಕೊಂಡಿದ್ದ. ಒಂದು ಕೈಯಲ್ಲಿ ವಿಸ್ಕಿ ಗ್ಲಾಸನ್ನು ಹಿಡಿದು ಕೊಂಡಿದ್ದರೆ ಇನ್ನೊಂದು ಕೈಯಲ್ಲಿ ಕಿಂಗ್‌ಸೈಜಿನ ಸಿಗರೇಟನ್ನು ಹಿಡಿದುಕೊಂಡಿದ್ದ. ಆತ ತನ್ನ ಗಮನವನ್ನು ರೆಸ್ಟೋರೆಂಟ್‌ನ ಇನ್ನೊಂದು ಭಾಗದ ಕಡೆ ಕೇಂದ್ರೀಕರಿಸಿದ್ದ. ಆದರೆ ನಮ್ಮ ಗಮನ ಆತನ ಮೇಲೆ ಇತ್ತು. ನಾನು ಮತ್ತು ನನ್ನ ಸ್ನೇಹಿತ ಆತನ ಬಗೆಗೆ ಯೋಚಿಸುತ್ತಿದ್ದೆವು. ಆದರೂ ಆತ ಯಾರು ಮತ್ತು ಯಾವ ರೀತಿಯ ಮನುಷ್ಯ ಎನ್ನುವುದನ್ನು ಗುರುತಿಸಲು ನಾನು ಸೋತು ಹೋದೆನು. ಆತನ ಭಾಷೆ ಹಾಗೂ ಆತನನ್ನು ನೋಡಿದರೆ ನೇಪಾಳಿಯಂತೆ ಕಾಣುತ್ತಿದ್ದನು. ಆತ ನಿಜವಾಗಿಯೂ ಯಾರು ಎನ್ನುವುದನ್ನು ಗುರುತಿಸಲು ಸಾಧ್ಯವಾಗಲಿಲ್ಲ. ನಾವು ನಮ್ಮ ನಮ್ಮಲ್ಲೇ ನೋಡಿಕೊಂಡು ಆತನ ಬಗ್ಗೆ ಯೋಚಿಸುತ್ತಿದ್ದೆವು. ನಾವು ಸಂಕೇತಗಳ ಮೂಲಕ ಮಾತನಾಡಿದೆವು. ಆದರೂ ಪ್ರಯೋಜನವಾಗಲಿಲ್ಲ.

ಹೋಟೆಲ್ ಹುಡುಗ ಬಂದು ಖಾಲಿ ಪ್ಲೇಟ್‌ಗಳನ್ನು ತೆಗೆಯಲು ಆತನ ಅನುಮತಿಯನ್ನು ಬೇಡಿದ. ಆತ ಎರಡು ಖಾಲಿ ಪ್ಲೇಟ್‌ಗಳನ್ನು ತೆಗೆದುಕೊಂಡು ಹೋಗುವಂತೆ ಅನುಮತಿಸಿ ಇನ್ನೊಂದು ಪೆಗ್ ವಿಸ್ಕಿ ತರುವಂತೆ ಆದೇಶಿಸಿದ.

ಟೇಬಲ್ ಆಗ ಖಾಲಿಯಿತ್ತು. ಅಲ್ಲಿ ಒಂದು ಆಷ್‌ಟ್ರೇ ಮಾತ್ರ ಇತ್ತು. ಆತನ ಕೈಯಲ್ಲಿ ಒಂದು ಗ್ಲಾಸ್ ಇತ್ತು. ತುಂಬಾ ನಾಗರಿಕನಂತೆ ಕಾಣುತ್ತಿದ್ದ ಆತ ಸಮಾಧಾನವಾಗಿದ್ದ. ಕೈಲಿದ್ದ ಸಿಗರೇಟನ್ನು ಆಸ್ಟ್ರೆನಲ್ಲಿ ಹೊಸಗಿ, ಇನ್ನೊಂದು ಸಿಗರೇಟನ್ನು ಅಂಟಿಸಿಕೊಂಡ. ಈ ಜನರಿಗೆ ಉಲ್ಲಾಸ ನೀಡಲು ಈ ತರದ ಸಿಗರೇಟ್ ಎಷ್ಟು ಕಾಲ ಸಮುದ್ರಯಾನ ಮಾಡಿರಬಹುದು? ಎಂದು ನನ್ನ ಮನಸ್ಸಿನಲ್ಲಿಯೆ ಅಂದುಕೊಂಡೆ ಮತ್ತು ಯಾವ ದೇಶ ಈ ಸಿಗರೇಟನ್ನು ತಯಾರಿಸಬಹುದು? ಹಾಗೂ ಸ್ವಲ್ಪ ಕಾಲದ ಉಲ್ಲಾಸ ನೀಡುವ ಈ ಸಿಗರೇಟ್



ಲೈಟರ್ ಅನ್ನು ಯಾವ ದೇಶ ತಯಾರಿಸಿದೆ? ಎಂದೆಲ್ಲಾ ಯೋಚಿಸತೊಡಗಿದೆ.

ಸ್ವಲ್ಪ ಸಮಯದ ನಂತರ ಸಪ್ಲೈಯರ್ ನಮ್ಮ ಟೇಬಲ್ಲಿನ ಬಳಿ ಬಂದನು. ನನ್ನ ಸ್ನೇಹಿತ ಆತನಿಗೆ ಪ್ರಿಯವಾದ ಸಸ್ಯಾಹಾರದ ಆಹಾರವನ್ನು ಕೊಡುವಂತೆ ತಿಳಿಸಿದನು. ಆಗ ಆ ಸೆಪ್ಲೈಯರ್ ಇದನ್ನು ಸಿದ್ಧಪಡಿಸಲು ಸ್ವಲ್ಪ ಸಮಯವಾಗುವುದರಿಂದ ನೀವು ಕಾಯಬೇಕಾಗುತ್ತದೆ, ಎಂದು ತಿಳಿಸಿದನು. ಆಗ ನಾವು ನಮ್ಮ ಸಮಯ ಕಳೆಯಲು ಟೊಮೊಟೊ ಸೂಪನ್ನು ಕೊಡುವಂತೆ ತಿಳಿಸಿದೆವು.

ನಮ್ಮ ಮುಂದೆ ಕುಳಿತಿದ್ದ ವ್ಯಕ್ತಿ ಈಗ ನಮ್ಮನ್ನು ನೋಡಲು ಆರಂಭಿಸಿದ. ಆತನ ಕಣ್ಣುಗಳು ಕುಡಿತದಿಂದ ಕೆಂಪಗೆ ಕಾಣುತ್ತಿದ್ದವು. ನಮ್ಮನ್ನು ನೋಡಿ ನಕ್ಕ. ನಾವೂ ಆತನನ್ನು ನೋಡಿ ನಕ್ಕೆವು. ಆತ ಏನನ್ನೂ ಹೇಳಲಿಲ್ಲ. ಆತ ಏನನ್ನೋ ಹೇಳಬಯಸುತ್ತಿದ್ದ. ಆದರೆ ಆತನಿಗೆ ಸಾಧ್ಯವಾಗುತ್ತಿರಲಿಲ್ಲ. ಕಾರಣ ನಾವಿಬ್ಬರೂ ಆತನಿಗೆ ಅಪರಿಚಿತ ವ್ಯಕ್ತಿಗಳು.

ನಾವು ಟೊಮೊಟೊ ಸೂಪನ್ನು ಖಾಲಿ ಮಾಡಲು ತುಂಬಾ ಶ್ರಮಪಟ್ಟೆವು. ಆದರೆ ಆತ ಲೀಲಾಜಾಲವಾಗಿ ವಿಸ್ಕಿಯನ್ನು ಕುಡಿಯುತ್ತಿದ್ದ. ಆತ ಒಂದಾದರೊಂದಂತೆ ಗ್ಲಾಸನ್ನು ಖಾಲಿ ಮಾಡುತ್ತಿದ್ದ. ನಾವು ಸೂಪನ್ನು ಮುಗಿಸುವ ಮುನ್ನ ನಮ್ಮ ತಿಂಡಿ ಬಂದಿತು. ನಮ್ಮ ತಿಂಡಿಯನ್ನು ಅಣಕಿಸುವಂತೆ ಆತ ಚಿಲ್ಲಿ ಚಿಕ್ಕನನ್ನು ತರುವಂತೆ ಹೇಳಿದ. ಆತ ಇನ್ನೊಂದು ಪೆಗ್ ತರುವಂತೆ ತಿಳಿಸಿದಾಗ, ಸಪ್ಲೈಯರ್ ಬಂದು ಮೃದುವಾಗಿ ಸ್ಕಾಚ್ ವಿಸ್ಕಿ ಮುಗಿದುಹೋಗಿದೆ ಎಂದು ತಿಳಿಸಿ, ಯಾವುದಾದರು ಸ್ಥಳೀಯ ಲಿಕ್ಕರನ್ನು ನೀಡಬಹುದೆ? ಎಂದು ಕೇಳಿದನು.

ಸಪ್ಲೈಯರ್‌ನನ್ನು ಅಡಿಯಿಂದ ಮುಡಿಯವರೆಗೆ ನೋಡಿ, 'ನಾನು ದೇಶೀಯ ಲಿಕ್ಕರ್ ಅನ್ನು ಕುಡಿಯುವುದಿಲ್ಲ ಎನ್ನುವುದು ನಿನಗೆ ಗೊತ್ತಿಲ್ಲವೇ'? ಎಂದು ಗದರಿಸಿದ. ನಾನು ದೇಶೀಯ ಲಿಕ್ಕರನ್ನು ಕುಡಿಯುವಂತಿದ್ದರೆ ಮೊದಲು ಅದನ್ನೇ ಕುಡಿಯುತ್ತಿದ್ದೆ. ಹೇಗಾದರೂ ಮಾಡಿ ಸ್ಕಾಚ್ ವಿಸ್ಕಿಯನ್ನೇ ತೆಗೆದುಕೊಂಡು ಬಾ, ನಿಮ್ಮಲ್ಲಿ ಇಲ್ಲದಿದ್ದರೆ ಹೊರಗಡೆಯಿಂದ ತೆಗೆದುಕೊಂಡು ಬಾ' ಎಂದು ಗದರಿಸಿದ.

ಸಪ್ಲೈಯರ್ ವಿನಯದಿಂದ 'ನಮ್ಮಲ್ಲಿದ್ದ ಸ್ಟಾಕ್ ಮುಗಿದಿದೆ, ಈಗ ರಾತ್ರಿ ಹತ್ತು ಗಂಟೆ. ಸ್ಕಾಚ್ ಹೊರಗಡೆ ಎಲ್ಲಿಯೂ ಸಿಗುವುದಿಲ್ಲ' ಎಂದು ವಿನಂತಿಸಿಕೊಂಡನು.

ಸಪ್ಲೈಯರ್‌ನ ಮಾತಿಗೆ ಗಮನಕೊಡದೆ, ಆತನಿಗೆ ಬೇಕಾದ ಸ್ಕಾಚ್ ವಿಸ್ಕಿಯನ್ನೇ ಹೇಗಾದರೂ ತಂದುಕೊಡಬೇಕೆಂದು ಬಲವಂತ ಮಾಡಿದ. 'ನನಗೆ ಸ್ಕಾಚ್ ಅನ್ನು ಬಿಟ್ಟು ಬೇರೆ ಏನು ಬೇಡ. ಸ್ಕಾಚ್ ವಿಸ್ಕಿಯನ್ನು ಎಲ್ಲಾದರೂ ಹೇಗಾದರೂ ತೆಗೆದುಕೊಂಡು ಬರಲೇಬೇಕು. ನಾನು ಹೀಗೆ ಕುಡಿಯಲು ಟೇಬಲ್ಲಿನಲ್ಲಿ ಕುಳಿತಾಗ ನೀನು ಆ ರೀತಿ ಹೇಳಬಾರದು. ರೆಸ್ಟೋರೆಂಟಿನ ಸ್ಟೋರನ್ನು ತೆಗೆಸಿ ಸ್ಕಾಚ್ ತೆಗೆದುಕೊಂಡು ಬಾ'.

ಸಪ್ಲೈಯರ್ ವಾಪಸ್ ಹೋದ. ನಾವು ತಿಂಡಿ ತಿನ್ನುವುದರಲ್ಲಿ ತಲ್ಲೀನರಾಗಿದ್ದೆವು. ನಮ್ಮನ್ನು ಕುರಿತು ಸಡನ್ ಆಗಿ ಹೇಳಿದ – 'ನಾನ್‌ಸೆನ್ಸ್' ನಾನು ಇಲ್ಲಿ ಕುಡಿಯಲು ಆರಂಭಿಸಿದಾಗ ಅವರು ಲಿಕ್ಕರ್ ಇಲ್ಲಾ ಎಂದು ಹೇಳುತ್ತಾರೆ. ಅವರು ಎಲ್ಲಿಂದಲಾದರು ತರಲಿ ನಾವು ಗ್ರಾಹಕರು ನಮಗೆ ಲಿಕ್ಕರ್ ಮಾತ್ರ ಬೇಕು ಅಲ್ಲವಾ? ನೀವು ಏನು ಹೇಳುತ್ತೀರಿ?

ನಾವು ಅವನಿಗೆ ಉತ್ತರಿಸಲು ಪ್ರಯತ್ನಿಸಲಿಲ್ಲ; ಆತನಿಂದ ನಮಗೇನು ಆಗಬೇಕಿಲ್ಲ. ನಮಗೆ ಆತ ಆಗಂತುಕ. ಅದೂ ಅಲ್ಲದೆ ಆತ ಕುಡಿದಿದ್ದ. ಆದ್ದರಿಂದ ಒಲ್ಲದ ಮನಸ್ಸಿನಿಂದ ನಕ್ಕಹಾಗೆ ನಟಿಸಿದೆವು.

'ಅದು ಎಷ್ಟೇ ಸಮಯ ಆದರೂ ಪರವಾಗಿಲ್ಲ, ನಾನು ನನ್ನ ಫುಲ್ ಪೆಗ್ ಕುಡಿಯದೆ ಹೋಗುವವನಲ್ಲ ಗೊತ್ತಾ, ನಾನು ಯಾವತ್ತೂ ಅರ್ಧಂಬರ್ಧ ಕುಡಿದು ಹೋದವನೇ ಅಲ್ಲ' ಎಂದು ಆತ ಹೇಳುತ್ತಲೇ ಹೋದ.

ಹೋಟೆಲ್‌ನ ಮೇಲ್ವಿಚಾರಕ ಬಂದು – 'ಸಾರ್ ಈಗ ರಾತ್ರಿ ಹತ್ತೂವರೆ ಗಂಟೆ, ದುರ್ದೈವದಿಂದ ನಮ್ಮಲ್ಲಿ ವಿಸ್ಕಿಯೆಲ್ಲ ಖಾಲಿಯಾಗಿದೆ. ದಯಮಾಡಿ ನಮ್ಮನ್ನು ಕ್ಷಮಿಸಿಬಿಡಿ' ಎಂದು ಬೇಡಿಕೊಂಡ.

'ನೀವು ನನಗೆ ಸ್ಕಾಚ್ ವಿಸ್ಕಿಯಿಲ್ಲವೆಂದು ಹೇಳಬಾರದು. ಸ್ಕಾಚ್ ವಿಸ್ಕಿಯನ್ನು ತನ್ನಿ. ನಿಮಗೆ ಎಷ್ಟು ದುಡ್ಡುಬೇಕಾದರೂ ಕೊಡುತ್ತೇನೆ. ನನಗೆ ಸ್ಕಾಚ್‌ಬೇಕು. ರಾತ್ರಿ ಹತ್ತಾಗಲಿ, ಹನ್ನೆರಡಾಗಲಿ, ನನಗೆ ಸಮಯದ ಸಮಸ್ಯೆ ಇಲ್ಲ' ಎಂದು ಟೇಬಲ್ಲಿಗೆ ಗ್ಲಾಸನ್ನು ಬಡಿದು ಹೇಳಿದ.

'ದಯಮಾಡಿ ಸಾರ್, ಇಂದು ನಾವು ಅಸಹಾಯಕರು'.

'ನಾನು ನಿನ್ನ ಮಾತನ್ನು ಕೇಳಲು ಸಿದ್ಧನಿಲ್ಲ. ನೀನು ವಿಸ್ಕಿಯನ್ನು ತರುತ್ತೀಯಾ ಅಥವಾ ಇಲ್ಲವೋ ಹೇಳು' ಎಂದು ಆತ ಕಿರಿಚಲು ಆರಂಭಿಸಿದ.

ಈಗ ನಮ್ಮ ಟೇಬಲ್ ರೆಸ್ಟೋರೆಂಟಿನಲ್ಲಿದ್ದ ಎಲ್ಲರ ಗಮನವನ್ನು ಸೆಳೆಯಿತು. ಅಲ್ಲಿದ್ದ ಎಲ್ಲರೂ ನಮ್ಮನ್ನೆ ನೋಡತೊಡಗಿದರು, ನಮಗೆ ಒಂದು ರೀತಿಯ ಅವಮಾನ ವಾದಂತಾಯಿತು. ನಾವು ನಮ್ಮ ಟೇಬಲ್ ಅನ್ನು ಬದಲಿಸುವಂತಿರಲಿಲ್ಲ. ಮತ್ತು ನಮ್ಮ ಊಟ ತಣ್ಣಗಾಗಿತ್ತು, ರುಚಿಯಿಲ್ಲದಂತಾಗಿತ್ತು.

ಅಷ್ಟರಲ್ಲಿ ಹೋಟೆಲ್‌ನ ಮ್ಯಾನೇಜರ್ ಬಿಲ್ಲಿನ ಸಮೇತ ಬಂದು ಹೇಳಿದ– 'ನೋಡಿ, ಇದು ನಿಮ್ಮ ಬಿಲ್ಲು, ನೀವು ಈಗಾಗಲೇ ಮೂವತ್ತೈದು ಪೆಗ್ ಸ್ಕಾಚ್ ಕುಡಿದಿದ್ದೀರಿ. ನಿಮ್ಮ ಬಿಲ್ಲನ್ನು ನೋಡಿ, ನಮ್ಮಲ್ಲಿ ಈಗ ಸ್ಕಾಚ್ ವಿಸ್ಕಿಯ ಸ್ಟಾಕ್ ಇಲ್ಲ. ದಯಮಾಡಿ ನಮ್ಮನ್ನು ಕ್ಷಮಿಸಿ' ಎಂದು ಬೇಡಿಕೊಂಡ.

'ನಾನೊಬ್ಬನೇ ಮೂವತ್ತೈದು ಪೆಗ್ ಸ್ಕಾಚ್ ವಿಸ್ಕಿಯನ್ನು ಕುಡಿದಿದ್ದೀನಿ ಎಂದು ತಿಳಿದಿರುವೆಯಾ? ನನ್ನ ಜೊತೆಯಲ್ಲಿ ಇಬ್ಬರು ಸ್ನೇಹಿತರಿದ್ದಾರೆ' ಎಂದು



ಆತ ಮ್ಯಾನೇಜರ್ ಕಡೆ ತಿರುಗಿ ಕೂಗಿಕೊಂಡ.

'ಅದೆಲ್ಲ ನಿಮ್ಮ ಬಿಲ್ಲಿನಲ್ಲಿ ಸೇರಿದೆ'.

'ನನಗೆ ನೀವು ಸ್ಕಾಚ್ ಅನ್ನು ತಂದುಕೊಡದಿದ್ದರೆ, ನಾನು ಈ ಬಿಲ್ಲಿನ ಹಣವನ್ನು ಪಾವತಿಸುವುದಿಲ್ಲ' ಎಂದು ಹೇಳುತ್ತಾ ಮ್ಯಾನೇಜರ್ ಕೈಲಿದ್ದ ಬಿಲ್ಲನ್ನು ಕಸಿದುಕೊಂಡ. ವಾದ ಬಿಸಿಯೇರುತ್ತಿತ್ತು. ನಾವು ನಮ್ಮ ಊಟವನ್ನು ಅರ್ಧದಷ್ಟು ಮುಗಿಸಿದ್ದೆವು. ಆ ಸಮಯದಲ್ಲಾಗಲೆ ಹೋಟೆಲ್‌ನ ಮೂರು–ನಾಲ್ಕು ಜನ ಸಿಬ್ಬಂದಿ ಟೇಬಲ್ಲಿನ ಪಕ್ಕದಲ್ಲಿ ಬಂದು ಕುಳಿತಿದ್ದರು. 'ನೀವು ಹಣವನ್ನು ಪಾವತಿಸದೆ ಹೋಟೆಲ್‌ನಿಂದ ಹೊರಗೆ ಹೋಗಲು ನಾವು ಬಿಡುವುದಿಲ್ಲ ಎನ್ನುವುದನ್ನು ಮತ್ತೆ ನೆನಪು ಮಾಡುತ್ತಿದ್ದೇವೆ' ಎಂದು ಮ್ಯಾನೇಜರ್ ಹೇಳಿದನು. ಟೇಬಲ್ಲನ್ನು ಗುದ್ದಿ ಆತ ಹೇಳಿದ. 'ನಾನು ಯಾರು ಎನ್ನುವುದು ಗೊತ್ತಾ? ನಾನು ಮಾಜಿಮಂತ್ರಿ. ನಾನು ಸಾಮಾನ್ಯ ಮಂತ್ರಿಯಲ್ಲ, ಕ್ಯಾಬಿನೆಟ್ ದರ್ಜೆಯ ಮಂತ್ರಿ. ನೀನು ನನಗೆ ಛಾಲೆಂಜ್ ಮಾಡಿದರೆ, ನಿನಗೆ ಪಾಠ ಕಲಿಸುತ್ತೇನೆ ಗೊತ್ತಾ!.

ಮ್ಯಾನೇಜರ್ ಸಮಾಧಾನವಾಗಿ ಹೇಳಿದ – 'ಸಾರ್, ನಮ್ಮಲ್ಲಿ ಸ್ಕಾಚ್ ವಿಸ್ಕಿ ಮುಗಿದಿದೆ. ನಿಜವಾಗಿಯೂ ನಮ್ಮಲ್ಲಿ ಇಲ್ಲ. ಮತ್ತು ಇಂದು ಎಲ್ಲಿಯೂ ಸ್ಕಾಚ್ ವಿಸ್ಕಿ ಸಿಗುತ್ತಿಲ್ಲ. ಆದ್ದರಿಂದ ದಯಮಾಡಿ ನಮ್ಮನ್ನು ಕ್ಷಮಿಸಿಬಿಡಿ' ಎಂದು ಬೇಡಿಕೊಂಡ.

ಆತ ಮತ್ತೆ ರೇಗುತ್ತಾ ಹೇಳಿದ – 'ನಾನು ಸಮಾಧಾನವಾಗಿ ಕುಡಿಯುತ್ತಿದ್ದೆ. ನೀವೇ ನನ್ನನ್ನು ಮಾತನಾಡುವಂತೆ ಮಾಡಿದ್ದು. ನನಗೆ ಈಗ ಏನು ಗೊತ್ತಿಲ್ಲ. ನನಗೆ ನನ್ನ ಫುಲ್ ಪೆಗ್ ಬೇಕು, ಅದು ನನ್ನ ಮರ್ಯಾದೆಯ ಪ್ರಶ್ನೆ. ಸ್ಕಾಚ್ ತನ್ನಿ'.

ಮ್ಯಾನೇಜರ್ ಮತ್ತು ಸಿಬ್ಬಂದಿ ಅವರವರಲ್ಲಿಯೇ ಗೊಣಗುತ್ತಾ ಕೌಂಟರ್ ಕಡೆ ಹೊರಟರು. ಅಲ್ಲಿದ್ದ ವಿದೇಶಿ ಅತಿಥಿಗಳು ಗುಸುಗುಡುತ್ತಿದ್ದರು.

'ಈತ ಈ ದೇಶದ ಮಾಜಿಮಂತ್ರಿ' ಎಂದು ಅವರಲ್ಲಿ ಕೆಲವರು ಜಾಗ ಖಾಲಿ ಮಾಡಿದರು. ನಾವು ಯಾಕಾದರೂ ಈ ಟೇಬಲ್ಲಿಗೆ ಬಂದೆವೊ ದುರ್ದೈವಿಗಳು ಎಂದು ಕೊಳ್ಳುತ್ತಾ, ನಾವು ಮೆಲ್ಲನೆ ಜಾಗ ಖಾಲಿಮಾಡಲು ಯೋಚಿಸಿದೆವು.

'ನೋಡಿ ಈ ಜನಗಳ ಜಂಭವನ್ನು! ನಾನು ಮನಸ್ಸು ಮಾಡಿದರೆ ನಾಳೆಯೇ ಈ ರೆಸ್ಟೋರೆಂಟನ್ನು ಮುಚ್ಚಿಸಬಲ್ಲೆ. ಇವರು ಸ್ಕಾಚ್ ಅನ್ನು ಕಾಳಸಂತೆಯಲ್ಲಿ ಖರೀದಿಸುತ್ತಾರೆ ಮತ್ತು ಒಂದು ಪೆಗ್‌ಗೆ ಇಪ್ಪತ್ತಾರು ರೂಪಾಯಿ ಐವತ್ತು ಪೈಸೆಯನ್ನು ಚಾರ್ಜು ಮಾಡುತ್ತಾರೆ. ನಮಗೇನು ಗೊತ್ತಿಲ್ಲವೆಂದು ತಿಳಿದಿದ್ದಾರೆ. ಅವರು ಕೇಳಿದಷ್ಟನ್ನು ನಾವು ಪಾವತಿಸುತ್ತೇವೆ. ಆದರೂ ನಮಗೆ ಅದು ಸಿಕ್ಕುತ್ತಿಲ್ಲ' ಎಂದು ಆತ ಹೇಳಿದ.

ನಾವು ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ಆತನ ಮಾತುಗಳಿಗೆ ನಾವು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಆತನ ಕೈಲಿದ್ದ ಬಿಲ್ಲು ಜಾರಿ ಟೇಬಲ್ಲಿನ ಮೇಲೆ ಬಿದ್ದಿತು. ಬಿಲ್ಲಿನ ಮೊತ್ತ ಹದಿಮೂರು ನೂರಾ ಐವತ್ತು ರೂಪಾಯಿಗಳು

ಮತ್ತು ಇಪ್ಪತ್ತೈದು ಪೈಸೆ ಇದ್ದುದು ನಮಗೆ ಕಾಣಿಸುತ್ತಿತ್ತು. ಅಷ್ಟೊಂದು ಹೇಗಾಯಿತು? ಎಂದು ನಮಗೆ ಆಶ್ಚರ್ಯವಾಯಿತು. ನಾನು ಮನಸ್ಸಿನಲ್ಲಿಯೇ ಲೆಕ್ಕ ಹಾಕತೊಡಗಿದೆ. ಒಂದು ಪೆಗ್‌ಗೆ ಇಪ್ಪತ್ತಾರು ರೂಪಾಯಿಯ ಐವತ್ತು ಪೈಸೆಯಂತೆ ಹಾಗೂ ೫೫೫ರ ಒಂದು ಪಾಕೆಟ್ ಸಿಗರೇಟ್ ಬೆಲೆ ಇಪ್ಪತ್ತೈದು, ಊಟ ಇತ್ಯಾದಿ ಎಲ್ಲಾ ಸೇರಿ ಹದಿಮೂರು ನೂರು ಮತ್ತು ಮೇಲೆ ಆಗಿರುತ್ತದೆ ಎಂದುಕೊಂಡೆ.

ಬಿಲ್ಲಿನ ಮೊತ್ತವನ್ನು ಕೇಳಿ ನನ್ನ ಸಹೋದರ ಗಾಬರಿಗೊಂಡು ಮಧ್ಯದಲ್ಲಿ ಬಾಯಿಹಾಕಿ, 'ಒಬ್ಬ ಮನುಷ್ಯ ಸಂಜೆಯೊಂದಕ್ಕೆ ಹದಿಮೂರು ನೂರು ಮತ್ತು ಮೇಲೆ ಖರ್ಚು ಮಾಡುವುದು ಹೇಗೆ'? ಎಂದನು.

ನನ್ನ ಸಹೋದರ ಕಾಲೇಜಿನ ವಿದ್ಯಾರ್ಥಿ. ಆತನ ತಿಂಗಳ ಖರ್ಚಿಗೆಂದು ಅರವತ್ತು ರೂಪಾಯಿಗಳನ್ನು ಪಡೆಯುತ್ತಾನೆ. ಅದರಲ್ಲಿಯೆ ಅವನು ತನ್ನ ಬಸ್‌ಛಾರ್ಜ್, ಸಿನಿಮಾ, ಟೀ ಖರ್ಚುಗಳನ್ನು ಭರಿಸಬೇಕು. ಒಬ್ಬ ಮನುಷ್ಯ ಒಂದು ಸಂಜೆಯ ಖರ್ಚಿಗಾಗಿ ಹದಿಮೂರು ನೂರನ್ನು ಖರ್ಚು ಮಾಡುತ್ತಾನೆ ಎನ್ನುವ ವಿಷಯ ಆತನಿಗೆ ಆಶ್ಚರ್ಯವೇ ಸರಿ. ಆತ ಅಷ್ಟೊಂದು ಹಣವನ್ನು ನೋಡಿರಲಿಲ್ಲಾ ಕೂಡ. ಆತನಿಗೇನಾದರು ಅವರು ಬಿಲ್ಲನ್ನು ನೀಡಿದ್ದರೆ, ಅದು ಅವನಿಗೆ ದುಬಾರಿಯೇ ಆಗಿರುತ್ತಿತ್ತು. ಆತ ಅರ್ಥಶಾಸ್ತ್ರದ ವಿದ್ಯಾರ್ಥಿಯಾದ್ದರಿಂದ, ಆತ ಕುತೂಹಲದಿಂದ ಕೇಳಿದ – 'ನಮ್ಮ ದೇಶದ ಪ್ರಜೆಯ ತಲಾದಾಯ ಎಷ್ಟು'? ಎಂದು.

'ಎಂಟುನೂರು ಐವತ್ತು ಇರಬಹುದು'.

'ಅಂದರೆ ಒಬ್ಬ ನೇಪಾಳಿ, ಇನ್ನೊಬ್ಬ ನೇಪಾಳಿಯ ಹದಿನೆಂಟು ತಿಂಗಳ ದುಡ್ಡು–ಆಹಾರವನ್ನು – ಆತನ ಸಂಜೆಯ ಮೋಜಿಗಾಗಿ ಖರ್ಚು ಮಾಡಿದ. ಸರಿ ತಾನೆ'.

ಆತನ ಪ್ರಶ್ನೆಗೆ ನನ್ನಲ್ಲಿ ಉತ್ತರವಿರಲಿಲ್ಲ. ಈ ವಿಷಯದ ಬಗ್ಗೆ ನಾನು ಯಾವ ವಿವರಣೆಯನ್ನು ನೀಡಲಿಲ್ಲ. ಆತ ಮತ್ತೆ ಕೇಳಿದ 'ನೇಪಾಳದಲ್ಲಿ ಈ ರೀತಿಯ ಮಾಜಿಮಂತ್ರಿಗಳು ಎಷ್ಟು ಜನರಿದ್ದಾರೆ'? ಎಂದು.

'ಬಹುಶಃ ನೂರು ಅಥವಾ ಇನ್ನೂ ಹೆಚ್ಚು ಇರಬಹುದೆಂದು ಅಂದಾಜಿನಲ್ಲಿ ಹೇಳಿದೆ. ಮತ್ತು ಎಲ್ಲರೂ ಇವನಂತೆಯೆ ಎಂದು ತಿಳಿಯಬೇಡ'.

'ಇಲ್ಲ. ನನ್ನ ಉದ್ದೇಶ ಅದಲ್ಲ ಆತ ಹೇಳಿದ. ಆದರೆ ನಾವು ಯಾರ ವಿಚಾರ ಮಾತಾಡುತ್ತಿದ್ದೀವೊ, ಅಂತಹವರಲ್ಲಿ ಇವನೊಬ್ಬ ಇರಬಹುದು'.

'ಹೌದು ಇರಬಹುದು'.

'ಹಾಗಾದರೆ ಲೆಕ್ಕ ಹಾಕುವ, ಆತನ ಒಂದು ವರ್ಷದ ಖರ್ಚು ಇನ್ನೂರು ಜನ ನೇಪಾಳಿಗಳ ಊಟ. ಇದನ್ನು ನಂಬಬಹುದಾ?'

ನಾನು ಆತನ ತರ್ಕದ ವಾದವನ್ನು ವಿರೋಧಿಸಲಿಲ್ಲ. ಆದರೆ ಆತನ ಈ



ರೀತಿಯ ವಾದವನ್ನು ನಾನು ನಿರೀಕ್ಷಿಸಿರಲಿಲ್ಲ. ನಾನು ಆತನ ಕಡೆ ಮೌನವಾಗಿ ನೋಡುತ್ತಿದ್ದೆ.

'ಈ ದೇಶದಲ್ಲಿ ಬಡತನ ರೇಖೆಯಿಂದ ಕೆಳಗೆಯಿರುವ ಜನಸಂಖ್ಯೆ ಎಷ್ಟು ಎಂದು ನಿನಗೆ ಗೊತ್ತಾ? ಎಂದು ಕೇಳಿದ.

'ಯೋಜನಾ ಆಯೋಗದ ಪ್ರಕಾರ ನಲವತ್ತು ಪರ್ಸೆಂಟ್‌ಗಿಂತ ಹೆಚ್ಚು ಇರಬಹುದು' ಎಂದು ನಾನು ಹೇಳಿದೆ.

'ಹೆಚ್ಚು ಇರಬಹುದು' ಎಂದರೆ ಏನು ಎನ್ನುವುದನ್ನು ಸ್ಪಷ್ಟಪಡಿಸುತ್ತೀಯಾ?

ನಾನು ಈಗ ವಿವರಣೆ ನೀಡುವ ಒಂದು ರೀತಿಯ ತೊಂದರೆಯಲ್ಲಿ ಸಿಕ್ಕಕೊಂಡೆ. 'ಹೆಚ್ಚು ಇರಬಹುದು' ಎನ್ನುವುದು ಎಷ್ಟಾದರೂ ಆಗಬಹುದು. ನಾನು ಹೇಳಿದ ಸಂಖ್ಯೆ ಯೋಜನಾ ಆಯೋಗದ ವರದಿಯ ಆಧಾರದ ಮೇಲೆ ಇತ್ತು.

ಇನ್ನು ಹೆಚ್ಚಿರಬಹುದೆಂದು ಹೇಳಲು ನನ್ನಲ್ಲಿ ಯಾವುದೇ ದಾಖಲೆಗಳಿರಲಿಲ್ಲ. ನಲವತ್ತು ಪರ್ಸೆಂಟ್‌ನ ಮೇಲೆ ಇರಬಹುದೆಂದು ನಾನು ಹೇಳಿದೆ.

'ಈ ದೇಶದ ನಗರಗಳನ್ನು, ಕಠ್ಮಂಡುವನ್ನು ಸೇರಿಸಿಕೊಂಡರೂ, ನೀನು ಹೇಳಿದ ಸಂಖ್ಯೆ ಸರಿಯಲ್ಲ', ಎಂದು ನನ್ನ ಮಾತನ್ನು ಮೊಟಕುಗೊಳಿಸುತ್ತಾ ಹೇಳಿದ. ಈ ದೇಶದ ಫಲವತ್ತಾದುದಲ್ಲದ, ಅಭಿವೃದ್ಧಿಹೊಂದದ ಗ್ರಾಮೀಣ ಪ್ರದೇಶಗಳ ಗುಡ್ಡಪ್ರದೇಶಗಳ ಹಾಗೂ ತೀರಪ್ರದೇಶಗಳೂ ಸೇರಿದಂತೆ ಯೋಚಿಸಿ, ನಂತರ ಲೆಕ್ಕಹಾಕು. ನಿನಗೆ ಆಗ ಈ ದೇಶದ ಆರ್ಥಿಕ ಚಿತ್ರಣದ ಸಹಜ ಚಿತ್ರ ದೊರೆಯುತ್ತದೆ. ನಾನು ಅರ್ಥಶಾಸ್ತ್ರದ ವಿದ್ಯಾರ್ಥಿ. ಬಡತನ ರೇಖೆಯಿಂದ ಕೆಳಗಿರುವ ಜನಸಂಖ್ಯೆ ಎಂಬತ್ತು ಪರ್ಸೆಂಟ್ ಎಂದು ನಾನು ನಿಖರವಾಗಿ ಹೇಳಬಲ್ಲೆ' ಎಂದು ತನ್ನ ಮಾತನ್ನು ಮುಂದುವರೆಸಿದ.

'ಇರಬಹುದು'.

'ಯಾವುದೇ ಆಯೋಗ ನೀಡಿದ ಅಂಕಿ, ಅಂಶಗಳು ಸರಿಯಿರುತ್ತವೆ ಎಂದು ನಾವು ಹೇಳಲು ಬರುವುದಿಲ್ಲ. ನಲವತ್ತು ಹಾಗೂ ಎಂಬತ್ತರ ನಡುವಿನ ವ್ಯತ್ಯಾಸ ಉತ್ತರ ಧ್ರುವ ಹಾಗೂ ದಕ್ಷಿಣ ಧ್ರುವದಷ್ಟು ಅಂತರವಿದೆ. ಆದರೆ ಅವರಿಗೆ ಇದು ಏನೂ ಅಲ್ಲ'.

'ಆದರೆ ಅದು ಒಂದು ಜವಾಬ್ದಾರಿಯುತ ಕಛೇರಿ. ಆದ್ದರಿಂದ ನಂಬಲೇಬೇಕು'.

'ಅವರ ಅಂಕಿ ಅಂಶ ಕೇವಲ ಜನರ ಕಣ್ಣಿಗೆ ಮಣ್ಣೆರಚುವ ಕೆಲಸವಾದ್ದರಿಂದ ನಂಬುವುದು ಹೇಗೆ'?

ಆತ ಭೂಸುಧಾರಣೆ ಯೋಜನೆಯ ಉದಾಹರಣೆ ತೆಗೆದು ತನ್ನ ಚರ್ಚೆಯನ್ನು ಮುಂದುವರಿಸಿದ. ನನ್ನ ಕಣ್ಣೆದುರಿಗೆ ನಡೆದ ಘಟನೆಗಳು ನಾನು ನಂಬುವಂತೆ ಮಾಡಿದವು. ಒಂದು ನೂರು ವರ್ಷದ ಕಾಲಮಿತಿಯಲ್ಲಿಯೂ ನೇಪಾಳದಲ್ಲಿ

ಶೋಷಣಾರಹಿತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುವುದಿಲ್ಲ ಎನ್ನುವುದನ್ನು ಸಾಬೀತು ಮಾಡುವುದು ಆತನ ಉದ್ದೇಶವಾಗಿತ್ತು. ನಾನು ಆತನ ತರ್ಕವನ್ನು ತಿರಸ್ಕರಿಸಲಿಲ್ಲ. ನಾನು ಸುಮ್ಮನೆ ಆತನ ವಾದವನ್ನು ಕೇಳುತ್ತಾ ಹೋದೆ.

ಅಷ್ಟರಲ್ಲಿ ನಮ್ಮ ಬೆಳಗಿನ ಟೀ ಬಂದಿತು. ಆತ ಟೀ ಕುಡಿಯುತ್ತಾ ಆತನ ವಾದವನ್ನು ನಿಲ್ಲಿಸಿದ ಮತ್ತು ಯಾವುದೋ ಆಲೋಚನೆಯಲ್ಲಿ ಮುಳುಗಿದ.

ನನ್ನ ಹಿಂದಿನ ರಾತ್ರಿಯ ಘಟನೆಯ ಕಥೆಯನ್ನು ನಾನು ಇನ್ನು ಮುಗಿಸಿರಲಿಲ್ಲ. ಆತ ನೆನಪು ಮಾಡುವಂತೆ ನನ್ನನ್ನ ಮತ್ತೆ ಪ್ರಶ್ನಿಸಿದ, ಆ ಮಾಜಿಮಂತ್ರಿ 'ಸ್ಕಾಚ್' ವಿಸ್ಕಿಯನ್ನು ಪಡೆದನೋ ಇಲ್ಲವೋ? ಎಂದು.

'ಓ, ಇಲ್ಲ! ಆತ ಸುಮ್ಮನೆ ಟೇಬಲ್ ಕುಟ್ಟಲು ಪ್ರಾರಂಭಿಸಿದ. ಆ ಹೋಟೆಲ್‌ನ ಬಡಪಾಯಿಗಳು, ಮ್ಯಾನೇಜರ್ ಸಮೇತ ಸ್ಕಾಚ್ ಅನ್ನು ಹುಡುಕಿಕೊಂಡು ಹೊರ ನಡೆದರು. ಬಹುಶಃ ಅದು ಅವರಿಗೆ ಸಿಕ್ಕಿರಲಾರದು'.

ಹೊಟೆಲ್‌ನಲ್ಲಿ ಇದ್ದ ಎಲ್ಲರೂ ಖಾಲಿಯಾಗಿದ್ದರು. ಆದರೆ ಮಿನಿಸ್ಟರ್ ಮಾತ್ರ ಅಲ್ಲಿಯೇ ಕುಳಿತಿದ್ದ. ಆತ ನಮ್ಮನ್ನು ಹೋಗಲು ಬಿಡುತ್ತಿರಲಿಲ್ಲ. ಮಿನಿಸ್ಟರ್ ಸ್ಕಾಚ್‌ಗಾಗಿ ಕಾಯುತ್ತಲೇ ಇದ್ದರು. ನಮ್ಮನ್ನು ಆತನ ಸಂಭಾಷಣೆಗೆಳೆದು ನಾವು ಹೋಗಲು ಬಿಡಲಿಲ್ಲ; 'ನಾನು ಹಣಕ್ಕೆ ಕೇರ್ ಮಾಡುವುದಿಲ್ಲ' ಎಂದು ಹೇಳುತ್ತಾ ನನಗೆ ಏನು ಬೇಕೊ ಅದು ಸಿಗಬೇಕು ಅಷ್ಟೆ. ಸಹಾಯಕಮಂತ್ರಿಯಾಗಿ ರಾಜ್ಯ ಸಚಿವನಾಗಿ ಮತ್ತು ಕ್ಯಾಬಿನೆಟ್ ಸಚಿವನಾಗಿ ನಾನು ನಾಲ್ಕು ಬಾರಿ ಸಚಿವನಾಗಿದ್ದೆ. ಈ ದೇಶದಲ್ಲಿ ಬೇರೆಯವರು ಕೇವಲ ಒಂದು ಬಾರಿ ಸಚಿವರಾಗಲು ಸಾಧ್ಯವಾಗುವುದಿಲ್ಲ. ಈ ದೇಶ ನನ್ನ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡಿದೆ. ಆದ್ದರಿಂದ ನಾನು ನಾಲ್ಕು ಬಾರಿ ಸಚಿವನಾಗಲು ಸಾಧ್ಯವಾಯಿತು. ಇದು ಏನು ಸಾಮಾನ್ಯ ವಿಷಯವೇ? ನೀವೇನನ್ನುತ್ತೀರಿ? ನಾನು ಮತ್ತೆ ಸಚಿವನಾಗುವುದು ಖಂಡಿತಾ ಸತ್ಯ' ಎಂದು ಹೇಳಿದ.

ನನ್ನ ಸ್ನೇಹಿತ, ಸಚಿವರಿಗೆ ತನ್ನನ್ನು ಪರಿಚಯಿಸಿಕೊಳ್ಳುವುದರಿಂದ ಮುಂದೆ ಉಪಯೋಗ ವಾಗಬಹುದೆಂದು ಭಾವಿಸಿ ಆತನನ್ನು ಪರಿಚಯಿಸಿಕೊಂಡ. 'ಮತ್ತೆ ಸಾರ್ ನೀವು ಮುಂದೆ ಕ್ಯಾಬಿನೆಟ್ ಮಿನಿಸ್ಟರ್ ಆದರೆ, ನೀವು ಯಾವ ಸಚಿವರಾಗಿರುತ್ತೀರಿ'? ಎಂದು ಕೇಳಿದ.

ಆತನು ತನ್ನ ಕಣ್ಣುಗಳನ್ನು ಹೊರಳಿಸುತ್ತಾ ಹೇಳಿದ. 'ಬೇಕಾದಷ್ಟು ಸಚಿವ ಪದವಿಗಳಿವೆ, ಅದೆಲ್ಲ ಈಗ ನೆನಪಾಗುತ್ತಿಲ್ಲ'. ಎಂದ.

'ಅದಲ್ಲ' ನಾನು ಕೇಳಿದ್ದು ಯಾವ ಖಾತೆಯ ಸಚಿವರಾಗುತ್ತೀರಿ? ಎಂದು.

'ಓ! ಅರಣ್ಯ ಸಚಿವ'.

ಸಮಯ ಮೀರುತ್ತಿತ್ತು. ಹಾಗೂ ಮಾಜಿ ಸಚಿವರ ಸ್ಥಿತಿ ದುರ್ಬಲವಾಗುತ್ತಿತ್ತು.



ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ನಾನು ಹೇಳಿದೆ 'ಸಾರ್, ನಿಮಗೆ ಈಗ ವಿಶ್ರಾಂತಿ ಬೇಕು. ನೀವು ಮನೆಗೆ ಹೋಗುವುದು ಉತ್ತಮ' ಎಂದು.

ಆತ ತೇಲಾಡುತ್ತಾ ತನ್ನ ಕೆಂಡದಂಥ ಕಣ್ಣುಗಳಿಂದ ನನ್ನನ್ನು ಒಮ್ಮೆ ನೋಡಿ ಹೇಳಿದ 'ಎಲ್ಲಿ.....ನನ್ನ......ವಿಸ್ಕಿ' ಎಂದು.

'ಈಗ ಮತ್ತೆ ವಿಸ್ಕಿ ಕುಡಿಯುವುದು ಬೇಡ ಸಾರ್'!

'ಈಗ ಅದರಿಂದ ನಿಮಗೆ ತೊಂದರೆಯಾಗುತ್ತದೆ. ನಿಮಗೆ ಮನೆಗೆ ಹೋಗಲು ವಾಹನ ವ್ಯವಸ್ಥೆಯಿದೆಯೆ?' ಎಂದು ನಾನು ಕೇಳಿದೆ.

ಆತ ಮಾತು ಮುಂದುವರೆಸುತ್ತಾ ಹೋದ– 'ನಾನು.... ನಿಮಗೆ.... ಗೊತ್ತಾ? ಏನು.... ನಿಮಗೆ..... ಗೊತ್ತಿಲ್ಲದ್ದಿದರೆ.... ಪರವಾಗಿಲ್ಲ. ನಾನು..... ಸಚಿವನಾದಾಗ.... ನನ್ನನ್ನು..... ಬಂದು..... ನೋಡುವುದನ್ನು..... ಮರೆಯಬೇಡಿ, ನಿಮಗೆ.... ಏನಾದರೂ.... ಸಹಾಯ.... ಮಾಡುತ್ತೇನೆ.... ನಾನು... ಅನೇಕರಿಗೆ..... ನಿಮ್ಮ ಹಾಗೆ.... ಭೇಟಿ ಮಾಡಿದ್ದವರಿಗೆ.... ಸಹಾಯ ಮಾಡಿದ್ದೇನೆ'.

ಮಂತ್ರಿಯ ಪರಿಚಯವಿಲ್ಲದಿದ್ದರೂ ಒಬ್ಬ ಮಾಜಿಮಂತ್ರಿಯ ಸ್ನೇಹಿತನೆಂದು ನನಗೆ ತುಂಬಾ ಸಂತೋಷವಾಯಿತು. ಆತ ನಾಲ್ಕು ಬಾರಿಗೆ ಮಂತ್ರಿಯಾಗಿದ್ದೆನೆಂದು ಹೇಳಿದ್ದಾನೆ. ಮತ್ತೆ ಅದೃಷ್ಟ ಕೂಡಿಬಂದರೆ ಐದನೆ ಬಾರಿ ಮಂತ್ರಿಯಾಗುವುದಾಗಿ ಹೇಳಿದ್ದಾನೆ. 'ಮತ್ತೆ ನೀವು ಮಂತ್ರಿಯಾದರೆ ಯಾವ ಖಾತೆಯ ಮಂತ್ರಿಯಾಗುತ್ತೀರಿ?' ಎಂದು ಕೇಳಿದೆ.

'ನಾನು... ವಾಣಿಜ್ಯ.... ಮತ್ತು ಕೈಗಾರಿಕಾ.... ಇಲಾಖೆಯ.... ಕೆಲಸ ಮಾಡಲು.... ಇಚ್ಛಿಸುತ್ತೇನೆ'.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದಲ್ಲಿ ಏನನ್ನು ಮಾಡಲು ಸಾಧ್ಯ? ಸಾರ್.

'ಅದು.... ಹಣದ.... ಕೇಂದ್ರ!

ನಾವು, ಅದರಿಂದ ಏನು ಸಹಾಯ ಪಡೆಯಬಹುದು?

'ನೀವು... ಕೋಟ.... ಪಡೆಯಬಹುದು.... ಲೈಸನ್ಸ್.. ಪಡೆಯಬಹುದು'!

'ನೀವು.... ಕೆಲಸ ಮಾಡದಿದ್ದರೆ.... ಲೈಸನ್ಸ್... ಮಾರಬಹುದು'!

ನನ್ನ ಸ್ನೇಹಿತ ಖುಷಿಯಾಗಿದ್ದ. ಮಾಜಿ ಸಚಿವರಿಗೆ ಹೇಳಿದನು– 'ನಿಮ್ಮನ್ನು ಮತ್ತೆ ಭೇಟಿಯಾಗಲು ಖುಷಿಯಾಗುತ್ತದೆ. ನಾವು ಈಗ ಪರಸ್ಪರ ಪರಿಚಯಸ್ಥರು. ನೀವು ನಮ್ಮನ್ನು ಮರೆಯುವುದಿಲ್ಲವೆನ್ನುವ ನಂಬಿಕೆ ನಮಗಿದೆ'.

'ಯಾಕೆ.... ನಿಮ್ಮನ್ನು ಮರೆಯಬೇಕು.... ನೀವು.... ನೆನಪು ಮಾಡಿ....ಹೋಟೆಲ್‌ನಲ್ಲಿ.... ಸೇರಿದಾಗ....ಓ.ಕೆ.!'

ನಾನು ನನ್ನ ಅನುಮಾನವನ್ನು ಪರಿಹರಿಸಿಕೊಳ್ಳಲು ಕೇಳಿದೆ – 'ಸಾರ್

ಈಗ ನೀವು ಮಾಜಿಮಂತ್ರಿಗಳು, ನಿಮ್ಮನ್ನು ನಾವು ಯಾವಾಗ ಬೇಕಾದರು, ಎಲ್ಲಿ ಬೇಕಾದರು ಭೇಟಿಮಾಡಬಹುದು ಆದರೆ ನೀವು ಮಂತ್ರಿಯಾದಾಗ ನಿಮ್ಮನ್ನು ಭೇಟಿ ಮಾಡುವುದು ಸುಲಭವಲ್ಲವೆಂದೆ. ನಿಮ್ಮ ಹಿಂದೆ ಮುಂದೆ ನಿಮ್ಮ ಮನೆಯ ಬಳಿ ಕಛೇರಿಯ ಬಳಿ ಜನರ ಗುಂಪು ಇರುತ್ತದೆ. ನಿಮ್ಮ ಅಂಗರಕ್ಷಕ, ನಿಮ್ಮ ವಾಹನ ಚಾಲಕ, ಇರುತ್ತಾರೆ. ನಿಮ್ಮನ್ನು ಖಾಸಗಿಯಾಗಿ ಭೇಟಿಯಾಗಿ ಮಾತಾಡುವ ಅವಕಾಶ ಎಲ್ಲಿರುತ್ತದೆ ಸಾರ್?

'ನೀನು....... ಹೇಳುವುದು.... ಸರಿ. ಆದರೆ.... ಅದಕ್ಕೆ ಒಂದು.... ದಾರಿಯಿದೆ. ನಾವು.... ಜನಪ್ರತಿನಿಧಿಗಳು.... ನಾವು.... ಎಲ್ಲಿ.... ಯಾರನ್ನಾದರೂ.... ಯಾವಾಗ.... ಬೇಕಾದರೂ.... ಭೇಟಿ ಮಾಡುವ, ಮಾತಾಡುವ.... ಅವಕಾಶವಿರುತ್ತದೆ. ನೀವು ಬಂದಾಗ.... ಖಾಸಗಿ... ಕೆಲಸ... ಎಂದು ಹೇಳಿದರೆ... ನಾನು... ನಿಮ್ಮ ಜೊತೆ.... ಮಾತಾಡಲು... ದೊರೆಯುತ್ತೇನೆ. ಚಿಂತಿಸಬೇಡಿ.. ಓ.ಕೆ'.

ಆತನ ಸಲಹೆಗಳಿಂದ ನನ್ನ ಅನುಮಾನ ಪರಿಹಾರವಾಯಿತು. ಆಗ ರಾತ್ರಿ ಹನ್ನೊಂದುವರೆ ಸಮಯ. ಹೋಟೆಲ್ ಮ್ಯಾನೇಜರ್ ಮಾಜಿ ಸಚಿವರ ಬಳಿ ಬಂದು ಗೌರವದಿಂದ ಹೇಳಿದ– 'ಸಾರ್ ನಾವು ಪ್ರಾಮಾಣಿಕವಾಗಿ ಪ್ರಯತ್ನಿಸಿದೆವು. ನಮ್ಮ ಎಲ್ಲಾ ಸಿಬ್ಬಂದಿ ಎಲ್ಲ ಕಡೆ ಹುಡುಕಿದರು. ಆದರೆ ಎಲ್ಲಿಯೂ ಸ್ಕಾಚ್ ವಿಸ್ಕಿ ಸಿಗಲಿಲ್ಲ. ದಯಮಾಡಿ ನಮ್ಮನ್ನು ಕ್ಷಮಿಸಿ' ಎಂದು.

ನಾನೂ ಕೂಡ ಹೇಳಿದೆ– 'ಇವತ್ತು ಇಷ್ಟು ಸಾಕು' ಸಾರ್ ಮತ್ತೆ ಕುಡಿಯುವುದಿಲ್ಲವೆಂದು ಹೇಳಿದೆ. ಈಗ ಕುಡಿಯುವುದು ಒಳ್ಳೆಯದಲ್ಲ! ಅದೂ ಅಲ್ಲದೆ ಈಗ ತುಂಬಾ ಲೇಟಾಗಿದೆ ಎಂದೆ.

ಆತ ನನ್ನ ಕಡೆ ಕಿರುನೋಟವನ್ನು ಬೀರಿದ. ಕುಡುಕರ ಶೈಲಿಯಲ್ಲಿ ನಗೆ ಬೀರಿದ ಮತ್ತು ಜಗಳವಾಡಿದ. 'ಸರಿ. ನನ್ನ.... ಸ್ನೇಹಿತರು... ಬೇಡ.... ಎಂದು.... ಹೇಳುವುದಾದರೆ.... ಬೇಡ.... ಬಿಡಿ... ನನ್ನ.... ಬಿಲ್ಲು.... ಎಲ್ಲಿ'?

ಮ್ಯಾನೇಜರ್ ಕೈಮುಗಿದು ವಿನಯದಿಂದ ಹೇಳಿದ. 'ಸಾರ್ ಈಗಾಗಲೇ ಬಿಲ್ಲನ್ನು ನಿಮಗೆ ಕೊಡಲಾಗಿದೆ! ಅದು ನಿಮ್ಮ ಬಳಿಯೇ ಇರಬೇಕು!' ಎಂದ.

ಟೇಬಲ್ಲಿನ ಮೇಲೆ ಬಿಲ್ಲು ಇರಲಿಲ್ಲ. ಮಾಜಿ ಸಚಿವರು ತನ್ನ ಜೇಬಿನಲ್ಲಿದ್ದ ಎಲ್ಲಾ ಹಣ, ಪೇಪರ್‌ಗಳನ್ನು ತೆಗೆದು ಟೇಬಲ್ಲಿನ ಮೇಲೆ ಚೆಲ್ಲಿದರು. ಆದರೆ ಅದರಲ್ಲಿ ಬಿಲ್ ಇರಲಿಲ್ಲ. ಮ್ಯಾನೇಜರ್ ಡೂಪ್ಲಿಕೇಟ್ ಬಿಲ್ಲನ್ನು ನೀಡಿದನು. ಟೇಬಲ್ಲಿನ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಹಣವನ್ನು ನನ್ನ ಕಡೆ ತಳ್ಳಿ ಬಿಲ್ಲನ್ನು ಪಾವತಿಸುವಂತೆ ಹೇಳಿದರು. ಅದರಲ್ಲಿ ಇಪ್ಪತ್ತರಿಂದ ಇಪ್ಪತ್ತೈದು ಸಾವಿರ ರೂಪಾಯಿಗಳು ಇದ್ದವು. ನಾನು ಬಿಲ್ಲಿನ ಹಣವನ್ನು ಪಾವತಿಸಿ ಉಳಿದ ಹಣವನ್ನು ಸಚಿವರಿಗೆ ವಾಪಸ್ ನೀಡಿದೆ. ಮಿನಿಸ್ಟರ್ ಮತ್ತೆ ಗೊಣಗುತ್ತಾ, ನಿಮ್ಮ..... ಈ....



ನನ್ನ.... ಸ್ನೇಹಿತರ.... ಬಿಲ್ಲನ್ನು..... ಪಾವತಿಸೋಣ..... ಹಣತೆಗೆದುಕೊಳ್ಳಿ..... ತೆಗೆದುಕೊಳ್ಳಿ ಪರವಾಗಿಲ್ಲ.... ಪಾವತಿಮಾಡಿ! ಎಂದು ತೊದಲಿದರು.

ಮ್ಯಾನೇಜರ್ ಆತನಿಗೆ ಥ್ಯಾಂಕ್ಸ್ ಹೇಳಿ ಕ್ಯಾಷ್‌ಕೌಂಟರ್ ಕಡೆಗೆ ನಡೆದ.

ಮಾನ್ಯ ಮಾಜಿಸಚಿವರು ನಮ್ಮ ಬಿಲ್ಲನ್ನು ಪಾವತಿಸುತ್ತಿರುವುದನ್ನು ತಿರಸ್ಕರಿಸುವ ಧೈರ್ಯ ನಮಗಿರಲಿಲ್ಲ. ನನ್ನ ಸ್ನೇಹಿತ ಸುಮ್ಮನೆ ನನ್ನ ಕಡೆ ನೋಡುತ್ತಿದ್ದ. ಆದರೆ ನಾನು ಏನು ಹೇಳಲಿಲ್ಲ. ನಮ್ಮ ಸ್ನೇಹ ಮಾಜಿಮಂತ್ರಿಯೊಬ್ಬರ ಜೊತೆ ಗಾಢವಾಗಿ ಬೆಳೆಯು ತ್ತಿರುವುದನ್ನೂ ನಾವು ಗ್ರಹಿಸಿದೆವು.

ಸಚಿವರನ್ನು ಮನೆಗೆ ಹೋಗುವಂತೆ ನಾನು ಪುಸಲಾಯಿಸಿದೆ. ನನ್ನ ವಿನಂತಿಯ ಮೇರೆಗೆ ಹೊರಡಲು ಕುರ್ಚಿಯಿಂದ ಮೇಲೇಳಲು ಪ್ರಯತ್ನಿಸಿ ನಿಲ್ಲಲಾರದೆ ಮತ್ತೆ ಅದೇ ಕುರ್ಚಿಯಲ್ಲಿ ದಬ್ ಎಂದು ಕುಕ್ಕರಿಸಿದರು. ಆತ ಚೆನ್ನಾಗಿ ಕುಡಿದಿರುವುದು ನನಗೆ ಅರ್ಥವಾಯಿತು. ಆತನನ್ನು ಹೇಗಾದರು ಮಾಡಿ ರೆಸ್ಟೋರೆಂಟಿನಿಂದ ಹೊರಗೆ ಕಳುಹಿಸುವುದು ಸೂಕ್ತವೆಂದು ಭಾವಿಸಿ ನನ್ನ ಸ್ನೇಹಿತನಿಗೆ ಸೂಚನೆ ನೀಡಿದೆ. ನಾವಿಬ್ಬರೂ ಸೇರಿ ಆತನನ್ನು ಕುರ್ಚಿಯಿಂದ ಮೇಲೆ ಎತ್ತಿ ನಿಧಾನವಾಗಿ ಹೊರಗೆ ನಡೆಸಿಕೊಂಡು ಬಂದೆವು. ರಸ್ತೆ ನಿರ್ಜನವಾಗಿತ್ತು. ಅಲ್ಲಿ ಇಲ್ಲಿ ಕೆಲವು ಕಾರುಗಳು ಮಾತ್ರ ಓಡಾಡುತ್ತಿದ್ದವು. 'ನಿಮ್ಮ ಕಾರು ಎಲ್ಲಿದೆಯೆಂದು'? ನಾನು ಕೇಳಿದೆ.

ಆತ ಬಹಳ ಪ್ರಯಾಸದಿಂದ ಕಾರನ್ನು ತೋರಿಸಿ – 'ಇದು....... ನನ್ನ ಕಾರು'.... ಎಂದನು.

ಆತನ ಕಾರಿನ ಕೀಯನ್ನು ಹುಡುಕುವುದು ಆತನಿಗೆ ಕಷ್ಟವಾಯಿತು. ಬಹಳ ಪ್ರಯಾಸಪಟ್ಟು ಕೀಯನ್ನು ಹುಡುಕಿ ನನ್ನ ಕೈಗಿತ್ತು 'ದಯವಿಟ್ಟು ಕಾರಿನ.... ಬಾಗಿಲನ್ನು.... ತೆಗೆಯಿರಿ'.... ಎಂದ.

ನಾನು ಕಾರಿನ ಕೀಯನ್ನು ಪರಿಶೀಲಿಸಿ, ಆತನ ಕಾರಿನ ಕೀಯೆಂದು ಖಾತರಿಪಡಿಸಿ ಕೊಂಡು ಕಾರಿನ ಬಾಗಿಲನ್ನು ತೆರೆದು– 'ನಿಮ್ಮ ಡ್ರೈವರ್ ಎಲ್ಲಿ'? ಎಂದೆ.

'ಡ್ರೈವರ್ ಇಲ್ಲ'....

'ಕಾರನ್ನು ಯಾರು ಡ್ರೈವ್ ಮಾಡುತ್ತಾರೆ'?

'ಯಾರು ಡ್ರೈವ್ ಮಾಡುತ್ತಾರೆ.......? ನಾನು ಡ್ರೈವ್.... ಮಾಡುತ್ತೇನೆ' ಎಂದು ಝೇಂಕರಿಸಿದ.

ಆತ ಕಾರನ್ನು ಡ್ರೈವ್ ಮಾಡುತ್ತಾನೆಂದು ನಾನು ನಂಬಲಾಗಲಿಲ್ಲ. ಕಾರಿನ ಕೀಯನ್ನು ಹುಡುಕಲು ಸಾಧ್ಯವಾಗದಾತ ಕಾರನ್ನು ಹೇಗೆ ಡ್ರೈವ್ ಮಾಡುತ್ತಾನೆ?

ಆತ ಕಾರಿನಲ್ಲಿ ಕೂರುವಂತೆ ವಿನಂತಿಮಾಡಿಕೊಂಡೆ. ಆತ ಕಾರಿನಲ್ಲಿ ಕುಳಿತು

ಕೊಳ್ಳಲು ಹೋಗಿ, ನನ್ನ ಸ್ನೇಹಿತನನ್ನು ತಳ್ಳಿ ಕಾರಿನ ಬಾಗಿಲಿಗೆ ಡಿಕ್ಕಿಹೊಡೆದು ಕೆಳಗೆ ಬಿದ್ದನು. ನಾವಿಬ್ಬರು ಪ್ರಯತ್ನಪಟ್ಟು ಆತನನ್ನು ಕಾರಿನಲ್ಲಿ ಕೂರಿಸಿದೆವು. ಆಗ ಆತ ಕಾರಿನಲ್ಲಿ ಕೂರಲಾರದೆ ಕಾರಿನ ಬಾಗಿಲನ್ನು ತಬ್ಬಿಕೊಂಡು ನೇತಾಡತೊಡಗಿದ. ಆತನನ್ನು ಒಬ್ಬನನ್ನೇ ಮನೆಗೆ ಕಳುಹಿಸುವುದು ಅಪಾಯವೆಂದು ನನಗೆ ಅರ್ಥವಾಯಿತು. ಆತನನ್ನು ಒಬ್ಬನನ್ನೆ ಮನೆಗೆ ಕಳುಹಿಸುವುದು ಸೂಕ್ತವಲ್ಲವೆಂದು ಭಾವಿಸಿದೆವು. ನನ್ನ ಸ್ನೇಹಿತ ರೆಸ್ಟೋರೆಂಟ್‌ನ ಮ್ಯಾನೇಜರ್‌ನ ಬಳಿ ಹೋಗಿ ಆತನನ್ನ ಕರೆತಂದು ಮಾಜಿ ಸಚಿವರ ಕಾರನ್ನು ತೋರಿಸಿ– 'ಇದು ಮಾಜಿ ಸಚಿವರ ಕಾರು, ಅವರು ಈಗ ಕಾರನ್ನು ಡ್ರೈವ್ ಮಾಡುವ ಸ್ಥಿತಿಯಲ್ಲಿ ಇಲ್ಲ, ಈ ಕಾರು ಇಲ್ಲೇ ಇರುತ್ತದೆ. ನಾಳೆ ಇವರ ಡ್ರೈವರ್ ಬಂದು ಕಾರನ್ನು ತೆಗೆದುಕೊಂಡು ಹೋಗುತ್ತಾರೆ. ದಯಮಾಡಿ ಈ ಕಾರನ್ನು ಜೋಪಾನವಾಗಿ ನೋಡಿಕೊಳ್ಳಿ, ನಾವು ಇವರನ್ನು ನಮ್ಮ ಕಾರಿನಲ್ಲಿ ಅವರ ಮನೆಗೆ ಕರೆದುಕೊಂಡು ಹೋಗುತ್ತೇವೆ' ಎಂದೆವು.

ಮ್ಯಾನೇಜರ್ ಕಾರನ್ನು ಜೋಪಾನವಾಗಿ ನೋಡಿಕೊಳ್ಳುವುದಾಗಿ ತಿಳಿಸಿದ. ಮಾನ್ಯ ಮಾಜಿ ಸಚಿವರನ್ನು ನಮ್ಮ ಕಾರಿನಲ್ಲಿ ಕುಳಿತುಕೊಳ್ಳುವಂತೆ ವಿನಂತಿಸಿದೆವು. ಕಾರನ್ನು ಸ್ಟಾರ್ಟ್ ಮಾಡಿ 'ನಾನು ನಿಮ್ಮನ್ನು ಎಲ್ಲಿ ಬಿಡಬೇಕು ಸಾರ್'? ಎಂದು ಕೇಳಿದೆ.

ಕುಡಿತದ ಮಂಪರಿನಿಂದ ಎಚ್ಚೆತ್ತು– 'ತಪ್ಪಲಿ'ಗೆ.... ಕರೆದುಕೊಂಡು........ ಹೋಗಿ..... ಎಂದು ಗೊಣಗಿದ.

ನಾವು ಭದ್ರಕಾಳಿಯನ್ನು ಸಮೀಪಿಸುತ್ತಿದ್ದಾಗ 'ನಿಲ್ಲಿಸಿ' ಎಂದು ಹೇಳಿದರು.

'ಯಾಕೆ ಸಾರ್'? ನಾನು ಕೇಳಿದೆ.

'ನಾನು..... ಮೂತ್ರ ಮಾಡಬೇಕು.... ನಿಮಗೆ ಗೊತ್ತಾ' ಎಂದರು.

ನಾವೂ ಮೂತ್ರವಿಸರ್ಜನೆ ಮಾಡಬೇಕಿತ್ತು. ಕಾರನ್ನು ನಿಲ್ಲಿಸಿ, ಎಲ್ಲರೂ ಇಳಿದೆವು. ಸಚಿವರು ತೂರಾಡುತ್ತಾ ರಸ್ತೆಯ ಬದಿಗೆ ಹೋದರು. ನಾವು ಇನ್ನೊಂದು ಬದಿಗೆ ಹೋದೆವು. ನಾವು ಮತ್ತೆ ಕಾರಿನ ಬಳಿ ಬಂದಾಗ ಸಚಿವರು ಕಾಣಲಿಲ್ಲ. ಆತನನ್ನು ಹುಡುಕಲು ಹೋದೆವು. ಆತನ ಸ್ಥಿತಿಯನ್ನು ನೋಡಿ ನಮಗೆ ನಗುಬಂತು. ಆತ ತನ್ನ ಪ್ಯಾಂಟಿನ ಜಿಪ್ ಅನ್ನು ಬಿಚ್ಚದೆ ಪ್ಯಾಂಟಿನಲ್ಲಿಯೆ ಮೂತ್ರ ವಿಸರ್ಜನೆ ಮಾಡಿಕೊಂಡಿದ್ದ. ಇದನ್ನು ನೋಡಿ ಆತನ ಬಗ್ಗೆ ಅನುಕಂಪವುಂಟಾಯಿತು. ಆತನನ್ನು ಕಾರಿಗೆ ಎಳೆತಂದೆವು. ಆತ ಇದ್ದಕ್ಕಿದ್ದಂತೆ ಎದ್ದು ನಿಂತು 'ಈ..... ಫ್ಲಾಗ್ ಪೋಸ್ಟ್..... ನೋಡಿ'? ಎಂದು ಗದ್ದಲ ಮಾಡತೊಡಗಿದ.

'ಹೌದು ಸಾರ್! ನಾವು ನೋಡಿದ್ದೇವೆಂದು ಹೇಳಿದೆವು'.

'ನಾನು.... ಇದನ್ನು...... ಬಲವಾಗಿ.... ಹೊಡೆದು.... ಉರುಳಿಸಿದ್ದೆ'..... ಎಂದು



ಗೊಣಗಿದ.

'ಆಮೇಲೆ ಏನಾಯಿತು ಸಾರ್'? ನನ್ನ ಸ್ನೇಹಿತ ಕೇಳಿದರು.

'ಏನಾಯಿತು? ಅಪಘಾತ!..... ಐದು ಸಾವಿರ ರೂಪಾಯಿಗಳು.... ಖರ್ಚಾದವು.... ವರ್ಕ್‌ಷಾಪಿನಲ್ಲಿ.... ಹಾಳಾಗಲಿ ಬಿಡಿ.... ಸರಿ..... ಚಿಂತೆಯಿಲ್ಲ'.....

'ನಿಮಗೇನು ಆಗಲಿಲ್ಲವೆ ಸಾರ್'? ನನ್ನ ಸ್ನೇಹಿತರು ಕೇಳಿದರು.

'ನನಗೆ.... ಏನಾದರು..... ಆಗಿದ್ದರೆ.... ನೀವು..... ಹೇಗೆ..... ಇಂದು..... ಭೇಟಿಯಾಗುತ್ತಿದ್ದಿರಿ'.... ಹ....ಹ...ಹ...ಎಂದು ಕುಡಿತದ ಅಮಲಿನಲ್ಲಿ ನಕ್ಕರು.

'ಹಾಗಲ್ಲ, ಏನೂ ತೊಂದರೆಯಾಗಲಿಲ್ಲವಾ'? ಎಂದು ಸ್ನೇಹಿತ ಕೇಳಿದರು.

'ಏನೂ ಆಗಲಿಲ್ಲ ನಾನು..... ಚೆನ್ನಾಗಿಯೆ.... ಇದ್ದೇನೆ.... ಹಾಳಾಗಲಿ ಬಿಡಿ'....

'ಆಗ ಮನೆಗೆ ಹೇಗೆ ಹೋದಿರಿ ಸಾರ್'? ನನ್ನ ಸ್ನೇಹಿತ ಮತ್ತೆ ಕೇಳಿದ.

'ನನಗೆ.... ಗೊತ್ತೇ.... ಇಲ್ಲ'.

ಈತನಿಗೆ ಈ ರೀತಿಯ ಘಟನೆಗಳು ಪ್ರತಿದಿನ ಸಾಮಾನ್ಯವಿರಬಹುದು ಎಂದು ಅರ್ಥಮಾಡಿಕೊಂಡೆವು. ಆತನ ಕಥೆಗಳನ್ನು ಕೇಳುತ್ತಿದ್ದರೆ ನಮಗೆ ನಗು ಬರುತ್ತಿತ್ತು. ಹಾಗೆಯೆ ಅನುಕಂಪವೂ ಮೂಡುತ್ತಿತ್ತು. ಸಮಾಜದಲ್ಲಿ ಇಂಥ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಈ ರೀತಿ ನಡೆದುಕೊಳ್ಳುತ್ತಾರಲ್ಲಾ ಎಂದು ನಮಗೆ ನೋವಾಗುತ್ತಿತ್ತು.

ರಾತ್ರಿ ಬಹಳ ಸಮಯವಾಗಿತ್ತು. ಆತನ ಗೊಣಗಾಟದ ಕಥೆಗಳನ್ನು ಕೇಳಲು ನಮಗೆ ಆಸಕ್ತಿಯಿರಲಿಲ್ಲ. ಆದರೂ ಆತನು ತನ್ನದೇ ಆದ ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದ. ನಿಲ್ಲಿಸಲು ನಾವು ಪ್ರಯತ್ನಿಸಿದೆವು. ಅಷ್ಟರಲ್ಲಿ ನಮ್ಮ ಎದುರಿಗೆ ಒಂದು ವಾಹನ ಬಂದು ನಿಂತುಕೊಂಡಿತು. ಮೂರು ಜನ ಕೆಳಗಿಳಿದು ಬಂದು 'ನೀವು ಇಲ್ಲಿ ಏನು ಮಾಡುತ್ತಿದ್ದೀರಿ'? ಎಂದು ವಿಚಾರಿಸಿದರು.

ಅವರು ಪೋಲೀಸ್ ಪೆಟ್ರೋಲ್‌ನವರು. 'ನಾವು ಮನೆಗೆ ಹೋಗುತ್ತಿದ್ದೇವೆ. ಈ ವ್ಯಕ್ತಿಯನ್ನು ಆತನ ಮನೆಗೆ ಕರೆದುಕೊಂಡು ಹೋಗುತ್ತಿದ್ದೇವೆ' ಎಂದು ಹೇಳಿದೆವು.

ಅವರಲ್ಲಿ ಒಬ್ಬ. 'ಈ ವ್ಯಕ್ತಿ ಯಾರು? ಇವನು ಕುಡಿದಿರುವಂತೆ ಕಾಣುತ್ತಿದೆ' ಎಂದನು.

'ಆತ ಕುಡಿದಿದ್ದರೆ, ಆತನನ್ನು ಇಲ್ಲಿಯೆ ಬಿಡಿ' ಎಂದು ಇನ್ನೊಬ್ಬ ಹೇಳಿದನು.

'ನಮ್ಮ ಕೆಲಸದ ಸಮಯ ಮುಗಿಯುತ್ತಿದೆ. ನಾವು ಆತನನ್ನು ಕರೆದುಕೊಂಡು ಹೋಗೋಣ' ಎಂದು ಮತ್ತೊಬ್ಬ ಹೇಳಿದ.

ನನ್ನ ಸ್ನೇಹಿತ ಸಚಿವರನ್ನು ಹಿಡಿದುಕೊಂಡಿದ್ದ. 'ಆತ ಕುಡಿದಿದ್ದರೂ ಅಂಥ ಕೆಟ್ಟ ಮನುಷ್ಯನಲ್ಲ' ಎಂದು ನಾನು ಒಂದು ರೀತಿಯ ವಿವರಣೆಯ ರೀತಿಯಲ್ಲಿ ಹೇಳಿದೆ.

ಅವರಲ್ಲಿ ಒಬ್ಬನು ಹೇಳಿದನು – 'ಅದು ಹೇಗೆ ಕುಡುಕರು ಒಳ್ಳೆಯವರು, ಕೆಟ್ಟವರು ಆಗಿರುತ್ತಾರೆ' ಎಂದು.

'ಇವನಾರು ಕುಡುಕರು ಒಳ್ಳೆಯವರು ಅಥವಾ ಕೆಟ್ಟವನು ಎಂದು ವಿವರಣೆ ನೀಡಲು? ಎಂದು ಮತ್ತೊಬ್ಬ ಹೇಳಿದನು.

'ಕುಡುಕನ ಜೊತೆಯಲ್ಲಿ ಈತನನ್ನೂ ಕರೆದುಕೊಂಡು ಹೋಗೋಣ' ಮತ್ತೊಬ್ಬ ಹೇಳಿದನು.

'ಹೌದು ಇವನನ್ನು ಆ ಕುಡುಕನೊಂದಿಗೆ ಕರೆದುಕೊಂಡು ಹೋಗೋಣ' ಎಂದು ಹೇಳಿದ ಒಬ್ಬ ನನ್ನನ್ನು ಕೈಯಿಂದ ಬಲವಾಗಿ ಹಿಡಿದುಕೊಂಡ.

ನಾನು ಅವರಿಗೆ ವಿವರಿಸಿ ಹೇಳುವ ಮುನ್ನ ನನ್ನನ್ನು ಬಲವಾಗಿ ಕೈಹಿಡಿದು ವ್ಯಾನಿನ ಬಳಿ ಎಳೆದುಕೊಂಡು ಹೋದರು. ವ್ಯಾನಿನಲ್ಲಿ ಕುಳಿತಿದ್ದ ಅಧಿಕಾರಿಯನ್ನು ನೋಡಿ ಸೆಲ್ಯೂಟ್ ಮಾಡಿ 'ಸಾರ್! ಕುಡುಕರು' ಎಂದು ಹೇಳಿದರು.

'ಆ ಕಾರು ಯಾರದು'? ಎಂದು ಅಧಿಕಾರಿ ಕೇಳಿದರು.

ನಾನು ಉತ್ತರ ಹೇಳುವ ಮುನ್ನ 'ಅದು ಕುಡುಕರ ಕಾರು ಸಾರ್' ಎಂದು ಅವರೇ ಹೇಳಿದರು.

ನಾನು ಹೇಳಿದೆ – 'ಕಾರು ನನ್ನದು, ನಾನು ಕುಡುಕನಲ್ಲ' ಎಂದು.

ನನ್ನ ಹಾಗೂ ಪೋಲೀಸ್‌ನವರ ಹೇಳಿಕೆಯಲ್ಲಿ ವಿರೋಧಾಭಾಸವಿತ್ತು. ಪೋಲೀಸ್ ಅಧಿಕಾರಿ ವ್ಯಾನಿನಿಂದ ಇಳಿದು ಕಾರಿನ ಬಳಿ ಬಂದು 'ಅದು ನಿಮ್ಮ ಕಾರಾ'? ಎಂದು ಕೇಳಿದರು.

ಹೌದು!

'ನೀವು ಎಲ್ಲಿಂದ ಬರುತ್ತಿದ್ದೀರಿ'?

ನಾವು ರೆಸ್ಟೋರೆಂಟ್‌ನಲ್ಲಿ ಪಾರ್ಟಿ ಮಾಡಿದ, ಹಾಗೂ ವಿಪರೀತ ಕುಡಿದ ವ್ಯಕ್ತಿಯ ಬಗ್ಗೆ, ಹಾಗೂ ಆತನಿಗೆ ಸಹಾಯಮಾಡಲು, ಆತನನ್ನು ನಮ್ಮ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋಗುತ್ತಿರುವ ವಿಚಾರ ಎಲ್ಲವನ್ನು ಆತನಿಗೆ ಹೇಳಿದೆವು. ಅಷ್ಟರಲ್ಲಿ ನನ್ನ ಇಬ್ಬರು ಸ್ನೇಹಿತರನ್ನು; ನನ್ನ ಸ್ನೇಹಿತ ಹಾಗೂ ಮಾಜಿ ಸಚಿವರನ್ನು ಮೂವರು ಪೋಲೀಸರು ವ್ಯಾನಿನ ಬಳಿ ಎಳೆತಂದರು. ಮಾಜಿ ಸಚಿವರು ಗಲಾಟೆ ಮಾಡುತ್ತಿದ್ದರು. 'ನಾನು ಯಾರು....ಎಂದು....ನಿಮಗೆ ಗೊತ್ತಿಲ್ಲ. ನಾನು.... ಯಾರು ಗೊತ್ತೆ.... ಪೋಲೀಸ್.... ಓಕೆ....' ಎಂದೆಲ್ಲ ಗಲಾಟೆ ಮಾಡುತ್ತಿದ್ದರು.

ಪೋಲೀಸ್‌ರು ಅವರ ಕೆಲಸವನ್ನು ಅವರು ಮಾಡುತ್ತಿದ್ದರು. ಅವರಿಗೆ ಯಾರಾದರೇನು? ಪೋಲೀಸರಿಗೆ ಈ ಮಾಜಿಸಚಿವರು ಪರಿಚಯವಿದ್ದಂತೆ ಕಾಣುತ್ತಿತ್ತು. ಅವರು ಹೇಳಿದರು. 'ನೀವಾ ಸಾರ್? ಯಾಕ್ ಸಾರ್ ಇಷ್ಟು ಲೇಟು'? ಎಂದು ಕೇಳಿದರು.



'ನೋಡಿ ಅಧಿಕಾರಿಗಳೇ! ನಾವು... ರೆಸ್ಟೋರೆಂಟ್‌ನಿಂದ ಬರುತ್ತಿದ್ದೇವೆ. ಸ್ನೇಹಿತರ.... ಜೊತೆ.... ಸ್ವಲ್ಪ.... ಕುಡಿದಿದ್ದೇವೆ. ಮನೆಗೆ.... ಹೋಗುತ್ತಿದ್ದೇವೆ. ನೀವೂ... ಸ್ನೇಹಿತರು...... ಮನೆಗೆ ಹೋಗಿ..... ಮತ್ತೇನಾದರೂ.... ಪ್ರಶ್ನೆಗಳು'....

'ಇಲ್ಲ ಸಾರ್ ನೀವು ಮನೆಗೆ ಹೋಗಬಹುದು'.

'ಸರಿ. ಥ್ಯಾಂಕ್ಸ್ ಗುಡ್‌ನೈಟ್'.

ಪೋಲೀಸ್‌ನವರು ನನ್ನ ಸ್ನೇಹಿತ ಮತ್ತು ಮಾಜಿ ಸಚಿವರನ್ನು ಕಾರಿನ ಬಳಿ ತಂದುಬಿಟ್ಟರು.

ವ್ಯಾನಿನ ಬಳಿ ವಾಪಸ್ ಬರುವಂತೆ ಪೋಲೀಸ್‌ನವರಿಗೆ ಆದೇಶ ನೀಡಿದ ಅಧಿಕಾರಿ 'ದಯವಿಟ್ಟು ಕ್ಷಮಿಸಿ ಸಾರ್! ನಮ್ಮ ಕೆಲಸವನ್ನು ನಾವು ಮಾಡಿದ್ದೇವೆ. ನಿಮ್ಮ ರಕ್ಷಣೆ ನಮ್ಮ ಕೆಲಸ. ಈ ಗಣ್ಯ ವ್ಯಕ್ತಿಯನ್ನು ಜೋಪಾನವಾಗಿ ತಲುಪಿಸುತ್ತೀರೆಂದು ನಂಬಿದ್ದೇನೆ. ಗುಡ್‌ನೈಟ್!' ಎಂದು ಹೇಳಿ ಅಧಿಕಾರಿ ವ್ಯಾನಿನ ಕಡೆ ನಡೆದ.

ಇದಾದ ಸ್ವಲ್ಪ ಸಮಯದಲ್ಲಿ ಪೋಲೀಸ್ ವಾಹನ ಹೊರಟುಹೋಯಿತು. ನಾನೂ ಕೂಡ ನನ್ನ ಕಾರಿನ ಕಡೆ ನಡೆದೆ.

ನಾನು ಮಾತನಾಡುವ ಮೂಡ್‌ನಲ್ಲಿರಲಿಲ್ಲ. ಮಾಜಿಸಚಿವರನ್ನು ಕಾರಿನಲ್ಲಿ ಕೂರಿಸಿಕೊಂಡು ಹೊರಡುವಂತೆ ಹೇಳಿದೆ.

ಕೆಲ ಸಮಯದ ನಂತರ ಮಾಜಿಸಚಿವರು ಕಾರನ್ನು ನಿಲ್ಲಿಸುವಂತೆ ಕೈ ಸನ್ನೆ ಮಾಡಿದರು. ನಾನು ಒಂದು ಭವ್ಯಸೌಧದ ಮುಂದೆ ಕಾರನ್ನು ನಿಲ್ಲಿಸಿದೆ. ಮಾಜಿ ಸಚಿವರು ತುಂಬಾ ಕಷ್ಟದಿಂದ ಕಾರಿನಿಂದ ಇಳಿದು– 'ಇದು.... ನನ್ನ ಗುಡಿಸಲು.... ಇದು.... ನನ್ನ.... ಗುಡಿಸಲು! ಎಂದು ಹೇಳಿದರು.

'ಈ ಬಂಗ್ಲೊವನ್ನು ಯಾವಾಗ ಕಟ್ಟಿಸಿದಿರಿ? ಸಾರ್' ಎಂದು ನಾನು ಕೇಳಿದೆ.

ಆತ ಮತ್ತೆ 'ಇದು..... ನನ್ನ ಗುಡಿಸಲು..... ಗುಡಿಸಲು ಎಂದು ಹೇಳಿ.... ಬಂಗ್ಲೊ..... ಅಲ್ಲ' ಎಂದು ಹೇಳಿದ.

ನಾವು ಮತ್ತೆ ಭೇಟಿಯಾದಾಗ, ನಮ್ಮ ನೆನಪಿರುತ್ತದೆಯೆಂದು ತಿಳಿದಿದ್ದೇವೆ, ನೀವು ನಮ್ಮನ್ನು ಮರೆಯುವುದಿಲ್ಲ – ಎಂದು ನಂಬುತ್ತೇವೆ' ಎಂದು ನನ್ನ ಸ್ನೇಹಿತ ಹೇಳಿದ.

ನನ್ನ ಸ್ನೇಹಿತನ ಕಡೆ ಕಷ್ಟಪಟ್ಟು ತಿರುಗಿ– 'ನಾನೇಕೆ ಮರೆಯಲಿ.... ನೀವು..... ನೀವು.... ಎಷ್ಟೊಂದು... ಸಹಾಯ... ಮಾಡಿದ್ದೀರಿ.... ಥ್ಯಾಂಕ್ಸ್... ಥ್ಯಾಂಕ್ಸ್.. ಬಹಳ.... ಬಹಳ..... ಥ್ಯಾಂಕ್ಸ್ ಹೇಳಿದ – ಆತ ಮತ್ತೆ ಹೇಳಿದ ಈಗ... ತುಂಬಾ ಲೇಟಾಗದೆ..... ನನ್ನ..... ಗುಡಿಸಲಿನಲ್ಲಿ.... ನಿಮಗೆ.... ಟೀ.... ಕೊಡಲಾಗುತ್ತಿಲ್ಲ.... ದಯಮಾಡಿ.... ಬೆಳಗಿನ ವೇಳೆ.... ಬನ್ನಿ... ಒಟ್ಟಿಗೆ.... ಟೀ..... ಸವಿಯೋಣ. ಥ್ಯಾಂಕ್ಸ್.....ಥ್ಯಾಂಕ್ಸ್..... ಥ್ಯಾಂಕ್ಸ್.... ಬಹಳ..... ಬಹಳ....ಥ್ಯಾಂಕ್ಸ್' ಎಂದು ಗೊಣಗಿದ.

ನಾವು ಏನನ್ನೂ ಮಾತನಾಡಲಿಲ್ಲ. ಆತ ಮತ್ತೆ ಒತ್ತಾಯಪೂರ್ವಕವಾಗಿ ಹೇಳಿದ. 'ಬನ್ನಿ.... ಬರಲೇಬೇಕು. ಬರುತ್ತೀರಿ ತಾನೆ.... ನೀವು.... ಬರದೆ.... ಇದ್ದರೆ.... ನಾನು... ಟೀ..... ಕುಡಿಯುವುದಿಲ್ಲ. ಓ.ಕೆ. ಥ್ಯಾಂಕ್ಸ್'.

ಆತನ ಆಹ್ವಾನವನ್ನು ಒಪ್ಪಿಕೊಂಡ ನನ್ನ ಸ್ನೇಹಿತ 'ನಾವು ಯಾವಾಗ ಬಂದರೆ ನಿಮಗೆ ಸರಿಯಾಗುತ್ತದೆ ಸಾರ್' ಎಂದು ಕೇಳಿದ.

'ಸರಿ. ಬನ್ನಿ... ಎಂಟು.... ಮತ್ತು ಹತ್ತರ ನಡುವೆ.... ಬನ್ನಿ ನಿಮಗೆ ಸ್ವಾಗತ ಬನ್ನಿ....

ಬರಲೇಬೇಕು.... ಶುಭರಾತ್ರಿ.... ಓ.ಕೆ'...

ಆತ ಒತ್ತಾಯಪೂರ್ವಕವಾಗಿ ನಮ್ಮನ್ನು ಆಹ್ವಾನಿಸಿದ್ದರಿಂದ, ನಾವು ಬರುತ್ತೇವೆ ಎಂದು ಹೇಳುವುದೂ ಅನಿವಾರ್ಯವಾಯಿತು. ಮಾಜಿ ಸಚಿವರು ಗುಡ್‌ನೈಟ್ ಹೇಳುವುದಕ್ಕೂ ನಾನು ಕಾರನ್ನು ವೇಗವಾಗಿ ಓಡಿಸುವುದಕ್ಕೂ ಸರಿಯಾಯಿತು.

ನಾನು ನನ್ನ ಸ್ನೇಹಿತನನ್ನು ಆತನ ಮನೆಗೆ ಬಿಡಬೇಕಾದ್ದರಿಂದ, ಆತನ ಮನೆಯ ಮೂಲಕ ಕಾರನ್ನು ಡ್ರೈವ್ ಮಾಡಿಕೊಂಡು ಬಂದೆ.

'ನೀನು ಯಾವಾಗ ಮನೆಗೆ ಬಂದೆ? ತುಂಬಾ ಸಮಯವಾಗಿತ್ತಾ. ನೀನು ಮನೆಗೆ ಬಂದದ್ದು ನನಗೆ ತಿಳಿಯಲಿಲ್ಲ?' ನನ್ನ ಸಹೋದರ ಕೇಳಿದ.

'ಅದು ತುಂಬಾ ಲೇಟಾಗಿತ್ತು'.

'ನಿನಗೆ ಏನು ಕನಸಾಯಿತು?'

ನನ್ನ ಕನಸು! ಅದು ಹೇಗಿರಬೇಕಿತ್ತೋ ಹಾಗಿತ್ತು? ಅದೇ ಮಂತ್ರಿಯ ಬಗ್ಗೆ ಕನಸು–ಆತ ಕಾರಿನಲ್ಲಿ ಕುಳಿತಿದ್ದಾನೆ–ರಾಷ್ಟ್ರಧ್ವಜ ಕಾರಿನಲ್ಲಿ ಹಾರಾಡುತ್ತಿದೆ. ಆ ಕಾರು ದೊಡ್ಡ ಬಂಗ್ಲೆಯನ್ನು ಪ್ರವೇಶಿಸುತ್ತದೆ. ನಾನು ಆ ಬಂಗ್ಲೆಯ ಗೇಟಿನ ಬಳಿ ನಿಂತಿದ್ದೇನೆ. ಆ ಮಂತ್ರಿ ನನ್ನನ್ನು ನೋಡಿ 'ಹೇಗಿದ್ದೀರಿ' ಎಂದು ಅಲ್ಲಿ ನಿಂತಿರುವ ಎಲ್ಲ ಜನರ ಮುಂದೆ ನನ್ನ ಯೋಗಕ್ಷೇಮವನ್ನು ವಿಚಾರಿಸುತ್ತಾನೆ. ಅದು ಅಲ್ಲಿ ನಿಂತಿರುವ ಎಲ್ಲ ಜನರ ಮುಂದೆ ನನ್ನ ಗೌರವ ಹೆಚ್ಚುತ್ತದೆ ಎಂದು ನಿರೀಕ್ಷಿಸಿದ್ದೆ. ಆದರೆ ಮಂತ್ರಿ ನನ್ನ ಮುಂದೆಯೆ ಹೋದರೂ ಆತ ನನ್ನನ್ನು ಗಮನಿಸಲೇ ಇಲ್ಲ. ನನ್ನನ್ನು ನೋಡದೆ ಒಂದು ಶಬ್ದವನ್ನು ಮಾತಾಡದೆ ಹೋದ. ಆತ ಬಹುಶಃ ನನ್ನನ್ನು ಗಮನಿಸಲಾರನೆಂದು ಭಾವಿಸಿದೆ. ನಾನು ಆತನನ್ನು ಅವನ ಕಛೇರಿಯಲ್ಲಿ ನೋಡಿದರಾಯಿತು ಎಂದು ಅವನನ್ನು ಹಿಂಬಾಲಿಸಿ ಹೋದೆ. ನಾನು ಆತನ ಕೊಠಡಿಯ ಸಮೀಪ ಹೋದಾಗ ಆತ ಕಛೇರಿಯನ್ನು ಪ್ರವೇಶಿಸಿದ. ನನ್ನ ಮುಖಕ್ಕೆ ಹೊಡೆದಂತೆ ಕೊಠಡಿಯ ಬಾಗಿಲು ಹಾಕಿಕೊಂಡವು. ನಾನು ಮಂತ್ರಿಗಳನ್ನು ನೋಡಲು ಕ್ಯೂನಲ್ಲಿ ನಿಂತೆ. ಜನರು ಸಾಲಾಗಿ ನಿಂತು ಮಂತ್ರಿಯನ್ನು ಭೇಟಿ ಮಾಡುತ್ತಿದ್ದರು. ನಾನು ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತಿದ್ದೆ. ನನ್ನ ಸರತಿ



ಬರಲು ನಾನು ಗಂಟೆಗಟ್ಟಲೆ ಕಾಯಬೇಕಾಗಿತ್ತು. ನಾನು ಸಾಲಿನಿಂದ ಹೊರಬಂದು ಮಂತ್ರಿಗಳನ್ನು ಕಾಣಲು ಅವರ ಕೊಠಡಿಯ ಬಳಿ ನಡೆದೆ. ಮಂತ್ರಿಗಳು ನನ್ನನ್ನು ನೋಡಿದಾಗ ಹಾರ್ದಿಕ ಸ್ವಾಗತ ನೀಡುತ್ತಾರೆಂದು ನಾನು ಯೋಚಿಸಿದ್ದೆ, ನಾನು ಮಂತ್ರಿಗಳ ಮುಂದೆ ನಿಂತು ಎರಡು ಕೈಗಳನ್ನು ಜೋಡಿಸಿ 'ನಮಸ್ತೆ' ಎಂದು ಹೇಳಿದಾಗ ಆತ ನನ್ನನ್ನು ಗಮನಿಸಲಿಲ್ಲ. ಹಾಗೂ ಶುಭಾಶಯ ಕೋರಲಿಲ್ಲ. ಮಂತ್ರಿಗಳು ಮೆತ್ತನೆಯ ಚರ್ಮದ ಕುರ್ಚಿಯ ಮೇಲೆ ಕುಳಿತಿದ್ದರು. ನಾನು ಎಷ್ಟು ಪ್ರಯತ್ನಪಟ್ಟು ನನ್ನ ಪರಿಚಯವನ್ನು ಮನವೊಲಿಸುವಂತೆ ಹೇಳಿದರೂ ಆತ ನನ್ನ ಗುರುತಿಸಲೇ ಇಲ್ಲ! ಅಷ್ಟರಲ್ಲಿ ನೀನು ನನ್ನನ್ನು ಎಚ್ಚರಿಸಿದೆ.

ಕಳೆದ ರಾತ್ರಿಯ ಘಟನೆಯನ್ನು ಹಾಗೂ ನನ್ನ ಕನಸಿನ ವಿವರಣೆಯನ್ನು ಕೇಳಿದ ನನ್ನ ಸಹೋದರ ಸ್ವಲ್ಪ ಸಮಯ ಮೌನ ತಾಳಿ ನಂತರ ಹೇಳಿದ– ನೀನು ವಾಸ್ತವವಾದ ಕನಸನ್ನು ಕಂಡಿದ್ದೀಯ, ನಿಜ ಜೀವನದಲ್ಲಿಯೂ, ನೀನು ಕನಸಿನಲ್ಲಿ ಕಂಡದ್ದನ್ನೇ ನೋಡುವೆ–ಎಂದನು.

'ಇರಬಹುದು ಎಂದು ನಾನು ಹೇಳಿದೆ. ಆದರೆ ಕಳೆದ ರಾತ್ರಿಯ ನಮ್ಮ ಪರಿಚಯ ನಮ್ಮ ಸ್ನೇಹವನ್ನು ಗಾಢವಾಗಿ ಸ್ಥಿರಗೊಳಿಸಿದೆ. ಆದರೆ ಅದು ಅಷ್ಟು ಸುಲಭವಾಗಿ ಮರೆಯಾಗುತ್ತದೆ ಎಂದೇನು ಅನ್ನಿಸುವುದಿಲ್ಲ ಅಂದುಕೊಂಡಿದ್ದೇನೆ'.

'ಅಂಥ ಭ್ರಷ್ಟ ಜನರ ಸ್ನೇಹವನ್ನು ಮಾಡುವುದರಿಂದ ಏನು ಪ್ರಯೋಜನವೆಂದು' ನನ್ನ ಸಹೋದರ ಹೇಳಿದ.

'ಭ್ರಷ್ಟ ಅಥವಾ ಭ್ರಷ್ಟನಲ್ಲದೆಯಿರುವುದು ಇಲ್ಲಿಯ ಪ್ರಶ್ನೆಯಲ್ಲ' ನಾನು ವಿವರಿಸಿ ಹೇಳಿದೆ. 'ನಾವು ಯಾವುದನ್ನು ಭ್ರಷ್ಟತೆಯೆಂದು ಭಾವಿಸುತ್ತೇವೆಯೊ, ಅದು ಆತನಿಗೆ ಭ್ರಷ್ಟತೆಯಲ್ಲದೆ ಇರಬಹುದು. ಅದು ಹೇಗಾದರೂ ಇರಲಿ, ನಾವು ನಮ್ಮ ಸ್ವಂತ ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ನಾವು ಈ ದೇಶಕ್ಕಾಗಿ ಎಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದೇವೆ ಎನ್ನುವುದನ್ನು ಕುರಿತು ಯೋಚಿಸಬೇಕು'.

ನಾವು ಇನ್ನೂ ನಮ್ಮ ಸಂಭಾಷಣೆಯನ್ನು ಮುಗಿಸಿರಲಿಲ್ಲ. ನನ್ನ ಸ್ನೇಹಿತ ಆತುರಾತುರವಾಗಿ ಬಂದು 'ಓ ನೀನು ಇನ್ನು ಮಲಗಿದ್ದೀಯ? ಈಗಾಗಲೆ ಸಮಯವಾಗಿದೆ' ಎಂದನು.

ನಾನು ನಗುತ್ತಾ ಹೇಳಿದೆ. ನಾನು ನನ್ನ ಸಹೋದರನಿಗೆ ನೆನ್ನೆಯ ಘಟನೆಯ ಬಗ್ಗೆ ಹೇಳುತ್ತಿದ್ದೇನೆ ಎಂದೆ.

ಕಳೆದ ರಾತ್ರಿಯ ವಿಚಾರವನ್ನು ನೆನಪು ಮಾಡುತ್ತಾ 'ಆತ ಹೇಳಿದ್ದು ನಿನಗೆ ನೆನಪಿಲ್ಲವೆ? ನಾವು ಅವರ ಮನೆಗೆ ಹೋಗುವವರೆಗೆ ಆತ ಟೀ ಕುಡಿಯುವುದಿಲ್ಲವೆಂದು ಹೇಳಿದ ಮಾತುಗಳು' ಎಂದು ನೆನಪು ಮಾಡಿದ.

ಮಾಜಿ ಮಂತ್ರಿಗಳ ಆಹ್ವಾನವನ್ನು ನೆನಪು ಮಾಡಿಕೊಂಡೆ. ನನ್ನ ಸ್ನೇಹಿತ

ಮಾಜಿ ಮಂತ್ರಿಯ ಮನೆಗೆ ಹೋಗಲು ನನ್ನಲ್ಲಿಗೆ ಬಂದಿದ್ದರು. ನಾನು ಈಗ ಹೋಗದೇ ಇರಲಾಗದು. ನಾನು ನನ್ನ ಸ್ನೇಹಿತನಿಗೆ ನಾನು ರೆಡಿಯಾಗುವವರೆಗೆ ಸ್ವಲ್ಪ ಕಾಯುವಂತೆ ತಿಳಿಸಿದೆ. ನಾನು ಸ್ನಾನದ ಮನೆಗೆ ಹೋದೆ. ಅಷ್ಟರಲ್ಲಿ ನನ್ನ ಸಹೋದರ ನನ್ನ ಸ್ನೇಹಿತನಿಂದ ಕಳೆದ ರಾತ್ರಿಯ ಘಟನೆಯ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಪಡೆದ. ನಾನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನನ್ನ ಬೆಳಗಿನ ಕೆಲಸಗಳನ್ನು ಮುಗಿಸಿ ಮಾಜಿ ಮಂತ್ರಿಯ ಮನೆಗೆ ಹೋಗಲು ಸಿದ್ಧವಾದೆ.

ನಾವು ಮಾಜಿ ಮಂತ್ರಿಗಳ ಮನೆಯಲ್ಲಿ ಕಾಂಪೌಂಡನ್ನು ತಲುಪಿದಾಗ ಅಲ್ಲಿದ್ದ ಮಂತ್ರಿಗಳ ಆಲ್‌ಷೇಷಿಯನ್ ನಾಯಿಯನ್ನು ನೋಡಿ ವಿಪರೀತ ಗಾಬರಿಗೊಂಡೆವು. ನಾವು ಒಂದು ಹೆಜ್ಜೆಯನ್ನು ಸಹ ಮುಂದಿಡಲು ಸಾಧ್ಯವಾಗಲಿಲ್ಲ. ನಾನು ಕಾಂಪೌಂಡಿನ ಸುತ್ತ ಕಣ್ಣಾಡಿಸಿದೆ. ನಿನ್ನೆ ರೆಸ್ಟೋರೆಂಟಿನಲ್ಲಿ ಬಿಟ್ಟುಬಂದಿದ್ದ ಕಾರನ್ನು ಗ್ಯಾರೇಜಿನಲ್ಲಿ ನೋಡಿದೆ. ನನ್ನ ಸ್ನೇಹಿತನಿಗೆ ಆ ಕಾರನ್ನು ತೋರಿಸಿ ಹೇಳಿದೆ 'ನೋಡು ನಾವು ನಿನ್ನೆ ಬಿಟ್ಟುಬಂದಿದ್ದ ಕಾರು' ಎಂದು. ಆತ ಆ ಬಗ್ಗೆ ಯಾವ ಕುತೂಹಲವನ್ನು ತೋರಿಸಲಿಲ್ಲ. ಆತ ಭವ್ಯ ಬಂಗಲೆಯನ್ನು ನೋಡುತ್ತಿದ್ದ. ಅಲ್ಲಿ ನಾಯಿಗಳನ್ನು ಬಿಟ್ಟರೆ ಬೇರೆ ಯಾರೂ ಕಾಣಿಸಲಿಲ್ಲ. ನಾನು ಆಗಾಗ ಕಿಟಕಿಯ ಕಡೆ ಕಣ್ಣಾಯಿಸುತ್ತಿದ್ದೆ.

ಬಹಳ ಸಮಯದ ನಂತರ, ಒಬ್ಬ ವ್ಯಕ್ತಿ ತನ್ನ ಕೈಗಳಲ್ಲಿ ಎರಡು ಚೀಲಗಳನ್ನು ಹಿಡಿದುಕೊಂಡು ಆಗಮಿಸಿದನು. ಆತ ಮಾಜಿ ಮಂತ್ರಿಯ ಮನೆಯ ಕೆಲಸದವನಂತೆ ಕಾಣಿಸುತ್ತಿದ್ದ. ನಾವು ಆತನ ಕಡೆ ನಡೆದು, 'ಹಲೋ? ನೀವು ಈ ಮನೆಯವರಾ'? ಎಂದು ಕೇಳಿದೆವು.

'ಹೌದು! ಏನಾಗಬೇಕಿತ್ತು'?

'ಮಂತ್ರಿಗಳು ಮನೆಯಲ್ಲಿದ್ದಾರಾ'?

'ಇರಬಹುದು. ಮನೆಯಲ್ಲಿರಬಹುದು'.

'ಅವರು ಮನೆಯಲ್ಲಿದ್ದರೆ, ದಯಮಾಡಿ, ನಾವು ಅವರನ್ನು ಕಾಣಲು ಬಂದಿದ್ದೀವಿ ಎಂದು ತಿಳಿಸುತ್ತೀರಾ'?

'ಆಗಲಿ'! ಎಂದು ಹೇಳಿ ಆತ ಮನೆಯೊಳಕ್ಕೆ ನಡೆದ.

ಹದಿನೈದು ನಿಮಿಷಗಳ ನಂತರ ಅದೇ ವ್ಯಕ್ತಿ ನಮ್ಮ ಮುಂದೆ ಬಂದನು. ನಾವು ಆತನ ಸಮೀಪ ಹೋಗಿ 'ಮಂತ್ರಿಗಳು ಏನು ಹೇಳಿದರು'? ಎಂದು ವಿಚಾರಿಸಿದೆವು?

'ಕ್ಷಮಿಸಿ. ನಾನು ಮಂತ್ರಿಗಳಿಗೆ ಹೇಳುವುದನು ಮರೆತುಬಿಟ್ಟೆ' ಎಂದು ಹೇಳಿ ಆತ ಮತ್ತೆ ವಾಪಸ್ ಹೋದನು. ಐದು ನಿಮಿಷಗಳ ನಂತರ ಮತ್ತೆ ಬಂದು ಆತ ಹೇಳಿದ 'ಮಂತ್ರಿಗಳು ಬಾತ್ ರೂಮಿನಲ್ಲಿದ್ದಾರೆ. ಸ್ವಲ್ಪ ಹೊತ್ತು ಕಾಯಿರಿ' ಎಂದು ಹೇಳಿ ಕಾಂಪೌಂಡಿನಿಂದ ಹೊರಗೆ ಹೋದನು.



ಮಂತ್ರಿಗಳು ಮನೆಯಲ್ಲಿದ್ದಾರೆ. ಅವರನ್ನು ಯಾವುದೇ ಕ್ಷಣದಲ್ಲಿ ಭೇಟಿ ಮಾಡಬಹುದೆಂದು ನಾವು ನಿರೀಕ್ಷೆಯಲ್ಲಿದ್ದೆವು. ನಾವು ಕಾಯುತ್ತಾ ಕುಳಿತೆವು. ಅಲ್ಲಿಗೆ ಯಾರೂ ಬರಲಿಲ್ಲ. ನಾವಿಬ್ಬರೂ ಅಲ್ಲಿಯೆ ಕುಳಿತು ಮನೆಯನ್ನು ಕುರಿತು ಊಹಿಸುವುದು, ಲೆಕ್ಕ ಹಾಕುವುದು ಮಾಡುತ್ತಿದ್ದೆವು ನಾನು ನನ್ನ ಸ್ನೇಹಿತನನ್ನು ಕೇಳಿದೆ – 'ಈ ಮನೆಯನ್ನು ಯಾವಾಗ ಕಟ್ಟಿರಬಹುದು? ಊಹಿಸಬಲ್ಲೆಯ?

ಇದು ಹೊಸ ಮನೆ. ಎಲ್ಲವೂ ಹೊಸದರ ಹಾಗೆ ಕಾಣುತ್ತದೆ.

ಮನೆಯ ಒಟ್ಟು ವಿಸ್ತರಣ ಎಷ್ಟಿರಬಹುದೆಂದು ಊಹಿಸುತ್ತೀಯಾ?

'ಒಂದು ಐದು ಸಾವಿರ ಚದರಡಿ ಇರಬಹುದು'.

ಮೂರು ಮಹಡಿಯ ಮನೆ. ಒಟ್ಟು ಹದಿನೈದು ಸಾವಿರ ಚದರಗಳು ಇರಬಹುದು. ಸರಿತಾನೆ?

'ಹೌದು! ಹದಿನೈದು ಸಾವಿರ ಚದರ ಅಡಿ ಇರಬಹುದು'.

'ಹಾಗಾದರೆ ಹದಿನೈದು ಜನ ಕುಟುಂಬದ ಸದಸ್ಯರಿದ್ದರೆ, ಪ್ರತಿಯೊಬ್ಬರಿಗೂ ಒಂದು ಸಾವಿರ ಚದರಡಿ ಜಾಗ ನೀಡಬಹುದು. ಈ ಮನೆಯನ್ನು ಕಟ್ಟಲು ಎಷ್ಟು ಹಣ ಖರ್ಚಾಗಿರಬಹುದು?'

ನಾನು ಮನೆಯ ಒಳಗಡೆ ನೋಡಿಯೇ ಇಲ್ಲ. ಹೊರನೋಟದಿಂದ ಲೆಕ್ಕಹಾಕಿದರೆ ಒಂದುವರೆ ಮಿಲಿಯನ್ ರೂಪಾಯಿಗಳು ಆಗಿರಬಹುದೆಂದು ಊಹಿಸಬಹುದು.

ನಾವು ಈ ರೀತಿ ಮಾತನಾಡುತ್ತಾ ಕುಳಿತಿರುವ ಹಾಗೆಯೆ, ಅದೇ ಮನುಷ್ಯ ಕೈಗಳಲ್ಲಿ ಚೀಲವನ್ನು ಹಿಡಿದುಕೊಂಡು ಮತ್ತೆ ಆಗಮಿಸಿದ. ನಮ್ಮ ಸಮೀಪಕ್ಕೆ ಬಂದು, ನೀವು ಇನ್ನು ಮಂತ್ರಿಗಳನ್ನು ನೋಡಲಿಲ್ಲವೆ? ಎಂದನು. 'ಅವರಿಗೆ ತಿಳಿಸುತ್ತೇನೆ" ಎಂದು ಹೇಳಿ ಆತುರಾತುರವಾಗಿ ಹೊರಟುಹೋದನು. ಎರಡು ನಿಮಿಷಗಳ ನಂತರ ಮತ್ತೆ ಕಾಣಿಸಿಕೊಂಡು ನಾವು ಮನೆಯೊಳಗೆ ಬರುವಂತೆ ಸೂಚನೆ ನೀಡಿದನು. ಒಂದು ಕೊಠಡಿಯನ್ನು ತೋರಿಸಿದ. ನಾವು ಕೊಠಡಿಗೆ ಹೋದೆವು. ಅದು ಒಳ್ಳೆಯ ಸುಸಜ್ಜಿತವಾದ ಕೊಠಡಿ. ಅಲ್ಲಿ ಯಾರು ಇರಲಿಲ್ಲ ಖಾಲಿಯಿತ್ತು. ಮತ್ತೆ ಅದೇ ವ್ಯಕ್ತಿ ಬಂದು ಕುಳಿತುಕೊಳ್ಳುವಂತೆ ಹೇಳಿ 'ಮಂತ್ರಿಗಳು ಬರುತ್ತಾರೆ ಸ್ವಲ್ಪ ಕಾಯಿರಿ' ಎಂದು ಹೇಳಿದನು.

ಅಲ್ಲಿಯೆ ಇದ್ದ ಉದ್ದನೆಯ ಸೋಫಾ ಕಡೆ ಹೋಗಿ ಸೋಫಾದಲ್ಲಿ ಕುಳಿತುಕೊಂಡೆವು. ಈಗ ರೂಮಿನ ಕೊಠಡಿಯ ಬಾಗಿಲು ಮುಚ್ಚಿಕೊಂಡವು. ನಾವಿಬ್ಬರೇ ರೂಮಿನಲ್ಲಿ ಕುಳಿತಿದ್ದೆವು. ಯಾವ ವಿಚಾರವನ್ನೂ ಮಾತನಾಡಲು ನಮಗೆ ಭಯವಾಗುತ್ತಿತ್ತು. ಇಬ್ಬರೂ ಮೌನವಾಗಿದ್ದೆವು. ಆ ಕೊಠಡಿಯ ಅಲಂಕಾರವನ್ನು ಗಮನಿಸುತ್ತಾ ಕುಳಿತೆವು.

ಹದಿನೈದು ನಿಮಿಷಗಳ ನಂತರ ಮಂತ್ರಿಗಳು ಆಗಮಿಸಿದರು. ನಾವಿಬ್ಬರು ಎದ್ದು ನಿಂತು ಗೌರವ ಸೂಚಿಸಿದೆವು. ಅವರು ಅಲ್ಲಿಯೆ ಇದ್ದ ಒಂಟಿ ಸೋಪಾದಲ್ಲಿ ಕುಳಿತು ಕೊಂಡರು. ಅವರು ಪ್ರಸನ್ನಚಿತ್ತರಾಗಿದ್ದರು, ಸಂತೋಷವಾಗಿದ್ದರು – 'ಕ್ಷಮಿಸಿ ನಿಮ್ಮನ್ನು ಕಾಯಿಸಿದೆ' ಎಂದು ಹೇಳಿದರು!

ನಾವಿಬ್ಬರು ಒಬ್ಬರನ್ನೊಬ್ಬರು ನೋಡತೊಡಗಿದೆವು. ಆತ ನಮ್ಮನ್ನು ಗುರುತಿಸಲೇ ಇಲ್ಲ. ನಾವು ಆತನ ಯೋಗಕ್ಷೇಮವನ್ನು ವಿಚಾರಿಸಿದೆವು. ಆತ ನಮ್ಮನ್ನು ಪೂರ್ತಿ ಗುರುತಿಸಲಾಗದಿದ್ದರೂ  ಅತ್ಯಂತ ಸೌಜನ್ಯದಿಂದ ನಡೆಸಿಕೊಂಡರು.

ಕೆಲ ಸಮಯದ ನಂತರ ನಾವಿಬ್ಬರೂ ಒಮ್ಮೆಲೆ ಕೇಳಿದೆವು – 'ನೀವು ಹೇಗಿದ್ದೀರಿ ಸಾರ್?' ಎಂದು.

'ನಾನು ಚೆನ್ನಾಗಿದ್ದೇನೆ. ನಾನು ನಿಮಗೇನು ಮಾಡಲಿ'? ಎಂದರು.

ಮಾನ್ಯ ಮಾಜಿ ಸಚಿವರು ನಮ್ಮನ್ನು ಗುರುತು ಹಿಡಿಯಲಿಲ್ಲ. ಆದರೂ ಆತ ತುಂಬಾ ಚೆನ್ನಾಗಿ ಮತ್ತು ಪರಿಣಾಮಕಾರಿಯಾಗಿ ನಟನೆ ಮಾಡುತ್ತಿದ್ದರು. ಬಹುಶಃ ಇಷ್ಟೊಂದು ಚೆನ್ನಾಗಿ ನಟಿಸುವುದರಿಂದಲೆ ಇರಬೇಕು ಅವರು ಜೀವನದಲ್ಲಿ ಬಹಳ ಯಶಸ್ವಿ ಯಾಗಿರುವುದು. 'ಸಾರ್, ನೀವು ನಿನ್ನೆ ರಾತ್ರಿ ನಮ್ಮನ್ನು ಇಂದು ಬೆಳಗಿನ ಟೀಗೆ ಬರುವಂತೆ ಆಹ್ವಾನಿಸಿದ್ದಿರಿ' ಎಂದು ನೆನಪು ಮಾಡುವಂತೆ – ನಿಮಗೆ ಇದು ನೆನಪಿದೆಯೆ? ಎಂದು ನನ್ನ ಸ್ನೇಹಿತ ಕೇಳಿದ.

'ಓ! ಹೌದು, ಹೌದು, ಅದು ಸರಿ! ಎಂದು ತನ್ನ ಕಣ್ಣುಗಳನ್ನು ಬೇರೆಡೆ ತಿರುಗಿಸಿ, ಅದಕ್ಕಾಗಿಯೇ ನಾನು ನಿಮಗಾಗಿ ಕಾಯುತ್ತಿದ್ದೆ' ಎಂದು ಹೇಳಿದರು.

ಅಲ್ಲಿಯೆ ಸಮೀಪದಲ್ಲಿದ್ದ ಕರೆಗಂಟೆಯನ್ನು ಒತ್ತಿದರು. ಒಬ್ಬ ಕೆಲಸಗಾರ ರೂಮಿಗೆ ಆಗಮಿಸಿದನು. ಸಚಿವರು ಮೂರು ಕಪ್ಪು ಕಾಫಿಯನ್ನು ತರುವಂತೆ ಹೇಳಿ 'ಕಳೆದ ರಾತ್ರಿ ನೀವು ನನಗೆ ತುಂಬಾ ಸಹಾಯ ಮಾಡಿದಿರಿ, ನಿಮಗೆ ನಾನು ತುಂಬಾ ಋಣಿಯಾಗಿದ್ದೇನೆ. ನನ್ನಿಂದ ನಿಮಗೇನಾದರೂ ಸಹಾಯವಾಗಬೇಕಿದ್ದರೆ, ದಯಮಾಡಿ ಯಾವ ಸಂಕೋಚವು ಇಲ್ಲದೆ ತಿಳಿಸಿ' ಎಂದರು. 'ನಾನು ನಿಮಗೆ ಸಹಾಯಮಾಡುತ್ತೇನೆ, ಯಾವುದೇ ತೊಂದರೆಯಿಲ್ಲ' ಎಂದು ತಿಳಿಸಿದರು.

ಸಚಿವರ ಈ ಮಾತುಗಳು ನಮಗೆ ಸಂತೋಷವನ್ನುಂಟು ಮಾಡಿದವು. ನಮಗೆ ಆತನಿಂದ ತಕ್ಷಣಕ್ಕೆ ಏನು ಆಗಬೇಕಾಗಿರಲಿಲ್ಲ. ಆದರೂ 'ಯಾವಾಗ ನಿಮ್ಮಿಂದ ಸಹಾಯವಾಗಬೇಕೊ ಆಗ ನಿಜವಾಗಿಯೂ ನಿಮಗೆ ತೊಂದರೆ ಕೊಡಲು ನಿಮ್ಮಲ್ಲಿಗೆ ಬರುತ್ತೇವೆ. ನಾವು ನಿಮ್ಮನ್ನು ಬಿಟ್ಟು ಯಾರಲ್ಲಿಯೂ ಹೋಗುವುದಿಲ್ಲ' ಎಂದು ತಿಳಿಸಿದೆವು!

'ಹೌದು! ಏನು ಬೇಕೆಂದು, ಯಾವುದೇ ಸಂಕೋಚವಿಲ್ಲದೆ ಹೇಳಿ. ನಾನು ನನ್ನ ಶಕ್ತಿ ಮೀರಿ ನಿಮಗೆ ಸಹಾಯ ಮಾಡುತ್ತೇನೆ' ಎಂದು ಭರವಸೆ ನೀಡಿದರು.



ಇದೇ ಅವಕಾಶವನ್ನು ಬಳಸಿಕೊಂಡು ರಾತ್ರಿ ನನಗೆ ಬಿದ್ದ ಕನಸನ್ನು ಆತನಿಗೆ ವಿವರಿಸಿದೆ. ನನ್ನನ್ನು ಆತ ಗುರುತಿಸಲು ತಿರಸ್ಕರಿಸಿದ ರೀತಿಯನ್ನು ಆತನಿಗೆ ವಿವರಿಸಿ ಹೇಳಿದೆ. ನನ್ನ ಈ ಮಾತುಗಳನ್ನು ಕೇಳಿ ಅವರು ತುಂಬಾ ನಕ್ಕರು. ಮತ್ತು ಆತ ನಗುತ್ತಾ ಹೇಳಿದರು – 'ನೀವು ಕನಸಿನಲ್ಲಿ ಕಂಡ ರೀತಿಯಲ್ಲಿ ನಾನು ಇಂದು ನಿಮಗೆ ಈಗ ಕಾಣುತ್ತೇನೆಯೇ? ನಿಮ್ಮ ಕನಸು ಸುಳ್ಳು!' ಎಂದರು.

ಆತನ ಮಾತುಗಳನ್ನು ನಾನು ನಂಬಲೇಬೇಕೆಂದು ಒತ್ತಾಯಿಸುವಂತೆ ಆತನ ಮಾತುಗಳು ಸಾಕ್ಷಿಗಳಂತಿದ್ದವು. ಅದು ಹಾಗಿರಲಿ ಮತ್ತೆ ನೀವು ಯಾವಾಗ ಮಂತ್ರಿಯಾಗುತ್ತೀರಿ ಎಂದು ತಿಳಿದಿರುವಿರಿ? ಎಂದು ನಾನು ಕೇಳಿದೆ.

'ನಾನು ಯಾವಾಗ ಮಂತ್ರಿಯಾಗುತ್ತೇನೆಂದು ನಿಖರವಾಗಿ ಹೇಳಲಾರೆ. ಆದರೂ ನಾನು ಮಂತ್ರಿಯಾಗಿಯೇ ಆಗುತ್ತೇನೆ. ನೋಡಿ ಇಂದಿನ ಮಂತ್ರಿಗಳನ್ನು! ಅವರು ಏನನ್ನೂ ಮಾಡುತ್ತಿಲ್ಲ. ಅವರುಗಳೆಲ್ಲ ನಾಲಾಯಕ್ಕಾದ ಮಂತ್ರಿಗಳು. ಇಂಥ ಮಂತ್ರಿಗಳು ಎಷ್ಟು ದಿನ ಪರಿಣಾಮಕಾರಿಯಾಗಿ ಸರ್ಕಾರವನ್ನು ನಡೆಸುತ್ತಾರೆ ಎಂದು ನೀವು ನಂಬಿದ್ದೀರಿ? ಅಂತಿಮವಾಗಿ ನಾವು ದೇಶದ ಹಿತಕ್ಕಾಗಿಯಾದರೂ ಆಡಳಿತವನ್ನು ತೆಗೆದುಕೊಳ್ಳಲೇ ಬೇಕು. ಅದರಲ್ಲಿ ನನಗೆ ನಂಬಿಕೆಯಿದೆ' ಎಂದರು.

ಆತನು ತನ್ನ ಮಾತುಗಳಿಗೆ ಒತ್ತು ನೀಡುತ್ತಾ ಹೇಳಿದ 'ಈಗ ನೋಡಿ!. ಅರಣ್ಯ ಇಲಾಖೆಯಲ್ಲಿ ಒಬ್ಬ ಟಿಂಬರ್ ಡೀಲರ್ ಅನ್ನು ಮಂತ್ರಿಯನ್ನಾಗಿ ಮಾಡಿದ್ದಾರೆ. ಆತ ತಾನು ಹಿಂದೆ ಅನುಭವಿಸಿದ ರುಚಿಯನ್ನು ಬಿಡುತ್ತಾನೆಯೇ? ಸಾಧ್ಯವೇ ಇಲ್ಲ. ಕಳೆದ ವರ್ಷದವರೆಗೆ ಕಟ್ಮಂಡುವಿನ ಮರಕೆಲಸಗಾರರು ತೇಗದ ಮರಕ್ಕಾಗಿ ಅವನ ಮನೆಯನ್ನು ಸುತ್ತುವರಿದಿದ್ದರು. ನಾನೇ ಇದನ್ನು ಕಣ್ಣಾರೆ ನೋಡಿದ್ದೇನೆ. ಇಡೀ ಜಿಲ್ಲೆಯ ತೇಗದ ಮರಗಳನ್ನು ಸರ್ಕಾರಿ ಅನುಮತಿ ಪಡೆದು ತನ್ನ ಸ್ವಂತ ಆಸ್ತಿಯೆಂಬಂತೆ ಬೇರೆ ಕಡೆಗೆ ಸಾಗಿಸಿರುವುದಾಗಿ ನಾನು ಕೇಳಿದ್ದೇನೆ. ನಾನು ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಈ ಪ್ರಕರಣವನ್ನು ಪರಿಶೀಲಿಸಿದ್ದೇನೆ. ಮತ್ತು ಇದು ನಿಜವೆಂದು ಮನವರಿಕೆಯಾಯಿತು. ಮತ್ತೆ ಕೆಲವು ವಿಚಾರಗಳನ್ನು ದಾಖಲೆ ಸಮೇತ ಸಾಬೀತು ಮಾಡಲು ಸಾಧ್ಯವಾಗದಂತಹ ವಿಚಾರಗಳಾಗಿರುತ್ತವೆ ಎಂದು ತನ್ನ ಮಾತುಗಳನ್ನು ಮುಂದುವರಿಸಿದ. ಆದರೆ ಜನರ ಮೇಲೆ ಉಂಟುಮಾಡುವ ಪರಿಣಾಮವನ್ನು ಮಾತ್ರ ತಡೆಯಲು ಅಥವಾ ತಪ್ಪಿಸಲು ಸಾಧ್ಯವಿಲ್ಲ. ಈಗ ಹೇಳಿ ಇಂಥ ಒಬ್ಬ ವ್ಯಾಪಾರಿಯ ಕೈಗೆ ಅಧಿಕಾರ ಸಿಕ್ಕರೆ ನೇಪಾಳದ ಅರಣ್ಯ ಉಳಿಯುತ್ತದೆಯೆ'?

ಆತ ಹೇಳುತ್ತಿದ್ದ ವಿಚಾರಗಳು, ನಮ್ಮ ತಿಳುವಳಿಕೆಗೆ ನಿಲುಕದೆಯಿದ್ದ ವಿಚಾರಗಳಾಗಿದ್ದವು. ಆದರೂ ನಮ್ಮ ಚರ್ಚೆಯ ವಿಷಯವನ್ನು ಬದಲಾಯಿಸಲು ನಮ್ಮಿಂದ ಸಾಧ್ಯವಾಗಲಿಲ್ಲ. ಆತನ ವಿಷಯದ ನಿರೂಪಣೆಯನ್ನು ನಾವು ಕೇಳುತ್ತಾ ಹೋದೆವು. 'ನಾನು ಮಂತ್ರಿಯಾಗಿದ್ದ ಕಾಲದಲ್ಲಿ ಅರಣ್ಯವನ್ನು ಕಾಪಾಡುವಂತಹ

ನೀತಿಗಳನ್ನು, ನಿಯಮಗಳನ್ನು ಮತ್ತು ಕಾಯಿದೆಗಳ ಚೌಕಟ್ಟನ್ನು ರೂಪಿಸಿದ್ದೆನು. ಈಗ ನೋಡಿ ನಮ್ಮ ಅರಣ್ಯವನ್ನು ಅವರು ನಾಶಮಾಡುತ್ತಿದ್ದಾರೆ ಮತ್ತು ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ನಮ್ಮ ಗ್ರಾಮ ಹಾಗೂ ನಗರಗಳಿಗೆ ಮರದ ದಿಮ್ಮಿಗಳು ಸರಬರಾಜಾಗುತ್ತಿಲ್ಲ. ಅವುಗಳೆಲ್ಲವನ್ನು ಭಾರತಕ್ಕೆ ಕಳುಹಿಸುತ್ತಿದ್ದಾರೆ. ಇದೇ ಪದ್ಧತಿ ಇನ್ನೂ ಕೆಲವು ವರ್ಷಗಳು ಮುಂದುವರಿದರೆ ನೇಪಾಳ ಪ್ರಾಕೃತಿಕ ದುಷ್ಪರಿಣಾಮ ಎದುರಿಸಬೇಕಾಗಬಹುದು' ಎಂದು ಮಾತು ಮುಂದುವರಿಸಿದರು.

ಆತ ತನ್ನ ಮಾತನ್ನು ಮುಂದುವರೆಸುತ್ತಾ ಹೇಳಿದ, ನಿನ್ನೆ ದಿನ ಒಬ್ಬ ವ್ಯಕ್ತಿ ನನ್ನ ಬಳಿ ಬಂದು ವಿನಂತಿಸಿದರು, 'ಸಾರ್ ಮಾನ್ಯ ಅರಣ್ಯ ಸಚಿವರಿಗೆ ನನಗೆ ಸೌದೆಯನ್ನು ವಿದೇಶಕ್ಕೆ ಸಾಗಿಸಲು ಅನುಮತಿ ನೀಡುವಂತೆ ಶಿಫಾರಸು ಮಾಡಿ, ನನಗೆ ಹೆಚ್ಚಿಗೆ ಬೇಕಿಲ್ಲ. ಕೇವಲ ಎರಡು ನೂರು ಲಾರಿಗಳಷ್ಟು ಸಾಕು. ನಾನು ಅವುಗಳನ್ನು ಭಾರತ–ನೇಪಾಳದ ರೈಲ್ವೆ ನಿಲ್ದಾಣದ ಬಳಿ ಸಾಗಿಸಿದರೆ, ತಕ್ಷಣ ಪ್ರತಿ ಲಾರಿಗೂ ೫೦೦ ಭಾರತೀಯ ರೂಪಾಯಿಗಳನ್ನು ಗಳಿಸುತ್ತೇನೆ. ನಾನು ಒಂದು ಪೈಸೆಯನ್ನು ಖರ್ಚುಮಾಡದೆ ಒಂದು ನೂರು ಸಾವಿರ ಭಾರತೀಯ ರೂಪಾಯಿಗಳನ್ನು ಗಳಿಸಬಹುದು. ದಯಮಾಡಿ ಸಾರ್! ತಾವು ಶಿಫಾರಸ್ಸು ಮಾಡಿ ಎಂದು ಗೋಗರೆದನು'. ನೋಡಿ! ನನ್ನ ಕೈಲಿ ಈಗ ಅಧಿಕಾರವಿಲ್ಲ ಎಂದು ನಾನು ಹೇಳಿದೆ. ನಾನು ಹೇಳಿದರೂ ಅವರು ನಾನು ಹೇಳಿದಂತೆ ಮಾಡದೆ ಇರಬಹುದು. ಆದ್ದರಿಂದ ಈ ವಿಚಾರದಲ್ಲಿ ನಾನು ಅಸಹಾಯಕ. ಆದ್ದರಿಂದ ಯಾವಾಗ ಏನು ಹೇಳದಿದ್ದರು ಅವರು ಅವರಿಗೆ ತಿಳಿದಂತೆ ಮಾಡುತ್ತಿರುವುದು ನಿಜ ಎಂದು ತಿಳಿಸಿದೆ.

ಕೆಲ ಕ್ಷಣಗಳ ಮೌನದ ನಂತರ ಆವರು ಉತ್ಸಾಹದಿಂದ ಹೇಳಿದರು. 'ಅವರು ಎಷ್ಟುದಿನಾ ಈ ರೀತಿ ನಡೆಸಲು ಸಾಧ್ಯ? ಅವರನ್ನು ಜನತೆ ಬಲವಂತವಾಗಿ ತೆಗೆದುಹಾಕಿ ನಮ್ಮನ್ನು ಮತ್ತೆ ಅಧಿಕಾರಕ್ಕೆ ತರುತ್ತಾರೆ'.

ಅವರ ಮಾತಿನ ಹಿನ್ನೆಲೆಯಲ್ಲಿ 'ಈ ರೀತಿ ಅವರ ಮನಸ್ಸಿಗೆ ಬಂದಂತೆ ಮಾಡುವವರ ವಿರುದ್ಧ ಕ್ರಮತೆಗೆದುಕೊಳ್ಳಲು ಸರ್ಕಾರದ ಕಛೇರಿಗಳಿರಬೇಕಲ್ಲವೆ?' ಎಂದು ನಾನು ಹೇಳಿದೆ.

'ಹೌದು! ಯಾಕಿಲ್ಲ. ಇವೆ'

'ಹಾಗಾದರೆ ಅವರು ಯಾಕೆ ಇದನ್ನೆಲ್ಲ ಗಮನಿಸುತ್ತಿಲ್ಲ?

'ಅವರು ಕಣ್ಣುಗಳನ್ನು ಮುಚ್ಚಿಲ್ಲ. ಅವರು ನೋಡುತ್ತಾರೆ ಮತ್ತು ಅವಲೋಕಿಸುತ್ತಾರೆ'.

ಆತ ಹೇಳಿದ ರೀತಿ ನಮ್ಮೆಲ್ಲರಿಗೂ ನಗೆ ಮೂಡಿಸಿತು. ಅಷ್ಟರಲ್ಲಿ ಕಾಫಿ ಬಂದಿತು. ಮಾನ್ಯಮಂತ್ರಿಗಳ ಮನೆಯ ಬಿಸಿಬಿಸಿ ಕಾಫಿ ಒಂದು ರೀತಿಯ ಹೊಸ



ರುಚಿಯಿಂದ ಕೂಡಿತ್ತು. ನಮ್ಮ ಸಂಭಾಷಣೆಯ ವಿಷಯ ಬದಲಾಗಿ, ಕಾಫಿ ವಿಷಯದ ಮೇಲೆ ಚರ್ಚೆ ಆರಂಭವಾಯಿತು. ಕಾಫಿಪುಡಿಯು ಲಂಡನ್ನಿನಿಂದ ಆಮದಾಗಿದ್ದುದು ಎಂದು ನಮಗೆ ತಿಳಿಯಿತು. ಹಾಗೂ ಆತನಿಗೆ ವಿದೇಶಿ ವಸ್ತುಗಳ ಬಗ್ಗೆ ತುಂಬಾ ಆಸಕ್ತಿಯಿರುವುದು ಗೊತ್ತಾಯಿತು. ಆತನ ವಿನಂತಿಯ ಮೇರೆಗೆ ನಾವು ನಮ್ಮ ಪರಿಚಯವನ್ನು ಮಾಡಿಕೊಂಡೆವು. ನಾವು ಏನು ಮಾಡುತ್ತಿದ್ದೇವೆ ಎನ್ನುವುದರ ಜೊತೆಗೆ ನಮ್ಮ ಕೌಟುಂಬಿಕ ವಿವರಗಳನ್ನು ನೀಡಿದೆವು. ನಾನು ಇದೇ ಸಂದರ್ಭವನ್ನು ಬಳಸಿಕೊಂಡು ಮಾನ್ಯ ಸಚಿವರ ಬಗ್ಗೆ ಮಾಹಿತಿಯನ್ನು ಪಡೆಯಬಯಸಿದೆ. 'ನಿಮಗೆ ಎಷ್ಟು ಜನ ಮಕ್ಕಳು ಸಾರ್!' ಎಂದು ಕೇಳಿದೆ.

'ಎಲ್ಲ ಸೇರಿ ನಾವು ಎಂಟು ಜನರಿದ್ದೇವೆ. ಇಲ್ಲಿ ಸೇವಕರನ್ನು ಬಿಟ್ಟರೆ ಕೇವಲ ನಾಲ್ಕು ಜನರಿದ್ದಾರೆ'.

'ಬೇರೆಯವರು ಎಲ್ಲಿದ್ದಾರೆ'?

'ಇಬ್ಬರು ಹಳ್ಳಿಯಲ್ಲಿದ್ದಾರೆ! ಇನ್ನಿಬ್ಬರು ವಿದೇಶದಲ್ಲಿದ್ದಾರೆ'.

'ಅಂದರೆ ನಿಮ್ಮ ಇಬ್ಬರು ಮಕ್ಕಳು ಮಾತ್ರ ಹಳ್ಳಿಯಲ್ಲಿದ್ದಾರೆ'?

'ಇಲ್ಲ. ನನ್ನ ಹೆಂಡತಿಯು ಅಲ್ಲಿ ಇದ್ದಾರೆ'.

'ಅಂದರೆ ನೀವು ಇಲ್ಲಿ ಒಂಟಿಯಾಗಿದ್ದೀರಿ'?

'ಇಲ್ಲ, ನನಗೆ ಮೂರು ಜನ ಹೆಂಡತಿಯರು. ಒಬ್ಬರು ಹಳ್ಳಿಯಲ್ಲಿದ್ದಾರೆ. ಇಬ್ಬರು ಇಲ್ಲಿದ್ದಾರೆ'.

ನನಗೆ ಆಶ್ಚರ್ಯವಾಯಿತು. 'ಓ' ಎಂದು ಬಾಯಿ ತೆರೆಯಬೇಕು ಎನ್ನುವಷ್ಟರಲ್ಲಿ ಆತ ನನ್ನ ಪ್ರಶ್ನೆಗಳಿಗೆ ಸಹಜವಾಗಿ ಉತ್ತರಿಸುತ್ತಿದ್ದ.

'ಇಬ್ಬರು ವಿದೇಶದಲ್ಲಿರುವವರು ನಿಮ್ಮ ಮಕ್ಕಳು....ವಿದ್ಯಾಭ್ಯಾಸಕ್ಕಾಗಿ ಹೋಗಿದ್ದಾರ'? ಎಂದು ಮತ್ತೆ ನಾನು ಪ್ರಶ್ನೆ ಕೇಳಿದೆ.

'ಹೌದು. ಒಬ್ಬ ಮಗ ಮತ್ತೊಬ್ಬಳು ಮಗಳು. ನನ್ನ ಹಿರಿಯ ಮಗಳು ಲಂಡನ್ನಿನಲ್ಲಿ ಓದುತ್ತಿದ್ದಾಳೆ. ನನ್ನ ಹಿರಿಯ ಮಗ ಭಾರತದ ಡಾರ್ಜಲಿಂಗಿನಲ್ಲಿ ಓದುತ್ತಿದ್ದಾನೆ. ಮುಂದಿನ ವರ್ಷ ನನ್ನ ಮಗನನ್ನು ಲಂಡನ್ನಿಗೆ ಕಳುಹಿಸುತ್ತೇನೆ' ಎಂದು ಗಾಂಭೀರ್ಯದ ಧ್ವನಿಯಲ್ಲಿ ಹೇಳಿದರು.

ನಮಗೆ ಮಾನ್ಯಮಂತ್ರಿಗಳ ಮಾತುಕತೆಯಿಂದ ಸಮಾಧಾನವಾಯಿತು. ಆತ ಅನೇಕ ವಿಚಾರಗಳಲ್ಲಿ ನೇರ ನಡತೆಯವರಂತೆ ಕಾಣಿಸಿದರು. ನಮ್ಮ ಮಾತು ಕೇವಲ ಹಿಂದಿನ ರಾತ್ರಿ ಪರಿಚಯವಾದ ವ್ಯಕ್ತಿಯ ಜೊತೆ ನಡೆಯುತ್ತಿದೆ ಎಂದು ಅನ್ನಿಸಲೇಯಿಲ್ಲ. ನಾವು ಹಳೆಯ ಸ್ನೇಹಿತರಂತೆ ನಡೆದುಕೊಂಡೆವು ಅನ್ನಿಸಿತು.

ಆತ ತನ್ನ ಹಿಂದಿನ ದಿನಗಳನ್ನು ಮೆಲುಕು ಹಾಕುತ್ತ ಹೋದ– 'ಹಿಂದಿನ ದಿನಗಳಲ್ಲಿ ನಾನು ಯಾವ ತಪ್ಪನ್ನು ಮಾಡಿಲ್ಲ. ನಾನು ನನ್ನ ದೇಶ ಮತ್ತು ಜನರಿಗಾಗಿ

ದುಡಿದಿದ್ದೇನೆ. ಎಷ್ಟಾದರೂ ನಾನು ಜನರ ಪ್ರತಿನಿಧಿ. ನಾನು ಸಾರ್ವಜನಿಕರ ಸೇವಕ. ಸಾರ್ವಜನಿಕರ ಹಿತವನ್ನು ಕಾಪಾಡುವುದು ನನ್ನ ಕರ್ತವ್ಯ ಹೌದು. ನಾನು ಈ ಸಿದ್ಧಾಂತದ ಮೇಲೆ ಕೆಲಸ ಮಾಡಿದವನು. ನನ್ನ ಬಗ್ಗೆ ಯಾರೊಬ್ಬರೂ ಯಾವ ದೂರನ್ನೂ ಆ ದಿನಗಳಲ್ಲಿ ನೀಡಲಿಲ್ಲ. ಅದು ನನ್ನ ಅದೃಷ್ಟವಲ್ಲವೆ'? ಎಂದು ಪ್ರಶ್ನಿಸಿದರು. 'ನಾನು ಯಾವಾಗಲೂ ಮೇಲಿನಿಂದ ಕೆಳಗಿನವರೆಗೆ ಸಮಚಿತ್ತವನ್ನು ಕಾಪಾಡಿಕೊಂಡು ಕೆಲಸಮಾಡಿದವನು. ನಾನು ಸರ್ಕಾರದ ನೀತಿ, ನಿಯಮ ಹಾಗೂ ತತ್ವಗಳಿಗೆ ವಿರುದ್ಧವಾಗಿ ಯಾವತ್ತೂ ಯಾವ ಕೆಲಸವನ್ನೂ ಮಾಡಿದವನಲ್ಲ. ನನ್ನ ಕೆಲಸದಲ್ಲಿ ಯಾವುದೇ ಲೋಪವಾದರೆ ಅದನ್ನು ಜಾಣತನದಿಂದ ಹೊಂದಾಣಿಕೆ ಮಾಡುತ್ತಿದ್ದೆ. ನೀವೇ ಯೋಚಿಸಿ? ಯಾರಾದರೂ ನನ್ನ ವಿರುದ್ಧ ನಾನು ಭ್ರಷ್ಟನೆಂದು ಬೆರಳು ತೋರಿಸಲು ಸಾಧ್ಯವಾ? ಇಲ್ಲ. ಸಾಧ್ಯವೇ ಇಲ್ಲ. ಆ ಬಗ್ಗೆ ನನಗೆ ತುಂಬಾ ನಂಬಿಕೆಯಿದೆ. ಆದ್ದರಿಂದಲೇ, ನಾನು ಹೇಳುವುದು ಈ ದೇಶಕ್ಕೆ ನಮ್ಮ ಸೇವೆಯ ಅವಶ್ಯಕತೆ ಇದೆ' ಎಂದು, ತನ್ನ ಅನುಭವಗಳನ್ನು ಹೇಳುತ್ತಾ ಹೋದರು.

ನಮ್ಮ ಚರ್ಚೆ ಮುಂದುವರಿದಿತ್ತು. ಮತ್ತೊಂದು ಬಾರಿ ಕಾಫಿ ಬಂದಿತು. ನಾವು ಕಾಫಿಯನ್ನು ಕುಡಿಯುತ್ತಿದ್ದೆವು. ಆತ ತನ್ನ ಅಭಿಪ್ರಾಯಗಳನ್ನು ತನ್ನದೇ ಆದ ರೀತಿಯಲ್ಲಿ ಹೇಳುತ್ತಾ ಹೋದ. ಆತ ಆಗ ನಿರಾಳವಾಗಿದ್ದ. ನಾವು ಕಾಫಿ ಮುಗಿಸುವ ವೇಳೆಗೆ ನಮ್ಮ ಭೇಟಿಯು ಮುಗಿಯಬಹುದೆಂದು ಮಾನ್ಯ ಮಂತ್ರಿಗಳು ಯೋಚಿಸಿದ್ದಿರಬಹುದು. ಈಗ ಮೌನವಾದರು, ನಾವು ಕಾಫಿಯನ್ನು ಮುಗಿಸಿ ಮನೆಗೆ ಹೋಗಲು ಅನುಮತಿಯನ್ನು ನೀಡುವಂತೆ ಮಂತ್ರಿಗಳನ್ನು ವಿನಂತಿಸಿದೆವು.

ಅಷ್ಟರಲ್ಲಿ ಮಾನ್ಯ ಮಂತ್ರಿಗಳು, 'ದಯಮಾಡಿ ಮತ್ತೆ ಮತ್ತೆ ಬರುತ್ತಿರಿ. ನಾವೆಲ್ಲ ಸ್ನೇಹಿತರು. ಅನ್ಯಥಾ ಭಾವಿಸಬೇಡಿ, ಮತ್ತೆ ನಿಮ್ಮನ್ನು ಭೇಟಿಯಾಗುವುದು ತುಂಬಾ ಸಂತೋಷ. ನೀವು ಬಂದಿದ್ದಕ್ಕಾಗಿ ಧನ್ಯವಾದಗಳು' ಎಂದರು.

ಹೊರಡಲು ಎದ್ದು ನಿಂತ ನನ್ನ ಸ್ನೇಹಿತರು ಹೇಳಿದರು – 'ನಾವು ಮತ್ತೆ ಬಂದು ಈ ರೀತಿಯ ಸದಭಿರುಚಿಯ ಮಾತನಾಡುತ್ತೇವೆ. ಸಾರ್! ನೀವು ಬೆಳಗಿನ ವೇಳೆಯಲ್ಲಿ ಯಾವಾಗಲೂ ಮನೆಯಲ್ಲಿಯೇ ಇರುತ್ತೀರಿ ಎಂದು ಭಾವಿಸಿದ್ದೀವಿ. ಇರುತ್ತೀರಿ ಅಲ್ಲವಾ?' ಎಂದು ಕೇಳಿದರು.

'ಹೌದು ಎಲ್ಲ ದಿನಗಳಲ್ಲೂ ಇರುತ್ತೇನೆ. ಯಾವ ದಿನವಾದರೂ ಬನ್ನಿ. ನಿಮಗೆ ಸ್ವಾಗತ'.

ಆತನ ಮಾತುಗಳು ನಮಗೆ ಸಂತೋಷವನ್ನುಂಟು ಮಾಡಿದವು. ಆದರೆ ಆತನ ಕೃತಕ ವ್ಯಂಗ್ಯ ಒಂದು ರೀತಿಯಲ್ಲಿ ಚುಚ್ಚಿದಂತಾಯಿತು. ಆತನಿಗೆ 'ಗುಡ್‌ಬೈ' ಹೇಳಿ ಆತನ ರೂಮಿನಿಂದ ಹೊರನಡೆದೆವು.



# ಗುರುವಾರ

**ನಾ**ನು ಪಲ್‌ಚೌಕಕ್ಕೆ ನನ್ನ ಕಾರಿನಲ್ಲಿ ಹೋಗಬೇಕೆಂದು ಯೋಚಿಸುತ್ತಿದ್ದೆ. ನನ್ನ ಬೆಳಗಿನ ಊಟಕ್ಕೆ ಮುಂಚೆ ನನ್ನ ಕಾರನ್ನು ಅವರಿಗೆ ಒಮ್ಮೆ ತೋರಿಸಬೇಕೆಂದಿದ್ದೆ. ಆದರೆ ಅದು ಸಾಧ್ಯವಾಗಿರಲಿಲ್ಲ. ಯಾವಾಗಲೂ 'ಅದೆ ತಣ್ಣನೆಯ ತಿಂಡಿ, ಎಂಥಾ ರುಚಿ!' ಎಂದು ಸದಾ ವ್ಯಂಗ್ಯಮಾಡುವ ನನ್ನ ಹೆಂಡತಿಯ ಮಾತುಗಳನ್ನು ಕೇಳಲು ಇಷ್ಟವಾಗಲಿಲ್ಲ. ಇದು ನಿತ್ಯ ಇದ್ದದ್ದೆ! ಎಂದು ನಾನು ನನ್ನ ಊಟವಾದ ನಂತರ ಹೊರಗೆ ಹೋಗಬೇಕೆಂದು ತೀರ್ಮಾನಿಸಿದೆ. ಸರ್ಕಾರದ ಒಂದು ದಿನಪತ್ರಿಕೆಯಲ್ಲಿ ಬಂದ ಜಾಹಿರಾತು ನನ್ನ ಕಾರನ್ನು ಮಾರಲು ಅನುಕೂಲವಾಯಿತು. ನನ್ನ ಕುಟುಂಬದ ಎಲ್ಲರ ಸಹಾಯದಿಂದ ಕಾರನ್ನ ತೊಳೆದಿದ್ದೆ. ಅದು ಈಗ ಶುಭ್ರವಾಗಿತ್ತು. ನಾನು 'ದೋರ್‌ಜಿ ಸದನ್' ವಿಲ್ಲಾಕ್ಕೆ ಹೋಗಬೇಕಿತ್ತು. ನಾನು ದೂರವಾಣಿಯ ಸಂಭಾಷಣೆಯಲ್ಲಿ ಗ್ರಹಿಸಿದ ಪ್ರಕಾರ 'ದೋರ್‌ಜಿ ಸದನ' ವಿಲ್ಲಾ 'ಪಲ್ ಚೌಕದ' ಸಮೀಪದ ಕ್ರಾಸಿನಲ್ಲಿ ಇರಬಹುದು ಎಂದುಕೊಂಡಿದ್ದೆನು.

ಅವರು ಕೊಟ್ಟಿರುವ ವಿಳಾಸ 'ದೋರ್‌ಜಿ ಸದನ'. ಆದರೆ ಅವರು ನೀಡಿರುವ ಹೆಸರು 'ಚೆರಿಂಗ್' ಅದು ಹೇಗೆ? ಅದು 'ಚೆರಿಂಗ್ ಸದನ' – ವ್ಯಕ್ತಿಯ ಹೆಸರು ಇರಬೇಕು ಎಂದು ನಾನು ಯೋಚಿಸುತ್ತಿದ್ದೆ. ಮತ್ತು ಮನೆಯ ಹೆಸರನ್ನು'ದೋರ್‌ಜಿ' ಎನ್ನುವ ಉಪ ಹೆಸರಿನಿಂದ ಕರೆದಿರಬಹುದು. ಆದ್ದರಿಂದ ಅದು 'ದೋರ್‌ಜಿ ಸದನ' ವಿಲ್ಲಾದ ಹೆಸರು. ಬೆಳಗ್ಗೆ ಅವರು ದೂರವಾಣಿಯಲ್ಲಿ ಮಾತನಾಡಿದ ರೀತಿಯನ್ನು ಗಮನಿಸಿದರೆ ಅವರಿಗೆ ತುರ್ತಾಗಿ ಕಾರು ಅವಶ್ಯಕತೆಯಿರಬಹುದು. ಆದ್ದರಿಂದ ನಾನು ಈ ಸಾರಿ ಒಂದೆರಡು ಸಾವಿರ ರೂಪಾಯಿಗಳು ಕಡಿಮೆ ಹಣಕ್ಕಾದರೂ ಪರವಾಗಿಲ್ಲಾ ಕಾರನ್ನು ಮಾರಲೇಬೇಕೆಂದು ತೀರ್ಮಾನಿಸಿದ್ದೆ.

ನಾನು ಪಲ್‌ಚೌಕಕ್ಕೆ ಹೋಗುವ ಆತುರದಲ್ಲಿದ್ದೆ. ನಾನು ಆತುರಾತುರವಾಗಿ ಊಟ ಮಾಡಿ ಬಟ್ಟೆ ಬದಲಿಸಿ ಪಲ್‌ಚೌಕಕ್ಕೆ ಹೊರಡಲು ಸಿದ್ಧನಾದೆ. ನಾನು ದಾರಿಯಲ್ಲಿ ಹೋಗುತ್ತಾ ಕಾರಿಗೆ ಎಷ್ಟು ಬೆಲೆಯನ್ನೂ ಹೇಳಲಿ? ಎಂದು ಯೋಚಿಸತೊಡಗಿದೆ. ನಾನು ದುಬಾರಿ ಬೆಲೆಯನ್ನು ಹೇಳಿದರೆ ಅವರು ಖರೀದಿಸದೇ ಇರಬಹುದು. ಕಡಿಮೆ ಬೆಲೆಯನ್ನು ಹೇಳಿದರೆ ನನಗೇ ನಷ್ಟವಾಗುತ್ತದೆ. ಆದ್ದರಿಂದ ಈ ಸಾರಿ ಯಾವ ಬೆಲೆಯನ್ನು ತಿಳಿಸಬಾರದೆಂದು ತೀರ್ಮಾನಿಸಿದೆ. ಅವರು

ಬೆಲೆಯನ್ನು ತಿಳಿಸುವಂತೆ ಒತ್ತಾಯಿಸಿದರೆ 'ನಿಮಗೆ ಈ ಕಾರಿನ ಕಂಪನಿಯವರು ತಯಾರಿಸುವ ಕಾರಿನ ಬೆಲೆ ಚೆನ್ನಾಗಿ ಗೊತ್ತಿದೆ. ಇದು ಹತ್ತು ವರ್ಷಗಳಷ್ಟು ಹಳೆಯ ಕಾರು, ನೀವೇ ಒಂದು ಬೆಲೆಯನ್ನೂ ನಿಗದಿಪಡಿಸಿ ಎಂದು ಹೇಳಬೇಕೆಂದುಕೊಂಡೆ'. ನಾನು ಅವರಿಗೆ ಈ ರೀತಿ ಒತ್ತಾಯ ಮಾಡಿದರೆ ಅವರೇ ಒಂದು ಬೆಲೆಯನ್ನು ನಿಗದಿಪಡಿಸುತ್ತಾರೆ. ಅದು ನಾನು ನಿರೀಕ್ಷಿಸುವಷ್ಟು ಇದ್ದರೆ, ಕೆಲವು ಸಾವಿರ ರೂಪಾಯಿಗಳು ಕಡಿಮೆಯಿದ್ದರೂ ಪರವಾಗಿಲ್ಲ ನಾನು ಈ ಕಾರನ್ನು ಮಾರಿಬಿಡಬಹುದು.

ನಾನು ಪಲ್‌ಚೌಕದ ಕ್ರಾಸನ್ನು ತಲುಪಿದಾಗ, ಕಾರನ್ನು ನಿಲ್ಲಿಸಿ ದಾರಿಹೋಕರನ್ನು ಕೇಳಿದೆ. 'ಸಾರ್ ದೋರ್‌ಜಿ ಸದನ್‌ವಿಲ್ಲಾ ಎಲ್ಲಿದೆ'? ಎಂದು.

ಆತ ಸ್ವಲ್ಪ ನಿಂತು ಹಾಗೆಯೆ ಯೋಚಿಸಿ ಹೇಳಿದ 'ಪಲ್ ಚೌಕದಲ್ಲಿ ಇದೆಯೆಂದು ಹೇಳುತ್ತಾರೆ'.

'ಹೌದು! ಅವರು ನನಗೆ ಹಾಗೆಯೇ ಹೇಳಿದ್ದಾರೆ. ಇಲ್ಲೆ ಎಲ್ಲೋ ಪಲ್‌ಚೌಕದ ಕ್ರಾಸ್‌ನಲ್ಲಿ ಇರಬೇಕು'.

ಆತ ತಕ್ಷಣ ಹೇಳಿದ– 'ಓ ಆ ಕಳ್ಳ ವ್ಯಾಪಾರಿ ದೋರ್‌ಜಿ? ಹೌದು! ಇಲ್ಲೆ ಪಲ್‌ಚೌಕದಲ್ಲಿದೆ. ನೀವು ಹೀಗೆ ಬಲಗಡೆ ಹೋಗಿ, ಅಲ್ಲಿ ಒಂದು ವರ್ಣಮಯ ಬಂಗ್ಲೋವನ್ನು ಕಾಣುತ್ತೀರಿ. ಅದೇ ಮನೆ' ಎಂದು ಹೇಳಿದನು.

ಆತನಿಗೆ ಥ್ಯಾಂಕ್ಸ್ ಹೇಳಿ ನಾನು ನನ್ನ ಕಾರನ್ನು ಮುಂದೆ ಚಲಿಸಿದೆ. ನಾನು ಕೇಳಿದ್ದ ಹೆಸರು ಕೇವಲ 'ಚಿರಿಂಗ್ ದೋರ್‌ಜಿ'. ಆದರೆ ನಾನು ಈಗ ಕೇಳುತ್ತಿರುವುದು 'ಕಳ್ಳವ್ಯಾಪಾರಿ ದೋರ್‌ಜಿ'. ಆತ ಬರಿ 'ದೋರ್‌ಜಿ'ಯಾಗಿ ಮಾತ್ರ ಜನರಿಗೆ ಪರಿಚಯವಿಲ್ಲ. ನಾನು ಬೆಳಗ್ಗೆ ದೂರವಾಣಿಯಲ್ಲಿ ಮಾತನಾಡಿದ ವ್ಯಕ್ತಿಯ ಬಗೆಗೆ ನನ್ನ ಮನಸ್ಸಿನಲ್ಲಿ ಬಹಳಷ್ಟು ಬದಲಾವಣೆಗಳು ಕಾಣಿಸಿಕೊಂಡವು. ನಾನು ಆತನ ನೈಜ ಚಿತ್ರಣವನ್ನು ಊಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನನ್ನ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಆರಂಭವಾದವು. ದೋರ್‌ಜಿ ಎಂಥ ವ್ಯಕ್ತಿ ಇರಬಹುದು? ಎಂದು. ಆತ ದೈಹಿಕವಾಗಿ ಹೇಗೆ ಇರಬಹುದು? ಆತನ ಚಹರೆ ಯಾವ ರೀತಿ ಇರಬಹುದು? ನನ್ನನ್ನು ನೋಡಿದಾಗ ಆತ ನನ್ನನ್ನು ಯಾವ ರೀತಿ ನಡೆಸಿಕೊಳ್ಳಬಹುದು ಇತ್ಯಾದಿ ಇತ್ಯಾದಿ.

ಇಷ್ಟೆಲ್ಲ ಯೋಚಿಸುತ್ತಾ ನಾನು ತಲುಪಬೇಕಾದ ಜಾಗವನ್ನು ತಲುಪಿದೆ. ಗೇಟಿನಲ್ಲಿ 'ದೋರ್‌ಜಿ ಸದನ್' ಎನ್ನುವ ಮನೆಯ ಹೆಸರಿನ ನಾಮಫಲಕವನ್ನು ನೋಡಿದೆ. ಮತ್ತು ಲೆಟರ್ ಬಾಕ್ಸ್‌ನ ಸಮೀಪದಲ್ಲಿಯೆ 'ನಾಯಿಗಳಿವೆ ಎಚ್ಚರಿಕೆ' ಎನ್ನುವ ಸೂಚನೆಯು ಇತ್ತು. ನಾನು ಕಾರನ್ನು ನಿಲ್ಲಿಸಿ ಹಾರನ್ ಮಾಡಿದೆ. ಒಬ್ಬ ವ್ಯಕ್ತಿ ಬಾಗಿಲಿನಿಂದ ಹೊರಗೆ ಬಂದು ಕೇಳಿದ 'ನೀವು ಯಾರನ್ನು ಕಾಣಬೇಕು'?



ಎಂದು.

'ಮಿಸ್ಟರ್ ಚಿರಿಂಗ್ ದೋರ್‌ಜಿ ಅವರನ್ನು ನೋಡಬಹುದೆ?

'ಮಿಸ್ಟರ್ ಚಿರಿಂಗ್' ಅಥವಾ 'ಮಿಸ್ಟರ್ ದೋರ್‌ಜಿ?

ಆತನ ಮಾತು ನನಗೆ ಒಂದು ರೀತಿಯ ಗೊಂದಲವನ್ನುಂಟುಮಾಡಿತು. 'ಚಿರಿಂಗ್ ದೋರ್‌ಜಿ' ಒಬ್ಬನ ಹೆಸರಿರಬಹುದೆಂದು ನಾನು ಭಾವಿಸಿದ್ದೆ. ನನಗೆ ಬೆಳಗ್ಗೆ ದೂರವಾಣಿ ಮಾಡಿದಾತ 'ಚಿರಿಂಗ್'. ಆದ್ದರಿಂದ ನಾನು 'ಚಿರಿಂಗ್' ನೋಡಬೇಕು ಎಂದು ಹೇಳಿದೆ.

ಸರಿ! ನಾನು 'ಚಿರಿಂಗ್' ಅವರಿಗೆ ಹೇಳಿ ಬರುತ್ತೇನೆ. ಆತ ನಿಮ್ಮನ್ನು ನೋಡಲು ಬಯಸಿದರೆ, ಆತ ನಿಮ್ಮನ್ನು ನೋಡುತ್ತಾನೆ. ನೀವು ಎಲ್ಲಿಂದ ಬರುತ್ತೀದ್ದೀರಿ?

'ಅವರಿಗೆ ಹೇಳಿ ಇಂದು ಬೆಳಗ್ಗೆ ದೂರವಾಣಿಯಲ್ಲಿ ಮಾತನಾಡಿದ್ದ ವ್ಯಕ್ತಿ ನಿಮ್ಮನ್ನು ಕಾಣಲು ಬಂದಿದ್ದಾರೆ' ಎಂದು.

ಸರಿ! ಎಂದು ಆತ ಹೇಳಿ ಒಳಗೆ ನಡೆದ. ನಾನು ಚಿರಿಂಗ್‌ನನ್ನು ಮಾತ್ರ ನೋಡಬಹುದು. ದೋರ್‌ಜಿಯನ್ನು ನೋಡಲು ಸಾಧ್ಯವಿಲ್ಲ. ಪಲ್‌ಚೌಕದ ಕ್ರಾಸಿನಲ್ಲಿ ಸಿಕ್ಕ ವ್ಯಕ್ತಿ ನೀಡಿದ ಮಾಹಿತಿಯ ಪ್ರಕಾರ ನಾನು ದೋರ್‌ಜಿಯನ್ನು ನೋಡಲೇಬೇಕೆಂಬ ಕುತೂಹಲ ಬೆಳೆಸಿಕೊಂಡಿದ್ದೆ.

ನಾನು ಮೊದಲು ಭೇಟಿಯಾಗಿದ್ದ ಮನುಷ್ಯ ಬಾಗಿಲನ್ನು ತೆಗೆದು ಕಾಂಪೌಂಡಿನ ಒಳಗೆ ಬರುವಂತೆ ಆಹ್ವಾನಿಸಿದ. ನಾನು ಕಾರನ್ನು ಒಳಗೆ ತೆಗೆದುಕೊಂಡು ಹೋದೆ. ಆತ ನನ್ನನ್ನು ಹೊರಗಡೆಯ ರೂಮಿನಲ್ಲಿ ಕುಳಿತುಕೊಳ್ಳುವಂತೆ ತಿಳಿಸಿದನು. ಅಲ್ಲಿಯೆ ಸಾಲಾಗಿ ಇದ್ದ ಚರ್ಮದ ಸೋಫಾದಂತ ಒಂದು ಕುರ್ಚಿಯಲ್ಲಿ ನಾನು ಕುಳಿತೆನು. ಈ ರೂಮು ತುಂಬಾ ಸುಂದರವಾಗಿ ಅಲಂಕರಿಸಲ್ಪಟ್ಟಿತ್ತು. ಅಲ್ಲಿಯ ಹೂದಾನಿಗಳು ರೆಕ್ಕೆಯಂತೆ ತೆಳುವಾದ ಅಲುಗಾಡುತ್ತಿದ್ದ ಅಲಂಕಾರಿಕ ಸಸ್ಯಗಳಿಂದ ಅಲಂಕರಿಸಿದ್ದು ಮೂರು ಕಡೆಗಳಲ್ಲಿಯೂ ಒಳ್ಳೆಯ ತೋಟದಂತೆ ಕಾಣುತ್ತಿದ್ದವು.

ಒಬ್ಬ ಯುವಕ ಬಂದು 'ಗುಡ್‌ಮಾರ್ನಿಂಗ್, ನೀವೇನಾ ಬೆಳಗ್ಗೆ ದೂರವಾಣಿಯಲ್ಲಿ ಮಾತನಾಡಿದ್ದು' ಎಂದು ವಿಚಾರಿಸಿಕೊಂಡರು.

'ಗುಡ್‌ಮಾರ್ನಿಂಗ್, ಹೌದು. ನೀವೇನಾ ಮಿಸ್ಟರ್ ಚಿರಿಂಗ್? ಎಂದೆ.

'ಹೌದು! ನಾನೇ ಎಂದು ಹೇಳಿ ಹತ್ತಿರ ಬಂದು ನನ್ನ ಕೈ ಕುಲುಕಿದರು. ನನ್ನ ಪಕ್ಕದಲ್ಲಿಯೆ ಕುಳಿತು ಮಾತಿಗಾರಂಭಿಸಿ, ಇದೇನಾ ಕಾರು!' ಎಂದು ಕೇಳಿದರು.

'ಹೌದು! ಇದೆ ಆ ಕಾರು ಎಂದೆ'.

'ಇದು ತುಂಬ ಹಳೆಯ ಕಾರು'?

'ಹಳೆಯ ಕಾರು ನಿಜ. ಆದರೆ ತುಂಬ ಹಳೆಯದಲ್ಲ'.

'ಇದಕ್ಕೆ ನೀವು ಎಷ್ಟು ಬೆಲೆಯನ್ನು ನಿರೀಕ್ಷಿಸುತ್ತೀರಿ'?

'ಇದು ಒಂದು ಹಳೆಯ ಕಾರು. ನಾನು ಎಷ್ಟು ಬೆಲೆಯನ್ನು ನಿರೀಕ್ಷಿಸಲಿ'? ನೀವೇ ನೋಡಿ ಒಂದು ಬೆಲೆಯನ್ನು ತಿಳಿಸಿ, ನಾನು ಇದನ್ನು ರಿಪೇರಿ ಮಾಡಿಸಿ ಟೈರುಗಳನ್ನು ಬದಲಾಯಿಸಿದ್ದೇನೆ' ಎಂದು ಹೇಳಿದೆ.

'ಸ್ವಲ್ಪ ದೂರ ಓಡಿಸಿ ನೋಡುವ' ಎಂದು ಕಾರಿನ ಕೀಯನ್ನು ಕೇಳಿದನು.

ಇಬ್ಬರು ಕಾರಿನ ಕಡೆ ನಡೆದವು. ಆತ ಡ್ರೈವರ್‌ನ ಸೀಟಿನಲ್ಲಿ ಕುಳಿತು ಕಾರನ್ನು ಸ್ಟಾರ್ಟ್ ಮಾಡಿದನು. ನಾನು ಕಾಂಪೌಂಡ್‌ನ ಕಡೆ ದೃಷ್ಟಿ ಹಾಯಿಸಿದೆ. ಅಲ್ಲಿ ನಾಲ್ಕು ಹೊಸ ಕಾರುಗಳು ಗ್ಯಾರೇಜಿನಲ್ಲಿ ಮುದುರಿಕೊಂಡು ಬಿದ್ದಿದ್ದವು. ಈ ಕಾರುಗಳಿಗೆ ಹೋಲಿಸಿದರೆ ನನ್ನ ಕಾರು ಒಂದು ಪ್ರಯೋಜನವಿಲ್ಲದ ಡಬ್ಬವೆನಿಸಿತು..... ನನಗೆ ನಾಚಿಕೆಯಾಯಿತು. ಈಗಾಗಲೇ ನಾಲ್ಕು ಕಾರುಗಳನ್ನು ಇರುವಾಗ ಮತ್ತೆ ಕಾರುಗಳನ್ನು ಯಾತಕ್ಕೆ ಕೊಳ್ಳುತ್ತಿದ್ದಾರೆ ಎಂದು ನನ್ನನ್ನು ನಾನೆ ಪ್ರಶ್ನಿಸಿಕೊಂಡೆ? ನನಗೆ ಉತ್ತರ ಹೊಳೆಯಲಿಲ್ಲ.

ಕಾರನ್ನು ಓಡಿಸಿ ನೋಡಿದ ಮೇಲೆ ನಾನು ಮತ್ತು ಚಿರಿಂಗ್ ಹಿಂತಿರುಗಿ ರೂಮಿನಲ್ಲಿ ಬಂದು ಕುಳಿತೆವು. ನಾನು ಒಂದು ರೀತಿಯ ಅವಮಾನಗೊಂಡು ಕುಂದಿಹೋಗಿದ್ದೆ. ನಾನು ಏನೂ ಹೇಳುವ ಪರಿಸ್ಥಿತಿಯಲ್ಲಿರಲಿಲ್ಲ, ನಿಮಗೆ ಕಾರುಬೇಕೆ? ಎಂದು ಕೇಳುವ ಸ್ಥಿತಿಯಲ್ಲೂ ಇರಲಿಲ್ಲ.

'ಬೆಲೆ ಎಷ್ಟು?' ಆತನು ತನ್ನ ಪಾಡಿಗೆ ತಾನೇ ಪ್ರಶ್ನಿಸಿಕೊಂಡ.

ಆತನ ಮಾತಿನಮಧ್ಯೆ ಬಾಯಾಕಿ 'ಗ್ಯಾರೇಜಿನಲ್ಲಿರುವ ಕಾರುಗಳು ನಿಮ್ಮ ಕಾರುಗಳೆ' ನಾನು ಕೇಳಿದೆ.

'ಹೌದು. ಅವು ನಮ್ಮ ಕಾರುಗಳೇ, ಅವು ನಮ್ಮ ದೋರ್‌ಜಿ ಅವರ ಪ್ರೀತಿಯ ಕಾರುಗಳು' ಎಂದು ಹೇಳಿದರು. ಅವು ದೋರ್‌ಜಿ ಮಾತ್ರ ಉಪಯೋಗಿಸಿದ ಕಾರುಗಳು. ಆತ ತನ್ನ ಮ್ಯಾನೇಜರಿಗಾಗಿ ಬೇರೊಂದು ಹೊಸಕಾರನ್ನು ಖರೀದಿಸಬೇಕೆಂದಿದ್ದಾನೆ.

'ದೋರ್‌ಜಿ ಯಾರು'? ನಾನು ಕುತೂಹಲದಿಂದ ಕೇಳಿದೆ. ನೀವು 'ಚಿರಿಂಗ್ ದೋರ್‌ಜಿ ಇರಬಹುದೆಂದು ಭಾವಿಸಿದ್ದೆ, ನಿಮ್ಮ ಹೆಸರು 'ಚಿರಿಂಗ್ ದೋರ್‌ಜಿ' ಮತ್ತು ಮನೆಯ ಹೆಸರು 'ದೋರ್‌ಜಿ ಸದನ್' ಎಂದಿದೆ, ಎಂದು ಹೇಳಿದೆ.

'ಮಿ. ದೋರ್‌ಜಿ ಅವರು ನಮ್ಮ ಯಜಮಾನರು. ನಾನು ಅವರ ಕಾರ್ಯದರ್ಶಿ.

'ಓ ಹಾಗಾದರೆ ದೋರ್‌ಜಿ ಅವರು ಈ ಮನೆಯಲ್ಲಿ ವಾಸಿಸುತ್ತಿದ್ದಾರೆ'?

'ಹೌದು. ಅವರು ಇದೆ ಮನೆಯಲ್ಲಿ, ಕಟ್ಮಂಡುವಿನಲ್ಲಿ ಇದ್ದಾಗ ವಾಸಿಸುತ್ತಾರೆ'.

'ಅಂದರೆ ಅವರು ಬೇರೆ ಕಡೆಯೂ ವಾಸಿಸುತ್ತಿದ್ದಾರೆ ಎಂದು ನಿಮ್ಮ ಅರ್ಥ'

'ಹೌದು. ಅವರು ನ್ಯೂಯಾರ್ಕ್ ಮತ್ತು ಹ್ಯಾಮ್‌ಬರ್ಗ್‌ನಲ್ಲಿಯೂ



ಮನೆಗಳನ್ನು ಹೊಂದಿದ್ದಾರೆ'.

'ಅಂದರೆ ಅವರು ಬಹಳ ಹೆಚ್ಚಿನ ದಿನಗಳು ವಿದೇಶದಲ್ಲಿಯೇ ವಾಸಿಸುತ್ತಾರೆ'?

'ಬಹಳ ದಿವಸಗಳು ವಿದೇಶದಲ್ಲಿಯೇ ಇರುತ್ತಾರೆ ಎಂದು ಹೇಳಬಹುದು. ನೇಪಾಳಕ್ಕೆ ಎಂಟು ಅಥವಾ ಒಂಬತ್ತು ಬಾರಿ ಬರುತ್ತಾರೆ. ಬಂದಾಗಲೆಲ್ಲ ವಾರಗಟ್ಟಲೆ ಇಲ್ಲಿಯೆ ವಾಸಮಾಡುತ್ತಾರೆ' ಎಂದರು.

'ಈಗ ಅವರು ಎಲ್ಲಿದ್ದಾರೆ'?

'ಇಲ್ಲಿಯೇ ಇದ್ದಾರೆ'.

ನಾನು ದೋರ್‌ಜಿಯವರ ಬಗ್ಗೆ ತಿಳಿದಂತೆಲ್ಲ ಅವರನ್ನು ನೋಡಬೇಕೆಂಬ ಕುತೂಹಲ ಹೆಚ್ಚಾಗತೊಡಗಿತು. ನಾನು ಅವರನ್ನು ನೋಡಬೇಕೆಂಬ ಬಯಕೆಯನ್ನು ಚಿರಿಂಗ್ ಅವರಿಗೆ ವ್ಯಕ್ತಪಡಿಸಿದೆ. ಅವರನ್ನು ನೋಡಲು ಸಾಧ್ಯವೆ ಎನ್ನುವ ಅನುಮಾನ ಮೂಡಿತು. ಆದರೂ ಚಿರಿಂಗ್ ಅವರಿಗೆ ವಿನಯದಿಂದ ಹೇಳಿದೆ – ನಾನು ದೋರ್‌ಜಿ ಅವರನ್ನು ನೋಡಬೇಕಲ್ಲ, ನೋಡಲು ಸಾಧ್ಯವೆ?

ಆತನಿಗೆ ನನ್ನ ಮಾತಿನ ಅರ್ಥ ಸರಿಯಾಗಿ ಆಗಲಿಲ್ಲ ಎನ್ನಿಸಿತು. ಇಂಥ ವಿಷಯಗಳನ್ನು ನಾನೇ ನಿಭಾಯಿಸುತ್ತೇನೆ. ಇಂಥ ಸಣ್ಣ ವಿಚಾರಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಪೂರ್ಣ ಅಧಿಕಾರವನ್ನು ಅವರು ನನಗೆ ನೀಡಿದ್ದಾರೆ. ನೀವು ದೋರ್‌ಜಿಯವರೊಂದಿಗೆ ಮಾತಾನಾಡುವ ಅವಶ್ಯಕತೆ ಇರುವುದಿಲ್ಲ ಎಂದರು.

ನಾನು ಆತನನ್ನು ಸರಿಯಾಗಿ ಅರ್ಥಮಾಡಿಕೊಂಡೆ. ಆದರೆ ಆತ ತನ್ನ ಉದ್ದೇಶ ಏನೆಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ನನ್ನ ಮಾತಿನ ಧಾಟಿಯನ್ನು ಬದಲಾಯಿಸಿದೆ. ಇದು ತುಂಬಾ ಹಳೆಯ ಕಾರು. ದೋರ್‌ಜಿಯವರು ಅವರ ಮ್ಯಾನೇಜರ್‌ಗೆ ಇದಕ್ಕಿಂತ ಉತ್ತಮ ಕಾರನ್ನು ಖರೀದಿಸಬಹುದು. ಅವರು ಎಷ್ಟು ಬೆಲೆಯನ್ನು ನೀಡಲು ಸಿದ್ಧರಿದ್ದಾರೆ ಎಂದು ತಿಳಿಸಿದರೆ ನಾನು ನನ್ನ ಸ್ನೇಹಿತರಿಗೆ ಹೇಳುತ್ತೇನೆ. ಅವರ ಬಳಿ ಇನ್ನು ಉತ್ತಮವಾದ ಕಾರುಗಳಿವೆ ಎಂದು ಹೇಳಿದೆ.

'ಅದು ಕಾರಿನ ಸ್ಥಿತಿಯನ್ನು ಮತ್ತು ಯಾವ ಟೈಪ್‌ನ ಕಾರು ಎನ್ನುವುದರ ಮೇಲೆ ಅವಲಂಬಿಸಿದೆ. ಕಾರು ಚೆನ್ನಾಗಿದ್ದರೆ, ನಾವು ಒಂದು ಲಕ್ಷದವರೆಗೆ ಪಾವತಿಸಬಹುದು' ಎಂದರು.

ಅಷ್ಟೊಂದು ಹಣದಲ್ಲಿ ನನ್ನ ಬಳಿಯಿರುವ ಐದು ಅಥವಾ ಆರು ಕಾರುಗಳನ್ನು ಖರೀದಿಸಬಹುದೆಂದು ಮನಸ್ಸಿನಲ್ಲಿ ಅಂದುಕೊಂಡೆ. ನಾನು ಬಂದ ಉದ್ದೇಶ ಈಡೇರಲಿಲ್ಲ.

ದೋರ್‌ಜಿ ಸಾಮಾನ್ಯ ಮನುಷ್ಯನಲ್ಲ ಎನ್ನುವುದು ನನಗೆ ಅರ್ಥವಾಯಿತು. ಯೂರೋಪ್ ಮತ್ತು ಅಮೇರಿಕಾ ದೇಶದಲ್ಲಿಯೂ ಆತನ ವ್ಯಾಪಾರ ವಹಿವಾಟಿದೆ

ಎಂದು ತಿಳಿಯಿತು. ಆತನನ್ನು ನೋಡಬೇಕೆಂಬ ಕುತೂಹಲ ಹೆಚ್ಚಾಗತೊಡಗಿತು. ನಾನು ಮನಸ್ಸಿನಲ್ಲಿಯೆ ಯೋಚಿಸತೊಡಗಿದೆ. 'ನಾನು ದೋರ್‌ಜಿಯವರನ್ನು' ಹೇಗೆ ನೋಡುವುದು? ವರ್ಷದ ಬಹಳಷ್ಟು ದಿನ ಅಮೆರಿಕ ಹಾಗೂ ಯೂರೋಪಿನಲ್ಲಿ ವಾಸ ಮಾಡುವ ದೋರ್‌ಜಿಯವರು ಅವರ ಮನೆ ಮತ್ತು ತೋಟವನ್ನು ಯೂರೋಪ್ ಮಾದರಿಯಲ್ಲಿ ಅಲಂಕಾರ ಮಾಡಿದ್ದರು. ನನಗೆ ಆಗ ಕಂಡಿದ್ದು ಹೊರಗಿನ ಅಲಂಕಾರ ಮಾತ್ರ. ಇನ್ನೂ ಮನೆಯ ಒಳಗೆ ಯಾವ ರೀತಿ ಅಲಂಕಾರ ಮಾಡಿರಬಹುದೆನ್ನುವುದನ್ನು ನಾನು ಊಹಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ನನ್ನ ಮತ್ತು ಚಿರಿಂಗ್‌ನ ಜೊತೆಯ ಸಂವಾದದಿಂದ ನನ್ನ ಕಾರು ಅವರಿಗೆ ಸೂಕ್ತವಾದುದಲ್ಲ ಎನ್ನುವುದು ಅರ್ಥವಾಗಿತ್ತು. ಆದ್ದರಿಂದ ನನ್ನ ಕಾರನ್ನು ಮಾರಲು ಪ್ರಯತ್ನಿಸಬಾರದೆಂದು ತೀರ್ಮಾನಿಸಿದೆ. ನಾನು ಇಲ್ಲಿಗೆ ಬಂದ ಮೂಲ ಉದ್ದೇಶವನ್ನು ಮರೆತುಬಿಟ್ಟೆ. 'ನಾನು ಈಗ ಈ ಮನೆಯ ಬಗ್ಗೆ ಮಾಹಿತಿ ಸಂಗ್ರಹಿಸುವ ಮತ್ತು ಅಲ್ಲಿಯ ವಾತಾವರಣದ ಬಗ್ಗೆ ತಿಳಿಯಬೇಕೆನ್ನುವ ಉದ್ದೇಶವನ್ನು ಹೊಂದಿದ್ದೇನೆ.'

'ನೀವು ಮಾತಾಡುವ ದಾಟಿಯನ್ನು ನೋಡಿದರೆ ನೀವು ಭಾರತದ ಡಾರ್ಜಿಲಿಂಗ್ ನವರು ಇರಬೇಕು ಅನ್ನಿಸುತ್ತದೆ. ಹೌದಾ'? ಎಂದು ಕೇಳಿದೆ.

'ಹೌದು, ನಾನು ಆ ಭಾಗದವನೆ. ನಾನು ಕಾಲಿಪೊಂಗ್‌ನಿಂದ ಬಂದಿದ್ದೇನೆ'.

'ನೀವು ಕಠ್ಮಂಡುವಿನಲ್ಲಿ ಎಷ್ಟು ವರ್ಷಗಳಿಂದ ಇದ್ದೀರಿ?'

'ಸುಮಾರು ಎರಡು ವರ್ಷಗಳಿಂದ'.

'ಅಂದರೆ ದೋರ್‌ಜಿಯವರ ಜೊತೆಯಲ್ಲಿ ಕಳೆದ ಎರಡು ವರ್ಷಗಳಿಂದ ವಾಸವಾಗಿದ್ದೀರಿ'.

'ಇಲ್ಲ, ಒಂದುವರೆ ವರ್ಷದಿಂದ ಇದ್ದೇನೆ. ಅದಕ್ಕೆ ಮೊದಲು ಒಂದು ಬೋರ್ಡಿಂಗ್ ಸ್ಕೂಲ್‌ನಲ್ಲಿ ಪಾಠ ಮಾಡುತ್ತಿದ್ದೆ. ಆ ಶಾಲೆಯಲ್ಲಿ ಆರುತಿಂಗಳು ಕಾಲ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ'.

ನಾನು ಆಗ ಕಠ್ಮಂಡುವಿನ ಪರಿಸ್ಥಿತಿಯನ್ನು ಚರ್ಚೆಯ ಕೇಂದ್ರವನ್ನಾಗಿ ಮಾಡಿಕೊಂಡು ಆತನಿಗೆ ಹೇಳಿದೆ – 'ಹೌದು! ಕಠ್ಮಂಡುವಿನಲ್ಲಿ ಶಿಕ್ಷಕನಾಗಿ ಜೀವನ ಸಾಗಿಸುವುದು ಕಷ್ಟ ಎಂದು. ಅದು ನಿಮ್ಮ ಸ್ವಂತ ಅನುಭವವಿರಬಹುದು. ನೀವು ಈ ಬಗ್ಗೆ ಏನು ಹೇಳುತ್ತೀರಿ?' ಎಂದೆ.

'ನಾನು ಶಿಕ್ಷಕನ ಕೆಲಸವನ್ನು ಬಿಟ್ಟದ್ದು ಅದೇ ಕಾರಣಕ್ಕಾಗಿ. ನಾನು ಪಾಠ ಮಾಡುತ್ತಿದ್ದ ವಸತಿಶಾಲೆ ಚೆನ್ನಾಗಿತ್ತು ಮತ್ತು ಒಳ್ಳೆಯ ಸಂಬಳವನ್ನು ನೀಡುತ್ತಿತ್ತು. ಆದರೆ ಆರುನೂರು ಐವತ್ತು ರೂಪಾಯಿಗಳು ನನಗೆ ಸಾಕಾಗುತ್ತಿರಲಿಲ್ಲ. ಅಷ್ಟು ಹಣದಲ್ಲಿ ಇವತ್ತಿನ ಕಠ್ಮಂಡುವಿನ ಜೀವನ ಮಟ್ಟದಲ್ಲಿ ಜೀವನ ಸಾಗಿಸುವುದು ಕಷ್ಟ. ಆದರೂ ಹೇಗಾದರೂ ಜೀವಿಸಲೇಬೇಕಲ್ಲ'.



'ಇಲ್ಲಿ ದೋರ್‌ಜಿ ಅವರ ಬಳಿ ನೀವು ಚೆನ್ನಾಗಿಯೇ ಇರಬಹುದು, ಒಳ್ಳೆಯ ಸಂಬಳ ಬರುತ್ತಿರಬಹುದು? ಅಲ್ಲವೆ?'

'ಹೌದು ನಿಮಗೆ ಹೇಳಬೇಕೆಂದರೆ ನನಗೆ ಉಚಿತ ಊಟ, ವಸತಿಯ ವ್ಯವಸ್ಥೆಯನ್ನು ನೀಡಲಾಗಿದೆ, ಜೊತೆಗೆ ಒಳ್ಳೆಯ ಸಂಬಳ ಮತ್ತು ಅಂತಹ ಹೇಳಿಕೊಳ್ಳುವಂಥ ಕೆಲಸವೇನು ಇಲ್ಲ'.

ಆತ ತನ್ನ ವಿಷಯವನ್ನು ಎಷ್ಟೇ ಸರಳವಾಗಿ ಹೇಳಿದರೂ, ದೋರ್‌ಜಿಯವರ ಬಗೆಗಿನ ಕುತೂಹಲ ಮಾತ್ರ ಹೆಚ್ಚುತ್ತಲೇ ಹೋಯಿತು.

ಮಿಸ್ಟರ್ ದೋರ್‌ಜಿಯವರನ್ನು ಭೇಟಿ ಮಾಡುವ ವಿಷಯವನ್ನು ಊಹಿಸಿಕೊಂಡು ನಾನು 'ದೋರ್‌ಜಿಯನ್ನು ಹೇಗಾದರು ಮಾಡಿ ಭೇಟಿ ಮಾಡಲೇಬೇಕು' ಅದು ಸಾಧ್ಯವಾದರೆ ಎಂದು ಚಿರಿಂಗ್ ಅವರನ್ನು ಕೇಳಿದೆ. 'ನಾನು ಅವರ ಹೆಸರನ್ನು ಮಾತ್ರ ಕೇಳಿದ್ದೆ. ಇವತ್ತು ಅವರ ಮನೆಗೆ ಬರುವ ಅವಕಾಶ ದೊರೆಯಿತು. ಇಬ್ಬರು ಪರಸ್ಪರ ಪರಿಚಯವಿದ್ದರೆ, ಮುಂದೆ ಯಾವತ್ತಾದರೊಂದು ದಿನ ನಾನು ಅವರಿಗೆ ಉಪಯೋಗವಾಗಬಹುದು'.

ಆತ ಒಂದು ಕ್ಷಣ ಏನನ್ನು ಹೇಳಲಿಲ್ಲ. ದೋರ್‌ಜಿರವರನ್ನು ಭೇಟಿ ಮಾಡಿಸುವ ಬಗ್ಗೆ ಯಾವುದೇ ಆಶ್ವಾಸನೆಯನ್ನು ನೀಡಲಿಲ್ಲ ಮತ್ತು ಭೇಟಿ ಮಾಡಿಸಲು ಆಗುವುದಿಲ್ಲಾ ಎಂದು ಕೂಡ ಹೇಳಲಿಲ್ಲ.

ಕೆಲವು ಕ್ಷಣಗಳ ನಂತರ – 'ಸರಿ! ಪರಸ್ಪರ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳುವುದು ಒಳ್ಳೆಯದು ಎಂದು ಹೇಳಿದರು. ಆದರೆ ಕಾರಿನ ವ್ಯಾಪಾರದಲ್ಲಿ ಆದ ನಮ್ಮಿಬ್ಬರ ಪರಿಚಯ ಫಲಪ್ರದವಾಗಲಿಲ್ಲ. ಹಾಗೂ ದೋರ್‌ಜಿಯವರನ್ನು ನೋಡಬೇಕೆಂಬ ನಿಮ್ಮ ಬಯಕೆಯೂ ಕೂಡ ಯಶಸ್ವಿಯಾಗಲಾರದು. ಆದ್ದರಿಂದ ನಾನು ಈಗ ಯಾವುದನ್ನೂ ನಿಖರವಾಗಿ ಹೇಳಲಾರೆ' ಎಂದರು.

ಮಿಸ್ಟರ್ ಚಿರಿಂಗ್ ಅವರನ್ನು ವಿನಮ್ರವಾಗಿ ಪ್ರಾರ್ಥಿಸಿಕೊಳ್ಳುತ್ತಾ 'ನಾವು ಇಬ್ಬರೂ ಒಬ್ಬರನ್ನೊಬ್ಬರು ಅರಿತಿದ್ದೇವೆ. ಒಬ್ಬರು ಮತ್ತೊಬ್ಬರಿಗೆ ಸಹಾಯ ಮಾಡುವುದು, ನೆರವಾಗುವುದು ಖಂಡಿತಾ ಒಳ್ಳೆಯ ಕೆಲಸ. ನಾವು ಈಗಾಗಲೆ ಸ್ನೇಹಿತರಾಗಿದ್ದೇವೆ' ಎಂದು ಹೇಳಿದೆ. ಹಾಗೂ ಸ್ನೇಹ ಎನ್ನುವುದು ತುಂಬಾ ಒಳ್ಳೆಯದು. ನಾನು ನನ್ನ ಮಾತುಗಳನ್ನು ಮುಂದುವರೆಸಿ ಹೇಳಿದೆ– 'ನಾನು ಅವರ ಹೆಸರನ್ನು ಬಹಳ ಹಿಂದೆಯೇ ಕೇಳಿದ್ದೆ. ಬಹಳ ದಿನಗಳ ಹಿಂದಿನಿಂದಲೂ ಅವರನ್ನು ನೋಡುವ ಅವಕಾಶಕ್ಕಾಗಿ ಕಾಯುತ್ತಿದ್ದೇನೆ. ನಿಜ ಹೇಳಬೇಕೆಂದರೆ, ಇಲ್ಲಿ ನಾನು ಬಂದಿರುವುದು ಕೇವಲ ಕಾರನ್ನ ಮಾರುವ ಒಂದೇ ಉದ್ದೇಶದಿಂದಲ್ಲ, ದೋರ್‌ಜಿಯವರನ್ನು ನೋಡುವ ಉದ್ದೇಶದಿಂದ ಕೂಡ. ಆದ್ದರಿಂದ ಚಿರಿಂಗ್ ದಯಮಾಡಿ ಸಹಾಯಮಾಡಿ! ನೀವು ಸಹಾಯ ಮಾಡಿದರೆ ನಾನು

ದೋರ್‌ಜಿಯವರನ್ನು ನೋಡಬೇಕೆಂದಿದ್ದ ಬಹಳ ದಿನಗಳ ಬಯಕೆ ಖಂಡಿತಾ ಈಡೇರಿದಂತಾಗುತ್ತದೆ'.

ನನ್ನ ಮಾತುಗಳನ್ನು ಕೇಳಿದ ಆತ ಕೆಲಕಾಲ ಮೂಕನಂತಾದ ಮತ್ತು ಏನನ್ನು ಹೇಳಲಿಲ್ಲಾ ಕೂಡ. ಬಹುಶಃ ಈತ ಯಾರು? ದೋರ್‌ಜಿಯವರನ್ನು ಯಾಕೆ ನೋಡ ಬಯಸುತ್ತಾನೆ? ಇತ್ಯಾದಿ ಇತ್ಯಾದಿ ಎಂದು ಅವನಿಗೆ ಅನ್ನಿಸಿರಬೇಕು.

ಆತನ ಅನುಮಾನಗಳನ್ನು ಪರಿಹರಿಸುತ್ತಾ ನಾನು ಹೇಳಿದೆ– 'ಮಿಸ್ಟರ್ ಚಿರಿಂಗ್ ದಯಮಾಡಿ ದೋರ್‌ಜಿ ಅವರಿಗೆ ಇಷ್ಟು ಹೇಳಿ 'ಯಾರೊ ಒಬ್ಬ ಸ್ಥಳೀಯ ನಾಗರಿಕ ನಿಮ್ಮನ್ನು ನೋಡಲು ಬಂದಿದ್ದಾರೆ. ಆತ ನಿಮಗೆ ಸಹಾಯ ಮಾಡುವುದಾಗಿ ಹೇಳುತ್ತಿದ್ದಾನೆ. ಆತನನ್ನು ಕರೆತರಲೆ ಅಥವಾ ಬೇಡವೆ? ಆತ ಕರೆತನ್ನಿ ಎಂದು ಹೇಳಿದರೆ ಅವರಲ್ಲಿಗೆ ಕರೆದುಕೊಂಡು ಹೋಗಿ, ಆತ ಬೇಡವೆಂದು ಹೇಳಿದರೆ ಪರವಾಗಿಲ್ಲ. ನಾನು ಆತನನ್ನು ನೋಡುವುದಿಲ್ಲ. ದಯಮಾಡಿ ನನಗಾಗಿ ಇಷ್ಟು ತೊಂದರೆಯನ್ನು ತೆಗೆದುಕೊಳ್ಳಿ. ಆಗುವುದಿಲ್ಲವೆ'? ಎಂದು ಹೇಳಿದೆ.

'ಸರಿ. ನೀವು ಆತನನ್ನು ನೋಡಲೇಬೇಕೆಂಬ ತೀವ್ರವಾದ ಆಸಕ್ತಿಯಿದ್ದರೆ, ಅವರಿಗೆ ಹೇಳುತ್ತೇನೆ ಸ್ವಲ್ಪ ಕುಳಿತಿರಿ ಎಂದು ಹೇಳಿ ಅಲ್ಲಿಂದ ಹೊರಗೆ ನಡೆದು ತೋಟದ ಕಡೆಗೆ ಹೋದರು'.

ಆತ ಹತ್ತು ನಿಮಿಷಗಳ ನಂತರ ವಾಪಸ್ ಬಂದರು, ನನ್ನನ್ನು ಅನೇಕ ಪ್ರಶ್ನೆಗಳನ್ನು ಕೇಳಿದರು. 'ನಿಮ್ಮ ಹೆಸರೇನು? ಎಲ್ಲಿ ವಾಸವಾಗಿದ್ದೀರಿ? ಮತ್ತು ಏನು ಕೆಲಸಮಾಡುತ್ತಿದ್ದೀರಿ? ಚಿರಿಂಗ್ ಅವರ ಎಲ್ಲಾ ಪ್ರಶ್ನೆಗಳಿಗೆ ಒಂದಾದ ಮೇಲೊಂದರಂತೆ ಉತ್ತರಿಸಿದೆ. ನಾನು ಆ ಸಮಯದಲ್ಲಿ ಯಾವುದೇ ಕೆಲಸದಲ್ಲಿ ಇಲ್ಲದಿದ್ದುದರಿಂದ 'ನಾನು ಏನು ಕೆಲಸ ಮಾಡುತ್ತಿಲ್ಲ' ಎಂದು ಹೇಳಿದೆ ಮತ್ತು 'ನಾನು ಒಂದು ಒಳ್ಳೆಯ ಕೆಲಸಕ್ಕಾಗಿ ಹುಡುಕುತ್ತಿದ್ದೇನೆ' ಎಂದು ಕೂಡ ಹೇಳಿದೆ. ನನ್ನೊಬ್ಬನನ್ನು ಅಲ್ಲಿಯೆ ಬಿಟ್ಟು ಮತ್ತೆ ಅವರು ವಾಪಸ್ ಹೋದರು.

ಐದು ನಿಮಿಷಗಳ ನಂತರ ಚಿರಿಂಗ್ ಉಲ್ಲಾಸದಿಂದ 'ಅವರನ್ನು ಭೇಟಿ ಮಾಡಲು ಹೋಗೋಣ. ಆದರೆ ದೋರ್‌ಜಿ ಅವರಿಗೆ ಸಮಯವಿಲ್ಲ ನಿಮಗೆ ಹೆಚ್ಚು ಸಮಯವನ್ನು ನೀಡಲು ಸಾಧ್ಯವಿಲ್ಲ' ಎಂದು ಹೇಳಿದರು.

ಇಬ್ಬರೂ ರೂಮಿನಿಂದ ತೋಟದ ಕಡೆ ನಡೆದೆವು. ನಾನು ಚಿರಿಂಗ್ ಅವರಿಗೆ ತುಂಬಾ ಉಪಕೃತನಾಗಿದ್ದೆ. ದೋರ್‌ಜಿಯವರ ಮನ ಒಲಿಸುವಲ್ಲಿ, ಅನುಮಾನ ಪರಿಹರಿಸುವಲ್ಲಿ ಚಿರಿಂಗ್ ಸ್ವಲ್ಪ ಶ್ರಮಪಟ್ಟಿರಬಹುದು. ಅಲ್ಲದಿದ್ದರೆ ಭೇಟಿ ಮಾಡಲು ಬಂದ ಎಲ್ಲರನ್ನು ನಂಬುವುದು ಹೇಗೆ? ಚಿರಿಂಗ್ ಪ್ರಯತ್ನವಿಲ್ಲದಿದ್ದರೆ ನಾನು ದೋರ್‌ಜಿಯವರನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ.

ನಾನು ದೋರ್‌ಜಿಯವರನ್ನು ನೋಡಲು ಯಾವ ವಿಶೇಷ ಕೆಲಸವಿರಲಿಲ್ಲ,



ನನ್ನ ಒಂದೇ ಒಂದು ಕುತೂಹಲವೆಂದರೆ ದೋರ್‌ಜಿಯು ಎಂಥ ಮನುಷ್ಯ ಎಂದು ತಿಳಿಯುವುದು ಅಷ್ಟೆ. ಆತ ಯಾವ ಶೈಲಿಯಲ್ಲಿ ಮತ್ತು ಯಾವ ರೀತಿಯಲ್ಲಿ ಬದುಕುತ್ತಿದ್ದಾನೆ ಎಂದು ತಿಳಿಯುವುದು? ಮತ್ತು ದಾರಿಹೋಕ ಅತಿ ಸಂತೋಷದಿಂದ ಹೇಳಿದ 'ಕಳ್ಳ ವ್ಯಾಪಾರಿ' ಎನ್ನುವ ಬಿರುದು ಆತನಿಗೆ ಒಪ್ಪುತ್ತಿದೆಯೆ ಇಲ್ಲವೆ ಎನ್ನುವುದು?

ನಾವು ಒಂದು ದೊಡ್ಡ ಹಾಲನ್ನು ಪ್ರವೇಶಿಸಿದೆವು. ಅದು ದೊಡ್ಡ ಮೀಟಿಂಗ್ ಹಾಲ್ ಎಂದು ತಿಳಿಯಿತು. ಚಿರಿಂಗ್ ನನ್ನನ್ನು ಅಲ್ಲಿ ಕೂರಲು ಹೇಳಿ ಆ ಹಾಲಿಗೆ ಹೊಂದಿಕೊಂಡಿದ್ದ ಇನ್ನೊಂದು ಒಳಕೋಣೆಗೆ ಹೋದ. ನಾನು ಕುಳಿತಿದ್ದ ಹಾಲಿನ ತುಂಬಾ ಡಿಲಕ್ಸ್ ಸೋಪಾ ಸೆಟ್‌ಗಳನ್ನು ಹಾಕಲಾಗಿತ್ತು. ಮಧ್ಯದಲ್ಲಿ ಬೆಂಕಿಯ ಒಲೆಯಿತ್ತು. ಹಾಲಿನ ಗೋಡೆಗಳೆಲ್ಲಾ ನೇಪಾಳಿ ಶೈಲಿಯ ವಿಗ್ರಹಗಳು ಮತ್ತು ನೇಪಾಳದ ಕರಕುಶಲ ವಸ್ತುಗಳಿಂದ ಅಲಂಕಾರಗೊಂಡಿದ್ದವು. ನಾವು ಕುಳಿತಿದ್ದ ರೂಮಿನ ನೆಲ ಟಿಬೆಟ್ಟಿಯನ್ನಿನ ಉಲ್ಲನ್ನಿನ ನೆಲಹಾಸಿನಿಂದ ಅಲಂಕಾರಗೊಂಡಿತ್ತು.

ಕೆಲ ನಿಮಿಷಗಳ ನಂತರ ಚಿರಿಂಗ್ ಬಂದು ರೂಮಿಗೆ ಬರುವಂತೆ ಸೂಚನೆ ನೀಡಿದ. ಅಲ್ಲಿ ನಾನು ಒಬ್ಬ ವ್ಯಕ್ತಿಯನ್ನು ನೋಡಿದೆ, ಆದರೆ ಅಲ್ಲಿ ಯಾವ ದೋರ್‌ಜಿಯವರನ್ನು ನೋಡಲೇ ಇಲ್ಲ. ಅಲ್ಲಿ ಒಂಟಿ ಸೋಫಾದಲ್ಲಿ ಕುಳಿತಿರುವ ಒಬ್ಬ ವ್ಯಕ್ತಿಯನ್ನು ನೋಡಿದೆ, ಆತ ನನಗೆ ಚೆನ್ನಾಗಿ ಗೊತ್ತಿದ್ದರು. ಆತನೂ ಕೂಡ ದೋರ್‌ಜಿಯವರನ್ನು ನೋಡಲು ಬಂದಿರಬಹುದು ಎಂದು ತಿಳಿದುಕೊಂಡೆ. ಚಿರಿಂಗ್ ಕಡೆ ನೋಡಿ – 'ದೋರ್‌ಜಿಯವರು ಇನ್ನೂ ಒಳಕೊಠಡಿಯಲ್ಲಿ ಇದ್ದಾರಾ?' ಎಂದು ಪ್ರಶ್ನಿಸಿದೆ.

ನನ್ನ ಪ್ರಶ್ನೆ ಚಿರಿಂಗ್ ಅವರನ್ನೂ ಕೆಲ ಸಮಯ ಗೊಂದಲಕ್ಕೀಡು ಮಾಡಿತು. ನಾನು ಮೂಕನಾದೆ. ಕೆಲಕ್ಷಣಗಳ ನಂತರ ಆತ ಹೇಳಿದ. 'ಇವರೇ ದೋರ್‌ಜಿ' ಎಂದು.

ನಾನು ಯಾರನ್ನು ದೋರ್‌ಜಿಯೆಂದು ತಕ್ಷಣ ನಂಬಲಿಲ್ಲವೊ ಹಾಗೂ ಬಹಳ ದಿನಗಳಿಂದ ಪರಿಚಯವುಳ್ಳ ವ್ಯಕ್ತಿಯನ್ನು ದೋರ್‌ಜಿಯೆಂದು ಪರಿಚಯಿಸಿದ್ದು ನಾನು ಕಸಿವಿಸಿಗೊಳ್ಳಲು ಕಾರಣವಾಯಿತು. ನಾನು ಕಳೆದ ಎಂಟು ವರ್ಷಗಳಿಂದ ಬಲ್ಲ ವ್ಯಕ್ತಿಯೇ ದೋರ್‌ಜಿ. ಆತ ಟಿಬೆಟ್ಟಿನ ನಿರಾಶ್ರಿತನಾಗಿ ನೇಪಾಳವನ್ನು ಪ್ರವೇಶ ಮಾಡಿದವನು. ಆತನಿಗೆ ಆಗ ನೇಪಾಳಿ ಭಾಷೆ ಗೊತ್ತಿಲ್ಲದಿದ್ದುದರಿಂದ ನಾನು ನೇಪಾಳಿ ಭಾಷೆಯನ್ನು ಹೇಳಿಕೊಡುತ್ತಿದ್ದೆ. ನಾನು ಆತನಿಗಾಗಿ ಕಠ್ಮಂಡುವಿನ ಕೊಳಚೆ ಪ್ರದೇಶದಲ್ಲಿ ಎರಡು ನೂರು ರೂಪಾಯಿಗಳ ಬಾಡಿಗೆಗೆ ಒಂದು ಕೊಠಡಿಯನ್ನು ಕೊಡಿಸಿದ್ದೆನು. ಆಗ ನಾವಿಬ್ಬರು ರಸ್ತೆಯಲ್ಲಿ ಆಗಾಗ ಒಬ್ಬರನ್ನೊಬ್ಬರು ಭೇಟಿಯಾಗುತ್ತಿದ್ದೆವು. ಕಳೆದ ಐದಾರು ವರ್ಷಗಳಿಂದ ನಾನು ಆತನನ್ನು ನೋಡಿರಲಿಲ್ಲಾ. ಇಂದು ನನಗೆ ಅದೇ ವ್ಯಕ್ತಿಯನ್ನು 'ದೋರ್‌ಜಿ' ಎಂದು ಪರಿಚಯಿಸಲಾಯಿತು.

ನಾನು ಆತನ ಹತ್ತಿರ ಹೋಗಿ ನೀವೇನಾ ದೋರ್‌ಜಿ? ನಾನು ನಿಮಗೆ ಗೊತ್ತಾ? ಎಂದೆ.

'ಯಾಕಿಲ್ಲ? ಆತ ಸಮಾಧಾನವಾಗಿ ಹೇಳಿದ. ದಯವಿಟ್ಟು ಕುಳಿತುಕೊಳ್ಳಿ! ನಾನು ಇನ್ನೂ ಆತನಿಗೆ ಪರಿಚಯವಿದೆಯೆಂದು ತಿಳಿದು ಸಂತೋಷವಾಯಿತು. ಬಾಗಿಲ ಬಳಿ ನಿಂತಿದ್ದ ಚಿರಿಂಗ್‌ನನ್ನು ಹೊರಹೋಗುವಂತೆ ದೋರ್‌ಜಿ ಸೂಚಿಸಿದನು. ನಾನು ಮತ್ತು ದೋರ್‌ಜಿ ಮಾತ್ರ ರೂಮಿನಲ್ಲಿ ಉಳಿದೆವು.

ದೋರ್‌ಜಿಯ ಹಿಂದಿನ ಹೆಸರನ್ನು ನೆನಪು ಮಾಡುತ್ತಾ ನಿಮ್ಮ ಹೆಸರು 'ದುಕ್ಪಾ ಅಲ್ಲವಾ' ಎಂದು ಕೇಳಿದೆ.

'ಹೌದು'.

'ಅದು ಹೇಗೆ 'ದೋರ್‌ಜಿ' ಎಂದು ಬದಲಾಯಿತು'?

'ದುಕ್ಪಾಲಾಮ ಕಠ್ಮಂಡುವಿನ ಸಂದುಗೊಂದಿಯ ಕೊಳಚೆ ಪ್ರದೇಶದಲ್ಲಿ ಈಗಾಗಲೆ ಸತ್ತುಹೋಗಿದ್ದಾನೆ. ದೋರ್‌ಜಿ ಮಾತ್ರ ಈಗ ಬದುಕಿದ್ದಾನೆ'.

ಈ ಮಾತುಗಳು ನನ್ನಲ್ಲಿ ನಗುವನ್ನುಂಟುಮಾಡಿದುವು. ಆತನೂ ನನ್ನೊಂದಿಗೆ ನಗುತ್ತಾ ಹೇಳಿದ, ದುಕ್ಪಾನ ಆ ದಿನಗಳು ಕಷ್ಟದ ದಿನಗಳು. ಈಗಿನ ದಿನಗಳು, ನಂತರದ ದಿನಗಳು ಅವು 'ದೋರ್‌ಜಿ'ಯವು.

ನಾವಿಬ್ಬರೂ ಪರಿಚಯಸ್ಥರಾದರೂ, ನಮ್ಮಿಬ್ಬರ ನಡುವೆ ಅಷ್ಟೊಂದು ಆತ್ಮೀಯತೆಯಿರಲಿಲ್ಲ. ಆತ ಟಿಬೆಟ್ಟಿನಿಂದ ಭಾರತದ ಮೂಲಕ ನೇಪಾಳಕ್ಕೆ ಬಂದಾಗ ಆತ ನೇಪಾಳಿಯನ್ನು ಮಾತನಾಡುತ್ತಿರಲಿಲ್ಲ. ನಾನು ಮೊದಲು ಆತನನ್ನು ನನ್ನ ಒಬ್ಬ ಸ್ನೇಹಿತರ ಮನೆಯಲ್ಲಿ ನೋಡಿದೆ. ಆತ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದ. ಹಿಂದಿಯನ್ನು ಅರ್ಥಮಾಡಿಕೊಳ್ಳುತ್ತಿದ್ದ. ಆದರೆ ಮಾತನಾಡಲು ಬರುತ್ತಿರಲಿಲ್ಲ. ಜೀವನಕ್ಕಾಗುವಷ್ಟು ಹಣ ಆತನ ಬಳಿಯಿತ್ತು.

ನಾನು ಆತನಿಗಾಗಿ ಬಾಡಿಗೆ ಮಾಡಿಕೊಟ್ಟಿದ್ದ ಕೊಳಚೆ ಪ್ರದೇಶದಲ್ಲಿ ವಾಸಮಾಡುತ್ತಿದ್ದ ಸಮಯದಲ್ಲಿ ನಾವಿಬ್ಬರು ರಸ್ತೆಯಲ್ಲಿ ಆಗಾಗ ಭೇಟಿಯಾಗುತ್ತಿದ್ದೆವು. ಆದರೆ ಆತ ಜೀವಿಸಲು ಏನು ಮಾಡುತ್ತಿದ್ದಾನೆಂದು ನಾನು ಕೇಳುತ್ತಿರಲಿಲ್ಲ. ನನಗೆ ಆತ ಒಬ್ಬ ಟಿಬೆಟ್ಟಿನ ನಿರಾಶ್ರಿತ, ಕಠ್ಮಂಡುವಿನಲ್ಲಿ ವಾಸವಾಗಿದ್ದಾನೆ ಎನ್ನುವ ತಿಳುವಳಿಕೆ ಮಾತ್ರ ಇತ್ತು. ನಾನು ಯಾವಾಗ ಆತನನ್ನು ಇಂಥ ಸ್ಥಿತಿಯಲ್ಲಿ ಭೇಟಿಯಾದನೊ ಆಗ ಆತನನ್ನು 'ದೋರ್‌ಜಿ' ಎಂದು ಗುರುತಿಸಲು ಸಾಧ್ಯವಾಗಲಿಲ್ಲ. ಇದು ಅಸಹಜವೇನಲ್ಲ.

ನಾನು ಆತನನ್ನು ಸಮಾಧಾನದಿಂದ ಕೇಳಿದೆ– 'ಮಿಸ್ಟರ್ ದೋರ್‌ಜಿ' ನೀನು ಇಷ್ಟೊಂದು ಸಂಪತ್ತನ್ನು ಹೇಗೆ ಸಂಪಾದಿಸಿದೆ?

ಮಾತನ್ನು ಬದಲಿಸಿ, ನಮ್ಮ ಚರ್ಚೆಗಳಿಗೆ ವಿದಾಯ ಹೇಳುವಂತೆ, ಆತ



ಕೇಳಿದ, 'ನೀವು ಏನನ್ನು ಕುಡಿಯುತ್ತೀರಿ, ಬೀಯರ್ ಅಥವಾ ವಿಸ್ಕಿ?' ಎಂದು.

'ಥ್ಯಾಂಕ್ಸ್ ನಾನು ಕುಡಿಯೋದಿಲ್ಲ. ಕಾಫಿ ಮಾತ್ರ ಸಾಕು' ಎಂದೆ.

'ಕಾಫಿ ಮಾತ್ರ ಸಾಕೆ? ಎರಡು ಕಪ್ಪು ಕಾಫಿ ತರುವಂತೆ ಇಂಟರ್ ಕಾಮ್‌ನಲ್ಲಿ ಆದೇಶ ಮಾಡಿದರು. ಇತ್ತೀಚಿನ ದಿನಗಳಲಿ ನೀವು ಏನು ಮಾಡುತ್ತಿದ್ದೀರಿ?' ಎಂದು ವಿಚಾರಿಸಿದರು.

'ಅಂಥ ಹೇಳಿಕೊಳ್ಳುವಂಥದ್ದೇನೂ ಇಲ್ಲ'.

'ಕಠ್ಮಂಡುವಿನಲ್ಲಿ ಏನನ್ನೂ ಮಾಡದೆ ಹೇಗೆ ಜೀವನ ಸಾಗಿಸುತ್ತಿದ್ದೀರಿ?'

'ನಾನು ನಮ್ಮ ಮನೆಯ ಆದಾಯದ ಮೇಲೆ ಅವಲಂಬಿತನಾಗಿದ್ದೇನೆ ಹಾಗೂ ಅದೇ ರೀತಿ ಜೀವನ ಸಾಗಿಸುತ್ತಿದ್ದೇನೆ'.

'ಹೇಗೆ ಜೀವನ ಸಾಗಿಸುತ್ತಿದ್ದೀರಿ? ಕಠ್ಮಂಡು, ಯುರೋಪ್ ಹಾಗೂ ಅಮೆರಿಕಾಗಿಂತ ದುಬಾರಿಯಾಗುತ್ತಿದೆ' ಹಾಗನ್ನಿಸುವುದಿಲ್ಲವೆ?

'ಸರಿ! ಹೇಗಾದರೂ ಜೀವನ ಸಾಗಿಸಲೇಬೇಕು. ನಾವು ಊಟ ಮಾಡಲಿಕ್ಕಷ್ಟೆ ಬದುಕುವುದಿಲ್ಲ, ನಾವು ಇಲ್ಲಿ ಬದುಕುವುದಕ್ಕಾಗಿ ತಿನ್ನುತ್ತೇವೆ. ಅಂದರೆ ರುಚಿಗಾಗಿ ಖುಷಿಗಾಗಿ, ಮತ್ತು ದೃಢಕಾಯರಾಗಲು ತಿನ್ನುವುದಿಲ್ಲ. ನಾವು ತಿನ್ನುವುದು ಸಂರಕ್ಷಣೆ ಮತ್ತು ಬದುಕುವುದಕ್ಕಾಗಿ ಮಾತ್ರ. ಆದ್ದರಿಂದ ಸ್ವಲ್ಪ ಮಾತ್ರ ಸಾಕು. ಆತ ನನ್ನ ವಿವರಣೆಗಳಿಂದ ಸಮಾಧಾನಗೊಂಡನೆಂದು ಕಾಣುತ್ತದೆ.

ಆತ ನಗುಮೊಗದಿಂದ ಹೇಳಿದ, 'ನೀವು ಹೇಳುವುದು ಸರಿ, ನಾನು ನನ್ನ ಜೀವನದಲ್ಲಿ ಅಂತಹ ಕಡು ಬಡತನದ ಜೀವನವನ್ನು ನೋಡಿದ್ದೇನೆ. ಅಂದರೆ ಕಟ್ಮಂಡುವಿನಲ್ಲಿ ಆಹಾರದ ಬೆಲೆ ಬೇರೆ ಕಡೆಗಳಿಗಿಂತಲೂ ಬಹಳ ದುಬಾರಿ ಎನ್ನುವುದು ನನ್ನ ಮಾತಿನ ಅರ್ಥ'.

ಅಷ್ಟರಲ್ಲಿ ದೂರವಾಣಿಯ ಗಂಟೆ ಮೊಳಗಿತು. ಫೋನನ್ನು ಕೈಗೆ ತೆಗೆದುಕೊಳ್ಳುತ್ತಾ 'ಹಲೊ 'ದೋರ್‌ಜಿ' ಮಾತನಾಡುತ್ತಿರುವುದು. ಗುಡ್‌ಮಾರ್ನಿಂಗ್ ಸೂಪರಿಡೆಂಟ್ ಸಾಹೇಬ್ ಏನು ಸಮಾಚಾರ? ಓ ಆತನನ್ನು ಅರೆಸ್ಟ್‌ಮಾಡಿದರಾ? ಎಲ್ಲಿ?.... ನಮ್ಮ ವಿಮಾನ ನಿಲ್ದಾಣದಲ್ಲಾ?.... ಅದು ಬ್ಯಾಂಕಾಕ್ ಏರ್‌ಪೋರ್ಟ್‌ನಲ್ಲಿ ಅಲ್ಲದಿದ್ದರೆ.... ಸೂಟ್‌ಕೇಸನ್ನು ತೆಗೆದುಕೊಳ್ಳದೆ ಸಿಟಿಗೆ ಹೋಗಬಹುದಿತ್ತು?.... ನಾನು ಸಿಂಗಾಪೂರ್‌ನಿಂದ ಟೆಲೆಕ್ಸ್‌ಗಾಗಿ ಕಾಯುತ್ತಿದ್ದೇನೆ.... ಕೆಟ್ಟ ಸುದ್ದಿ! ಥ್ಯಾಂಕ್ಸ್ ಓ...ಕೆ...ಬೈ–ಬೈ'

ರಿಸೀವರ್ ಅನ್ನು ಇಟ್ಟು ನನ್ನ ಕಡೆ ತಿರುಗಿ 'ಅಗ್ಗದ ಬೆಲೆಯ ಮನುಷ್ಯರನ್ನು ಇಂಥ ಕೆಲಸಕ್ಕೆ ಬಳಸುವುದು ತುಂಬಾ ಅಪಾಯಕಾರಿ' ಎಂದರು.

ನಾನು ಸಂದರ್ಭವನ್ನು ಸರಿಯಾಗಿ ಅರಿತಿರಲಿಲ್ಲವಾದ್ದರಿಂದ, ನಾನು ಇಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹಾಗೆಯೆ ಊಹಿಸಿದೆ. 'ಅವನೊಬ್ಬ ಎಂಥಾ

ಮೂರ್ಖ' ಎಂದು ನಾನು ಹೇಳಿದೆ.

ಆತ ನನ್ನ ಪ್ರತಿಕ್ರಿಯೆಗೆ ಉತ್ತರಿಸಲೇಬೇಕಾದ ಒಂದು ಮಾನಸಿಕ ಒತ್ತಡ ಆತನಲ್ಲಿ ಉಂಟಾಗಿ ಕುತೂಹಲದಿಂದ ಹೇಳಿದ – 'ನನ್ನ ಅಭಿಪ್ರಾಯ ಅದೇ ಹಾಗಿದೆ. ಒಬ್ಬ ದುಬಾರಿ ವ್ಯಕ್ತಿ ಬ್ಯಾಂಕಾಕ್‌ಗೆ ಹೋಗಿ ರಾತ್ರಿಯ ಸುಖವನ್ನು ಅನುಭವಿಸಲು ಆತುರ ನಾಗಿದ್ದಿರಬೇಕು.... ಈಗ ದಸ್ತಗಿರಿಯಾಗಿದ್ದಾನೆ! ಈಗ ತಾನೇ ಇಂಟರ್‌ಪೋಲ್‌ನಿಂದ ವರದಿಯಾಗಿದೆ. ಸಮಯಕ್ಕೆ ಸರಿಯಾಗಿ ಮಾಹಿತಿ ಸಿಕ್ಕಿದೆ. ಆದರೆ ಈಗ ಏನು ಮಾಡುವುದು?'

ನಾನು ಆತನಿಗೆ ಸಾಂತ್ವನವನ್ನು ವ್ಯಕ್ತಪಡಿಸುವಂತೆ 'ಅದು ಎಷ್ಟು ಹಣ'? ಎಂದು ಕೇಳಿದೆ.

ಆತ ತನ್ನ ಎರಡೂ ಕಾಲುಗಳನ್ನು ಕಾಫಿಯ ಟೇಬಲ್ಲಿನ ಕಡೆ ಚಾಚುತ್ತಾ ಮತ್ತು ತನ್ನ ಕೈಗಳನ್ನು ಬಾಯಿಯ ಬಳಿ ತಂದು, ಸ್ವಲ್ಪ ಸಮಯ ಯೋಚಿಸಿ ಹೇಳಿದ – 'ಇಲ್ಲ ಅಂಥ ಹೆಚ್ಚೇನು ಇರಲಿಲ್ಲ, ಸಿಂಗಪೂರವನ್ನು ತಲುಪಿದ್ದರೆ, ಅರ್ಧಮಿಲಿಯನ್ ಅಮೆರಿಕನ್ ಡಾಲರ್ ಮತ್ತು ಇತರೆ ಖರ್ಚುಗಳು ಅರ್ಧಮಿಲಿಯನ್ ಡಾಲರ್, ಒಟ್ಟು ಸೇರಿ ಒಂದು ಮಿಲಿಯನ್ ಅಮೆರಿಕನ್ ಡಾಲರ್'.

'ರಫ್ತು ಮಾಡುತ್ತಿದ್ದ ವಸ್ತು ಏನು'? ಎಂದು ನಾನು ನಯವಾಗಿ ಕೇಳಿದೆ.

ನನ್ನ ಮಾತಿಗೆ ಆತ ಗಮನ ಹರಿಸಲೇ ಇಲ್ಲ. ಆತ ಸೋಫಾದಲ್ಲಿ ಸುಮ್ಮನೆ ಕುಳಿತ. ಸ್ವಲ್ಪ ಸಮುಯದ ನಂತರ ಇಂಟರ್‌ಕಾಮ್‌ನಲ್ಲಿ ಚಿರಿಂಗ್ ಅನ್ನು ಕರೆದು ಹೇಳಿದ– ಸಿಂಗಪೂರ್‌ಗೆ ಕಾಂಟ್ಯಾಕ್ಟ್ ಮಾಡಿ ಅವರಿಗೆ ತಿಳಿಸಿ 'ವಸ್ತು' ಇನ್ನು ಕೆಲವು ದಿವಸ ಅವರಿಗೆ ತಲುಪುವುದಿಲ್ಲವೆಂದು ಮತ್ತು ಈ ವಸ್ತು ದೊರೆಯುವ ಜಾಗಕ್ಕೆ ಸುದ್ದಿಯನ್ನು ಮುಟ್ಟಿಸಿ ಇನ್ನೊಂದು ವಾರದೊಳಗೆ ಅಷ್ಟೇ ಪ್ರಮಾಣದ ವಸ್ತು ಸಿದ್ಧವಾಗಿರಬೇಕೆಂದು ಅರ್ಥವಾಯಿತಲ್ಲಾ'?

'ಸಿಂಗಪೂರದಲ್ಲಿ ಯಾವ ಸಿಬ್ಬಂದಿಯೂ ಸಿಗುತ್ತಿಲ್ಲ? ಗುರೂಂಗ್ ಎಲ್ಲಿದ್ದಾರೆ?'

'ಗುರೂಂಗ್ ಬ್ಯಾಂಕಾಕ್ ಏರ್‌ಪೋರ್ಟಿನಲ್ಲಿ ಅರೆಸ್ಟಾಗಿದ್ದಾನೆ. ಇಂಟರ್‌ಪೋಲ್‌ನವರು ಈಗ ತಾನೇ ತಿಳಿಸಿದರು. ನಾನು ಈಗ ಏನುಮಾಡಲಿ? ಆದ್ದರಿಂದ ನಾವು ಈಗ ತಕ್ಷಣ ಬೇರೆ 'ಸರಕನ್ನು' ಕಳುಹಿಸಬೇಕಿದೆ'.

'ನಮ್ಮ ಒಬ್ಬ ಗಿರಾಕಿ ಈಗ ಕೆಲವು ಸಮಯದ ಹಿಂದೆ ಒಂದು ಲಕ್ಷ ಅಮೆರಿಕನ್ ಡಾಲರ್ ಮೊತ್ತದ ವಸ್ತುಗಳನ್ನು ಕಳುಹಿಸುವುದಾಗಿ ತಿಳಿಸಿದ್ದರು' ಎಂದು ಚಿರಿಂಗ್ ಹೇಳಿ ಆತನಲ್ಲಿಯೆ ಬುಕ್ ಮಾಡಲೆ? ಎಂದು ಕೇಳಿದ.

'ಹೌದು. ಮುಂದುವರಿ'! ನಮ್ಮ ಜಾಗಕ್ಕೆ ಸರಬರಾಜು ಮಾಡುವಂತೆ ತಿಳಿಸು. ಅರ್ಥವಾಯಿತಲ್ಲಾ?



ಚಿರಿಂಗ್ ರೂಮಿನಿಂದ ಹೊರ ನಡೆದರು. ದೋರ್‌ಜಿ ತನ್ನ ಸಮಸ್ಯೆಯನ್ನು ಕುರಿತು ಯೋಚಿಸತೊಡಗಿದರು. ಅಷ್ಟರಲ್ಲಿ ಕಲ್ಕತ್ತದಿಂದ ಒಂದು ಟ್ರಂಕ್ ಕಾಲ್ ಬಂತು. ದೂರವಾಣಿಯಲ್ಲಿ ಮಾತನಾಡುತ್ತಾ, 'ಹಲ್ಲೋ ದೋರಜಿ ಮಾತನಾಡುತ್ತಿರುವುದು.... ಹೌದು..... ಕಠ್ಮಂಡು.... ಓ....ಕೆ.....ಹೌದು...... ದೋರ್‌ಜಿ ಮಾತಾಡುತ್ತಿರುವುದು..... ಅದನ್ನು ಕಳುಹಿಸಲಾಗಿದೆಯೆ?..... ಅದು ಜರ್ಮನಿಗೆ ನೇರವಾಗಿ ಹೋಗುವ ಹಡಗಲ್ಲವೆ?..... ಸರಿ...... ತುಂಬಾ ಒಳ್ಳೆಯದು! ಥ್ಯಾಂಕ್ಸ್.... ಈಗ ನೀವು ಕಠಸ್ಮಂಡುವಿಗೆ ಬರಬಹುದು.... ಓ.ಕೆ.... ಬೈ.....!

ನಿಟ್ಟುಸಿರುಬಿಟ್ಟು 'ಒಂದು ತಲೆನೋವು ತಪ್ಪಿತು' ಎಂದು ಆತ ಹೇಳಿದ.

ಆತ ಏನು ಹೇಳುತ್ತಿದ್ದಾನೆ ಎಂದು, ನನಗೆ ಅರ್ಥವಾಗಲಿಲ್ಲ. ಆತ ನನ್ನೊಂದಿಗೆ ಮುಕ್ತವಾಗಿ ಮಾತನಾಡುತ್ತಿರಲಿಲ್ಲ. ಆತನ ಮಾತುಗಳಿಂದ ನಾನು ಅರ್ಥಮಾಡಿಕೊಂಡ ವಿಷಯಗಳನ್ನಾಧರಿಸಿ ಆತನೊಂದಿಗೆ ಚರ್ಚಿಸಲಾಗುತ್ತಿರಲಿಲ್ಲ. ಆತನೂ ನನ್ನ ಪ್ರಶ್ನೆಗಳಿಗೆ ಯಾವಾಗ ಉತ್ತರಿಸುವುದಿಲ್ಲ ಎಂದು ತಿಳಿಯಿತೊ ಆಗ ನಾನು ಬೇರೆ ವಿಚಾರಗಳನ್ನು ಚರ್ಚೆಗೆ ತೆಗೆದುಕೊಂಡು ಹೇಳಿದೆ – 'ಮಿಸ್ಟರ್ ದೋರ್‌ಜಿ ನೀವು ನ್ಯೂಯಾರ್ಕ್ ಮತ್ತು ಹ್ಯಾಂಬರ್ಗ್‌ನಲ್ಲಿ ವ್ಯಾಪಾರವನ್ನೂ ಹೊಂದಿದ್ದೀರಿ ಎಂದು ಕೇಳಿದ್ದೇನೆ. ಅಲ್ಲಿಯ ವ್ಯಾಪಾರ ಹೇಗಿದೆ?'.

'ಅದು ನಿಮಗೆ ಹೇಗೆ ಗೊತ್ತಾಯಿತು'

'ಮಿಸ್ಟರ್ ದೋರ್‌ಜಿ, ನೀವು ಬಹಳ ದೊಡ್ಡ ವ್ಯಾಪಾರಿ ಎನ್ನುವುದು ಎಲ್ಲರಿಗೂ ಗೊತ್ತು. ಅನೇಕ ಜನ ನಿಮ್ಮನ್ನು ನೋಡದೆ ಇರಬಹುದು. ಆದರೆ ಅವರೆಲ್ಲರಿಗೆ ನೀವು ಗೊತ್ತು ಮತ್ತು ನಿಮ್ಮ ಹೆಸರು ಗೊತ್ತಿದೆ. ಆದ್ದರಿಂದ ನಿಮ್ಮ ವಿಚಾರವನ್ನು ತಿಳಿಯುವುದು ಕಷ್ಟವಲ್ಲ' ಎಂದು ಹೇಳಿದೆ.

ನನ್ನ ವಿವರಣೆಯನ್ನು ಕೇಳಿ ಆತನಿಗೆ ದಿಗಿಲುಂಟಾಗಿರಬೇಕು. ಆತ ಹೇಳಿದ 'ಓ ಹಾಗಾದರೆ ನಾನು ಅಷ್ಟೊಂದು ಪ್ರಚಾರದಲ್ಲಿದ್ದೇನೆ? ಹಾಗಾದರೆ ನಾನು ತೊಂದರೆ ಯಲ್ಲಿದ್ದೇನೆ ಅನ್ನಿಸುತ್ತದೆ' ಎಂದನು.

'ನೀವು ತೊಂದರೆಯಲ್ಲಿ ಇದ್ದೀರಿ' ಎಂದು ನನಗನ್ನಿಸುವುದಿಲ್ಲ! ಆದರೆ ಪ್ರಚಾರದಲ್ಲಿದ್ದೀರಿ.

'ನಾನು ಪ್ರಚಾರದಲ್ಲಿ ಇಲ್ಲದಾಗ ಮಾಡಿದಷ್ಟೆ ಹಣವನ್ನು ಪ್ರಚಾರದಲ್ಲಿರುವಾಗ ಮಾಡಲಾಗುವುದಿಲ್ಲ ಎನ್ನುವುದು ನನ್ನ ಮಾತಿನ ಅರ್ಥ. ಕೆಲವು ದೊಡ್ಡ ಹೋಟೆಲ್ ಹಾಗೂ ಪೊಲೀಸಿನವರಿಗೆ ಮಾತ್ರ ನಾನು ಪರಿಚಯವಿದ್ದೇನೆ ಎಂದುಕೊಂಡಿದ್ದೆ. ಅಂದರೆ ನೀವು ನನ್ನ ಪ್ರಚಾರವನ್ನು ಗಮನಿಸಿ ನನ್ನನ್ನು ನೋಡಲು ಬಂದಿದ್ದೀರಿ ಅನ್ನಿಸುತ್ತದೆ' ಎಂದನು.

ಆತನ ಅನುಮಾನವನ್ನು ಪರಿಹರಿಸುವ ದೃಷ್ಟಿಯಿಂದ ನಾನು ಅಲ್ಲಿಗೆ ಬಂದಿರುವ

ವಿಚಾರವನ್ನು ತಿಳಿಸಿದೆ. ಹಾಗೂ ಚಿರಿಂಗ್ ಜೊತೆಯಲ್ಲಿ ನಾನು ಮಾತನಾಡಿದ ವಿಚಾರ ಹಾಗೂ ಕಾರನ್ನು ಮಾರಲು ಬಂದ ವಿಷಯವನ್ನು ತಿಳಿಸಿದೆ. ನನ್ನ ಕಾರನ್ನು ಚಿರಿಂಗ್ ಇಷ್ಟಪಡದೆಯಿರುವ ವಿಚಾರವನ್ನು ಕೂಡ ತಿಳಿಸಿದೆನು.

'ಕಾರಿನ ವ್ಯಾಪಾರ ಕುದುರದಿದ್ದರೂ, ನಾನು ಮನಸ್ಸಿನಲ್ಲಿ ಅಂದು ಕೊಂಡಂತೆ ಈ ಮನೆಯ ಮಾಲೀಕರನ್ನು ನೋಡಬೇಕೆಂದಿದ್ದ ಬಯಕೆ ನೆರವೇರಿತು. ನಾನು ಈಗ ನಿಮ್ಮೊಡನೆ ಇದ್ದೇನೆ' – ಎಂದು ತಿಳಿಸಿದೆನು.

ನಾನು ಯಾವಾಗ ಆತನನ್ನು ಭೇಟಿಯಾದ ಕಾರಣವನ್ನು ತಿಳಿಸಿದೆನೊ, ಆಗ ಆತ ನ್ಯೂಯಾರ್ಕ್ ಮತ್ತು ಹ್ಯಾಂಬರ್ಗ್‌ನಲ್ಲಿ ವ್ಯಾಪಾರವಿರುವ ವಿಚಾರವನ್ನು ತಿಳಿಸಿದನು. 'ನಾನು ನೇಪಾಳಿಯ ಕರಕುಶಲವಸ್ತುಗಳ ಮತ್ತು ಟಿಬೆಟ್ಟಿನ ಕಾರ್ಪೆಟ್‌ನ ಮಾರಾಟದ ಮಳಿಗೆಯನ್ನು ತೆರೆದಿದ್ದೇನೆ' ಎಂದು ತಿಳಿಸಿದನು. ನಾನೇ ಎಲ್ಲಾ ಕಡೆ ನೋಡಿಕೊಳ್ಳಬೇಕಿದೆ. ವರ್ಷದಲ್ಲಿ ಬಹಳಷ್ಟು ದಿನ ನಾನು ಈ ಸ್ಥಳಗಳಲ್ಲಿ ವಾಸವಾಗಿರುತ್ತೇನೆ. ನಾನು ಒಂದು ಸಣ್ಣ ಫ್ಲಾಟನ್ನು ಬಾಡಿಗೆಗೆ ಪಡೆದಿದ್ದೇನೆ. ನನ್ನ ಕುಟುಂಬ ಅಲ್ಲಿಯೆ ವಾಸಿಸುತ್ತಿದೆ'.

'ಆದರೆ, ನೀವು ಅಲ್ಲಿಯ ಪೌರತ್ವವನ್ನು ಪಡೆದಿರಬೇಕು ಅಲ್ಲವೆ?'

'ಇಲ್ಲ!, ನಾನು ಈಗ ಈ ದೇಶದ ಪ್ರಜೆ. ನಾವು ಅಮೆರಿಕಾದ ಪ್ರಜೆಯಾಗಬೇಕಾದರೆ ಬಹಳ ಪರಿಶ್ರಮ ಪಡಬೇಕಾಗುತ್ತದೆ. ನಿಜವಾಗಿಯೂ ಪೌರತ್ವ ಪಡೆಯುವುದು ತುಂಬಾ ಕಷ್ಟ. ಅದು ಇಲ್ಲಿಯಂತಲ್ಲ.

ಓ! ಹಾಗಾದರೆ, ನೀವು ಈ ದೇಶದಲ್ಲಿ ಇಷ್ಟು ದೊಡ್ಡ ವ್ಯವಹಾರವನ್ನು ಮಾಡುವುದು ಎಷ್ಟು ಕಷ್ಟವೆನ್ನುವುದು ನಿಮಗೆ ಗೊತ್ತಿದೆಯಲ್ಲ? ನಾನು ಈಗಾಗಲೇ ಈ ದೇಶದ ಪ್ರಜೆಯಾಗಿರುವುದರಿಂದ ಇಂಥ ದೊಡ್ಡ ವ್ಯಾಪಾರವನ್ನು ಮಾಡುವ ಅವಕಾಶಗಳನ್ನು ಪಡೆದುಕೊಂಡೆ.

ಆತ ತನ್ನ ಮಾತಿನ ವಿಷಯವನ್ನು ಬದಲಿಸಿ 'ನೀವು ನನ್ನೊಂದಿಗೆ ಕೆಲಸಮಾಡಲು ಇಚ್ಛಿಸುತ್ತೀರಾ? ಎಂದು ಕೇಳಿದನು. ನಾವಿಬ್ಬರೂ ತುಂಬಾ ಹಳೆಯ ಪರಿಚಿತರು. ಹಾಗು ನಿಮಗೆ ನನ್ನ ಹಿಂದಿನ ದಿನಗಳೆಲ್ಲ ಚೆನ್ನಾಗಿ ಗೊತ್ತಿದೆ. ನಾನು ಎಷ್ಟು ಶ್ರೀಮಂತನಾಗಿ ದೋರ್‌ಜಿ ಸಾಹೇಬ್ ಆಗಿದ್ದರೂ ನಿಮಗೆ ನಾನು 'ದುಕ್ಪಾ' ಮಾತ್ರ. ನೀವು ನನ್ನ ಜೊತೆ ಸೇರಿದರೆ ಬಹಳಷ್ಟು ಬದಲಾವಣೆ ಕಾಣುತ್ತೀರಿ. ನೀವು ನನ್ನೊಡನೆ ಸೇರಿಕೊಳ್ಳಿ. ನಿಮ್ಮ ಸ್ನೇಹಿತನಿಗೆ ಸಹಾಯ ಮಾಡಿದಂತಾಗುತ್ತದೆ. ನೀವು ನನ್ನೊಡನೆ ಸೇರಿದ್ದೇ ಆದರೆ ಅದು ನಿಮಗೆ ತುಂಬಾ ಲಾಭವಾಗುತ್ತದೆ' ಎಂದು ಹೇಳಿದನು.

ನಾನು ದೋರ್‌ಜಿಯನ್ನು ನೋಡಲು ಹೋಗಿದ್ದು ಕೆಲಸ ಕೇಳಲು ಅಲ್ಲ.... ನಾನು ಅಲ್ಲಿ ಹೋಗಿದ್ದು ಆತನ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯಲು ಅಷ್ಟೆ.



ನಾನು ಬಂದ ಕೆಲಸ ಮುಗಿಯಿತು. ನಾನು ಈಗ ಪಡೆದ ಮಾಹಿತಿಯಿಂದ ನನಗೆ ನಿಶ್ಚಯವಾಗಿ ನನ್ನ ಉದ್ದೇಶ ಫಲಿಸಿದಂತಿತ್ತು. ಆದ್ದರಿಂದ ಆತನಿಗೆ ಹೇಳಿದೆ – ನೋಡಿ 'ದೋರ್‌ಜಿ' ಅವರೆ ನಾನು 'ನಿಮ್ಮೊಂದಿಗೆ ಕೆಲಸ ಮಾಡುತ್ತೇನೆ' ಎಂದು ಹೇಳಿದರೆ ಅಷ್ಟೇ ಸಾಲದು. ಸಮಯ ಮತ್ತು ಸಂದರ್ಭಗಳು ನನಗೆ ಒದಗಿಬರಬೇಕು. ಅದು ಅಲ್ಲದೆ ನನ್ನಲ್ಲಿ ಬಂಡವಾಳವಿಲ್ಲ, ಆದ್ದರಿಂದ ನಿಮ್ಮೊಂದಿಗೆ ನಾನು ಹೇಗೆ ಇಷ್ಟು ದೊಡ್ಡ ವ್ಯಾಪಾರವನ್ನು ನಡೆಸಲಿ? ನೀವು ನನ್ನೊಂದಿಗೆ ತಮಾಷೆ ಮಾಡುತ್ತಿರುವಂತೆ ಕಾಣುತ್ತಿದೆ! ಆದ್ದರಿಂದ ಈ ವ್ಯಾಪಾರವನ್ನು ನಾನು ಮಾಡುವುದಾಗಲಿ ಅಥವಾ ನೀವು ನನ್ನಿಂದ ಮಾಡಿಸುವುದಾಗಲಿ ಆಗದ ಮಾತು' ಎಂದೆ.

ದೋರ್‌ಜಿಯವರು ಸಲಹೆ ನೀಡುವ ರೀತಿಯಲ್ಲಿ ನೀವು 'ಹ್ಞೂ' ಅನ್ನಿ ಮಿಕ್ಕದ್ದನ್ನು ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದರು. 'ನಾನು ನಿಮ್ಮಂಥ ಒಬ್ಬ ವ್ಯಕ್ತಿಗಾಗಿ ಹುಡುಕಾಡುತ್ತಿದ್ದೇನೆ'. ಅದು ಅಲ್ಲದೆ ನೀವು ನನ್ನ ಹಳೆಯ ಪರಿಚಯದ ವ್ಯಕ್ತಿ, ನಿಮಗೆ ಸಹಾಯ ಮಾಡಬಾರದೆಂಬುದಕ್ಕೆ ನನ್ನಲ್ಲಿ ಯಾವುದೇ ಕಾರಣವಿಲ್ಲ..... ಈ ರೀತಿಯ ವ್ಯಾಪಾರ ಕೇವಲ ಹಣದಿಂದ ಮಾತ್ರ ಯಶಸ್ವಿಯಾಗಲು ಸಾಧ್ಯವಿಲ್ಲ. ಜನರ ಸಹಕಾರ, ಸಹಾಯ ಪಡೆಯಲು ಹೆಚ್ಚಿನ ತಂತ್ರಗಾರಿಕೆ ಹಾಗೂ ಕುಶಲತೆ ಬೇಕು ಎಂದು ಆತ ಮುಂದುವರಿಸಿ ಹೇಳಿದ. 'ಈ ಕೆಲಸಕ್ಕೆ ಬರಲು ಯಾರೊಬ್ಬರಿಗಾದರೂ ಬಹಳ ಮುಖ್ಯವಾಗಿ ಮೊಂಡುಧೈರ್ಯ ಹಾಗೂ ಶ್ರದ್ಧೆ ಬೇಕು. ಈ ಗುಣಗಳನ್ನು ಹೊಂದಿದ್ದರೆ ಅದೃಷ್ಟ ನಿಮ್ಮ ಮನೆಯ ಬಾಗಿಲಿಗೆ ಕಣ್ಣುಮುಚ್ಚಿಬಿಡುವುದರೊಳಗೆ ಮೋಡಿ ಮಾಡಿದಂತೆ ಹರಿದುಬರುತ್ತದೆ, ಅದು ಅಲ್ಲದೆ ಈ ದೇಶದಲ್ಲಿ ಇಂಥ ವ್ಯಾಪಾರ ಮಾಡುವುದು ಸುಲಭದ ಕಾರ್ಯವೆಂದು ನಾನು ಭರವಸೆ ನೀಡುತ್ತೇನೆ' ಎಂದು ಹೇಳಿದರು. 'ಅದೂ ಅಲ್ಲದೆ ಈ ರೀತಿಯ ಅನುಕೂಲ ಯಾವಾಗಲೂ ಮುಂದುವರೆಯುವುದಿಲ್ಲ' ಎನ್ನುವುದನ್ನು ತಿಳಿಯಿರಿ!

'ನೋಡಿ, ನಾನು ಕಠ್ಮಂಡುವಿಗೆ ಬಂದಾಗ ನಾನೊಬ್ಬ ಭಿಕಾರಿಯಂತಿದ್ದೆ ಎನ್ನುವುದು ನಿಮಗೆ ಚೆನ್ನಾಗಿ ಗೊತ್ತಿದೆ! ನೀವು ಆಗ ನನಗೆ ಸಹಾಯ ಮಾಡಿದಿರಿ. ಇಂದು ನೋಡಿ, ನಾನು ಈ ಮಟ್ಟಕ್ಕೆ ಬಂದಿದ್ದೀನಿ! (ಹಂತಕ್ಕೆ); ಆದ್ದರಿಂದ ನೀವೂ ಮನಸ್ಸು ಮಾಡಿ ಕೆಲಸ ಮಾಡಲು ತೀರ್ಮಾನಿಸಬೇಕು, ಅವಕಾಶ ನಿಮಗಾಗಿ ಒದಗಿಬಂದಿದೆ. ಅವಕಾಶಗಳನ್ನು ನೀವು ಸೃಷ್ಟಿಸಲಾಗುವುದಿಲ್ಲ, ಅವಕಾಶ ಬಂದಾಗ ನಾವು ಕೆಲಸ ಸಾಧಿಸಿಕೊಳ್ಳಬೇಕು' ಎಂದು ಮಾತನ್ನು ಮುಂದುವರಿಸಿದರು.

ದೋರ್‌ಜಿಯವರು ಏನು ಹೇಳುತ್ತಿದ್ದಾರೆನ್ನುವುದು ನನಗೆ ಅರ್ಥವಾಯಿತು. ಆತನಿಗೆ ಯಾವುದೇ ಒಂದು ವ್ಯಾಪಾರವನ್ನು ನನ್ನ ಸಹಾಯದಿಂದ ಮಾಡುವ ಆಲೋಚನೆಯಿತ್ತು. ಆತನಿಗೆ ಇನ್ನೂ ಹೆಚ್ಚು ಹಣ ಸಂಪಾದಿಸುವ ಆಲೋಚನೆ.

ಹಣಮಾಡುವ ವ್ಯಾಪಾರ ಕೂಡ ಒಂದು ರೀತಿಯ ಮಾದಕತೆಯ ಪರಿಣಾಮವುಳ್ಳದ್ದು. ಅದರ ಚಟಕ್ಕೊಳಗಾದರೆ ಅದಕ್ಕೆ ಮಿತಿಯೆ ಇರುವುದಿಲ್ಲ. ದೋರ್‌ಜಿಯವರು ಈಗಾಗಲೆ ಕೊಟ್ಯಾಂತರ ರೂಪಾಯಿ ಸಂಪಾದಿಸಿರಬಹುದು. ಆದರೂ ಅದೇ ವ್ಯಾಪಾರವನ್ನು ಮೊದಲಿನಂತೆಯೆ ಮುಂದು ವರೆಸುತ್ತಿದ್ದಾರೆ.

ನನಗೆ ಆತನ ಯೋಚನೆಯ ವಿರುದ್ಧವಾಗಿ ಹೋಗಬೇಕೆನಿಸಲಿಲ್ಲ. ಆತನ ಮಾತುಗಳನ್ನು ಬೆಂಬಲಿಸುವಂತೆ ನಾನು ಹೇಳಿದೆ – ದೋರ್‌ಜಿಯವರೆ ನೀವು ಹೇಳುವುದು ನೂರಕ್ಕೆ ನೂರರಷ್ಟು ಸರಿ. ನಾವು ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು. ನಾವು ಅವಕಾಶಗಳಿಗಾಗಿ ಕಾಯುತ್ತಾ ಕುಳಿತರೆ, ನಾವು ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ.

ನಾನು ಆಡಿದ ಈ ಮಾತುಗಳಿಂದ ಆತ ಆಕರ್ಷಿತನಾದಂತೆ ಕಂಡ. ಪ್ರಾರಂಭದಲ್ಲಿ ಏನನ್ನು ಬಾಯಿಬಿಡಲೊಪ್ಪದ ಆತ ಈಗ ಎಲ್ಲಾ ಗುಟ್ಟುಗಳನ್ನು ಒಂದೊಂದಾಗಿ ನನಗೆ ಬಿಚ್ಚತೊಡಗಿದ.

ಅಷ್ಟರಲ್ಲಿ ಒಬ್ಬ ಯುವತಿ ಕಾಫಿಯೊಂದಿಗೆ ರೂಮಿಗೆ ಬಂದಳು. ಟೇಬಲ್ಲಿನ ಮೇಲೆ ಕಾಫಿ ಟ್ರೇಯನ್ನು ನಮ್ಮ ಮುಂದೆ ಇಟ್ಟಳು. ದೋರ್‌ಜಿಯವರ ಸೂಚನೆಯಂತೆ ನಮ್ಮಿಬ್ಬರಿಗಾಗಿ ಕಾಫಿಯನ್ನು ಸಿದ್ಧಪಡಿಸಿದಳು. ನಾವು ಕಾಫಿ ಕುಡಿಯಲು ಆರಂಭಿಸಿದೆವು. ಆ ಯುವತಿ ರೂಮಿನಿಂದ ಹೊರಗಡೆ ಹೋದಳು.

ಕಾಫಿಯನ್ನು ಕುಡಿಯುತ್ತಾ ದೋರ್‌ಜಿ ಹೇಳಿದರು – ನೋಡಿ, ಈ ವ್ಯಾಪಾರವನ್ನು ಹೇಗೆ ಮಾಡಬೇಕು ಎನ್ನುವುದನ್ನು ನಿಮಗೆ ಒಂದು ಉದಾಹರಣೆಯ ಮೂಲಕ ಹೇಳುತ್ತೇನೆ. ಈ ಉದಾಹರಣೆ ನನ್ನ ಬದುಕಿಗೆ ನೇರವಾಗಿ ಸಂಬಂಧಿಸಿದೆ. ನೀವು ನಾನು ಹೇಗೆ ಇಷ್ಟೊಂದು ಶ್ರೀಮಂತನಾದೆ ಎಂದು ಕೇಳಿದಿರಿ? ನಿಮ್ಮಿಂದ ನಾನು ಯಾವುದನ್ನೂ ಬಚ್ಚಿಡಲು ಬಯಸುವುದಿಲ್ಲ. ನಿಮಗೆ ನನ್ನ ಕಠ್ಮಂಡುವಿನ ಹಳೆಯ ಜೀವನ ಎಲ್ಲವೂ ಚೆನ್ನಾಗಿ ಗೊತ್ತಿದೆ. ನನ್ನ ಜೀವನದಲ್ಲಿ ಕೆಲವು ವರ್ಷಗಳ ಹಿಂದೆ ನಡೆದ ಒಂದು ಘಟನೆ ಹೇಳಬೇಕೆನಿಸಿದೆ ಎಂದರು.

‘ಕಠ್ಮಂಡುವಿನ ಕೊಳಚೆ ಪ್ರದೇಶದಲ್ಲಿ ಸೋಮಾರಿಯಾಗಿ ಕಾಲ ಕಳೆದ ನಂತರ, ನಾನು ನನ್ನ ಮನಸ್ಸಿನ ಬೇಸರವನ್ನು ಶಮನ ಮಾಡಿಕೊಳ್ಳಲು ರೆಸ್ಟೋರೆಂಟಿಗೆ ಕುಡಿಯಲು ಹೋಗುತ್ತಿದ್ದೆ. ಆ ರೆಸ್ಟೋರೆಂಟಿನಲ್ಲಿ ನಾನು ಸ್ನೇಹಿತರನ್ನು ಸಂಪಾದಿಸಿಕೊಂಡೆ. ಒಂದು ದಿನ ಒಬ್ಬ ಜರ್ಮನ್ ಒಂದು ಚಿತ್ರವನ್ನು ಬರೆಯುತ್ತಿದ್ದುದನ್ನು ನೋಡಿದೆ. ನಾವಿಬ್ಬರೂ ಸಂಭಾಷಣೆಯಲ್ಲಿ ತೊಡಗಿದೆವು. ಬಹಳ ದೀರ್ಘ ಸಂಭಾಷಣೆಯ ನಂತರ, ನಾವಿಬ್ಬರೂ ಸ್ನೇಹಿತರಾದೆವು. ಆತ ತಾನು ತಂಗಿರುವ ಹೊಟೇಲ್ ರೂಮಿನಲ್ಲಿ ಆತ ಬರೆಯುತ್ತಿದ್ದ ಚಿತ್ರದ ವಿಚಾರವಾಗಿ ವಿವರಿಸುವುದಾಗಿ’ ಹೇಳಿದನು.



‘ನಾನು ಆತನೊಂದಿಗೆ ಹೋಟೆಲ್‌ನ ರೂಮಿಗೆ ಹೋದೆ. ಆತ ಒಂದು ದೇವರ ವಿಗ್ರಹವನ್ನು ತೋರಿಸಿದನು. ಚಿತ್ರವನ್ನು ತೋರಿಸುತ್ತಾ ಚಿತ್ರದಲ್ಲಿ ಇರುವುದು ಇಲ್ಲಿದೆ ಎಂದು ಹೇಳಿದನು. ಇವು ದೇವಸ್ಥಾನದ ಬಾಗಿಲುಗಳು. ಈ ರೀತಿಯಾಗಿ ಬಾಗಿಲುಗಳನ್ನು ಮುಚ್ಚುತ್ತಾರೆ. ದೇವಸ್ಥಾನದ ಅರ್ಚಕರು ಇಷ್ಟು ಗಂಟೆಯಿಂದ ಇಷ್ಟು ಗಂಟೆಯವರೆಗೆ ಎಲ್ಲಿರುತ್ತಾರೆ’ ಎಂದು ಎಲ್ಲವನ್ನು ವೈಜ್ಞಾನಿಕವಾಗಿ ವಿವರಿಸಿ ಬರೆದಿದ್ದ ಒಂದು ಪತ್ರವನ್ನು ನೀಡಿದನು. ಆ ವಿಗ್ರಹವನ್ನು ಕಠ್ಮಂಡುವಿಗೆ ತಂದುಕೊಟ್ಟರೆ ಐವತ್ತು ಸಾವಿರ ರೂಪಾಯಿಗಳನ್ನು ನೀಡಲಾಗುವುದು; ಅದನ್ನೆ ಜರ್ಮನಿಗೆ ತಂದುಕೊಟ್ಟರೆ ಮುನ್ನೂರು ಸಾವಿರ ರೂಪಾಯಿಗಳನ್ನು ತಕ್ಷಣ ನೀಡಲಾಗುವುದು ಎಂದು ಹೇಳಿದನು.

‘ಜೇಬಿನಲ್ಲಿ ಐವತ್ತು ರೂಪಾಯಿಗಳೂ ಇಲ್ಲದ ನಾನು, ದೇವಾಲಯದ ಸುತ್ತಾ ಹುಡುಕಾಡಲು ಪ್ರಾರಂಭ ಮಾಡಿದೆ. ಅನೇಕ ದಿನಗಳ ಶ್ರಮದ ನಂತರ ವಿಗ್ರಹ ನನ್ನ ರೂಮನ್ನು ಪ್ರವೇಶ ಮಾಡಿತು. ನನಗೆ ಸಹಾಯ ಮಾಡಿದ ಒಬ್ಬ ವ್ಯಕ್ತಿಗೆ ಒಂದು ಸಾವಿರ ರೂಪಾಯಿಗಳನ್ನು ಪಾವತಿಸಿದೆ. ಜರ್ಮನಿಯವನು ನಮ್ಮ ಒಪ್ಪಂದದ ಪ್ರಕಾರ ದುಡ್ಡನ್ನು ಪಾವತಿಸಿದನು. ನಾನು ಆಗ ನನ್ನ ವ್ಯವಹಾರವನ್ನು ಪ್ರಾರಂಭ ಮಾಡಿದೆ. ಇದೇ ಉದ್ದೇಶಕ್ಕಾಗಿ ನಾನು ಆಮೇಲೆ ಜರ್ಮನಿಗೆ ಹೋದೆ. ಅಲ್ಲಿ ಒಬ್ಬ ಜರ್ಮನಿ ಸ್ನೇಹಿತನ ಮನೆಯಲ್ಲಿ ಇದೇ ವಿಗ್ರಹ ಆತನ ಮನೆಯ ಅಲಂಕಾರದ ಪ್ರಮುಖ ವಸ್ತುವಾಗಿ ಇರುವುದಾಗಿ ತಿಳಿಯಿತು. ಆ ವಿಗ್ರಹದ ಬಗ್ಗೆ ಆತನೊಂದಿಗೆ ಚರ್ಚಿಸಿದೆನು. ಆ ವಿಗ್ರಹವನ್ನು ಒಬ್ಬ ಫ್ರೆಂಚ್ ಒಂದು ನೂರು ಸಾವಿರ ಡಚ್ ಮಾರ್ಕ್ಸ್‌ಗಳಿಗೆ ಮಾರಿರುವುದಾಗಿ ತಿಳಿಯಿತು. ಆ ವಿಗ್ರಹವನ್ನು ಯಾರಾದರೊಬ್ಬರು ಖರೀದಿಸುವುದಾದರೆ ಎಷ್ಟು ನಿರೀಕ್ಷಿಸುತ್ತೀರಿ ಎಂದು ಆತನನ್ನು ಕೇಳಿದೆ. ಆತ ಆರುನೂರು ಸಾವಿರ ಡಚ್ ಮಾರ್ಕ್ಸ್‌ಗಳಿಗೆ ಮಾರುವುದಾಗಿ ಹೇಳಿದನು. ನಾನು ನ್ಯೂಯಾರ್ಕಿಗೆ ಹೋದೆ, ನೂಯಾರ್ಕಿನಲ್ಲಿ ಅದೇ ವಿಗ್ರಹಕ್ಕೆ ಅಮೆರಿಕಾದ ಅರ್ಧಮಿಲಿಯನ್ ಡಾಲರ್‌ಗೆ ವ್ಯಾಪಾರ ಕುದುರಿಸಿದೆ. ಆಮೇಲೆ ಆ ವಿಗ್ರಹವನ್ನು ನ್ಯೂಯಾರ್ಕ್‌ಗೆ ತೆಗೆದುಕೊಂಡು ಹೋಗಿ ಅಮೆರಿಕಾದ ಅರ್ಧಮಿಲಿಯನ್ ಡಾಲರ್‌ಗಳಿಗೆ ಮಾರಾಟ ಮಾಡಿದೆ. ಈಗ ಹೇಳು, ಈ ವ್ಯಾಪಾರಕ್ಕೆ ಏನಾದರೂ ಮಿತಿಯಿದೆಯೆ? ಅದೇ ವಿಗ್ರಹವನ್ನು ಇನ್ನು ಹೆಚ್ಚಿಗೆ ಲಾಭಕ್ಕೆ ಮಾರಾಟಮಾಡುವ ಸಾಧ್ಯತೆಯಿತ್ತು. ಒಂದು ಸಾವಿರ ರೂಪಾಯಿಗಳ ಬೆಲೆಯನ್ನು ತರಬಹುದಾದ ಅದೇ ವಿಗ್ರಹವನ್ನು, ನಾನು ಎರಡು ಬಾರಿ ಮಾರಾಟ ಮಾಡಿದೆ. ಪ್ರತಿಸಾರಿಯೂ ನಾನು ಹೆಚ್ಚಿನ ಲಾಭವನ್ನು ಸಂಪಾದಿಸಿದೆ. ನಿಜ ಹೇಳಬೇಕೆಂದರೆ ಅದೇ ವಿಗ್ರಹ ನನ್ನ ಬದುಕಿನ ದಿಕ್ಕನ್ನೇ ಬದಲಿಸಿತು ಮತ್ತು ಸರಿಯಾದ ದಾರಿಗೆ ದೂಡಿತು ಎನ್ನಬಹುದು’ ಎಂದರು.

'ಬಹುಶಃ ನಾನು ಹೇಳುವುದನ್ನು ನೀನು ನಂಬದೆ ಹೋಗಬಹುದು'. ನಮಗೆ ಎಲ್ಲ ರೀತಿಯ ಸಹಕಾರ ಸಿಕ್ಕಿತು. ಕಠ್ಮಂಡುವಿನ ಪ್ರಮುಖರೆನಿಸಿಕೊಂಡವರೂ ಈ ಕಾನೂನು ಬಾಹಿರ ಕೆಲಸದಲ್ಲಿ ಸಹಕಾರಿಯಾದರು. ಈ ವ್ಯಾಪಾರದಲ್ಲಿ ಅದೃಷ್ಟವೇ ಕುದುರುತ್ತದೆ; ನೀವು ಗಳಿಸುವ ಹಣದಿಂದ ಗೌರವ ಹೆಚ್ಚುತ್ತದೆ! ಯೋಚಿಸು ಈ ಅವಕಾಶವನ್ನು ಕಠ್ಮಂಡುವಿನಲ್ಲಿ ಉಪಯೋಗಿಸಿಕೊ. ಹೊಳೆಯುವ ಕಾರುಗಳಲ್ಲಿ ಹೋಗುವವರ ಕಣ್ಣುಗಳಲ್ಲಿ ಕಾನೂನುಬಾಹಿರ ವ್ಯವಹಾರ ಮಿಂಚುತ್ತಿರುತ್ತದೆ ಕೂಡ. ಕೆಲವರು ಸಣ್ಣ ಪ್ರಮಾಣದಲ್ಲಿ ಮಾಡಿದರೆ ಕೆಲವರು ದೊಡ್ಡ ಪ್ರಮಾಣದಲ್ಲಿ ನಡೆಸುತ್ತಾರೆ. ವ್ಯತ್ಯಾಸ ಮಾತ್ರ ಇಷ್ಟೆ'.

ಆತ ಮಾತನಾಡುತ್ತಲೇ ಇದ್ದ, ಇಂಟರ್‌ಕಾಮಿನ ಶಬ್ದವಾಯಿತು. ಫೋನನ್ನು ತೆಗೆದುಕೊಂಡು 'ಹಲೋ!,..... ಬಾಬು ಸಾಹೇಬ್!...... ಒಳಗೆ ಕಳುಹಿಸಿ', ದೋರ್‌ಜಿಯವರು ರಿಸೀವರನ್ನು ಇಡುವ ಮುನ್ನವೆ ಒಬ್ಬ ವ್ಯಕ್ತಿ ರೂಮಿಗೆ ಆಗಮಿಸಿದನು.

'ಸುಸ್ವಾಗತ! ಬಾಬು ಸಾಹೇಬ್ ಸುಸ್ವಾಗತ! ಎಂದು ದೋರ್‌ಜಿ ಆ ವ್ಯಕ್ತಿಯನ್ನು ಸ್ವಾಗತಿಸುತ್ತಾ ಹೇಳಿದ, 'ನಾವು ಬಹಳ ವರ್ಷಗಳ ನಂತರ ಒಬ್ಬರನೊಬ್ಬರು ಭೇಟಿ ಯಾಗುತ್ತಿದ್ದೇವೆ ಸಾರ್' ಎಂದರು.

ಆ ವ್ಯಕ್ತಿ ನನ್ನ ಎದುರಿಗಿನ ಸೋಫಾದಲ್ಲಿ ಕುಳಿತು ನನ್ನನ್ನೇ ನೋಡತೊಡಗಿದನು. ನನಗೆ ಚೆನ್ನಾಗಿ ಗೊತ್ತು ನಾನು ಆತನಿಗೆ ಪರಿಚಯವಿಲ್ಲ ಎನ್ನುವುದು. ಆದರೆ ಆತ ನನಗೆ ಗೊತ್ತು, ಆತ ಒಬ್ಬ ಜನಪ್ರಿಯ ಸಮಾಜ ಸೇವಕ. ಬಾಬು ಸಾಹೇಬ್ ಪಶ್ಚಿಮ ನೇಪಾಳದಲೆಲ್ಲಾ ಮನೆಮಾತಾಗಿದ್ದ ವ್ಯಕ್ತಿ. ಕಠ್ಮಂಡುವಿನಲ್ಲಿ ಆತ ಅನೇಕ ಜನರಿಗೆ ಪರಿಚಯವಿದ್ದಂತೆ, ಯಾವುದೇ ಸಮಾಜ ಸೇವೆಯನ್ನು ಮಾಡಿದ್ದ ನೆನಪಿಲ್ಲ. ನನಗೆ ಆತನ ಬಗ್ಗೆ ಗೌರವವಿತ್ತು. ಆತನನ್ನು ಹೊಗಳುತ್ತಿದ್ದೆ. ಆದರೆ ಆತನನ್ನು ಇಲ್ಲಿ ಕಂಡು ಒಂದು ರೀತಿಯ ಕಸಿವಿಸಿಗೊಂಡೆ, ಗಾಬರಿಗೊಂಡೆ.

ಬಾಬು ಸಾಹೇಬರಿಗೆ ನನ್ನನ್ನು ಪರಿಚಯಿಸುತ್ತಾ ದೋರ್‌ಜಿ ಹೇಳಿದರು – 'ಈತ ನನ್ನ ಹಳೆಯ ಸ್ನೇಹಿತ'. ಈತನು ನನ್ನ ಜೊತೆ ಕೆಲಸ ಮಾಡಲು ಒಪ್ಪಿದ್ದಾನೆ. ಸಾಹೇಬರನ್ನು ನನಗೆ ಪರಿಚಯಿಸುತ್ತಾ ದೋರ್‌ಜಿ ಅವರು ಹೇಳಿದರು – ಬಾಬು ಸಾಹೇಬರು ನಮ್ಮ ಪೋಷಕರೆಂದು ಹೇಳಬಹುದು, ಇವರ ಸಹಾಯದಿಂದ ನಮ್ಮ ಕೆಲಸ ಸುಲಭ ಸಾಧ್ಯವಾಯಿತು. ಮತ್ತು ಇವರ ಉದಾರ ಸಹಾಯದಿಂದ ನಾನು ಈ ದೇಶದ ಪ್ರಜೆಯಾಗುವ ಗೌರವವೂ ದೊರೆಯಿತು ಎನ್ನುವ ವಿಷಯವನ್ನು ಹೇಳಲೇಬೇಕು!

ದೋರ್‌ಜಿಯವರ ಮುಕ್ತ ಹಾಗೂ ನೇರ ಮಾತುಗಳು ಬಾಬು ಸಾಹೇಬರನ್ನು ಒಂದು ರೀತಿಯ ಇಕ್ಕಟ್ಟಿಗೆ ಸಿಕ್ಕಿಸಿತು. ಅವರು ತನ್ನ ನಾಚಿಕೊಂಡ ಮುಖದಲ್ಲಿ



ಉಲ್ಲಾಸವನ್ನು ಪ್ರದರ್ಶಿಸಲು ಪ್ರಯತ್ನಿಸುತ್ತಾ, ಹೇಳಿದರು – 'ಓ, ಇಲ್ಲ ದೋರ್‌ಜಿ ಅವರೆ, ನಾನು ನಿಮಗೆ ಒಂದು ಪ್ರಶ್ನೆ ಕೇಳುತ್ತೇನೆ, ಹಿಮಾಲಯ ಪರ್ವತ ಪ್ರದೇಶದಲ್ಲಿ ಹುಟ್ಟಿದ ಯಾರೊಬ್ಬರಿಗಾದರು ಈ ದೇಶದ ಪೌರತ್ವ ಪಡೆಯಲು ಅದು ಹೇಗೆ ಕಷ್ಟವಾಗುತ್ತದೆ? ಆಶ್ಚರ್ಯವಲ್ಲವೆ! ಅದು ಈ ದೇಶದ ಪ್ರಜೆಯಾಗುವುದು ಅವರ ಆಜನ್ಮಸಿದ್ಧ ಹಕ್ಕಾಗಿದೆ' ಎಂದರು.

ಬಾಬು ಸಾಹೇಬ್ ದೋರ್‌ಜಿ ಅವರ ಜೊತೆಯಲ್ಲಿ ನನ್ನೆದುರಿಗೆ ಮಾತನಾಡಲು ಇಚ್ಛಿಸಲಿಲ್ಲ. ದೋರ್‌ಜಿ ಅವರ ಜೊತೆಯಲ್ಲಿ ಗುಪ್ತವಾಗಿ ಮಾತನಾಡುವ ಉದ್ದೇಶವನ್ನು ಆತ ವ್ಯಕ್ತಪಡಿಸಿದನು. ದೋರ್‌ಜಿ ಅವರು ನನ್ನನ್ನು ಸ್ವಲ್ಪ ಸಮಯ ಕಾಯುವಂತೆ ಹೇಳಿ ಅವರಿಬ್ಬರು ಒಂದು ಪ್ರತ್ಯೇಕವಾದ ಕೊಠಡಿಗೆ ಹೋದರು. ಹದಿನೈದು ನಿಮಿಷಗಳ ನಂತರ ದೋರ್‌ಜಿ ಹೊರಬಂದು ಹೇಳಿದರು 'ಬಾಬುಸಾಹೇಬ ಹೊರಟುಹೋದರು' ಎಂದು. ಈ ಜನಗಳ ಬಾಕಿಯನ್ನು ಉಳಿಸಿಕೊಳ್ಳುವುದು ಒಂದು ರೀತಿಯ ಕಷ್ಟದ ಕೆಲಸ. ಹೇಡಿಗಳಂತೆ ಕೆಲಸ ಮಾಡುತ್ತಾರೆ. ಆದರೆ ಸಿಂಹಪಾಲನ್ನು ನಿರೀಕ್ಷಿಸುತ್ತಾರೆ ಎಂದರು.

ಆತನ ಮಾತಿನ ಅರ್ಥ ನನಗಾಗಲಿಲ್ಲ. ಮತ್ತು ಆತನನ್ನು ಕೇಳುವುದೂ ಕೂಡ ವ್ಯರ್ಥಪ್ರಯತ್ನ ಅಂದುಕೊಂಡೆ. ನನಗೆ ಬಾಬುಸಾಹೇಬನ ವ್ಯವಹಾರವನ್ನು ತಿಳಿಯ ಬೇಕೆನ್ನುವ ಯಾವ ಉದ್ದೇಶವೂ ಇರಲಿಲ್ಲ. ಆದ್ದರಿಂದ ನಾನು ಸುಮ್ಮನಿದ್ದೆ.

ದೋರ್‌ಜಿ ಮುಂದುವರೆದು ಹೇಳಿದರು – 'ನಾನು ಕಠ್ಮಂಡುವಿನಲ್ಲಿ ಒಂದು ವಾರದ ಕೆಲವು ದಿನಗಳ ತಂಗುವಿಕೆಗಾಗಿ ಬಂದಾಗ, ನಾನು ಕಡಿಮೆಯೆಂದರೂ ಮೂರರಿಂದ ನಾಲ್ಕು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ, ಉಡುಗೊರೆಯಾಗಿ ಜನರಿಗೆ ವಿತರಣೆ ಮಾಡಲು ಖರ್ಚು ಮಾಡಬೇಕಾಗುತ್ತದೆ. ಆದರೆ ನನಗೆ ಸಮಾಧಾನವಿದೆ, ತೃಪ್ತಿಯಿದೆ, ಅವರು ನಮ್ಮ ದುಡ್ಡಿಗೆ ತಕ್ಕ ಸೇವೆ ಮಾಡುತ್ತಾರೆ'.

ನಾನು ಆತನಿಗೆ ಪ್ರೇರಣೆ ನೀಡುವಂತೆ ಹೇಳಿದೆ – 'ಇತರರಿಗೆ ಸಹಾಯ ಮಾಡುವುದು ಒಳ್ಳೆಯದು. ಅದು ಅಲ್ಲದೆ ನೀವು ಅವರಿಗೆ ಅಷ್ಟೊಂದು ಸಹಾಯ ಮಾಡಿದಾಗ, ಅವರು ನಿಮ್ಮ ವಿಷಯದಲ್ಲಿ ಪ್ರಾಮಾಣಿಕವಾಗಿರಬೇಕಾದದ್ದು ಮುಖ್ಯ' ಎಂದೆ.

ನಾನು ಮಾತು ಮುಗಿಸುವ ಮುನ್ನ ನನ್ನ ಮಾತುಗಳನ್ನು ಸಮ್ಮತಿಸುತ್ತಾ ಆತ ಹೇಳಿದ – 'ನೀವು ಹೇಳುವುದು ಸರಿ. ಇಲ್ಲಿಯ ಜನ ಬಹಳ ಮುಗ್ಧ ಹಾಗೂ ಸರಳ ಸ್ವಭಾವದವರು. ನೀವು ಅವರಿಗೆ ಒಂದ್ಹೊತ್ತು ಊಟ ಕೊಟ್ಟರೆ, ಇಡೀ ದಿವಸ ನಿಮಗೆ ನಮಸ್ಕಾರ ಮಾಡುತ್ತಿರುತ್ತಾರೆ. ಅವರಿಗೆ ನೀವು ಊಟವನ್ನು ಕೊಟ್ಟು ಹಣವನ್ನೂ ನೀಡಿದರೆ ಅವರು ನಿಮ್ಮನ್ನು ಅವರ ಪೋಷಕರಂತೆ

ಗೌರವಿಸುತ್ತಾರೆ. ಅದೂ ಅಲ್ಲದೆ ಒಬ್ಬ ಯಜಮಾನನಿಗೆ ತನ್ನ ನಾಯಿಯಂತೆ ಸ್ವಾಮಿನಿಷ್ಠೆಯುಳ್ಳವರಾಗಿರುತ್ತಾರೆ’.

ದೋರ್‌ಜಿಯವರ ಕೊನೆಯ ಮಾತುಗಳು ಆಕ್ಷೇಪಣೀಯ ಹಾಗೂ ಒಪ್ಪಲು ನನ್ನಿಂದ ಸಾಧ್ಯವಾಗಲಿಲ್ಲ. ನನ್ನ ಮನಸ್ಸು ಮತ್ತು ಅಂತರಂಗಕ್ಕೆ ನೋವಾಯಿತು, ನನ್ನ ಅಂತರಾತ್ಮ ದೋರ್‌ಜಿಯವರ ಮೇಲೆ ತಿರುಗಿ ಬೀಳುವಂತಾಯಿತು. ಆದರೆ ನಾವಿಬ್ಬರೆ ಕುಳಿತಿರುವ ರೂಮಿನಲ್ಲಿ ವಿರೋಧಿಸುವುದು ಮತ್ತು ಆ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಕೇವಲ ಭ್ರಮೆ! ಎಂದು ಭಾವಿಸಿ, ಸಮಾಧಾನದಿಂದ ಹೇಳಿದೆ – ‘ಮಿ–ದೋರಜಿ ನೀವು ನನ್ನನ್ನು ಕ್ಷಮಿಸುತ್ತೀರಾ! ನೀವು ನೇಪಾಳದಲ್ಲಿ ವಾಸಿಸುತ್ತಾ, ಹಾಗೂ ಒಬ್ಬ ನೇಪಾಳಿಯಾಗಿ ಜಗತ್ತಿಗೆ ಪರಿಚಿತರಾಗಿ, ಈ ದೇಶದ ಜನರನ್ನು ಇಷ್ಟು ಕೆಳಮಟ್ಟದಲ್ಲಿ ಕಾಣುವುದು ಹೇಗೆ? ನನಗೆ ಅರ್ಥವಾಗುತ್ತಿಲ್ಲಾ!’

‘ಇಲ್ಲ, ನೀವು ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ’ ಎಂದು ಆತ ಉತ್ತರಿಸುತ್ತಾ ಹೇಳಿದ– ‘ನಾನು ಈ ದೇಶದ ಜನರನ್ನು ಕಡೆಗಣಿಸಲಿಲ್ಲ. ಈ ದೇಶದ ಪ್ರಜೆಗಳ ಪ್ರಾಮಾಣಿಕತೆಯನ್ನು ಮಾತ್ರ ಉದಾಹರಿಸಿದೆ ಅಷ್ಟೆ. ನನ್ನ ಉದ್ದೇಶ ಏನೆಂದರೆ ಈ ದೇಶದ ಜನ ತುಂಬಾ ಪ್ರಾಮಾಣಿಕರು ಎನ್ನುವುದು ಅಷ್ಟೆ. ಈ ವಿಷಯವನ್ನು ಬಿಟ್ಟು, ವ್ಯಾಪಾರದ ವಿಚಾರ ಮಾತನಾಡೋಣ’ ಎಂದರು.

ದೋರ್‌ಜಿ ಅವರು ನನ್ನ ಭಾವನೆಗಳನ್ನು ಗ್ರಹಿಸಿದಂತೆ ಕಂಡು ನಮ್ಮ ಸಂಭಾಷಣೆಯ ವಿಷಯವನ್ನು ಬದಲಿಸಲು ಪ್ರಯತ್ನಪಟ್ಟರು.

ನನಗೂ ಕೂಡ ನಾನು ನಂಬದ ಮತ್ತು ನನಗೆ ಗೊತ್ತಿರದ ವಿಷಯ ಕುರಿತು ವಾದ ಮಾಡುವುದು ಅರ್ಥಹೀನವಾದುದು ಎಂದು ಪರಿಭಾವಿಸಿದೆನು. ಆತ ಗಳಿಸಿದ ಅನುಭವ ಗಳೇನಿದ್ದವೋ ಅವನದೇ ರೀತಿಯಲ್ಲಿ ನೇರವಾಗಿ ಹೇಳಿಕೊಂಡನು. ಇಂಥ ಜವಾಬ್ದಾರಿಯಿಲ್ಲದ ಜನರಿಂದ ಕೂಡಿದ ಸಮಾಜದಲ್ಲಿ ಒಬ್ಬರು ಮತ್ತೊಬ್ಬರನ್ನು ಪ್ರತಿನಿಧಿಸುತ್ತಾರೆ ಎಂದು ಹೇಳಲು ಬರುವುದಿಲ್ಲ. ಪ್ರತಿಯೊಬ್ಬರೂ ಅವರದೇ ತಾಳಕ್ಕೆ ತಕ್ಕಂತೆ ಗೊತ್ತಿದ್ದೋ, ಗೊತ್ತಿಲ್ಲದೆಯೊ, ಉದ್ದೇಶಪೂರ್ವಕವಾಗಿಯೋ ಅಥವಾ ಉದ್ದೇಶ ವಿಲ್ಲದೆಯೋ, ಕುಣಿಯುತ್ತಾರೆ.

ದೋರ್‌ಜಿ ಏನು ಹೇಳುತ್ತಿದ್ದಾರೆ ಎನ್ನುವುದರಲ್ಲಿ ನನಗೆ ಆಸಕ್ತಿಯಿರಲಿಲ್ಲ. ಆದರೂ ಆತ ತನ್ನ ಮಾತನ್ನು ಮುಂದುವರೆಸಿ ಹೇಳುತ್ತಲೆ ಇದ್ದ – ‘ನೀವು ಯೋಚನೆ ಮಾಡಿ ಸರಿಯಾದ ವಿಚಾರಗಳನ್ನು ಗ್ರಹಿಸಲು ಪ್ರಯತ್ನಮಾಡಿ. ನಮ್ಮ ವ್ಯಾಪಾರ ಮಾರ್ವಾಡಿಯವರ ವ್ಯಾಪಾರದ ಥರ ಅಲ್ಲ, ಅವರು ಈ ದೇಶವನ್ನು ದಿವಾಳಿಗೆ ತಳ್ಳುತ್ತಿದ್ದಾರೆ. ನಾವು ಕೃತಕ ಅಭಾವವನ್ನು ಸೃಷ್ಟಿಸುವುದಾಗಲಿ ಅಥವಾ ಮಾರುಕಟ್ಟೆಯ ಬೆಲೆಯನ್ನು ಬದಲಾಯಿಸು ವುದಾಗಲಿ ಮಾಡುವುದಿಲ್ಲ. ಐದು ಪರ್ಸೆಂಟ್‌ಗೆ ಆಮದು ಪರವಾನಗಿಯನ್ನು ಪಡೆದು ನೂರು ಪರ್ಸೆಂಟ್ ಲಾಭ



ಮಾಡಲು ಸಾಮಾನ್ಯ ಜನರನ್ನು ಹಿಂಸಿಸುವುದಿಲ್ಲ’ ಆತ ಮುಂದುವರೆದು ಹೇಳಿದ ನಾವು ದೇಶದ ಖಜಾನೆಗೆ ನಷ್ಟವಾಡುವುದಿಲ್ಲ, ನಮ್ಮ ವ್ಯಾಪಾರ ನ್ಯಾಯಯುತವಾದುದು. ನಾವು, ಬೆಟ್ಟದ ಕಾಡಿನಲ್ಲಿ ಬೆಳೆಯುವ ಉಪಯುಕ್ತವಲ್ಲದ ಹುಲ್ಲು ಮತ್ತು ಗಿಡ ಮರಗಳನ್ನು ಉಪಯುಕ್ತವಾಗಿ ಮಾಡುತ್ತೇವೆ. ಉಪಯುಕ್ತವಲ್ಲದ ಮತ್ತು ಬೆಲೆಯಿಲ್ಲದ ವಸ್ತುಗಳ ಮೇಲೆ ಪ್ರತಿಯೊಬ್ಬರು ಲಾಭ ಮಾಡುವ ರೀತಿಯಲ್ಲಿ ಬೆಲೆಯನ್ನು ನಿಗದಿಪಡಿಸುತ್ತೇವೆ. ಯಾರು ಈ ದಾರಿಯಲ್ಲಿ ಹೋಗುತ್ತಾರೋ, ಅವರು ಲಾಭವನ್ನು ಮಾಡುತ್ತಾರೆ ಲಾಭವನ್ನು ಮಾತ್ರ ಮಾಡುತ್ತಾರೆ.

ಆತನ ವ್ಯಾಪಾರವನ್ನು ಬೇರೆಯವರಿಗೆ ಹೋಲಿಸುತ್ತಾ ದೋರ್‌ಜಿ ಮುಂದುವರಿದು ಹೇಳಿದರು – ನೋಡಿ ನಾವು ಈ ದೇಶಕ್ಕೆ ತೊಂದರೆಯಾಗುವಂತಹ ವ್ಯಾಪಾರವನ್ನು ಮಾಡುವುದಿಲ್ಲ! ನಾವು ಹಣದ ಆಸೆಗಾಗಿ ಕಣ್ಣುಮುಚ್ಚಿ ಸಹಿಹಾಕಿ ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಮರೆತು ಈ ದೇಶಕ್ಕೆ ಯಾವ ಕಾರಣದಿಂದಲೂ ಮೋಸಮಾಡುವುದಿಲ್ಲ. ನೋಡಿ ಈ ದೇಶದ ಜನಪ್ರತಿನಿಧಿಗಳು ಎನ್ನಿಸಿಕೊಂಡಿರುವವರು ಮಾಡುವಂತೆ, ನಾವು ಬಾಯಿಗೆ ಜೇನನ್ನು ಮೆತ್ತಿ ಜೇಬಿಗೆ ಚಾಕು ಹಾಕುವುದಿಲ್ಲ, ನಮ್ಮ ವ್ಯಾಪಾರ ನೇರವಾದದು. ಆದ್ದರಿಂದ ನಮ್ಮಂತೆ ಈ ವ್ಯಾಪಾರಕ್ಕೆ ಬರಲು ಯಾರೊಬ್ಬರು ಹಿಂಜರಿಯಲು ಯಾವುದೇ ಕಾರಣವಿಲ್ಲ?

ನನಗೆ ಈಗ ಸ್ಪಷ್ಟವಾಯಿತು. ದೋರ್‌ಜಿಯವರು ಈ ರೀತಿ ಯೋಚಿಸಿ ಅದರಂತೆ ನಡೆದುಕೊಂಡದ್ದು ಯಾಕೆ ಎನ್ನುವುದು. ಆತ ಎಲ್ಲವನ್ನು ನೇರವಾಗಿ ಮತ್ತು ನಿರ್ಭಯವಾಗಿ ಹೇಳಿದರು.

ಆತ ತನ್ನ ಕೆಲಸದಲ್ಲಿ ಪೂರ್ಣ ಸಮಾಧಾನಗೊಂಡಂತೆ ಇತ್ತು. ಆತ ತನ್ನ ವ್ಯಾಪಾರವೇ ಇತರೆಯವರ ವ್ಯವಹಾರಕ್ಕಿಂತ ನಿಜವಾದುದು ಎಂದು ಜಂಭದಿಂದ ಹೇಳಿಕೊಳ್ಳುತ್ತಿದ್ದಂತೆ ಕಂಡಿತು. ಇನ್ನು ಈ ವಿಚಾರವಾಗಿ ಆತನನ್ನು ಪ್ರಶ್ನಿಸುವುದು ಅರ್ಥವಿಲ್ಲದ ವಿಚಾರವೆಂದು ನನಗನ್ನಿಸಿತು. ಆದ್ದರಿಂದ ಸುಮ್ಮನೆ ಆತನ ಮಾತುಗಳನ್ನು ಕೇಳುತ್ತಾ ಹೋದೆ.

ಆತ ಹೇಳುತ್ತಾ ಹೋದ – ‘ಇಲ್ಲಿಯ ಜನರಿಗೆ ಧೈರ್ಯ ಕಡಿಮೆ ಅಥವಾ ಬುದ್ಧಿಯಿಲ್ಲವೆಂದು ಹೇಳಬಹುದು. ಆದುದರಿಂದಲೇ ನಾನು ಈ ಸಂದರ್ಭವನ್ನು ಬಳಸಿಕೊಂಡೆ. ‘ದುಕ್ಪಾ’ ಹೋಗಿ ‘ದೋರ್‌ಜಿ’ ಆದೆ ಎನ್ನುವುದನ್ನು ಹೇಳಲೇಬೇಕು. ಕೆಲವೆ ವರ್ಷಗಳ ಅಂತರದಲ್ಲಿ ನಾನು ಇಷ್ಟೊಂದು ಪ್ರಗತಿಯನ್ನು ಸಂಪಾದಿಸಿದೆ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಈ ಸಂದರ್ಭ ಅವಶ್ಯಕ ಹಾಗೂ ಫಲಪ್ರದ. ಆದ್ದರಿಂದ ಬೇರೆಯವರಿಗೂ ನನ್ನಂತೆಯೆ ಪ್ರಗತಿಯನ್ನು ಸಾಧಿಸಬೇಕೆಂಬುದೆ ನನ್ನ ಹಾರೈಕೆ. ಕೆಲವು ಉನ್ನತ ವ್ಯಕ್ತಿಗಳು ಈಗಾಗಲೇ ಈ ರೀತಿಯ ವ್ಯವಹಾರದಲ್ಲಿ ತೊಡಗಿದ್ದಾರೆ. ಆದುದರಿಂದಲೆ ನಾನು ನಿಮಗೆ ಹೇಳುವುದು ಕಣ್ಣು ಮುಚ್ಚಿಕೊಂಡು ಬಂದು ನನ್ನ

ವ್ಯಾಪಾರದಲ್ಲಿ ಸೇರಿಕೊಳ್ಳಿ' ಎಂದು.

ನಾನು ವಿಚಲಿತನಾಗದೆ ಆತನ ಮಾತುಗಳನ್ನು ಕೇಳಿದೆ. ನಾನು ಆತನನ್ನು ವಿರೋಧಿಸುವ ಸ್ಥಿತಿಯಲ್ಲಿರಲಿಲ್ಲ. ಅಥವಾ ಆತನ ಕೋರಿಕೆಯನ್ನು ಒಪ್ಪುವ ಸ್ಥಿತಿಯಲ್ಲಿಯೂ ಇರಲಿಲ್ಲ. ಆತ ಎಷ್ಟೇ ನೇರವಾಗಿ ಹಾಗೂ ಧೈರ್ಯವಾಗಿ ಹೇಳಿದರೂ ಆತನ ವ್ಯಾಪಾರ ಖಂಡಿತಾ ಕಾನೂನು ಬಾಹಿರವಾದುದು. ಇದನ್ನು ಆತನಿಗೆ ಸ್ಪಷ್ಟಪಡಿಸಲು, ವಿನಯವಾಗಿ ಹೇಳಿದೆ– 'ಮಿಸ್ಟರ್ ದೋರ್‌ಜಿ ನೀವು ಯಾವ ವ್ಯಾಪಾರದಲ್ಲಿ ನನ್ನನ್ನು ಸೇರಿಕೊ ಎಂದು ಹೇಳುತ್ತಿದ್ದೀರೊ ಅದು ನಿಜವಾಗಿಯೂ ಈ ದೇಶದ ಕಾನೂನಿಗೆ ವಿರುದ್ಧವಾದದು. ಆದ್ದರಿಂದ ನನಗೆ ಇದರಲ್ಲಿ ಭಾಗಿಯಾಗುವುದು ಕಷ್ಟವಾಗುತ್ತದೆ. ದಯಮಾಡಿ ಕ್ಷಮಿಸಿ, ಅದೂ ಅಲ್ಲದೆ ಕಾನೂನಿನ ಬಲೆಯ ಹಿಡಿತದಿಂದ ತಪ್ಪಿಸಿಕೊಳ್ಳುವುದು ಎಲ್ಲಾ ಸಮಯದಲ್ಲಿಯೂ ಸಾಧ್ಯವಾಗುವುದಿಲ್ಲ' ಎಂದು ಹೇಳಿದೆ.

ಮಾತಿನ ಮಧ್ಯೆ ಆತ ಹೇಳಿದ – ಈ ವ್ಯಾಪಾರದಲ್ಲಿ ತೊಡಗಿರುವ ಯಾರಾದರೂ ಎಲ್ಲಿ? ಯಾವಾಗ? ಜಾರಿಯಲ್ಲಿರುವ ಕಾನೂನಿನ ಬಲೆಯಲ್ಲಿ ಸಿಕ್ಕಿಬಿದ್ದಿರುವುದನ್ನು ದಯಮಾಡಿ ಹೇಳುತ್ತೀರಾ? ಎಂದು ಪ್ರಶ್ನಿಸಿದರು.

'ನಾನು ಕೆಲವು ಬಾರಿ ದಿನಪತ್ರಿಕೆಗಳಲ್ಲಿ ಓದಿದ್ದೇನೆ' ಎಂದೆ.

'ಕಾನೂನಿನ ಬಲೆಯಲ್ಲಿ ಸಿಕ್ಕಿಬಿದ್ದವರು ನನ್ನಂಥ ಜನರು ಎಂದು ಭಾವಿಸುತ್ತೀರಾ?' ಕೇಳಿದರು.

'ಅದನ್ನು ನಾನು ಹೇಳಲಾರೆ'.

'ಹಾಗಾದರೆ? ನೋಡಿ, ಅವರೆಲ್ಲ ಸಾಮಾನ್ಯ ಕೆಲಸಗಾರರು. ಅವರನ್ನು ನಾವು ಒಂದು ಅಥವಾ ಎರಡು ವಾರದೊಳಗೆ ಕಾನೂನಿನ ಬಲೆಯಿಂದ ಬಿಡಿಸಿಕೊಳ್ಳುತ್ತೇವೆ. ಕೆಲವೊಮ್ಮೆ ಇದೆಲ್ಲ ನಾಟಕ. ಅವರ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ ಎಂದು ತೋರಿಸಲು ಇದು ಒಂದು ರೀತಿಯ ಆಕ್ಟಿಂಗ್.... ಜನರ ಕಣ್ಣಿಗೆ ಮಣ್ಣೆರೆಚುವ ಕ್ರಿಯೆ. ಕಾನೂನು ಪಾಲಕರು ಅವರ ಕೆಲಸವನ್ನೂ ಸರಿಯಾಗಿ ಮಾಡುತ್ತಿದ್ದಾರೆ ಎಂದು ತೋರಿಸಲು'. ಮಾತು ಮುಂದುವರಿಸಿ ಹೇಳಿದ 'ಕೆಲವರು ಈ ಕೆಲಸದಲ್ಲಿ ಚುರುಕಾಗಿ ಇರಬೇಕಾದವರು, ಕಾನೂನು ಬಲೆಯಲ್ಲಿ ಸಿಕ್ಕಿಕೊಂಡವರು ಜೈಲಿನಲ್ಲಿ ಕೊಳೆಯುತ್ತಿದ್ದಾರೆ ಮತ್ತು ಚಿಂತಿಸುತ್ತಾ ಕುಳಿತಿದ್ದಾರೆ. ಆದರೆ ನಿಜವಾಗಿಯೂ ಈ ಕೆಲಸದಲ್ಲಿ ನಿರತ ರಾಗಿರುವವರು ಯಾವ ಕಾರಣಕ್ಕೂ ಕಾನೂನಿನ ಬಲೆಯಲ್ಲಿ ಸಿಕ್ಕಿಕೊಳ್ಳುವುದಿಲ್ಲ. ನಾನು ಬೇಕಾದರೆ ಈ ವಿಚಾರವಾಗಿ ಚಾಲೆಂಜ್ ಮಾಡುತ್ತೇನೆ ಮತ್ತು ಪಣ ತೊಡುತ್ತೇನೆ'

ದೋರ್‌ಜಿ ಮತ್ತೆ ಸೇರಿಸಿದರು – 'ನಮ್ಮ ಗ್ಯಾಂಗಿನಲ್ಲಿ ಕೆಲಸ ಮಾಡುವ ಕೆಲಸಗಾರರು ತುಂಬಾ ಪರ್‌ಫೆಕ್ಟ್ ಆಗಿದ್ದಾರೆ. ಅವರಿಗೆ ಈಗಿನ ಸಂದರ್ಭದಲ್ಲಿ



ಎಲ್ಲಾ ಕಡೆಯಿಂದಲೂ ರಕ್ಷಣೆಯನ್ನ ನೀಡಲಾಗಿದೆ. ನಮ್ಮನ್ನು ಯಾರೂ ಮುಟ್ಟಲು ಸಾಧ್ಯವಿಲ್ಲ. ನಿಮಗೆ ಗೊತ್ತೆ? ಕೆಲವು ತಿಂಗಳ ಹಿಂದೆ ಅರ್ಧ ಮಿಲಿಯನ್ ಮೌಲ್ಯದ ವಸ್ತುವಿನೊಂದಿಗೆ ಅರೆಸ್ಟಾಗಿದ್ದ ವ್ಯಕ್ತಿ ಈಗ ಸ್ವತಂತ್ರವಾಗಿ ಓಡಾಡುವುದನ್ನು ನೋಡಬಹುದು? ಆತನ ಮುಂದೆ ಕಾನೂನು ಏನೂ ಮಾಡಲಾರದು. ಈಗ ಹೇಳಿ, ಸರ್ಕಾರ ಈ ವ್ಯಾಪಾರವನ್ನು ನಿಯಂತ್ರಿಸಲು ಸಾಧ್ಯವಾ? ನಿಲ್ಲಿಸಲು ಸಾಧ್ಯವಾ? ಆತ ಮುಂದುವರೆದು ಹೇಳಿದ 'ನಾನು ನಿನಗೆ ಭರವಸೆ ಕೊಡುತ್ತೇನೆ ಮತ್ತು ಸ್ಪಷ್ಟಪಡಿಸುತ್ತೇನೆ ಸರ್ಕಾರ ನಮ್ಮ ಬಳಿ ಸುಳಿಯುವುದೇ ಇಲ್ಲ. ಆದ್ದರಿಂದ ನೀವು ಯಾವುದು ಕಾನೂನು ಬಾಹಿರ ಎಂದು ಭಾವಿಸುತ್ತೀರೋ ಅದು ನ್ಯಾಯಯುತವಾದುದು. ಆದುದರಿಂದ ನಾವು ಕಾನೂನಿನ ದೃಷ್ಟಿಯಲ್ಲಿ ಯಾವಾಗಲೂ ಪರಿಶುದ್ಧರಾದವರು! ನಾವು ಒಳ್ಳೆಯವರು, ನಾವು ಯಾವಾಗಲೂ ಕೀರ್ತಿವಂತರು'.

ನಾನು ದೋರ್‌ಜಿಯವರ ಅಭಿಪ್ರಾಯದ ವಿರುದ್ಧವಾಗಿ ತೀರ್ಮಾನ ತೆಗೆದುಕೊಳ್ಳಲು ಇಷ್ಟಪಡಲಿಲ್ಲ, ಆತ ಈ ದೇಶದ ಸದ್ಯದ ಸ್ಥಿತಿಯನ್ನು ಅತ್ಯಂತ ತಾರ್ಕಿಕವಾಗಿ ಮಂಡಿಸಿದ್ದನು. ಆತನ ಅಭಿಪ್ರಾಯಗಳು ಮತ್ತು ವಿಚಾರಗಳು ಇವತ್ತಿನ ಸಮಾಜಕ್ಕೆ ಹೇಗೆ ಒಪ್ಪುತ್ತವೆ ಎನ್ನುವುದನ್ನು ತಿಳಿಯಲು ಪ್ರಯತ್ನಿಸಿದೆ. ನನಗನ್ನಿಸಿತು ಅವುಗಳು ಚೆನ್ನಾಗಿ ಹೊಂದಿ ಕೊಳ್ಳುತ್ತವೆ! ಎಂದು.

ನಾನು ದೋರ್‌ಜಿಯವರ ಮನೆಗೆ ಬಂದು ತುಂಬಾ ಸಮಯವಾಯಿತು. ನಾನು ದೋರ್‌ಜಿಯವರನ್ನು ನೋಡಬೇಕೆಂದಿದ್ದ ಕುತೂಹಲ ಪೂರ್ಣವಾಗಿ ತೃಪ್ತಿನೀಡಿತು. ಆತನನ್ನು ಸಾಧ್ಯವಾದಷ್ಟು ಅತಿ ಹತ್ತಿರದಿಂದ ಅರ್ಥಮಾಡಿಕೊಳ್ಳುವ ಅವಕಾಶ ಸಿಕ್ಕಿತು. ನಾನು ಮೊದಲು ಆತನ ಹೆಸರನ್ನು ಕೇಳಿದಾಗ ನೋಡಬೇಕೆಂದಿದ್ದ ಕುತೂಹಲದ ರೀತಿ, ಆಸಕ್ತಿಯನ್ನು ಕಳೆದುಕೊಂಡು ಸಾಮಾನ್ಯರೂಪವನ್ನು ಪಡೆದಿತ್ತು. ಹೌದು ವಿಚಾರಗಳು ಯಾವೊಬ್ಬ ವ್ಯಕ್ತಿಯ ನಿಜಜೀವನಕ್ಕೆ ಹೊಂದಿಕೊಂಡಂತೆ, ವಸ್ತುಗಳು ನಿಜವಾಗಿಯೂ ಅಪರಿಚಿತ ಅನ್ನಿಸುವುದಿಲ್ಲ! ಅವುಗಳು ಸರಳ ಮತ್ತು ಸ್ಪಷ್ಟ ಸಹಜ ಅನ್ನಿಸುತ್ತವೆ!

ದೋರ್‌ಜಿ ಅವರ ಅನುಮತಿಯನ್ನು ಪಡೆಯಲು 'ಮಿಸ್ಟರ್ ದೋರ್‌ಜಿ ನಾನು ನಿಮ್ಮ ಹೆಚ್ಚು ಸಮಯವನ್ನು ತೆಗೆದುಕೊಂಡೆ, ನನಗೆ ಹೋಗಲು ಅನುಮತಿ ನೀಡಿ, ನಾವು ನಮ್ಮ ಸ್ನೇಹವನ್ನು ನವೀಕರಿಸಲು ಇದು ಒಂದು ಅವಕಾಶವಾಯಿತು. ನಾನು ಮತ್ತೆ ಕೆಲವು ದಿನಗಳ ನಂತರ ನಿಮ್ಮನ್ನು ನೋಡಲು ಬರುತ್ತೇನೆ. ಈಗ ಹೋಗಲು ಅವಕಾಶ ನೀಡಿ' ಎಂದೆ.

ನಾನು ಆತನ ಪ್ರಸ್ತಾಪವನ್ನು ಒಪ್ಪದೇ ಇದ್ದಾಗ, ಮತ್ತೆ ಮತ್ತೆ ಒತ್ತಾಯಿಸಲು ಆರಂಭಿಸಿದರು. ಆತನ ವ್ಯಾಪಾರ ನೋಡಿಕೊಳ್ಳುವಂತೆ ಮತ್ತೆ ಮತ್ತೆ ವಿನಂತಿ ಮಾಡತೊಡಗಿದರು. ನಾನು ಅವರಿಗೆ ಇಷ್ಟು ಮಾತ್ರ ಹೇಳಿದೆ – ಮಿಸ್ಟರ್ ದೋರ್‌ಜಿ

ನಾನು ಮತ್ತೆ ನಿಮ್ಮನ್ನು ನೋಡಲು ಬರುತ್ತೇನೆ. ನಿಮ್ಮ ವ್ಯಾಪಾರದಲ್ಲಿ ನಾನು ಸೇರಿಕೊಳ್ಳುವ ವಿಚಾರವಾಗಿ ನಾನು ಯೋಚಿಸಬೇಕಿದೆ. ಮತ್ತೆ ಕೆಲದಿನಗಳ ನಂತರ ಬರುತ್ತೀನಲ್ಲ! ಎಂದು ತಿಳಿಸಿದೆ.

ಆತ ನನ್ನನ್ನು ಇನ್ನೂ ಹೆಚ್ಚು ಒತ್ತಾಯಿಸಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಹೇಳಿದ 'ದಯಮಾಡಿ ಬನ್ನಿ' ನಿಮಗೆ ಸದಾ ಸ್ವಾಗತವಿದೆ!

ದೋರ್‌ಜಿಯವರಿಂದ ಬೀಳ್ಕೊಂಡು ಒಳಕೊಠಡಿಯಿಂದ ಹೊರಬಂದೆನು. ಹೊರ ಕೊಠಡಿಯಲ್ಲಿ ಐದು ಅಥವಾ ಆರು ಜನ ಕುಳಿತಿರುವುದನ್ನು ಕಂಡೆ. ಅವರುಗಳ ಕಡೆ ತಕ್ಷಣ ನೋಡಿದೆನು. ನನಗೆ ಪರಿಚಯವಲ್ಲದ ಆ ಎಲ್ಲ ವ್ಯಕ್ತಿಗಳ ಕಣ್ಣುಗಳು ನನ್ನನ್ನೆ ದೃಷ್ಟಿಸಿ ನೋಡುತ್ತಿದ್ದವು. ಚಿರಿಂಗ್‌ಗಾಗಿ ಹುಡುಕಾಡಿದೆ. ಆ ರೂಮಿನ ತುಂಬಾ ಹುಡುಕಾಡಿದೆ. ಆತ ಅಲ್ಲೆಲ್ಲಿಯೂ ಕಾಣಲಿಲ್ಲ.

ಚಿರಿಂಗ್ ತೋಟದಲ್ಲಿ ಯಾರೊಡನೆಯೋ ಮಾತನಾಡುತ್ತಿದ್ದ. ನನ್ನನ್ನು ನೋಡಿದ ತಕ್ಷಣ ನನ್ನ ಬಳಿ ಬಂದು, ಒಂದು ರೀತಿಯ ವಿಲಕ್ಷಣ ಮುಖಭಾವದಿಂದ ಹೇಳಿದ – 'ಓ! ನೀವು ದೋರ್‌ಜಿಯವರ ಬಳಿ ಅಷ್ಟೊಂದು ಸಮಯ ತೆಗೆದುಕೊಂಡಿರಿ, ಬಹಳ ಜನ ಅವರನ್ನು ನೋಡಲು ಕಾಯುತ್ತಿದ್ದಾರೆ. ಅವರೊಂದಿಗಿನ ಮಾತು ಹೇಗಿತ್ತು? ಫಲಕಾರಿಯಾಗಿತ್ತಾ'? ಎಂದು ವಿಚಾರಿಸಿದನು.

ಹೌದು! ನೀವು ಹೇಳಿದ ಹಾಗೆ ಫಲಕಾರಿಯಾಗಿತ್ತು.

ಹಾಗಾದರೆ ಆಗಾಗ ಬರುತ್ತೀರಿ!

ನೋಡೋಣ. ಹೇಗೆ ಸಾಧ್ಯವಾಗಬಹುದು ಹಾಗೆ.

'ನೋಡೋಣ ಏಕೆ? ದಯವಿಟ್ಟು ಬನ್ನಿ! ನಮ್ಮ ಬಾಸ್ ಯಾರೊಡನೆಯೂ ಇಷ್ಟು ಕಾಲ ಮಾತನಾಡುವುದಿಲ್ಲ. ಹೆಚ್ಚೆಂದರೆ ಹತ್ತು ನಿಮಿಷಗಳ ಕಾಲ ಭೇಟಿ ಮಾಡಬಹುದು. ನೀವು ಇಂದು ಅವರೊಂದಿಗೆ ಮಾತನಾಡಿದ ರೀತಿಯನ್ನು ಗಮನಿಸಿದರೆ ಯಾವುದೋ ಒಂದು ವಿಶೇಷ ಯೋಜನೆಯನ್ನು ರೂಪಿಸಿದಂತೆ ಕಾಣುತ್ತದೆ' ಎಂದನು.

'ಇಲ್ಲ, ನಾವು ಯಾವ ಯೋಜನೆಯನ್ನೂ ಸಿದ್ಧಪಡಿಸಲಿಲ್ಲ'.

'ಅದು ಏನೇ ಇರಲಿ, ನೀವು ದಯಮಾಡಿ ಮತ್ತೆ ಬನ್ನಿ'.

'ಆಗಲಿ! ಎಂದು ನಗುತ್ತಾ ಸಹಜವಾಗಿ ಹೇಳಿದೆ'.

ನಾನು ದೋರ್‌ಜಿಯವರ ಮನೆಯಿಂದ ಹೊರಬಿದ್ದು ನನ್ನ ಮನೆಯ ದಾರಿಹಿಡಿದೆ. ದಾರಿಯುದ್ದಕ್ಕೂ ದೋರ್‌ಜಿಯವರ ಮಂದ ಬೆಳಕಿನ ಮುಚ್ಚಿದ ಬಾಗಿಲುಗಳ ಕೊಠಡಿ ಯಲ್ಲಿಯೇ ಇದ್ದೇನೇನೋ ಎನ್ನುವ ಭಾವನೆ ನನ್ನನ್ನು ಕಾಡಿತು. ನನ್ನ ಮನಸ್ಸಿನಲ್ಲಿ ಉತ್ತರವನ್ನು ಕಾಣದ ಅನೇಕ ಪ್ರಶ್ನೆಗಳು ಮೂಡಿದವು! REALITY, INTEGRITY and MORALITYಯ ಪ್ರಶ್ನೆಗಳು!



## ಶುಕ್ರವಾರ

**ನಾ**ನು ಬೆಳಗಿನಿಂದ ಬಿಕ್ರಂನಿಗಾಗಿ ಕಾಯುತ್ತಿದ್ದೆ. ಆತ ಇನ್ನೂ ಬಂದಿರಲಿಲ್ಲ. ನಾನು ಆತನಿಗೆ ಮಾತು ಕೊಟ್ಟಿದ್ದರಿಂದ ನಾನು ಎಲ್ಲಿಯೂ ಹೋಗುವಂತಿರಲಿಲ್ಲ. ಆಗಲೇ ಬೆಳಗಿನ ಊಟದ ಸಮಯವಾಗಿತ್ತು. ಬಿಕ್ರಂ ಸರಿಯಾದ ಸಮಯಕ್ಕೆ ಬಾರದಿದ್ದರೆ ಊಟ ಮುಗಿಸಿ ಹೊರಹೋಗಬೇಕೆಂದಿದ್ದೆ.

ಬಿಕ್ರಂ ಕಠ್ಮಂಡುವಿನಲ್ಲಿಯೇ ಬೆಳೆದ ಒಬ್ಬ ಯುವಕ. ಚಿಕ್ಕಂದಿನಿಂದಲೂ ತನ್ನ ಕಾಲ ಮೇಲೆ ನಿಲ್ಲಲು ಹೋರಾಟ ನಡೆಸುತ್ತಿದ್ದಾನೆ. ಚಿಕ್ಕವನಾದರೂ ಬುದ್ಧಿವಂತ. ಆತ ಯಾವಾಗಲೂ ಮನಬಿಚ್ಚಿ ಮಾತನಾಡುತ್ತಾನೆ. ನಿಜವಾಗಿಯೂ ಅವನ ಮಾತು ನನಗೆ ಇಷ್ಟ. ನಾನು ಆತನನ್ನು ನೋಡಿದರೆ ದೊಡ್ಡ ಸಮಾಧಾನವಾಗುತ್ತದೆ. ನನಗೆ ಆತನಿಂದ ಏನೂ ಆಗಬೇಕಿಲ್ಲ. ನಾವು ಇಬ್ಬರೂ ಕೇವಲ ಸ್ನೇಹಿತರು. ನಿಜಹೇಳಬೇಕೆಂದರೆ ಆತ ನನ್ನ ಸಹೋದರರ ಸ್ನೇಹಿತ. ಆತ ನನ್ನನ್ನು 'ಅಣ್ಣ' ಎಂದು ಸಂಬೋಧಿಸುತ್ತಾನೆ. ನಾನು ಆತನನ್ನು ಕಿರಿಯ ಸಹೋದರನಂತೆ ಭಾವಿಸಿದರೂ ಆತನನ್ನು ನನ್ನ ಸ್ನೇಹಿತನೆಂದು ಒಪ್ಪಿಕೊಂಡಿದ್ದೇನೆ.

ಆತ ಒಬ್ಬ ಕಂಟ್ರಾಕ್ಟರ್. ಆತ ಕಳೆದ ಹನ್ನೆರಡು ವರ್ಷಗಳಿಂದ ಕಂಟ್ರಾಕ್ಟ್ ಕೆಲಸ ಮಾಡುತ್ತಿದ್ದಾನೆ. ಅಭಿವೃದ್ಧಿ ಹೊಂದುತ್ತಿರುವ ನಮ್ಮಂಥ ದೇಶಗಳಲ್ಲಿ ಕಂಟ್ರಾಕ್ಟರ್‌ಗಳ ಪಾತ್ರ ಬಹಳ ಪ್ರಮುಖವಾದದು ಎಂದು ಪರಿಗಣಿಸಿದ್ದನಾದ್ದರಿಂದ ಆತ ಆ ಕೆಲಸಕ್ಕೆ ಸೇರಿಕೊಂಡಿದ್ದ. ಆತ ಈ ಕಂಟ್ರಾಕ್ಟ್ ಕೆಲಸವನ್ನು ಸಣ್ಣ ಸಣ್ಣ ಮನೆಕಟ್ಟುವುದು, ಗುಡಿಸಲುಗಳು, ಹಾಗೂ ದೇವಾಲಯಗಳನ್ನು ರಿಪೇರಿ ಮಾಡುವುದರ ಮೂಲಕ ಆರಂಭಿಸಿದ್ದ. ಕ್ರಮೇಣ ಮನೆಗಳ ನಿರ್ಮಾಣ, ರಸ್ತೆಗಳ ನಿರ್ಮಾಣ, ಕಟ್ಟಡಗಳು, ಸೇತುವೆಗಳು ಹಾಗೂ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳ ನಿರ್ಮಾಣದತ್ತ ತನ್ನ ಕೆಲಸವನ್ನು ಬದಲಾಯಿಸಿದ. ಆತನ ದೃಷ್ಟಿಯಲ್ಲಿ ಅತ್ಯಂತ ಲಾಭದಾಯಕ ಕೆಲಸವೆಂದರೆ ನಿರ್ಮಾಣದ ಕೆಲಸ. ಈ ದೇಶದಲ್ಲಿ ಸಾಮಾನ್ಯವಾಗಿ ತಮ್ಮ ಕೆಲಸದಲ್ಲಿ ಸ್ವಲ್ಪ ಪ್ರಾಮಾಣಿಕತೆ ಹಾಗೂ ನೈತಿಕತೆಯನ್ನು ಹೊಂದಿದ್ದ ಕೆಲವೇ ಕಂಟ್ರಾಕ್ಟರ್‌ಗಳಲ್ಲಿ ಈತನೂ ಒಬ್ಬ. ಆ ಕ್ಷೇತ್ರದಲ್ಲಿ ಪ್ರಾಮಾಣಿಕರಾಗಿ ಉಳಿಯುವುದು ಕೆಲವೊಮ್ಮೆ ಎಷ್ಟು ಕಷ್ಟ ಎನ್ನುವುದನ್ನು ವಿವರಿಸಿ ಹೇಳಿದ್ದ.

ನಾನು ಆಗಾಗ ಬಿಕ್ರಂನನ್ನು ಭೇಟಿಯಾಗುತ್ತಿದ್ದೆ. ನಾವು ಭೇಟಿಯಾದಾಗ

ನಮಗೆ ಸಮಯ ಹೋದದ್ದೆ ಗೊತ್ತಾಗುತ್ತಿರಲಿಲ್ಲ. ಬಿಕ್ರಂ ನೇರ ಮತ್ತು ಒಳ್ಳೆಯ ಮಾತುಗಾರ. ಆತ ಮಾತನಾಡಿದಾಗ ಅತ್ಯಂತ ಉತ್ಸಾಹದಿಂದ ಮತ್ತು ಉಲ್ಲಾಸದಿಂದ ಮಾತನಾಡುತ್ತಾನೆ. ದೇಹ ಮನಸ್ಸುಗಳೆರಡೂ ಉಲ್ಲಾಸವಾಗಿರುವಂತೆ ಇಡೀ ವಾತಾವರಣ ಮಧುರ ಮತ್ತು ಭಾವೋದ್ವೇಗಕಾರಿಯಾಗಿರುವಂತೆ ಮಾತನಾಡುತ್ತಾನೆ. ಆದುದರಿಂದಲೆ ನಾನು ಸದಾ ಅವನೊಂದಿಗೆ ದೀರ್ಘ ಸಮಾಲೋಚನೆಯನ್ನು ನಡೆಸಲು ಇಷ್ಟಪಡುತ್ತಿದ್ದೆನು.

ಊಟದ ನಂತರ, ನಾನು ಹೊರಡಲು ಸಿದ್ಧನಾಗುತ್ತಿದ್ದಾಗ ರೂಮಿನ ಹೊರಗಡೆ ಜೋರಾಗಿ ನಗುವ ಧ್ವನಿ ಕೇಳಿಸಿತು.

'ನಮಸ್ತೆ' – ಬಿಕ್ರಂ ತನ್ನ ಸೀಟಿನಿಂದ ಮೇಲೇಳುತ್ತಾ ಹೇಳಿದ. ಆತನ ಜೊತೆಯಲ್ಲಿ ಕುಳಿತಿದ್ದ ವ್ಯಕ್ತಿಯನ್ನು ಗುರುತಿಸಲಾರದೆ ಆತನ ಕಡೆ ನೋಡಿ ಹೇಳಿದೆ - 'sorry' ಇವರಾರು ನನಗೆ ಗೊತ್ತಿಲ್ಲ.

'ಇವರೊಬ್ಬ ಇಂಜಿನಿಯರ್ ಮತ್ತು ನನ್ನ ಸ್ನೇಹಿತರು. ಇಬ್ಬರೂ ಒಟ್ಟಿಗೆ ಕೆಲಸ ಮಾಡುತ್ತೇವೆ. ನಿಮ್ಮನ್ನು ಇವರಿಗೆ ಪರಿಚಯ ಮಾಡಬೇಕು. ಅದಕ್ಕಾಗಿ ಇವರನ್ನು ಕರೆತಂದೆ' ಎಂದು ಆತನನ್ನು ನನಗೆ ಪರಿಚಯಿಸುತ್ತಾ ಹೇಳಿದನು.

ತೀರ್ಥ ನನ್ನ ಹೆಸರನ್ನು ಈಗಾಗಲೇ ಕೇಳಿದ್ದರು. ನನ್ನನ್ನು ಬಹಳ ದಿನಗಳಿಂದ ನೋಡಬೇಕೆಂದಿದ್ದರು. ಆದ್ದರಿಂದ ಬಿಕ್ರಂ ಅವರ ಜೊತೆಯಲ್ಲಿ ಕರೆತಂದಿದ್ದರು. ತೀರ್ಥ ಒಬ್ಬ ಸಿವಿಲ್ ಇಂಜಿನಿಯರ್, ನನ್ನ ಬಗ್ಗೆ ಗೌರವ ಹಾಗೂ ಒಲವನ್ನು ಬೆಳಸಿಕೊಂಡಿದ್ದವರು. ಆದುದರಿಂದಲೆ ನನ್ನನ್ನು ನೋಡಲು ಬಹಳ ದಿನಗಳಿಂದ ಕಾತರರಾಗಿದ್ದರು ಎನ್ನುವ ಭಾವನೆಯನ್ನು ಅವರ ಆರಂಭದ ಮಾತುಗಳಲ್ಲಿಯೆ ನಾನು ಗಮನಿಸಿದೆನು.

ಬಿಕ್ರಂ ತೀರ್ಥ ಅವರ ಬಗ್ಗೆ ಬಹಳ ಮಾತನಾಡಿದ. ತೀರ್ಥ ಕೆಲವೇ ಕೆಲವು ಇಂಜಿನಿಯರ್‌ಗಳಲ್ಲಿ ಒಬ್ಬ ಪ್ರಾಮಾಣಿಕ ಸಜ್ಜನ ಇಂಜಿನಿಯರ್ ಎಂದು ತಿಳಿಯಿತು. ಆತ ಭಾರತ ದೇಶದಲ್ಲಿ ಇಂಜಿನಿಯರಿಂಗ್ ಓದಿ ನೇಪಾಳದ ಸರ್ಕಾರಿ ಸೇವೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು. ಆತನಿಗೆ ಮುಂಬಡ್ತಿಯ ಒಂದು ಸಮಸ್ಯೆಯಿತ್ತು. ಆತನ ಜೊತೆಯ ಸಹಾಯಕ ಇಂಜಿನಿಯರ್‌ಗಳಾಗಿ ಕೆಲಸಕ್ಕೆ ಸೇರಿದವರ ಪೈಕಿ ಸೂಪರಿನ್‌ಟೆಂಡೆಂಟ್ ಇಂಜಿನಿಯರ್ ಆಗದೆ ಉಳಿದವನು ಈತನೊಬ್ಬನೆ. ಆತನಿಗೆ ವಿಭಾಗೀಯ ಇಂಜಿನಿಯರ್ ಆಗುವ ಆಸೆಯಿತ್ತು. ಆತನಿಗೆ ಪ್ರೋತ್ಸಾಹಿಸುವ ಯಾರೊಬ್ಬರು ಅಧಿಕಾರದಲ್ಲಿ ಇಲ್ಲದಿದ್ದುದರಿಂದ ಆತ ಮುಂಬಡ್ತಿಯನ್ನು ಪಡೆಯಲಾಗಿರಲಿಲ್ಲ. ನಾನು ತೀರ್ಥನ ಬಗ್ಗೆ ಹೆಚ್ಚು ತಿಳಿದುಕೊಳ್ಳಲು, 'ನೀವು ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಯಾವ ಯಾವ ಕಛೇರಿಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡಿದ್ದೀರಿ' ಎಂದು ಕೇಳಿದೆ.



'ನಾನು ಭಾರತದಿಂದ ಬಂದ ಮೇಲೆ, ನೀರು ಸರಬರಾಜು ವಿಭಾಗದಲ್ಲಿ ಇಂಜಿನಿಯರ್ ಆಗಿ ಕೆಲಸಕ್ಕೆ ಸೇರಿದೆ. ನೀರು ಸರಬರಾಜು ಇಲಾಖೆಯಲ್ಲಿ ಮೂರು ವರ್ಷಗಳ ಒಳ್ಳೆಯ ಅನುಭವವನ್ನು ಪಡೆದೆ. ಆದರೆ ಆಗ ನನ್ನನ್ನು ನೀರಾವರಿ ಸಚಿವಾಲಯದಲ್ಲಿ ವಿವಿಧ ಯೋಜನೆಗಳ ಬಗ್ಗೆ ಕೆಲಸ ಮಾಡಲು ವರ್ಗಾಯಿಸಿದರು. ನಾನು ನೀರು ಸರಬರಾಜು ಇಲಾಖೆಯಲ್ಲಿ ಪಡೆದಿದ್ದ ಅನುಭವ ಅಲ್ಲಿ ವ್ಯರ್ಥವಾಯಿತು. ಕಾರಣ ನೀರಾವರಿ ಇಲಾಖೆಯಲ್ಲಿ ಅದು ಉಪಯೋಗಕ್ಕೆ ಬರುವುದಿಲ್ಲ. ಅಲ್ಲಿ ಅನುಭವ ಪಡೆಯಲು ಕೆಲವು ವರ್ಷಗಳು ಬೇಕಾದವು. ನಾನು ಅಲ್ಲಿ ನನ್ನ ಸಾಮರ್ಥ್ಯವನ್ನು ತೋರಿಸಲು ಸಾಧ್ಯವಾಗಲಿಲ್ಲ. ಕಾರಣ ನಾನು ಅಲ್ಲಿಗೆ ಹೊಸಬನಾಗಿದ್ದೆ. ಎರಡು ವರ್ಷಗಳ ನಂತರ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿಗೆ ವರ್ಗಾವಣೆಮಾಡಿ ಅಲ್ಲಿ ಹೈಡ್ರೋಎಲೆಕ್ಟ್ರಿಕಲ್ ಪ್ರಾಜಕ್ಟ್‌ನಲ್ಲಿ ಕೆಲಸ ಮಾಡುವಂತೆ ನೇಮಿಸಿದರು. ಆನಂತರ ಸಂಪರ್ಕ ಇಲಾಖೆಗೆ, ಅಲ್ಲಿಂದ ಸ್ಥಳೀಯಅಭಿವೃದ್ಧಿ ಇಲಾಖೆಗೆ, ಈಗ ಗೃಹಮಂಡಲಿಗೆ ವರ್ಗಾಯಿಸಲಾಗಿದೆ. ನಾನು ಎಲ್ಲಿಗೆ ಹೋದರೂ ಅಲ್ಲಿಗೆ ಹೊಸಬನಾಗಿರುತ್ತಿದ್ದೆ. ನಾನು ಅಲ್ಲಿ ಅನುಭವ ಪಡೆಯಲು ಆರಂಭಿಸುತ್ತಿದ್ದಂತೆ ಮತ್ತೊಂದು ಜಾಗಕ್ಕೆ ಚೆಂಡಿನಂತೆ ಎಸೆಯುತ್ತಿದ್ದರು.

ಆತ ಹೇಳುತ್ತಾ ಹೋದ 'ಇಂಜಿನಿಯರ್‌ಗಳು ಆ ಕ್ಷೇತ್ರದ ಕೆಲಸದಲ್ಲಿ ಬಹಳ ಕುಶಲರಾಗಿರುತ್ತಾರೆ ಎಂದು ಉನ್ನತ ಅಧಿಕಾರಿಗಳು ಭಾವಿಸುವುದು ಒಂದು ರೀತಿಯ ವಿಚಿತ್ರ ಅನ್ನಿಸುತ್ತದೆ. ನೀವು ಕೆಲಸದಲ್ಲಿ ತುಂಬಾ ಚತುರರಾಗಬೇಕಾದರೆ, ಅದೇ ಪ್ರಾಜೆಕ್ಟ್‌ನಲ್ಲಿ ಕೆಲವು ವರ್ಷಗಳ ಕಾಲ ಕೆಲಸ ಮಾಡುವ ಅವಕಾಶವಿದ್ದಿದ್ದರೆ ನಾನು ಆ ಇಲಾಖೆಯಲ್ಲಿ ಬಹಳಷ್ಟು ಅನುಭವವನ್ನು ಪಡೆದು ಅದರ ಆಧಾರದ ಮೇಲೆ ಮುಂಬಡ್ತಿಯನ್ನು ಪಡೆಯುತ್ತಿದ್ದೆ. ಆದರೆ ಈಗ ಹಾಗಾಗಿಲ್ಲ. ಪ್ರತಿಯೊಂದು ಹಂತದಲ್ಲಿಯೂ ನಾನು ಆಫೀಸಿಗೆ ಹೊಸಬ, ನನಗೆ ಆಫೀಸು ಹೊಸತು, ಇದು ಇದೇ ರೀತಿಯಲ್ಲಿ ನನ್ನ ಆರಂಭದ ದಿನದಿಂದ ಇಂದಿನವರೆಗೆ ನಡೆದುಕೊಂಡು ಬಂದಿದೆ'.

ಆತನ ಮಾತಿನ ಇಂಗಿತವನ್ನು ಅರ್ಥಮಾಡಿಕೊಂಡ ನಾನು 'ಬೇರೆ ಬೇರೆ ಕಛೇರಿಯಲ್ಲಿ ಕೆಲಸ ಮಾಡುವುದರಿಂದ ಬೇರೆಬೇರೆ ಕ್ಷೇತ್ರಗಳ ಅನುಭವವಿರುವುದು ಒಳ್ಳೆಯದಲ್ಲವೆ'? ಎಂದು ಕೇಳಿದೆ.

ನನ್ನ ಆಲೋಚನೆಯನ್ನು ಗೇಲಿ ಮಾಡುತ್ತಾ – 'ಹೌದು ನೀವು ನರಕದ ಅನುಭವವನ್ನು ಪಡೆಯಬಹುದು. ಆದುದರಿಂದಲೆ ಲೋಕಸೇವಾ ಆಯೋಗದವರು ಪಶುವೈದ್ಯರನ್ನೂ, ಮಾನವ ವೈದ್ಯಕೀಯ ಸೇವೆಗೆ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ತರಬೇತಿ ಪಡೆದವರನ್ನು ಸಂಸ್ಕೃತಿ ಇಲಾಖೆಗೆ ನೇಮಿಸುತ್ತಾರೆ, ಇದಲ್ಲವೆ ಅನುಭವವನ್ನು ಪಡೆಯಲು ಇರುವ ಅತ್ಯುತ್ತಮ ಅವಕಾಶ?' ಎಂದು ವ್ಯಂಗ್ಯವಾಡಿದನು.

ತೀರ್ಥ ನಿಟ್ಟುಸಿರು ಬಿಡುತ್ತಾ ತನ್ನ ಜೇಬಿನಲ್ಲಿ ಸಿಗರೇಟಿಗಾಗಿ ತಡಕಾಡಿದನು. ಸಿಗರೇಟನ್ನು ಸೇದುತ್ತಾ, ರೂಮಿನ ತುಂಬಾ ಹೊಗೆಯನ್ನು ಬಿಡುತ್ತಾ ಹೇಳಿದ – 'ನಿಮ್ಮ ಅಭಿಪ್ರಾಯ ಏನು? ನನಗೆ ಗೊತ್ತಿರುವ ಹಾಗೆ ಇಲ್ಲಿಯವರೆಗೆ ನಿಖರವಾದ ಮತ್ತು ಶಾಶ್ವತವಾದ ಪಾಲಿಸಿಯೇ ಬಂದಿಲ್ಲ. ಇಲ್ಲಿ ನಿಯಮವಾಗಲಿ ಕಾನೂನಾಗಲಿ ಇಲ್ಲವೆ ಇಲ್ಲ, ಪಕ್ಷಪಾತವೇ ಆಡಳಿತದಲ್ಲಿ ತುಂಬಿ ಹೋಗಿದೆ. ಯೋಗ್ಯನೊ ಅಯೋಗ್ಯನೋ ಎನ್ನುವುದು ಯಾರು ಯೋಚಿಸುತ್ತಾರೆ? ಯಾವುದಕ್ಕು ವಿಚಾರಣೆಯಿಲ್ಲ ಎಲ್ಲಿಯೂ ವಿವೇಚನೆಯಿಲ್ಲ, ಆತ ಮುಂದುವರೆದು ಹೇಳಿದ – 'ಯಾರು ಯಾರಿಗೆ ಏನು ಬೇಕಾದರೂ ಮಾಡಬಹುದು. ಎಲ್ಲಿಯೂ ನಿಮ್ಮ ಅಹವಾಲುಗಳನ್ನು ಕೇಳುವವರೆ ಇಲ್ಲ. ನಿಜ ಹೇಳಬೇಕೆಂದರೆ ನನಗೆ ಬೇಸರವಾಗಿದೆ ಮತ್ತು ಈ ದೇಶದಲ್ಲಿ ಕೆಲಸ ಮಾಡುವ ಇಷ್ಟವೇ ಇಲ್ಲ'.

ಒಬ್ಬ ಸಮರ್ಥ ಹಾಗೂ ಜವಾಬ್ದಾರಿಯುತ ವ್ಯಕ್ತಿ ಈ ರೀತಿ ನಿರಾಸೆ ಹಾಗೂ ಅತೃಪ್ತಿಯನ್ನು ವ್ಯಕ್ತಪಡಿಸಿದ ರೀತಿಯನ್ನು ಕಂಡು ನನಗೆ ತುಂಬಾ ಬೇಸರವಾಯಿತು. ಈ ಮೊದಲು ನಾನು ಆತನನ್ನು ಭೇಟಿಮಾಡಿರಲಿಲ್ಲ. ನಮ್ಮ ಮೊದಲ ಭೇಟಿಯಲ್ಲಿಯೇ ಆತ ಈ ರೀತಿ ತನ್ನ ಅಸಮಾಧಾನವನ್ನು ತೋಡಿಕೊಂಡನು. ಆದರೂ ನಾನು ಆತನಿಗೆ ಸಹಾನುಭೂತಿಯನ್ನು ತೋರಿಸುವುದನ್ನು ಬಿಟ್ಟರೆ ಅವನ ಸಮಸ್ಯೆಗಳಿಗೆ ಯಾವುದೇ ಸಹಾಯ ಮಾಡಲು ಆಗುತ್ತಿರಲಿಲ್ಲ. ಅದು ಆತನಿಗೂ ಗೊತ್ತಿತ್ತು. ಆತ ಹೇಳಿದ – 'ನನ್ನ ತಂದೆ ನನಗೆ ತಿಳುವಳಿಕೆ ಹೇಳಿದ್ದರು. ನೀನು ಈ ದೇಶದಲ್ಲಿ ಬದುಕಬೇಕಾದರೆ, ನೀನು 'ಮೋಸಗಾರನನ್ನು ಒಳ್ಳೆಯವನೆಂದು' ಮತ್ತು 'ಕಪ್ಪಗಿರುವುದು ಬೆಳ್ಳಗಿದೆಯೆಂದು' ಹೇಳಬೇಕು. ಆದರೆ ನೀನು ಹಾಗೆ ಮಾಡಲಾರೆ! ಯಾವುದೇ ಅನೈತಿಕ ಮಾರ್ಗದಿಂದ ಏನನ್ನೂ ಸಂಪಾದಿಸಬೇಡ, ನೀನು ಹಾಗೆ ಮಾಡಿದರೆ ದೇಶಕ್ಕೆ ವಂಚಿಸಿದಂತೆ ಮತ್ತು ನೋಯಿಸಿದಂತೆ' 'ನಮ್ಮ ತಂದೆಯವರ ಮಾತುಗಳಿಗೆ ಗೌರವ ನೀಡುವ ದೃಷ್ಟಿಯಿಂದ ಮತ್ತು ಅವರ ಮಾತುಗಳಿಗೆ ವಿಧೇಯನಾಗಿರಬೇಕೆಂದು ನಾನು ನನ್ನ ಸ್ವಂತ ಲಾಭಕ್ಕಾಗಿ ಯಾವುದೇ ಅನೈತಿಕ ಮಾರ್ಗಕ್ಕೆ ಇಳಿಯಲಿಲ್ಲ. ಈ ಕಾರಣದಿಂದಾಗಿ ನಾನು ನನ್ನ ಸಹೋದ್ಯೋಗಿಗಳ ಸಾಲಿನಲ್ಲಿ ಕೊನೆಯ ಸೀಟಿನಲ್ಲಿರಬೇಕಿದೆ' ಎಂದರು.

ಬಿಕ್ರಂ ಹೇಳಿದರು – 'ಹೌದು ನಾನು ನೋಡಿದ ಅತ್ಯಂತ ಪ್ರಾಮಾಣಿಕ ಇಂಜಿನಿಯರ್ ಇವರು. ನಾನು ಇವರ ಜೊತೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಕಂಟ್ರಾಕ್ಟ್ ಕೆಲಸ ಮಾಡುತ್ತಿದ್ದೇನೆ. ಅವರಿಗೆ ಕೆಲಸಬಿಟ್ಟು ಬೇರೆ ಏನು ಗೊತ್ತಿಲ್ಲ. ನಾನು ಇಂಥ ವ್ಯಕ್ತಿಯನ್ನು ಈವರೆಗೆ ನೋಡಿಯೇ ಇಲ್ಲ'.

ನನ್ನನ್ನು ಸಂಬೋಧಿಸಿ, ಬಿಕ್ರಂ ಹೇಳಿದರು – 'ನಾನು ಹಾಸ್ಪಿಟಲ್ ಬಿಲ್ಡಿಂಗಿನ ಮುಂದುವರೆದ ಕಾಮಗಾರಿಯನ್ನು ಈಸ್ಟರನ್ ನೇಪಾಳದಲ್ಲಿ ಕೆಲವು ವರ್ಷಗಳ



ಹಿಂದೆ ತೆಗೆದುಕೊಂಡದ್ದು ನಿಮಗೂ ಬಹಶಃ ತಿಳಿದಿರಬೇಕು. ಕಂಟ್ರಾಕ್ಟನ ಮೊತ್ತ ಆರು ಲಕ್ಷ. ಅದರಲ್ಲಿ ಇಂಜಿನಿಯರ್ ಎರಡುವರೆ ಲಕ್ಷವನ್ನು ಹೀರಿದನು. ನಾನು ಕಂಟ್ರಾಕ್ಟರ್ ಆಗಿ ಮಾಡಿದ ಹಾಸ್ಪಿಟಲ್‌ನ ಕೆಲಸ ನನಗೆ ಸಮಾಧಾನ ನೀಡಲಿಲ್ಲ. ಆದರೆ ಏನು ಮಾಡುವುದು? ನಾವು ಅಸಹಾಯಕರು. ಅವರು ಹೇಳಿದಂತೆ ನಾವು ಮಾಡದಿದ್ದರೆ ಅವರು ಬಿಲ್ಡಿಂಗ್ ಪ್ಲಾನನ್ನು ಅನುಮೋದಿಸುವುದಿಲ್ಲ. ಈ ವಿಚಾರವಾಗಿ ನಾನು ಅವರಿಗೆ ಈಗಾಗಲೇ ತಿಳಿಸಿದ್ದೇನೆ. ಆದರೆ ತೀರ್ಥ ಅವರು ಆ ರೀತಿ ಮಾಡುತ್ತಿರಲಿಲ್ಲ. ಸರಿ ನಾವೇನು ಮಾಡಲು ಸಾಧ್ಯ. ಅವರು ಹೇಳಿದಂತೆ ಕೇಳಬೇಕು ಅಷ್ಟೆ'.

ಬಿಕ್ರಂ ವಿಷಯಕ್ಕೆ ಸಂಬಂಧಿಸಿದಂತೆ ತೀರ್ಥ ಹೇಳಿದರು – 'ಈ ದಿನಗಳಲ್ಲಿ ನಾನು ಹೌಸಿಂಗ್ ಬೋರ್ಡಿನಲ್ಲಿ ಬಿಕ್ರಂ ಅವರು ನಿರ್ಮಾಣ ಮಾಡುತ್ತಿರುವ ಮನೆಗಳ ನಿರ್ಮಾಣ ಕಾಮಗಾರಿಗಳ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಬಿಕ್ರಂ ನಾಲ್ಕು ಅಡಿಯ ಕಾಂಕ್ರೀಟ್ ಫೌಂಡೇಷನ್ನಿಗೆ ಬದಲಾಗಿ ಮೂರು ಅಡಿಯ ಸಾಮಾನ್ಯ ಫೌಂಡೇಷನ್ನನ್ನು ಹಾಕುವುದಾಗಿ ತಿಳಿಸಿ ಅದರಲ್ಲಿ ಉಳಿತಾಯವಾಗುವ ನಲವತ್ತು ಸಾವಿರ ರೂಪಾಯಿಗಳಲ್ಲಿ ಅರ್ಧದಷ್ಟನ್ನು ನನಗೆ ನೀಡುವುದಾಗಿ ತಿಳಿಸಿದಾಗ ನಾನು ಅದನ್ನು ಖಡಾಖಂಡಿತವಾಗಿ ತಿರಸ್ಕರಿಸಿದೆ'. ನಾನು ಯಾವಾಗಲೂ ಅನೈತಿಕ ಮಾರ್ಗದಿಂದ ಹಣ ಮಾಡುವ ಯೋಚನೆಯನ್ನೇ ಮಾಡುವುದಿಲ್ಲ ಮತ್ತು ನಾನು ಹಾಗೆ ಮಾಡಿರುವುದಿಲ್ಲ. ಮುಂದುವರೆದು ಹೇಳಿದ 'ನನ್ನ ಈ ದೌರ್ಬಲ್ಯದಿಂದಾಗಿ ನಾನು ನನ್ನ ಹಿರಿಯ ಅಧಿಕಾರಿಗಳಿಗೆ ಯಾವುದೇ ಉಡುಗೊರೆ ಯನ್ನು ನೀಡಲು ಸಾಧ್ಯವಾಗಿರುವುದಿಲ್ಲ. ನನ್ನಿಂದ ಅವರಿಗೆ ಯಾವುದೇ ಲಾಭ ಇಲ್ಲ. ನಾನು ಒಬ್ಬ ಉಪಯೋಗವಿಲ್ಲದ ಅಸಮರ್ಥ ಅಧಿಕಾರಿಯೆಂದು ಅವರು ತೀರ್ಮಾನಿಸಿದ್ದಾರೆ'.

ಆತನನ್ನು ಸಮಾಧಾನ ಪಡಿಸುತ್ತಾ, ನಾನು ಹೇಳಿದೆ – 'ಮಿಸ್ಟರ್ ತೀರ್ಥ ಇದು ಪ್ರತಿಯೊಬ್ಬ ವ್ಯಕ್ತಿಯ ಸ್ವಭಾವ ಹಾಗೂ ನೀತಿಗೆ ಸಂಬಂಧಿಸಿದ್ದು. ಅನೈತಿಕ ಮಾರ್ಗದಿಂದ ಹಣ ಮಾಡಿರುವ ವ್ಯಕ್ತಿಗಳು ಇಂದು ನಾವೇ ಬುದ್ಧಿವಂತರು, ಜಾಣರು ಎಂದು ತಿಳಿದಿರಬಹುದು. ಆದರೆ ಅವರು ಖಿನ್ನರಾಗಿ ಸಾಯುವ ಕಾಲ ಬಂದೇ ಬರುತ್ತದೆ. ನೀವು ಬದುಕುತ್ತಿರುವ ರೀತಿ ನಿಮ್ಮ ತಂದೆಯವರ ಮಾರ್ಗದರ್ಶನದಂತೆ ಶಿಸ್ತಿನಿಂದ ಕೆಲಸ ಮಾಡುತ್ತಿರುವುದು ನಿಮಗೆ ಹೆಮ್ಮೆಯ ಮತ್ತು ಅಭಿಮಾನದ ವಿಷಯ! ದೈವದತ್ತವಾಗಿ ಬಂದಿರುವ ಸತ್ಯ ನಿರಂತರವಾಗಿ ಮುಂದುವರೆಯುತ್ತದೆ; ಅಸತ್ಯದಿಂದ ಬಂದ ಲಾಭ ಅದು ಕ್ಷಣಿಕವಾದುದು. ಆದ್ದರಿಂದ ನೀವು ಸತ್ಯವನ್ನು ಸ್ವೀಕರಿಸಿರುವ ರೀತಿ, ನಿಮ್ಮ ಯಶಸ್ಸು, ಅದಕ್ಕೆ ಸೋಲೇ ಇಲ್ಲ' ಎಂದು ಸಮಾಧಾನ ಪಡಿಸಿದೆ.

ಮತ್ತೆ ನನ್ನ ಮಾತುಗಳನ್ನ ಮುಂದುವರೆಸುತ್ತಾ ಹೇಳಿದೆ – 'ಚಿಂತೆ ಮಾಡಬೇಡಿ'!

ಅವರು ನಿಮಗೆ ಇಷ್ಟು ವರ್ಷಗಳಿಂದ ತೊಂದರೆ ನೀಡಿದ್ದಾರೆ; ನಿಮಗೆ ಸಿಗಬೇಕಾದ ಮುಂಬಡ್ತಿಗೆ ನೀವು ಅರ್ಹತೆಯೊಂದಿದ್ದರೂ ಸಿಕ್ಕಿರುವುದಿಲ್ಲ; ನಿಮ್ಮನ್ನೇನು ಯಾವುದೋ ಒಂದು ಕ್ಷೇತ್ರಕ್ಕೆ ಶಾಶ್ವತವಾಗಿ ನೇಮಕ ಮಾಡಿರುವುದಿಲ್ಲ. ಆದರೂ ನೀವು ತಾಳ್ಮೆ ಕಳೆದುಕೊಳ್ಳಬೇಡಿ. ಈ ಲಂಚಕೋರರನ್ನು ಸಾರ್ವಜನಿಕರು ನಿರಾಕರಿಸುವ ಕಾಲ ಬಂದೇ ಬರುತ್ತದೆ. ಅವರನ್ನು ಬರಿಗಾಲಲ್ಲಿ ಬೆತ್ತಲೆಯಾಗಿ ಮೆರವಣಿಗೆ ಮಾಡಿಸುತ್ತಾರೆ. ಸರಿಯಾದ ಸಮಯದಲ್ಲಿ ಈ ಮಣ್ಣಿನ ಮಕ್ಕಳು ಸೂಕ್ತ ಸೇಡನ್ನು ತೀರಿಸಿಕೊಂಡೇ ತೀರುತ್ತಾರೆ. ಆಗ ಪ್ರಾಮಾಣಿಕ ವ್ಯಕ್ತಿಯಾದ ನಿಮ್ಮಂಥವರು ಸೂಕ್ತ ಮನ್ನಣೆಯನ್ನು ಖಂಡಿತಾ ಪಡೆಯುತ್ತೀರಿ.

ನನ್ನ ಅಭಿಪ್ರಾಯವನ್ನು ಬೆಂಬಲಿಸುತ್ತಾ ಬಿಕ್ರಂ ಹೇಳಿದ– 'ಹೌದು ನೀವು ಹೇಳುವುದು ಸರಿ, ಪ್ರತಿಯೊಂದು ವಿಷಯಕ್ಕೂ ಒಂದು ಮಿತಿಯಿದೆ. ಆ ಮಿತಿಯನ್ನು ಮೀರಿ ಹೋದರೆ ಯಾರಿಂದಲೂ ಸಹಿಸಲು ಸಾಧ್ಯವಿಲ್ಲ. ಈಗ ಲಂಚಗುಳಿತನದ ಸ್ಥಿತಿ ಹೇಗಿದೆಯೆಂದರೆ ಅದು ವರ್ಣನಾತೀತ. ಅವರು ಕೆಲಸಕ್ಕೆ ಸ್ವಲ್ಪವನ್ನು ನಿರೀಕ್ಷೆ ಮಾಡಿದರೆ ಅದು ಅಸಹಜವಲ್ಲ. ಅದನ್ನು ಆಲಂಕಾರಿಕವಾಗಿ ಹೇಳುವುದಾದರೆ, ಹಣ್ಣಿನ ಸ್ವಲ್ಪ ಭಾಗವನ್ನು ತಿಂದರೆ ಸಹಜ, ಆದರೆ ಅವರು ಇಲ್ಲಿ ಮರವನ್ನು ನಾಶಮಾಡಿ, ಅದರ ಬೇರು, ಕಾಂಡಗಳನ್ನು ನುಂಗಿ ಹಾಕುತ್ತಿದ್ದಾರೆ. ಯಾರಿಗೂ ಯಾರದೂ ಭಯವಿಲ್ಲ. ಅದು ಯಾಕೆ ಇರಬೇಕು? ಎಲ್ಲರೂ ಅವರವರ ಕ್ಷೇತ್ರದಲ್ಲಿ ಒಳ್ಳೆಯ ಲಾಭದಾಯಕ ವ್ಯಾಪಾರವನ್ನು ಮಾಡುತ್ತಿದ್ದಾರೆ. ಯಾರೂ ಪವಿತ್ರರೂ ಅಲ್ಲ ಶುದ್ಧರೂ ಅಲ್ಲ!'

ಬಿಕ್ರಂಗೆ ತನ್ನ ಕಂಟ್ರಾಕ್ಟ್ ಜೀವನದಲ್ಲಿ ಅನೇಕ ವಿಚಿತ್ರ ಸ್ವಭಾವದ, ವಿಭಿನ್ನ ಮಾನಸಿಕ ಸ್ಥಿತಿಯ ವ್ಯಕ್ತಿಗಳು ಪರಿಚಯವಾಗಿರಬಹುದು. ಆದ್ದರಿಂದ ಆತನಿಗೆ ಇಲ್ಲಿಯ ಇವತ್ತಿನ ಸ್ಥಿತಿ ಚೆನ್ನಾಗಿ ಗೊತ್ತು. ಬಿಕ್ರಂ ದಿನದಲ್ಲಿ ಇಪ್ಪತ್ತು ನಾಲ್ಕು ಗಂಟೆಗಳಲ್ಲಿ ಅನೇಕ ಅಧಿಕಾರಿ ಹಾಗೂ ಕೆಲಸಗಾರರ ಜೊತೆಯಲ್ಲಿ ದುಡಿಯುತ್ತಾನೆ. ಮತ್ತು ಕಂಟ್ರಾಕ್ಟರ್ ಕೆಲಸದಲ್ಲಿ ಅಧಿಕಾರಿಗಳನ್ನು ಮೆಚ್ಚಿಸಲೇಬೇಕು. ಅದೂ ಅಲ್ಲದೆ ಲಂಚಗುಳಿತನದ ಮೂಲಕವೇ ಈ ಕಂಟ್ರಾಕ್ಟರ್‌ಗಳ ವ್ಯವಹಾರ. ಸಣ್ಣ ಕಂಟ್ರಾಕ್ಟರ್‌ಗಳಿಗೆ ಸಾವಿರಗಟ್ಟಲೆ ಲಂಚ ನೀಡಿದರೆ ದೊಡ್ಡ ಕಂಟ್ರಾಕ್ಟರ್‌ಗಳು ಲಕ್ಷಗಟ್ಟಲೆ ನೀಡುತ್ತಾರೆ. ಈ ಕ್ಷೇತ್ರದಲ್ಲಿ ಆಗುವ ಎಲ್ಲಾ ಚಟುವಟಿಕೆಗಳ ಪರಿಚಯ ಬಿಕ್ರಂಗೆ ಚೆನ್ನಾಗಿದೆ.

ನಾನು ಬಿಕ್ರಂನನ್ನು ಕೇಳಿದೆ– 'ಯಾವ ಕಂಟ್ರಾಕ್ಟ್ ನಿಮಗೆ ಹೆಚ್ಚು ಲಾಭ ನೀಡಿದೆ?' ಎಂದು.

'ಯಾವುದು ಎಂದು ಸರಿಯಾಗಿ ಹೇಳಲಾಗದು. ಸಣ್ಣ ಮತ್ತು ದೊಡ್ಡ ಪ್ರಮಾಣದ ಯೋಜನೆಗಳೂ ಸೇರಿದಂತೆ ನಾನು ಈವರೆಗೆ ಇಪ್ಪತ್ತು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದೇನೆ. ಅವುಗಳಲ್ಲಿ ಬಹಳಷ್ಟು ಲಾಭದಾಯಕವಾಗಿರಲಿಲ್ಲವೆಂದೇ



ಹೇಳಬೇಕು. ಆದರೆ ಮೂರು ಅಥವಾ ನಾಲ್ಕು ಪ್ರಾಜೆಕ್ಟ್‌ಗಳಲ್ಲಿ ನಾನು ನಿರೀಕ್ಷೆಗಿಂತಲೂ ಲಾಭಗಳಿಸಿದೆ. ಆದ್ದರಿಂದ ನಾನು ಲಾಭ ನಷ್ಟವನ್ನು ಸರಿದೂಗಿಸಿಕೊಂಡುಹೋಗಿದ್ದೇನೆ ಎಂದು ಹೇಳಬಹುದು'. ಆತ ಮುಂದುವರೆದು ಹೇಳಿದ – 'ನೀವು ಲಾಭ ಮಾಡಬೇಕೆಂದು ಅಂದುಕೊಂಡರೆ ನಿಮ್ಮ ನೈತಿಕ ಹಾಗೂ ಆತ್ಮಸಾಕ್ಷಿಯ ಪ್ರಶ್ನೆಗಳಿಗೆ ಕುರುಡರಾಗಿರಬೇಕು. ಆಗ ನೀವು ಬರೀ ಲಾಭವನ್ನು ನೋಡುತ್ತೀರಿ. ಲಾಭ ಎಷ್ಟು ಬಂದರೂ ಸರಿಯೆ? ನನ್ನ ಕಂಟ್ರಾಕ್ಟರ್ ಜೀವನದಲ್ಲಿ ತೀರ್ಥ ಅವರನ್ನು ಬಿಟ್ಟರೆ ಬೇರೊಬ್ಬ ಪ್ರಾಮಾಣಿಕ ಇಂಜಿನಿಯರ್‌ನನ್ನು ಕಂಡಿಲ್ಲ. ಆತ ನಮ್ಮ ಇಂಜಿನಿಯರ್ ಸಮೂಹದಲ್ಲಿ ಅಪರೂಪದ ವ್ಯಕ್ತಿಯೆಂದು ಹೇಳಬಹುದು. ನಾನು ಕೆಲಸ ಮಾಡಿದ ಇತರ ಇಂಜಿನಿಯರ್‌ಗಳು 'ಡಾಲರ್ ದೇವತೆ'ಯನ್ನು ಪೂಜಿಸುವವರೆ. ಅವರು ಯಾವಾಗಲೂ ಹಣದ ಹಿಂದೆ ಓಡುತ್ತಾರೆ ಆತ ಮುಂದುವರೆದು ಹೇಳಿದ– 'ಅವರು' ನಮಗೆ ಸ್ವಲ್ಪ ಕೊಟ್ಟು ಹೆಚ್ಚಿನದೆಲ್ಲವನ್ನೂ ಅವರೇ ಕಸಿದುಕೊಳ್ಳುತ್ತಾರೆ. ಕೆಲಸದ ಗಾತ್ರದ ದೃಷ್ಟಿಯಿಂದ ಯಾವುದು ಒಳ್ಳೆಯದು ಯಾವುದು ಒಳ್ಳೆಯದಲ್ಲ ಎಂದು ಹೇಳುವುದು ಕಷ್ಟ. ಆದರೆ ಲಾಭದ ದೃಷ್ಟಿಯಿಂದ ಹೇಳುವುದಾದರೆ, ಎಲ್ಲಾ ಯೋಜನೆಗಳೂ ಲಾಭದಾಯಕವೆ. ನಿಮಗೆ ಹಣ ಮಾಡುವ ಶಕ್ತಿಯಿದ್ದರೆ.

'ಹೌದು ಆತ ಹೇಳುವುದು ಸರಿಯೆಂದು' ತೀರ್ಥ ಹೇಳಿದರು. 'ಎಲ್ಲಾ ಕಡೆ ಪ್ರಾಜೆಕ್ಟ್‌ಗಳಿವೆ; ಮತ್ತು ಎಲ್ಲರೂ ಅದರಿಂದ ಚಿನ್ನ ಮತ್ತು ಬೆಳ್ಳಿಯನ್ನು ಸಂಪಾದಿಸುವ ತರಾತುರಿಯಲ್ಲಿದ್ದಾರೆ. ಅವರು ಕಂಟ್ರಾಕ್ಟರ್ ಇರಲಿ ಇಂಜಿನಿಯರ್ ಇರಲಿ, ಮೇಲ್ವಿಚಾರಕರಿರಲಿ, ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳಿರಲಿ ಅಥವಾ ಅಕೌಂಟೆಂಟ್ ಇರಲಿ ಎಲ್ಲರೂ ಹಣ ಮಾಡುವ ದಂಧೆಯಲ್ಲಿ ಮುಳುಗಿರುತ್ತಾರೆ. ಒಂದು ಪ್ರಾಜೆಕ್ಟ್‌ಗೆ ತನ್ನದೇ ಆದ ಗುರಿಯಿರುತ್ತದೆ. ಈ ಪ್ರಾಜೆಕ್ಟ್‌ನ ಜವಾಬ್ದಾರಿ ಹೊತ್ತ ಜನರೂ ಒಂದು ಗುರಿಯನ್ನು ಹೊಂದಿರುತ್ತಾರೆ. ಅದು ಅವರ ಜೇಬನ್ನು ತುಂಬುವ ಗುರಿ. ಇದರಿಂದ ಪ್ರಾಜೆಕ್ಟ್ ಹಾಳಾಗಿ ಹೋಗುತ್ತದೆ'. ಆತ ತನ್ನ ಮಾತನ್ನು ಮುಂದುವರಿಸಿ– 'ನಾನು ಪ್ರಮಾಣ ಮಾಡಿ ಹೇಳುತ್ತೇನೆ ಕಳೆದ ಹತ್ತು ಹದಿನೈದು ವರ್ಷಗಳ ಅವಧಿಯಲ್ಲಿ ಕಟ್ಟಿದ ಮನೆಗಳು ಭದ್ರತೆಯ ದೃಷ್ಟಿಯಿಂದ ಗುಣಮಟ್ಟದ ನಿರ್ಮಾಣದ ದೃಷ್ಟಿಯಿಂದ ಖಾತರಿ ನೀಡಲು ಬರುವುದಿಲ್ಲ. ಯಾವತ್ತಾದರೂ ಬಿರುಕು ಬರಬಹುದು. ಗೋಡೆಗಳು ಕುಸಿಯಬಹುದು. ಇಡೀ ಕಟ್ಟಡ ಕುಸಿದು ಬೀಳಬಹುದು'.

ತೀರ್ಥ ಮುಂದುವರಿದು ಹೇಳಿದರು– ನೀವು ಪತ್ರಿಕೆಯಲ್ಲಿ ಓದಿರಬಹುದು ಅಥವಾ ಕೇಳಿರಬಹುದು. ಕೆಲವು ದಿವಸಗಳ ಹಿಂದೆ, ಸಚಿವಾಲಯದ ಕಛೇರಿಯಿದ್ದ ಕಟ್ಟಡ ವಾಸಯೋಗ್ಯವಲ್ಲ ಎಂದು ಘೋಷಿಸಿದರು. ಅಲ್ಲಿ ಕೆಲಸ ಮಾಡುತ್ತಿದ್ದ ಕಛೇರಿ ಸಚಿವಾಲಯವನ್ನು ಆತುರಾತುರವಾಗಿ ಬೇರೆ ಕಡೆ ಬದಲಾಯಿಸಿದರು.

ಹೊಸ ಕಟ್ಟಡದಲ್ಲಿಯೂ ಗೋಡೆಗಳು ಕ್ರಾಕ್ ಬಂದಿದ್ದವು. ಅದೂ ಕೂಡ ಯಾವಾಗಲಾದರೂ ಬಿದ್ದುಹೋಗಬಹುದು. ಈಗ ಹೇಳಿ ಈ ಕೆಲಸಕ್ಕೆ ಯಾರಾದರೂ ಜವಾಬ್ದಾರಿ ತೆಗೆದುಕೊಳ್ಳುತ್ತಾರೆಯೇ? ಇಲ್ಲ! ಯಾರೂ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ!

ಬಿಕ್ರಂನಿಗೂ ಆ ಬಗ್ಗೆ ಮಾಹಿತಿಯಿತ್ತು. ತೀರ್ಥನ ಮಾತುಗಳಿಗೆ ಸಮ್ಮತಿಸುತ್ತಾ ಆತ ಹೇಳಿದ– ಹೌದು ಆ ಬಿಲ್ಡಿಂಗ್ ಬಗ್ಗೆ ನನಗೂ ಗೊತ್ತು. ಅದು ಹತ್ತು ವರ್ಷಗಳ ಹಿಂದೆ ಸಾರ್ವಜನಿಕ ಹಣದಿಂದ ಕಟ್ಟಿದ ಕಟ್ಟಡ. ಅದರ ನಿರ್ಮಾಣ ವೆಚ್ಚ ಹಾಗೂ ಆ ಕಟ್ಟಡದ ಪ್ರಚಾರ ನೋಡಿದವರಿಗೆ ಅದು ಶತಮಾನಗಳ ಕಾಲ ಉಳಿಯುವಂಥ ಕಟ್ಟಡ ಅನ್ನಿಸುತ್ತಿತ್ತು. ಆದರೆ ಈಗ ಯಾರಾದರೂ ಅಂದಾಜುಮಾಡಿ ಹೇಳುತ್ತಾರೆ. ನಿಗದಿಯಾದ ಮೊತ್ತದ ಮೂವತ್ತು ಪರ್ಸೆಂಟ್ ಕೂಡ ಕಟ್ಟಡದ ನಿರ್ಮಾಣಕ್ಕೆ ಖರ್ಚಾಗಿಲ್ಲ ಎಂದು. ಅವರು ಕಟ್ಟಡದ ಮುಂಭಾಗವನ್ನು ಮಾತ್ರ ಅಲಂಕಾರ ಮಾಡಿದ್ದಾರೆ. ಬಿಲ್ಡಿಂಗ್‌ನ ಉಳಿದ ಭಾಗಗಳನ್ನು ರದ್ದುಪಡಿಸಿ ಉಳಿದ ಹಣವನ್ನು ಅವರ ಜೇಬಿಗೆ ತುಂಬಿಕೊಂಡಿದ್ದಾರೆ.

ಕಂಟ್ರಾಕ್ಟರ್ ಬಿಕ್ರಂಗೆ ಈ ಕ್ಷೇತ್ರದಲ್ಲಿ ತಿಳಿಯದೆ ಇರುವುದು ಯಾವುದೂ ಇರಲಿಲ್ಲ. ಪ್ರಾಮಾಣಿಕ ಕಂಟ್ರಾಕ್ಟರ್ ಆಗಿಯೆ ಮುಂದುವರೆದರೆ ಅದರಿಂದ ಆತ ಏನೂ ಪ್ರಗತಿಯನ್ನು ಸಾಧಿಸಲಾಗುವುದಿಲ್ಲ. ಅನೇಕ ಬಾರಿ ಆತ ಬೇಸರದಿಂದ ಹೇಳಿದ್ದ– 'ಈ ಕಂಟ್ರಾಕ್ಟರ್ ಗಿರಿಯನ್ನು ಬಿಟ್ಟು ಬೇರೆ ಏನಾದರೂ ಕೆಲಸವನ್ನು ಮಾಡಬೇಕು' ಎಂದು. ಎಷ್ಟು ದಿವಸಾಂತ ಈ ಮೋಸದ ಕೆಲಸವನ್ನು ಮುಂದುವರಿಸುವುದು? ಟೆಂಡರ್ ಪಡೆಯಬೇಕಾದರೆ; ನೀವು ಕಡಿಮೆ ಟೆಂಡರ್ ಹಾಕದಿದ್ದರೆ ಟೆಂಡರ್ ಸಿಗುವುದಿಲ್ಲ. ಏನೂ ಕೆಲಸವಿಲ್ಲದಿದ್ದಾಗ, ಕಡಿಮೆ ದರವನ್ನಾದರೂ ಕೋಟ್ ಮಾಡಿ ಟೆಂಡರ್ ಪಡೆಯಬೇಕಾಗುತ್ತದೆ. ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ಪ್ರಕಾರ ಕೆಲಸ ಮಾಡಬೇಕಾದರೆ ನಿಮಗೆ ನಷ್ಟವಾಗುತ್ತದೆ. ಆಗ ಏನು ಮಾಡುತ್ತೀರಿ? ನಿಮ್ಮ ಮನಸ್ಸು ಒಪ್ಪದಿದ್ದರೂ ದೇಶಕ್ಕೆ ದ್ರೋಹ ಮಾಡುತ್ತೀರಿ, ಇಂಥ ಅನೇಕ ವಿಷಯಗಳನ್ನು ಆತ ನನಗೆ ಹೇಳಿದನು. ಯಾವುದೊ ಒಂದು ಪ್ರಾಜೆಕ್ಟನ ಕೆಲಸಕ್ಕಾಗಿ ಇಂಜಿನಿಯರ್‌ನ ಅಂಗೀಕಾರವನ್ನು ಪಡೆಯಲಾಗದೆ ಬಹಳ ನಷ್ಟವನ್ನು ಅನುಭವಿಸಬೇಕಾಗಿ ಬಂದಿತು. ಬಿಕ್ರಂ ಈ ಕ್ಷೇತ್ರದಲ್ಲಿ ಬಹಳಷ್ಟು ಅನುಭವಿ. ಸಂಬಂಧಪಟ್ಟ ಅಧಿಕಾರಿ ಒಂದು ಪ್ರಾಜೆಕ್ಟಿನಿಂದ ಎಷ್ಟು ಹಣ ಪಡೆಯುತ್ತಾನೆ, ಅಕೌಂಟೆಂಟ್ ಎಷ್ಟು ಪಡೆಯುತ್ತಾನೆ, ಕಂಟ್ರಾಕ್ಟರ್ ಎಷ್ಟು ಪಡೆಯುತ್ತಾನೆ ಇತ್ಯಾದಿ ಈತನಿಗೆ ಚೆನ್ನಾಗಿ ಗೊತ್ತಿದೆ.

ಒಂದು ಕ್ಷಣದ ಮೌನದ ನಂತರ ನಾನು ತೀರ್ಥರನ್ನು ಕೇಳಿದೆ – 'ಮಿಸ್ಟರ್ ತೀರ್ಥ, ನೀವು ಅನೇಕ ಕಚೇರಿಗಳಲ್ಲಿ ಕೆಲಸ ಮಾಡಿರುವುದು ನನಗೆ ತಿಳಿಯಿತು.



ನಿಮಗೆ ಬಹಳ ಸೂಕ್ತವಾದ ಕಚೇರಿ ಯಾವುದು ಎಂದು ತಿಳಿಸುತ್ತೀರಾ?' ಎಂದೆ.

ಆತನಿಗೆ ಸ್ವಲ್ಪ ಸಮಯ ಕಷ್ಟವಾಯಿತು. ಆತ ಯೋಚಿಸಲು ಆರಂಭಿಸಿದ. ಸ್ವಲ್ಪ ಸಮಯದ ನಂತರ ಆತ ಹೇಳಿದ– 'ಹೌದು ನಾನು ನಿಮಗೆ ಅದನ್ನೇ ಹೇಳಬೇಕೆಂದಿದ್ದೆ, ನಿಜ ಹೇಳಬೇಕೆಂದರೆ ಯಾವುದೇ ಕಚೇರಿ ಮತ್ತು ಪ್ರಾಜೆಕ್ಟ್ ನನಗೆ ಸೂಕ್ತವಾಗಿ ಕಾಣಲಿಲ್ಲ. ನಾನು ಏನಾದರೂ ಅನ್ಯಾಯವನ್ನು ಮತ್ತು ಕೆಟ್ಟ ಕೆಲಸವನ್ನು ಮಾಡಿದ್ದರೆ ಈ ಜನ ನನ್ನ ಜೊತೆ ಸ್ನೇಹಿತರಾಗಿರುತ್ತಿದ್ದರು. ನಿಮಗೆ ನೇರವಾಗಿ ಹೇಳಬೇಕೆಂದರೆ, ಈ ದೇಶದಲ್ಲಿ ನನಗೆ ಸೂಕ್ತವಾದ ಯಾವ ಕಚೇರಿಯೂ ಕಾಣಲಿಲ್ಲ. ಮತ್ತು ಸೂಕ್ತವಾದ ಕಚೇರಿಗಳು ಇವೆ ಎಂದು ಅನ್ನಿಸುವುದಿಲ್ಲ. ಹೀಗಾಗಿ ನಾನು ವಿದೇಶಕ್ಕೆ ಹೋಗಿ ಕೆಲಸ ಮಾಡಬೇಕು ಎಂದು ಕೆಲವೊಮ್ಮೆ ಅನ್ನಿಸುತ್ತದೆ'.

ಆತ ಮುಂದುವರೆಸಿದ– 'ಈ ದೇಶದಲ್ಲಿ ಸುಲಿಗೆ ಮಾಡುವಂತೆ ಪ್ರಪಂಚದ ಬೇರೆ ಯಾವ ದೇಶದಲ್ಲಿಯೂ ಇಲ್ಲವೆನ್ನಿಸುತ್ತದೆ. ಈ ದೇಶದಲ್ಲಿ ಅದು ಮುಕ್ತವಾಗಿದೆ'.

ಆತನನ್ನು ಸಮಾಧಾನ ಪಡಿಸುತ್ತಾ ಹೇಳಿದೆ – 'ಈಗ ಪರಿಸ್ಥಿತಿ ಪರಾಕಾಷ್ಠೆ ಮುಟ್ಟಿದೆ. ಯಾರಿಗೂ ಸಹಿಸಲು ಸಾಧ್ಯವಾಗುತ್ತಿಲ್ಲ. ಈ ಭ್ರಷ್ಟಾಚಾರವನ್ನು ಈಗಿಂದೀಗಲೆ ತೊಲಗಿಸಬೇಕು. ನಿಮ್ಮ ಹಾಗೆಯೆ ಎಲ್ಲರೂ ಬೇಸತ್ತಿದ್ದಾರೆ. ಇದು ಹೀಗೆಯೆ ಮುಂದುವರೆಯಲು ಬಿಡಬಾರದು'.

ನನ್ನ ಮಾತುಗಳಿಗೆ ಬಿಕ್ರಂ ಪ್ರತಿಕ್ರಿಯಿಸುತ್ತಾ ಹೇಳಿದನು – 'ಆದರೆ ನೀವು ಏನು ಹೇಳುತ್ತಿದ್ದೀರಿ ಅದು ಈ ದೇಶದಲ್ಲಿ ಸಾಧ್ಯವಾಗಲಾರದು. ಈ ಜನರನ್ನು ನೋಡಿ, ಈ ದೇಶದ ಬುದ್ಧಿಜೀವಿಗಳ ಸ್ವಭಾವದವರನ್ನು ಗಮನಿಸಿ, ಜವಾಬ್ದಾರಿಯಿರುವ ಜನರ ಮನೋಭಾವವನ್ನು ನೋಡಿ, ಇಂಥ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲವೇನೊ ಅನ್ನಿಸುತ್ತದೆ'.

ಅದೂ ಅಲ್ಲದೆ, ಸಮಾಜದ ನಿರ್ಮಾಣದಲ್ಲಿ ಸ್ಪರ್ಧೆಯಿದೆ. ಆದ್ದರಿಂದ ಅವರ ಎಲ್ಲಾ ಚಟುವಟಿಕೆಗಳನ್ನು ಹೇಗೆ ಗಮನಿಸಲು ಸಾಧ್ಯ? ಇಲ್ಲಿಯ ವಿದ್ಯಾವಂತರ ಅಂತರಂಗವನ್ನು ಯಾವತ್ತಾದರೂ ತಿಳಿಯಲು ಬಯಸಿದ್ದೀರಾ? ನಾನು ಹೇಳುತ್ತೇನೆ, ಎಂದು ಮುಂದುವರಿಸಿ, ಅವರ ಮನದಾಳದ ಉದ್ದೇಶ ಅವರ ಮಕ್ಕಳು ಇಂಜಿನಿಯರ್ ಅಥವಾ ಡಾಕ್ಟರ್ ಆಗಬೇಕು. ಆತ ಟೆಕ್ನಿಕಲ್ ಸೈಡ್‌ಗೆ ಹೋಗಲು ಸಾಧ್ಯವಾಗದಿದ್ದರೆ ಆತ ಒಬ್ಬ ಆಡಳಿತಾಧಿಕಾರಿಯಾಗಿ ಯಾವುದಾದರೂ ಒಂದು ಕಚೇರಿಯಲ್ಲಿ ಕೆಲಸ ಮಾಡಿ ಚೆನ್ನಾಗಿ ಹಣಸಂಪಾದಿಸಬೇಕು. ಈ ಮಾರ್ಗವನ್ನು ಅನುಸರಿಸುತ್ತಿರುವ ಜನರು ಚೆನ್ನಾಗಿ ಹಣವನ್ನು ಸಂಪಾದಿಸಿದ್ದಾರೆ. ಅವರ ಮಕ್ಕಳು ಅದೇ ದಾರಿಯನ್ನು ಅನುಸರಿಸ ಬೇಕೆಂಬುದು ಅವರ ಉದ್ದೇಶ. ಇದು ಒಂದು ರೀತಿಯಲ್ಲಿ ಅವರ ಜೀವನದ ಸಾಂಪ್ರದಾಯಿಕ ಶೈಲಿಯಾಗಬಹುದು. ನಮ್ಮ ಸಮಾಜದಲ್ಲಿ ಯಾರು ಹಣ ಮತ್ತು ಅಧಿಕಾರ ಪಡೆದಿದ್ದಾರೊ ಅವರು ಸ್ಥಾನಮಾನಗಳನ್ನು ಪಡೆಯುತ್ತಾರೆ.

ಇದು 'ಮಟೀರಿಯಲಿಸ್ಟಿಕ್ ಏಜ್'. ನಿಮ್ಮಲ್ಲಿ ಹಣವಿದ್ದರೆ ಶ್ರೀಮಂತರನ್ನು ತಲೆಬಾಗಿಸುವಂತೆ ಮಾಡಬಹುದು ಎಂದು ತಿಳಿಸುತ್ತಾ ನಿಮ್ಮ ಮಾತಿನಲ್ಲಿ ನನಗೆ ನಂಬಿಕೆಯಿಲ್ಲವೆಂದರು.

ನಾನು ನನ್ನ ಸಾಮಾನ್ಯ ತಿಳುವಳಿಕೆಯಿಂದ ಅರ್ಥಮಾಡಿಕೊಂಡ ವಿಚಾರ ಇಷ್ಟೆ, ನಾನು ಬಿಕ್ರಂನ ಅಭಿಪ್ರಾಯವನ್ನು ಒಪ್ಪುವುದಿಲ್ಲ ಎಂದು ಹೇಳಲಿಲ್ಲ, ಆದರೆ ನನ್ನ ವಿವರಣೆಯನ್ನು ನಾನು ಗೌರವಿಸುತ್ತೇನೆ. ನಾನು ಇಂದು ತೀರ್ಥರ ಮೂಲಕ ಗಳಿಸಿದ ಮಾಹಿತಿ, ಇವತ್ತಿನ ನಮ್ಮ ಸಾಮಾಜಿಕ ಪರಿಸ್ಥಿತಿ ಅಸಹ್ಯವಾದುದು. ಇಡೀ ಸಮಾಜ ಅದನ್ನು ಸಹಿಸಲು ಶ್ರಮಪಡುತ್ತದೆ. ಅಗೋಚರವಾಗಿರುವ ಭಾವನೆಗಳನ್ನು ವ್ಯಕ್ತಪಡಿಸಲು ಶ್ರಮಪಡುತ್ತಿದ್ದಾರೆ.

ತೀರ್ಥ ಆತನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಹೇಳಿದರು– 'ನಾನು ಈ ಪರಿಸ್ಥಿತಿ ಬಹಳ ದಿನ ಮುಂದುವರಿಯುತ್ತದೆಯೆಂದು ಭಾವಿಸುವುದಿಲ್ಲ. ಇದು ಒಂದು ರೀತಿಯಲ್ಲಿ 'ಫ್ಲಾಷ್‌ಫುಡ್' (ಆಕರ್ಷಕ ತಿಂಡಿ) ಇದ್ದ ಹಾಗೆ.... ಅದು ಮಳೆಗಾಲದವರೆಗೆ ಮುಂದುವರೆಯುತ್ತದೆ. ಮಳೆಗಾಲ ಮುಗಿದ ಮೇಲೆ ಎಲ್ಲವೂ ಮುಗಿದು ಸ್ವಚ್ಛವಾಗುತ್ತದೆ ಮತ್ತು ಚೆನ್ನಾಗಿರುತ್ತದೆ' ಎಂದರು.

'ನೀವು ಹೇಳುತ್ತಿರುವುದು ಸರಿ ಮಿಸ್ಟರ್ ತೀರ್ಥ ಅವರೆ' ಎಂದು ಅವರ ಅಭಿಪ್ರಾಯ ವನ್ನು ಬೆಂಬಲಿಸುತ್ತಾ ನಾನು ಹೇಳಿದೆ – 'ಎಲ್ಲೆಲ್ಲೂ ಹೊಸ ನೀರಿಗಾಗಿ ಯಾವಾಗ ಗದ್ದಲ ಪ್ರಾರಂಭವಾಗುತ್ತದೋ, ಆಗ ಕೊಳಚೆ ನೀರಿನ ಹಳ್ಳಕೊಳ್ಳಗಳು ಬತ್ತಿಹೋಗುತ್ತವೆ. ಆಗ ಸ್ವಚ್ಛವಾದ ನೀರು ಮಾತ್ರ ದೊರೆಯುತ್ತದೆ'.

ಅದೇ ವೇಳೆಗೆ ಬಿಕ್ರಂ ಮತ್ತು ತೀರ್ಥರಿಗಾಗಿ ಟೀ ಬಂದಿತು. ಟೀಯನ್ನು ಕುಡಿಯುತ್ತಾ, ಸಿಗರೇಟನ್ನು ಸೇದುತ್ತಾ ಸ್ವಲ್ಪ ಸಮಯ ರೂಮಿನಲ್ಲಿ ಮೌನ ಆವರಿಸಿತು. ಟೀ ಕುಡಿಯುವ ಸದ್ದು ಮಾತ್ರ ಕೇಳುತ್ತಿತ್ತು. ತೀರ್ಥ ಟೀ ಕುಡಿಯುತ್ತಿದ್ದಾಗ ಯೋಚಿಸುತ್ತಿದ್ದ. ಏನನ್ನೋ ಹೇಳಲು ಕಾತರನಾಗಿದ್ದಾನೆ ಎನ್ನುವುದನ್ನು ಆತನ ಮುಖದಲ್ಲಿ ಯಾರಾದರೂ ಗುರುತಿಸಬಹುದಿತ್ತು.

ಟೇಬಲ್ಲಿನ ಮೇಲೆ ಕಪ್ಪನ್ನು ಇಡುತ್ತಾ ಬಿಕ್ರಂ ಹೇಳಿದ – ನಾನು ಒಂದು ಕುತೂಹಲಕರ ಪ್ರಸಂಗವನ್ನು ಈ ಸಂಬಂಧವಾಗಿ ಹೇಳುತ್ತೇನೆ. ಅದು ಈ ಕ್ಷೇತ್ರದಲ್ಲಿ ವಿಷಯಗಳು ಹೇಗೆ ಇಲ್ಲಿ ಕೈಚಳಕದಿಂದ ಬದಲಾಗುತ್ತವೆ ಎನ್ನುವುದನ್ನು ತೋರಿಸುತ್ತದೆ.

ಇದು ಕಳೆದ ನಾಲ್ಕು ವರ್ಷದ ಹಿಂದೆ ನಡೆದದ್ದು. ಪಶ್ಚಿಮ ನೇಪಾಳದ ಯಾವುದೊ ಮೂಲೆಯಲ್ಲಿ ಒಂದು ತಾತ್ಕಾಲಿಕ ಸೇತುವೆಯನ್ನು ನಿರ್ಮಾಣ ಮಾಡಬೇಕಿತ್ತು. ಇದಕ್ಕಾಗಿ ಕಠ್ಮಂಡುವಿನಲ್ಲಿ ಕಾಂಟ್ರಾಕ್ಟ್‌ನ ಸಹಿ ಮಾಡಲಾಯಿತು. ನನ್ನ ಒಬ್ಬ ಸ್ನೇಹಿತ ಒಂದು ಮಿಲಿಯನ್ ರೂಪಾಯಿಗಳಿಗೆ ಕಾಂಟ್ರಾಕ್ಟ್ ಪಡೆದನು. ಒಬ್ಬ ಓವರ್‌ಸೀಯರ್ ಅನ್ನು ಈ ಉದ್ದೇಶಕ್ಕಾಗಿ ನೇಮಕ ಮಾಡಲಾಯಿತು.



ಅದು ಒಂದು ರಿಮೋಟ್ ಪ್ಲೇಸ್ ಆದ್ದರಿಂದ ಕಂಟ್ರಾಕ್ಟರಿಗೆ ಅಡ್ವಾನ್ಸ್ ಅನ್ನು ಪಾವತಿಸಲಾಗಿತ್ತು. ಉಳಿದ ಹಣವನ್ನು ಓವರ್‌ಸೀಯರ್‌ಗೆ ನೀಡಿ ಇಬ್ಬರು ಜನಪ್ರತಿನಿಧಿಗಳನ್ನು ಇಲಾಖಾ ವತಿಯಿಂದ ನೇಮಿಸಿ ಪ್ರಾಜೆಕ್ಟನ್ನು ಆರಂಭಿಸಲಾಯಿತು. ಕಂಟ್ರಾಕ್ಟರ್ ಕಠ್ಮಂಡುವಿನಿಂದ ಹೊರಗೆ ಹೋಗಲೇ ಇಲ್ಲ. ಓವರ್‌ಸೀಯರ್ ಮೂರು ತಿಂಗಳ ರಜೆಯ ಮೇಲೆ ಊರಿಗೆ ಹೋದ. ಆ ಇಬ್ಬರು ಜನಪ್ರತಿನಿಧಿಗಳು ಕಠ್ಮಂಡುವಿಗೂ ಆ ಜಿಲ್ಲೆಗೂ ಪ್ಲೇನಿನಲ್ಲಿ ಓಡಾಡಿದರು. ಒಂದು ದಿನ ಸುದ್ದಿ ಹಬ್ಬಿತು. ಆ ಸೇತುವೆಯು ಪೂರ್ಣನಿರ್ಮಾಣಗೊಂಡು ಜನರ ಬಳಕೆಗೆ ಸಿದ್ಧವಾಗಿದೆಯೆಂದು. ಮತ್ತು ನೇಪಾಳದ ರೇಡಿಯೋ ಮೂಲಕ ಜಿಲ್ಲಾ ಸುದ್ದಿಯ ಕಾರ್ಯಕ್ರಮ ದಡಿಯಲ್ಲಿಯೂ ಪ್ರಸಾರ ಮಾಡಲಾಯಿತು. ಇದಾದ ಮೇಲೆ ಕಠ್ಮಂಡುವಿನ ವೃತ್ತಪತ್ರಿಕೆಗಳು ಒಂದು ಸುದ್ದಿಯನ್ನು ಪ್ರಕಟಿಸಿದವು. ಆ ಸೇತುವೆಯು ನದಿಯ ಪ್ರವಾಹದಿಂದ ಕೊಚ್ಚಿಹೋಯಿತೆಂದು. ಯಾರೂ ಕೂಡ ಬ್ರಿಡ್ಜನ್ನು ಕಟ್ಟಿಲ್ಲ ಎಂದು ಹೇಳಲು ಸಾಧ್ಯವಾಗಲಿಲ್ಲ. ಕಂಟ್ರಾಕ್ಟರ್ ಸೇರಿದಂತೆ ನಾಲ್ಕೂ ಜನರೂ ಹಣವನ್ನು ಹಂಚಿಕೊಂಡರು. ಬ್ರಿಡ್ಜನ್ನು ಕಟ್ಟುವ ಕಾಂಟ್ರಾಕ್ಟ್‌ನ ಅಗ್ರಿಮೆಂಟ್ ದಿನದಿಂದ ಆರಂಭವಾಗಿ ನದಿಯಿಂದ ಸೇತುವೆ ಕೊಚ್ಚಿ ಹೋಗುವವರೆಗೆ ಎಲ್ಲಾ ದಾಖಲೆಗಳನ್ನು ನ್ಯಾಯಯುತವಾಗಿ ಸಿದ್ಧಪಡಿಸಿದ್ದರು. ಅವುಗಳನ್ನು ಯಾರು ಬೇಕಾದರೂ ನೋಡಬಹುದಿತ್ತು. ಆದ್ದರಿಂದ ನಿಯಮಾನುಸಾರ ಯಾರೂ ಏನನ್ನೂ ಮಾಡಲಾಗಲಿಲ್ಲ. ಯಾರಾದರೂ ಇಂಥ ಯೋಜನೆಗಳನ್ನು ಮಾಡಿದರೆ, ಅದನ್ನು ಭ್ರಷ್ಟಾಚಾರ ಎಂದು ಹೇಗೆ ಹೇಳಲು ಸಾಧ್ಯ?

ಬಿಕ್ರಂನ ಈ ಕಥೆ ತೀರ್ಥನ ಯಾತನಾಮಯ ನಗುವಿಗೆ ಕಾರಣವಾಯಿತು. ತೀರ್ಥನಿಗೆ ಈ ವಿಚಾರವಾಗಿ ಬಿಕ್ರಂನಿಂದ ಇನ್ನು ಹೆಚ್ಚಿನ ಮಾಹಿತಿ ಬೇಕಿತ್ತು. 'ಅಂದರೆ ಆ ಕಾಂಟ್ರಾಕ್ಟರ್ ಮತ್ತು ಓವರಸೀಯರ್ ಇಬ್ಬರೂ ಜೇಬು ತುಂಬಿಸಿಕೊಂಡರು, ಅವರು ಪ್ರಾಜೆಕ್ಟ್ ಸೈಟನ್ನೂ ಕೂಡ ಭೇಟಿ ಮಾಡಿರಲಿಲ್ಲ'.

'ಅವರು ಯಾಕೆ ಭೇಟಿ ನೀಡಬೇಕು? ಎಲ್ಲವನ್ನೂ ಮನೆಯಲ್ಲಿ ಸಾಧಿಸಿ ತೋರಿಸ ಬಹುದಲ್ಲಾ? ಜನಪ್ರತಿನಿಧಿಗಳು ಮರದ ಸೇತುವೆಯನ್ನು ಕೊಚ್ಚಿಹೋಗುವಂತೆ ಮಾಡಿ ದಾಖಲೆಗಳನ್ನು ಸಾಕ್ಷಿಗಳನ್ನು ಸಿದ್ಧಪಡಿಸಿದ್ದರು. ಇದು ಕಥೆಯಲ್ಲ ಸತ್ಯ. ಯಾಕೆಂದರೆ ಮರದ ಸೇತುವೆಯು ಸೇತುವೆಯೇ ಕಬ್ಬಿಣದ ಸೇತುವೆಯೂ ಸೇತುವೆಯೆ, ಅದು ಅಲ್ಲದೆ ಸೇತುವೆ ನದಿಯ ನೀರಿನಿಂದ ಕೊಚ್ಚಿ ಹೋಗಿದೆ'.

ನಾನು ನನ್ನ ಕುತೂಹಲವನ್ನು ವ್ಯಕ್ತಪಡಿಸುತ್ತಾ ಹೇಳಿದೆ – 'ಹಾಗಾದರೆ ನೇಪಾಳದ ರೇಡಿಯೋದ ಮೂಲಕ ಹಾಗೂ ವಾರ್ತಾಪತ್ರಿಕೆಯಲ್ಲಿ ಪ್ರಚಾರ ಮಾಡಿದ್ದು ಕೇವಲ ತಮಾಷೆ' ಎಂದೆ.

‘ಹೌದು ಅದು ತಮಾಷೆ’.

‘ಅದು ಹೇಗೆ ಮಾಡಲು ಸಾಧ್ಯ?’

ಮೇಲಿನ ಪ್ರಸಂಗವು ನಿಜವೆಂದು ನಂಬುತ್ತಾ ತೀರ್ಥ ಹೇಳಿದರು – ‘ಈ ರೀತಿಯ ಕಥೆಗಳು ಈ ದೇಶದಲ್ಲಿ ಸಾಮಾನ್ಯ. ನಾನೊಂದು ಇಂಥದ್ದೆ ಕುತೂಹಲಕರ ಕಥೆಯನ್ನು ಹೇಳುತ್ತೇನೆ. ಇಲಾಖೆಯು ಒಬ್ಬ ಕಂಟ್ರಾಕ್ಟರನ ಜೊತೆ ಒಂದು ಪ್ರಾಜೆಕ್ಟನ್ನು ಒಪ್ಪಿ ಸಹಿ ಮಾಡಿತು. ಕೆಲಸ ಆರಂಭವಾಯಿತು. ಕಂಟ್ರಾಕ್ಟರ್ ವಿದೇಶಿಯವ. ಅವನು ಈ ಸಂದರ್ಭದ ಉಪಯೋಗವನ್ನು ಪಡೆಯಬೇಕೆಂದು ಯೋಚಿಸಿರಬೇಕು. ಇಲ್ಲಿಯ ಜನರು ಹಣವಂತರು ಬುದ್ಧಿವಂತರಲ್ಲ. ಅವನು ಒಂದು ಯೋಜನೆಯನ್ನು ಕಲ್ಪಿಸಿಕೊಂಡು ಸಂಬಂಧಪಟ್ಟ ಸಚಿವಾಲಯದಿಂದ ಕಾರ್ಯದರ್ಶಿಯವರ ಸಂಪರ್ಕವನ್ನು ಬೆಳೆಸಿ ಅರ್ಜಿಯನ್ನು ಸಲ್ಲಿಸಿದನು. ಅವರೇನು ಅವರ ಜೇಬಿನಿಂದ ಕೊಡಬೇಕೆ? ಒಂದು ವಿದೇಶಿ ಸಂಸ್ಥೆಯಿಂದ ಹತ್ತು ಮಿಲಿಯನ್ ರೂಪಾಯಿಗಳ ಧನ ಸಹಾಯವನ್ನು ಪಡೆದು ಪ್ರಾಜೆಕ್ಟಿಗೆ ಬೇಕಾದ ಮೆಷನರಿಯನ್ನು ಖರೀದಿಸಿದರು. ಒಪ್ಪಂದದ ಪ್ರಕಾರ ಕಂಟ್ರಾಕ್ಟರ್ ಮೆಷನರಿಯ ಮೇಲೆ ಬಾಡಿಗೆ ನೀಡಬೇಕಿತ್ತು. ಕಂಟ್ರಾಕ್ಟರ್ ಹೊಸ ಮೆಷಿನರಿ ಹಾಗೂ ಎಕ್ವಿಪ್‌ಮೆಂಟ್‌ಗಳನ್ನು ಬಳಸಿ ಪ್ರಾಜೆಕ್ಟನ್ನು ಕಂಪ್ಲೀಟು ಮಾಡಿದ. ಆದರೆ ಕಂಟ್ರಾಕ್ಟರ್ ಬಾಡಿಗೆಯನ್ನು ನೀಡದೆ ಮೆಷನರಿ ಹಾಗೂ ಎಕ್ವಿಪ್‌ಮೆಂಟ್‌ಗಳನ್ನು ಹಾಳಾಗಲು ಬಿಟ್ಟು ಓಡಿಹೋದ’.

‘ಇಂಥ ಕತೆಗಳಿಗೆ ಕೊನೆಯೆ ಇಲ್ಲ, ಇಂಥ ಕತೆಗಳು ಸಮೃದ್ಧಿಯಾಗಿ ಇವೆ’ ಎಂದು ತೀರ್ಥ ಹೇಳಿದ– ‘ನಾನು ನೀರು ಸರಬರಾಜು ಇಲಾಖೆಯಲ್ಲಿ ಇದ್ದಾಗ ನಡೆದ ಒಂದು ಕಥೆಯನ್ನು ಹೇಳುತ್ತೇನೆ. ಪೈಪುಗಳನ್ನು ಅಳವಡಿಸುವ ಒಂದು ಯೋಜನೆ ಇತ್ತು. ದಪ್ಪದಾದ ಪೈಪುಗಳನ್ನು ಹಾಕುವುದಕ್ಕೆ ಬದಲಾಗಿ ತೆಳುವಾದ ಪೈಪುಗಳನ್ನು ಅಳವಡಿಸುತ್ತಿದ್ದುದು ನನ್ನ ಗಮನಕ್ಕೆ ಬಂದಿತು. ನಾನು ಆಗ ವಿರೋಧಿಸಿದೆ. ಯಾಕೆ ಹೀಗೆ ಮಾಡುತ್ತೀರಿ? ಎಂದು. ಆಗ ಅವರು ದಪ್ಪನೆ ಪೈಪು ಅಥವಾ ತೆಳ್ಳನೆಯ ಪೈಪು ಯಾವುದಾದರೂ ಅಂಥ ವ್ಯತ್ಯಾಸವಿರುವುದಿಲ್ಲ, ಅವುಗಳನ್ನು ಭೂಮಿಯಲ್ಲಿ ಹೂಳುತ್ತೇವೆ. ಕೆಲವು ವರ್ಷಗಳ ನಂತರ ಹೇಗಾದರೂ ಬದಲಾಯಿಸಲೇಬೇಕು ಎಂದು ಸಮಜಾಯಿಷಿ ನೀಡತೊಡಗಿದರು’.

ಅವರು ಈ ರೀತಿ ವಾದ ಮಾಡಿದ ಮೇಲೆ ನಾನು ಏನನ್ನೂ ಮಾಡಲಾಗಲಿಲ್ಲ. ಇಲ್ಲಿ ಎಲ್ಲರೂ ಭ್ರಷ್ಟರೆಂದು ನಾನು ತೀರ್ಮಾನಕ್ಕೆ ಬಂದೆ. ‘ಈ ದೇಶ ಕೇವಲ ಕಳ್ಳರಿಗೆ ಮತ್ತು ಮೋಸಗಾರರಿಗೆ ಮಾತ್ರ ಅಂದುಕೊಂಡೆ. ಇಲ್ಲಿ ಇರುವುದಕ್ಕಿಂತ ವಿದೇಶಕ್ಕೆ ಹೋಗುವುದು ಉತ್ತಮ ಎಂದುಕೊಂಡೆ’.

ಬಿಕ್ರಂ ಆತನ ಮಾತನ್ನು ಮಿತಿಗೊಳಿಸಿ ಹೇಳಿದ – ‘ಮಿಸ್ಟರ್ ತೀರ್ಥ ನೀವು ಯಾವಾಗಲೂ ಹೀಗೆ ಮಾತನಾಡುತ್ತೀರಿ. ನೀವು ಎಲ್ಲಿಯೇ ಹೋದರು ಕೆಲಸ



ಮಾಡಲೇಬೇಕು. ನಿಮ್ಮಂಥ ಎಂಜಿನಿಯರ್‌ಗಳು ಈ ದೇಶದಲ್ಲಿ ವಿರಳ. ನೀವು ಇಲ್ಲಿ ಪಡೆದಿರುವ ಗೌರವ ಊಹೆಗೆ ನಿಲುಕುವಂತಹುದಲ್ಲ. ನೀವು ಇಲ್ಲಿಯ ಹವಾಗುಣಕ್ಕೆ ಹೊಂದಿಕೆಯಾಗಿಲ್ಲ. ನೀವು ಇಲ್ಲಿಯ ಹವಾಗುಣಕ್ಕೆ ಒಮ್ಮೆ ಹೊಂದಿಕೊಂಡರೆ ಮತ್ತೆ ಯಾವತ್ತೂ ಈ ದೇಶವನ್ನು ಬಿಡುವ ವಿಚಾರವನ್ನು ಮಾತನಾಡುವುದಿಲ್ಲ’ ಎಂದನು.

ನೋಡಿ ಬಿಕ್ರಂ, ‘ನಾನು ನನ್ನ ತತ್ವಗಳನ್ನು ಮಾರಿಕೊಳ್ಳುವಂತಿದ್ದರೆ ಎಂದೋ ಆ ರೀತಿ ಮಾಡಬಹುದಿತ್ತು. ನಾನು ಇಲ್ಲಿಯವರೆಗೆ ನನ್ನ ತತ್ವಗಳನ್ನು ಕಾಪಾಡಿಕೊಂಡು ಬಂದಿದ್ದೇನೆ. ನಾನೊಬ್ಬನೆ ತತ್ವ ಮತ್ತು ಸಿದ್ಧಾಂತಗಳ ಬಗ್ಗೆ ಮಾತನಾಡುವುದನ್ನು ಗಮನಿಸಿದಾಗ, ನನಗೆ ಬೇಸರವಾಗುತ್ತದೆ ಮತ್ತು ಈ ದೇಶವನ್ನು ಬಿಟ್ಟು ಹೋಗಬೇಕೆನಿಸುತ್ತದೆ. ದೂರವಿದ್ದಾಗ ಇಂಥವುಗಳನ್ನು ನೋಡುವ ಕೇಳುವ ಅವಕಾಶವಿರುವುದಿಲ್ಲ. ಆಗ ನೆಮ್ಮದಿಯಿಂದ ಇರುತ್ತೀರಿ’.

ತೀರ್ಥನಿಗೆ ಸಮಾಧಾನಪಡಿಸುತ್ತಾ ಹೇಳಿದೆ– ‘ನೀವು ಏನು ಯೋಚನೆ ಮಾಡುತ್ತಿದ್ದೀರಿ, ಅದು ನಿಮ್ಮ ದೌರ್ಬಲ್ಯ. ನೀವು ಈ ದೇಶದಲ್ಲಿಯೆ ವಾಸಿಸಬೇಕು, ಅದು ನಿಮ್ಮ ವಿಜಯದ ಸಂಕೇತ. ಸಮಾಧಾನವಾಗಿರಿ. ಅವಕಾಶಗಳಿಗಾಗಿ ಕಾಯಿರಿ. ಅವಕಾಶಗಳು ಬಂದೇ ಬರುತ್ತವೆ’!

‘ನಿಜ, ನೀವು ಹೇಳುವುದು ಸರಿ! ಸಮಾಧಾನದಿಂದ ಹೇಳಿದ. ಆದರೆ ನಾನು ಈಗ ಕುಸಿದು ಹೋಗಿದ್ದೇನೆ! ನಾನು ಸೂತ್ರವಿಲ್ಲದ ಗಾಳಿಪಟದಂತೆ ಭ್ರಷ್ಟ ವಾತಾವರಣದ ಬಿರುಗಾಳಿಯಲ್ಲಿ ತತ್ತರಿಸಿ ಹೋಗಿದ್ದೇನೆ!’

ಅಷ್ಟರಲ್ಲಿ ಬಿಕ್ರಂ ಎದ್ದು ನಿಂತು ತನ್ನ ಗಡಿಯಾರದತ್ತ ನೋಡಿ ಆತುರಾತುರವಾಗಿ ಹೇಳಿದ– ‘ಓ! ಇಂದು ನಾನು ನನ್ನ ಪ್ರಾಜೆಕ್ಟಿಗಾಗಿ ಕಬ್ಬಿಣವನ್ನು, ಸಿಮೆಂಟನ್ನು ಖರೀದಿಸಬೇಕು’! ಎಂದು ಹೇಳಿದ.

ಇಂದು ಇಡೀ ದಿವಸ ನೀನು ಬಿಡುವಾಗಿರಬಹುದೆಂದು ಭಾವಿಸಿದ್ದೆ. ಈಗ ಹನ್ನೊಂದು ಗಂಟೆ. ಯಾಕೆ ಆತುರ?

‘ನಾನು ಇಲ್ಲಿ ಒಂದು ಗಂಟೆಗೆ ಮುಗಿಯುತ್ತದೆ ಎಂದುಕೊಂಡಿದ್ದೆ. ಆದರೆ ಮೂರು ಗಂಟೆಯಾಯಿತು. ನಾನು ಸಿಮೆಂಟಿಗೆ ದುಡ್ಡು ಕೊಟ್ಟಿಲ್ಲ. ಬೇರೆ ಇಂಜಿನಿಯರ್‌ಗಳು ಮೂರುನೂರು ಬ್ಯಾಗ್ ಸಿಮೆಂಟಿನಲ್ಲಿ ಕೆಲಸ ಮುಗಿಸುತ್ತಾರೆ. ಆದರೆ ನಮ್ಮ ಇಂಜಿನಿಯರ್ ತೀರ್ಥ ಬೇರೆ ಥರ ಮತ್ತು ನಾನು ಮೋಸ ಮಾಡಲು ಬಯಸುವುದಿಲ್ಲ’.

ಪ್ರಾಜೆಕ್ಟ್ ಬಗ್ಗೆ ಒತ್ತುಕೊಡುತ್ತಾ ನಾನು ಹೇಳಿದೆ ‘ಹೌದು ನೀನು ಎಚ್ಚರಿಕೆಯಿಂದ ಇರಬೇಕು? ನೀವು ಮರಳಿಗೆ ಸಮಾನ ಪ್ರಮಾಣದ ಸಿಮೆಂಟನ್ನು ಬೆರೆಸದೆ ಇದ್ದರೆ ಸಪೋರ್ಟಿಂಗ್ ಮರಗಳಿಂದ ಬೇರ್ಪಡಿಸಿದಾಗ, ಇಡೀ ಕಟ್ಟಡ ಕುಸಿಯುತ್ತದೆ.

ಅದು ತುಂಬಾ ಅಪಾಯಕಾರಿ'.

'ಓ!, ಅದು ಸಾಧ್ಯವಿಲ್ಲ', ನಗುತ್ತಾ ಹೇಳಿದ. 'ನೀವು ೨೫ ಪರ್ಸೆಂಟ್ ಸಿಮೆಂಟ್ ಹಾಕಿದರೂ ಅದು ನಾಶವಾಗುವುದಿಲ್ಲ. ಆದರೆ ಅದು ಬಾಳಬೇಕಾದಷ್ಟು ದಿನ ಬಾಳಿಕೆ ಬರುವುದಿಲ್ಲ ಅಷ್ಟೆ ನಾನು ನಿಮಗೆ ಕೆಲವು ಉದಾಹರಣೆ ನೀಡಬೇಕೆಂದರೆ ನೀವು ನಿಮ್ಮ ಮನೆಯನ್ನು ಪ್ಲಾಸ್ಟರ್ ಮಾಡಲು ಮರಳಿಗೆ ನಾಲ್ಕನೆ ಒಂದು ಭಾಗ ಸಿಮೆಂಟ್ ಹಾಕಿದರೆ, ಇಲ್ಲಿ ಒಂದನೆ ಎಂಟು ಭಾಗ ಸಿಮೆಂಟ್ ಹಾಕಿ ಕೆಲಸ ಮಾಡಬಹುದು. ಅಂಥ ವ್ಯತ್ಯಾಸವೇನು ಗೊತ್ತಾಗುವುದಿಲ್ಲ. ಈ ರೀತಿ ಐವತ್ತು ಪರ್ಸೆಂಟ್ ಸಿಮೆಂಟನ್ನು ಉಳಿತಾಯ ಮಾಡಬಹುದು. ಇದು ಕಂಟ್ರಾಕ್ಟರ್‌ಗಳು ಮಾಡುವ ರೀತಿ. ಆದರೆ ನೀವು ನಿಮ್ಮ ಮನೆಯ ವಿಚಾರದಲ್ಲಿ ಈ ರೀತಿ ಮಾಡಲಾಗುವುದಿಲ್ಲ'.

ಬಿಕ್ರಂ ತುಂಬಾ ಆತುರದಲ್ಲಿ ಇದ್ದಂತೆ ಕಾಣಿಸಿತು. ಆದರೆ ನಾನು ತೀರ್ಥನ ಜೊತೆಯಲ್ಲಿ ಮಾತನಾಡಬೇಕೆನಿಸಿತು, ಮತ್ತು ಆತ ಕೂಡ ನನ್ನ ಮಾತಿನಲ್ಲಿ ಆಸಕ್ತಿ ವಹಿಸಿದ್ದ. ಬಿಕ್ರಂನನ್ನು ಇನ್ನೂ ಸ್ವಲ್ಪ ಸಮಯ ಇಟ್ಟುಕೊಳ್ಳುವ ಉದ್ದೇಶದಿಂದ, 'ಮತ್ತೊಂದು ಕಪ್ಪು ಟೀ ಕುಡಿಯೋಣ' ಎಂದು ಸೂಚಿಸಿದೆ.

'ಆಗಬಹುದು', 'ಬೇಗ ಆದರೆ ತುಂಬಾ ಒಳ್ಳೆಯದು' ಬಿಕ್ರಂ ಹೇಳಿದ. 'ನನಗನ್ನಿಸುತ್ತದೆ ನಿಮ್ಮ ಚರ್ಚೆ ಇಂದು ಮುಗಿಯುವ ಹಾಗೆ ಕಾಣಿಸುತ್ತಿಲ್ಲ. ನೀವು ಇನ್ನೂ ಹೆಚ್ಚು ಚರ್ಚೆ ಮಾಡಬೇಕಿದ್ದರೆ ನಾವು ಮತ್ತೆ ಎಂದಾದರೂ ಸೇರಬಹುದು. ನಾವು ಅದಕ್ಕೆ ವ್ಯವಸ್ಥೆ ಮಾಡುತ್ತೇವೆ'.

'ಒಳ್ಳೆಯದು! ನಾನು ತೀರ್ಥನನ್ನು ಕುರಿತು ಸಂಬೋಧಿಸುತ್ತಾ, ಒಂದೇ ಒಂದು ಪ್ರಶ್ನೆ, ಹೆಚ್ಚು ಬಜೆಟ್ ಇರುವ ಕಛೇರಿ ಯಾವುದು ಎಂದು ದಯಮಾಡಿ ತಿಳಿಸುತ್ತೀರಾ'? ಎಂದು ಕೇಳಿದೆ.

'ಸರಿ! ರಸ್ತೆ ಕಾಮಗಾರಿ ಇಲಾಖೆಯ ಬಜೆಟ್ ನನಗೆ ತಿಳಿದ ರೀತಿ ಹೆಚ್ಚು ಇದೆ. ಈ ವರ್ಷವೇ ಒಂದು ಸಾವಿರ ಮಿಲಿಯನ್ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ.'

'ಪ್ರಗತಿ ಹೇಗಿದೆ'?

'ಪ್ರಗತಿ? ಮೋಸವೆ ಅಲ್ಲಿಯ ಪ್ರಗತಿ'!

"ನನಗೆ ನಿಮ್ಮ ಮಾತಿನ ಅರ್ಥ ತಿಳಿಯಲಿಲ್ಲ'

'ಸರಿ! ಅದು ಇತರೆ ವಿಚಾರಗಳಂತೆ ನೇರ. ಅಲ್ಲಿ ಅಂಥ ದೊಡ್ಡದಾದ ಕೆಲಸವೇ ಇಲ್ಲ. ಅದರಲ್ಲಿ ಐವತ್ತು ಪರ್ಸೆಂಟ್ ಹಣ ಕೂಡ ಪ್ರಾಜೆಕ್ಟ್ ಕೆಲಸಕ್ಕೆ ಹೋಗುವುದಿಲ್ಲ. ಆದ್ದರಿಂದ ಆ ಕೆಲಸದ ಗುಣಮಟ್ಟವನ್ನು ಯಾವ ರೀತಿ ಅಳೆಯುತ್ತೀರಿ'? ಆತ ತನ್ನ ಮಾತುಗಳನ್ನು ಮುಂದುವರೆಸಿ, 'ನಾನು ನಿಮಗೆ ಮೋಸದ ಇನ್ನೊಂದು ಪ್ರಾಜೆಕ್ಟಿನ ಪ್ರಕರಣವನ್ನು ಉದಾಹರಿಸುತ್ತೇನೆ. ಅದು ಇದೆ ಇಲಾಖೆಗೆ ಸಂಬಂಧಿಸಿದ್ದು. ನೇಪಾಲ ಮತ್ತು ಇಂಡಿಯಾ ಬಾರ್ಡರ್‌ನಲ್ಲಿರುವ ಮಹೇಂದ್ರ ಹೈವೇಯ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿದೇಶ ಕಂಪನಿಯೊಂದಿಗೆ ಕಾಂಟ್ರಾಕ್ಟಿಗೆ ಸಹಿ ಮಾಡಲಾಯಿತು. ಕಾಂಟ್ರಾಕ್ಟಿನ ಬೆಲೆ ೬೦ ಮಿಲಿಯನ್ ರೂಪಾಯಿಗಳು. ಕಾಮಗಾರಿಯನ್ನು ಮುಗಿಸಿ ಕಂಟ್ರಾಕ್ಟರ್ ಹೋದ ಮೇಲೆ ರಸ್ತೆ ಬಿರಕುಬಿಟ್ಟಿತು ಹಾಗೂ ಹಾಳಾಯಿತು ನೋಡಿ! ಇದು ನಮ್ಮ ರಸ್ತೆಗಳ ಸ್ಥಿತಿ. ಇಂಥ ನೂರು ಪ್ರಕರಣಗಳನ್ನು ಉದಾಹರಣೆ ನೀಡಬಲ್ಲೆ. ನೀವು ಇಂಥ ವಿಷಯಗಳನ್ನು ತಿಳಿದುಕೊಳ್ಳುತ್ತಾ ಮತ್ತು ಯೋಚಿಸುತ್ತಾ ಹೋದರೆ ನಿಮ್ಮ ಎದೆ ಹೊಡೆದುಕೊಳ್ಳುತ್ತದೆ. ತಲೆ ಸಿಡಿಯುತ್ತದೆ. ನೀವೇನಾದರೂ ಇಂಥ ವಿಚಾರಗಳನ್ನು ಮಾತನಾಡಿದರೆ ನಿಮ್ಮನ್ನು ಶತ್ರುವೆಂದು ಭಾವಿಸುತ್ತಾರೆ. ಆದ್ದರಿಂದಲೇ ನಾನು ಹೇಳುವುದು ನಾನು ಈ ದೇಶದಿಂದ ಹೊರಗೆ ಹೋಗಬೇಕು' ಎಂದು.



ತೀರ್ಥ ನಿಟ್ಟಿಸಿರುಬಿಟ್ಟ. ಸಿಗರೇಟನ್ನು ತೆಗೆದುಕೊಂಡು ಸೇವಿಸತೊಡಗಿದ. ಆತನ ಕಣ್ಣುಗಳು ಶೂನ್ಯದತ್ತ ನೋಡುತ್ತಿದ್ದವು.

ಟೀ ಬಂದಿತು. ಬಿಕ್ರಂ ಮತ್ತು ನಾನು ನಮ್ಮ ಟೀಯನ್ನು ಸೇವಿಸತೊಡಗಿದೆವು.

ತೀರ್ಥ ಚಿಂತೆಯಲ್ಲಿ ಮುಳುಗಿಹೋಗಿದ್ದ. ಸಿಗರೇಟಿನ ತುಂಡು ಆತನ ಬೆರಳುಗಳ ಸಂದಿಯಲ್ಲಿ ಸೇರಿಹೋಗಿತ್ತು. ಅವನನ್ನು ಅವನ ಚಿಂತೆಯಿಂದ ಎಚ್ಚರಿಸುತ್ತಾ 'ಮಿಸ್ಟರ್ ತೀರ್ಥ ಅವರೇ ಟೀ ಬಂದಿದೆ' ಎಂದು ಎಚ್ಚರಿಸಿದೆವು. 'ಇಂದು ಬಿಕ್ರಂ ಬಹಳ ಆತುರದಲ್ಲಿದ್ದಂತೆ ಕಾಣುತ್ತಿದೆ. ಆದ್ದರಿಂದ ಕೆಲವು ದಿನಗಳ ನಂತರ ಭೇಟಿಯಾಗೋಣ. ಬಹಳ ಸಮಯ ಕುಳಿತು ಚರ್ಚೆ ಮಾಡೋಣ. ಸರಿ! ಖಂಡಿತಾ ಸೇರೋಣ. ಇಂದು ಬಂದಿದ್ದಕ್ಕೆ ತುಂಬಾ ಥ್ಯಾಂಕ್ಸ್'!

ತೀರ್ಥ ಈ ದೇಶದಲ್ಲಿ ಬದುಕಲು ಯೋಗ್ಯತೆಯಿಲ್ಲದೆ ಹೊರದೇಶಕ್ಕೆ ಹೋಗುವ ಕುರಿತು ಚಿಂತಿಸುತ್ತಿದ್ದ. ಆತನ ಪ್ರತಿಯೊಂದು ಮಾತಿನಲ್ಲಿಯೂ ನಿರಾಶೆ ಹಾಗೂ ಭರವಸೆಗಳೇ ಇಲ್ಲದ ಭಾವನೆ ತುಂಬಿಹೋಗಿದ್ದವು. ಈ ದೇಶ ತೀರ್ಥರಂತಹ ಪ್ರಾಮಾಣಿಕ ವ್ಯಕ್ತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವಲ್ಲಿ ಸೋತಿದೆ.

ನಾನು ತೀರ್ಥನಿಗೆ ಹೇಳಿದೆ – 'ಮತ್ತೊಮ್ಮೆ ಬನ್ನಿ, ಕೂತು ಮಾತನಾಡುವ. ಇಂದು ಬಂದಿದ್ದಕ್ಕಾಗಿ ಮತ್ತೊಮ್ಮೆ ಧನ್ಯವಾದಗಳು'.

ಬಿಕ್ರಂ ಮತ್ತು ತೀರ್ಥ ಇಬ್ಬರೂ ನಮಸ್ಕಾರ ಹೇಳಿ ನನ್ನಿಂದ ಬೀಳ್ಕೊಂಡರು. ನಾನು ತೀರ್ಥ ಅವರು ರೂಮಿನಲ್ಲಿ ಬಿಟ್ಟುಹೋಗಿದ್ದ ಸಿಗರೇಟಿನ ಹೊಗೆಯಲ್ಲಿ ಕೆಲಕಾಲ ಮುಳುಗಿಹೋದೆ!

# ಶನಿವಾರ

**ನಾ**ನು ಬೆಳಗ್ಗೆ ಪಶುಪತಿನಾಥ ದೇವಸ್ಥಾನಕ್ಕೆ ಹೋಗಲು ಸಿದ್ಧನಾಗುತ್ತಿದ್ದೆ. ಪಶುಪತಿನಾಥ ದೇವಾಲಯಕ್ಕೆ ಹೋಗಿ ತಿಂಗಳುಗಳೆ ಕಳೆದಿದ್ದವು. ಎರಡು ವರ್ಷಗಳ ಹಿಂದೆ ನಾನು ವಾರಕ್ಕೊಮ್ಮೆಯಾದರೂ ದೇವಾಲಯಕ್ಕೆ ಹೋಗುತ್ತಿದ್ದೆ. ನನಗೆ ಕಳೆದ ಹತ್ತು ವರ್ಷಗಳಿಂದ ಇದು ಒಂದು ರೂಢಿಯಾಗಿತ್ತು. ನಾನು ದೇವಸ್ಥಾನಕ್ಕೆ ಹೋಗದಿದ್ದರೆ, ನನಗೆ ಇಡೀ ದಿವಸ ಏನೊ ಒಂದು ರೀತಿಯ ನೋವಾಗುತ್ತಿತ್ತು. ನಾನು ದೇವಸ್ಥಾನಕ್ಕೆ ಹೋದರೆ ಒಂದೆರಡು ಗಂಟೆ ಅಲ್ಲಿಯೆ ಸುತ್ತಾಡುತ್ತಿದ್ದೆ. ಆದರೆ ಕಳೆದ ಎರಡು ವರ್ಷಗಳಿಂದ ನಾನು ದೇವಸ್ಥಾನಕ್ಕೆ ಐದು ಅಥವಾ ಆರು ಸಾರಿ ಹೋಗಿರಬಹುದು. ಇತ್ತೀಚಿನ ದಿನಗಳಲ್ಲಿ ದೇವಸ್ಥಾನಕ್ಕೆ ಹೋಗಲು ಆಸಕ್ತಿಯೆ ಮೂಡುತ್ತಿಲ್ಲ, ಆದರೆ ಕಾರಣ ಮಾತ್ರ ತಿಳಿಯದು? ಅದೂ ಅಲ್ಲದೆ ನನಗೆ ಸಮಯವೂ ಇಲ್ಲ. ನಿಜ ಹೇಳಬೇಕೆಂದರೆ, ನಾನು ಪಶುಪತಿನಾಥನನ್ನು ಮರೆತಿರಬಹುದು ಅನ್ನಿಸುತ್ತದೆ.

ನನ್ನ ಬೆಳಗಿನ ಕೆಲಸ ಮುಗಿದ ಮೇಲೆ, ನಾನು ಪಶುಪತಿನಾಥ ದೇವಾಲಯಕ್ಕೆ ಹೋಗಲು ಸಿದ್ಧನಾದೆ. ನಾನು ದೇವಸ್ಥಾನಕ್ಕೆ ಹೋಗಲು ಸಿದ್ಧನಾಗಿ ನಿಂತಾಗ ನನ್ನ ಹೆಂಡತಿ ಒಂದು ಚೀಲ ಮತ್ತು ಮನೆಗೆ ಬೇಕಾದ ವಸ್ತುಗಳನ್ನು ಖರೀದಿಸಲು ಪಟ್ಟಿಯನ್ನು ನೀಡುವುದು ಸಾಮಾನ್ಯವಾಗಿತ್ತು. ನಾನು ನನ್ನ ಹೆಂಡತಿಗಾಗಿ ಬಾಗಿಲ ಬಳಿ ಕಾಯುತ್ತಿದ್ದಾಗ ಆಕೆ ಬಂದು ಹೇಳಿದಳು – 'ನೀವು ಹೋಗುವ ಮುನ್ನ ತಾಯಿಯನ್ನು ಭೇಟಿ ಮಾಡಿ'ಎಂದು. ಆಕೆಯ ಕೈಯಲ್ಲಿ ಚೀಲ ಮತ್ತು ಖರೀದಿಸಬೇಕಾದ ವಸ್ತುಗಳ ಚೀಟಿಯಿಲ್ಲದೆ ಇದ್ದುದು ನನಗೆ ಸಂತೋಷವನ್ನುಂಟುಮಾಡಿತು.

ಹೆಂಡತಿಯೊಂದಿಗೆ ಒಂದೂ ಮಾತನಾಡದೆ ನೇರವಾಗಿ ತಾಯಿಯ ಕೊಠಡಿಗೆ ಹೋದೆ. ನನ್ನನ್ನು ನೋಡಿದ ಆಕೆ ಬುದ್ಧಿಹೇಳಲು ಆರಂಭಿಸಿದಳು– 'ಬೇರೆಯವರು ನಿಮ್ಮ ಪಿತ್ರಾರ್ಜಿತ ಆಸ್ತಿಯನ್ನು ಆಕ್ರಮಿಸುತ್ತಿದ್ದಾರೆ, ನೀನು ಈ ವಿಚಾರದಲ್ಲಿ ಏನನ್ನು ಮಾಡುತ್ತೀದ್ದಿಯ? ಇದಕ್ಕಾಗಿ ಸ್ವಲ್ಪ ಸಮಯ ಮೀಸಲಿಡಬಾರದೆ. ನಿನ್ನ ಸ್ನೇಹಿತರೊಬ್ಬರು ಪ್ರಸಿದ್ಧ ಲಾಯರ್ ಇದ್ದಾರೆ ಎಂದು ಕೇಳಿದ್ದೇನೆ. ಆತನನ್ನು ಭೇಟಿ ಮಾಡಿ ಅವರ ಸಲಹೆಯನ್ನೇಕೆ ಪಡೆಯಬಾರದು? ಇದೇ ರೀತಿ ಇದ್ದರೆ



ಜೀವನವನ್ನು ಸಾಗಿಸುವುದು ಹೇಗೆ'?

ನನ್ನ ತಾಯಿ ಈ ವಿಚಾರವನ್ನು ಅನೇಕ ಬಾರಿ ಹೇಳಿದ್ದರು. ನನಗೆ ಸಮಯ ಇಲ್ಲದಿದ್ದರಿಂದ ಆಕೆ ಹೇಳಿದ ಕೆಲಸವನ್ನು ಮಾಡಲಾಗಿರಲಿಲ್ಲ. ಇದರರ್ಥ ನನಗೆ ನನ್ನ ಪಿತ್ರಾರ್ಜಿತ ಆಸ್ತಿಯ ಮೇಲೆ ಪ್ರೀತಿಯಿಲ್ಲವೆಂದಲ್ಲ. ನಗರ ಪ್ರದೇಶದಲ್ಲಿರುವ ಪ್ಲಾಟಿನ ಬೆಲೆ ಸಾವಿರಾರು ರೂಪಾಯಿ ಬೆಲೆಬಾಳುವಂತಹುದು. ಅದು ಕೇವಲ ದುಡ್ಡಿನ ವಿಚಾರ ಅಷ್ಟೆ ಅಲ್ಲ. ಅದು ನಮ್ಮ ಪಿತ್ರಾರ್ಜಿತ ಆಸ್ತಿಯೆಂಬುದು ಇಲ್ಲಿ ಮುಖ್ಯ. ನಾನು ಅದನ್ನು ಸರಿಯಾಗಿ ಕಾಪಾಡದಿದ್ದರೆ ಮುಂದೆ ನನ್ನ ಮಕ್ಕಳ ಗತಿಯೇನು? ನಾನು ಆ ಆಸ್ತಿಯನ್ನು ರಕ್ಷಿಸಲು ಯಾವುದೇ ಕ್ರಮವನ್ನು ತೆಗೆದುಕೊಳ್ಳದಿದ್ದರೂ ಅದರ ಬಗ್ಗೆ ನನಗೆ ಎಲ್ಲಾ ಚೆನ್ನಾಗಿ ಗೊತ್ತಿದೆ.

ರತನ್‌ಕುಮಾರ್ ಆ ಪ್ಲಾಟ್ 'ತನಗೆ ಸೇರಿದೆ' ಎಂದು ಅತಿಕ್ರಮಿಸಿದ್ದಾನೆ. ಆತ ಆ ಪ್ಲಾಟಿನ ಮೇಲೆ ಹೊಸ ಮನೆಯನ್ನು ಕಟ್ಟಲು ಲೀಗಲ್ ಸರ್ಟೀಫಿಕೇಟನ್ನು ಪಡೆದಿದ್ದಾನೆ. ಒಂದು ದಿನ ನಾನು ಅಲ್ಲಿಗೆ ಹೋಗಿ ಆತ ಕಟ್ಟಿಸುತ್ತಿದ್ದ ಕಟ್ಟಡವನ್ನು ನಿಲ್ಲಿಸಿದ್ದೇನೆ. ನನ್ನ ಬಳಿ ಆ ಪ್ಲಾಟಿಗೆ ಸಂಬಂಧಿಸಿದ ಅಧಿಕೃತವಾದ ಯಾವ ಸರ್ಟಿಫಿಕೇಟ್‌ಗಳು ಇಲ್ಲ. ಆದರೆ ರತನ್‌ಕುಮಾರ್ ಎಲ್ಲಾ ಅಧಿಕೃತ ದಾಖಲೆಗಳನ್ನು ಹೊಂದಿದ್ದಾನೆ.

ತಾಯಿಯನ್ನು ಸಮಾಧಾನ ಪಡಿಸುತ್ತಾ ನಾನು ಹೇಳಿದೆ– 'ಆವತ್ತು ಒಂದು ದಿನ ಸೈಟಿನ ಬಳಿ ಹೋಗಿದ್ದೆ ಮತ್ತು ನಿರ್ಮಾಣದ ಕೆಲಸವನ್ನು ನಿಲ್ಲಿಸಿದ್ದೇನೆ. ಈಗ ನಾನು ವಕೀಲರ ಬಳಿ ಹೋಗಿ ಆ ಪ್ಲಾಟನ್ನು ವಾಪಸ್ಸು ಪಡೆಯಲು ಬೇಕಾದ ಸಲಹೆಯನ್ನು ಪಡೆಯುತ್ತೇನೆ. ಆ ಭೂಮಿಯನ್ನು ವಾಪಸ್ಸು ಪಡೆಯುತ್ತೇನೆ ಎನ್ನುವ ನಂಬಿಕೆ ನನಗೆ ಇದೆ, ಚಿಂತೆಮಾಡಬೇಡಿ' ಎಂದೆ.

'ಚಿಂತೆ ಮಾಡಬೇಡ ಎಂದು ನೀನು ಹೇಳುತ್ತೀಯ ಆದರೆ ಬೇರೆಯವರು ನಮ್ಮ ಪಿತ್ರಾರ್ಜಿತ ಆಸ್ತಿಯನ್ನು ನಮ್ಮ ಕಣ್ಣೆದುರಿಗೆ ಕದಿಯುತ್ತಿದ್ದರೆ ಸುಮ್ಮನಿರುವುದು ಹೇಗೆ'?

ನಮ್ಮ ತಾಯಿಯವರು ಹೇಳುವುದು ನನಗೆ ಅರ್ಥವಾಗುತ್ತದೆ. ಈ ವಿಚಾರದಲ್ಲಿ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂಬುದು ಆಕೆಯ ಉದ್ದೇಶವಾಗಿದೆ. 'ನಾನು ಆದಷ್ಟು ಬೇಗ ವಕೀಲರ ಬಳಿ ಹೋಗಿ ಅವರ ಸಲಹೆಯನ್ನು ಪಡೆಯುತ್ತೇನೆ' ಎಂದು ಸಮಾಧಾನ ಪಡಿಸಿದೆ.

ಅಂದು ಬೆಳಗಿನ ಸಮಯ. ರಸ್ತೆಯಲ್ಲಿ ಕೆಲವು ಪಾದಚಾರಿಗಳು ಓಡಾಡುತ್ತಿದ್ದರು. ನಾನು ದೇವಸ್ಥಾನಕ್ಕೆ ಬಹಳ ದಿನಗಳ ನಂತರ ಹೋಗುತ್ತಿದ್ದೆ. ಪಶುಪತಿನಾಥ ದೇವರ ಮೇಲೆ ನನಗೆ ಬಹಳ ನಂಬಿಕೆ ಮತ್ತು ಗೌರವ ಇತ್ತು. ನಾನು ದೇವರ ಅತ್ಯಂತ ಪರಮಭಕ್ತ. ಆದರೂ ಇತ್ತೀಚೆಗೆ ದೇವರ ಸೇವೆಯನ್ನು ಮಾಡಲು ನಾನು

ವಿಫಲನಾಗಿದ್ದೆ. ನನಗೆ ದೇವರಲ್ಲಿ ಶ್ರದ್ಧೆಯಿದ್ದರೂ ಉತ್ಸಾಹವನ್ನು ಕಳೆದುಕೊಂಡಿದ್ದೆ. ಇತ್ತೀಚೆಗೆ ಒಂದು ದಿನ ದೇವಾಲಯದ ಪೂಜಾರಿ ನನ್ನನ್ನು ಅಸಡ್ಡೆಯಿಂದ ನಡೆಸಿಕೊಂಡಿದ್ದನು. ಅಂದಿನಿಂದ ನನ್ನ ಮತ್ತು ದೇವರ ಸಂಬಂಧ ಕೆಟ್ಟುಹೋಗಿತ್ತು. ನಾನು ನಮ್ಮ ಸಂಬಂಧವನ್ನು ಪುನರ್‌ಸ್ಥಾಪಿಸಬಹುದೆಂದುಕೊಂಡೆ. ಅನೇಕ ತಿಂಗಳುಗಳ ನಂತರ ದೇವರನ್ನು ಆರಾಧಿಸಬೇಕೆಂದು ಬಯಸಿದೆ.

ನನಗೆ ರಸ್ತೆಯ ಕೊನೆ ಕಾಣಿಸುತ್ತಿತ್ತು. ರಸ್ತೆಯ ಒಂದು ಮಗ್ಗುಲಿನಲ್ಲಿ ಬರೀ ಮರಗಳೇ ಕಾಣಸಿದರೆ, ಮತ್ತೊಂದು ಮಗ್ಗುಲಿನಲ್ಲಿ ಕಡಿದ ಮರಗಳ ಬುಡ ಮಾತ್ರ ಕಾಣಿಸುತ್ತಿತ್ತು. ಹದಿಮೂರು ವರ್ಷಗಳ ಹಿಂದೆ ರಸ್ತೆಯ ಎರಡೂ ಬದಿಗಳಲ್ಲಿ ಮರಗಳನ್ನು ನೆಟ್ಟಿದ್ದು ನನಗೆ ನೆನಪಿದೆ. ರಸ್ತೆಯ ಎರಡೂ ಬದಿಯಲ್ಲಿ ಮರಗಳು ಇಂದು ಬೆಳೆದು ನಿಂತಿದ್ದರೆ, ಸಾಲುಮರಗಳ ರಾಜಮಾರ್ಗದಂತೆ ಸುಂದರವಾಗಿ ಕಾಣುತ್ತಿತ್ತು. ಆನಂತರ ನಾನು ಗಮನಿಸಿದಂತೆ ಮರಗಳು ವಿದ್ಯುತ್ ತಂತಿಯ ಕೆಳಗೆ ಇವೆ ಅನ್ನುವ ಕಾರಣಕ್ಕಾಗಿ ಅವುಗಳನ್ನು ಕಡಿಯಲಾಯಿತು. ಆದರೆ ನನಗೆ ಆಶ್ಚರ್ಯವೆನಿಸಿದ್ದು ಮೊದಲೆ ಇದು ಅವರಿಗೆ ಏಕೆ ತಿಳಿಯಲಿಲ್ಲ? ಎನ್ನುವುದು.

ಇದ್ದಕ್ಕಿದ್ದ ಹಾಗೆ ಒಂದು ಬೈಸಿಕಲ್ ನನ್ನ ಎದುರಿಗೆ ನಿಂತಿತು ಮತ್ತು ಅದರಲ್ಲಿದ್ದವನು ನನಗೆ 'ನಮಸ್ತೆ' ಎಂದು ಹೇಳಿ ಗೌರವಿಸಿದ. ಆತ ನನ್ನ ಸ್ನೇಹಿತ ವಕೀಲನ ಸಹಾಯಕ ಸೋಮನಾಥ ಎಂದು ಗುರುತು ಹಿಡಿದೆ. ಆತನನ್ನು ನೋಡಿದ ನನಗೆ ನನ್ನ ತಾಯಿ ಹೇಳಿದ ವಿಚಾರ ನೆನಪಾಯಿತು– 'ಮಿಸ್ಟರ್ ಸೋಮನಾಥ್ ಇಂದು ಒಂಬತ್ತು ಗಂಟೆಗೆ ಮಿಸ್ಟರ್ ವಿಷ್ಣುಕಾಂತ ಅವರನ್ನು ಭೇಟಿ ಮಾಡಬಹುದೆ'? ಎಂದು ಕೇಳಿದೆ.

'ಹೌದು ಅವರು ಆ ಸಮಯದಲ್ಲಿ ಅವರ ಸಂಸ್ಥೆಯ ಕಛೇರಿಯಲ್ಲಿ ಇರುತ್ತಾರೆ' ಎಂದು ಆತ ಹೇಳಿದ.

'ಹಾಗಾದರೆ ಇಂದು ನಾನು ಅವರನ್ನು ನೋಡಲೇಬೇಕು. ನೀನು ಅವರಿಗೆ ನಾನು ಇಂದು ಬೆಳಗ್ಗೆ ಒಂಬತ್ತು ಗಂಟೆಗೆ ಅವರನ್ನು ನೋಡಲು ಬರುತ್ತೇನೆ ಎಂದು ತಿಳಿಸುತ್ತೀಯಾ'?

'ಸರಿ ಹೇಳುತ್ತೇನೆ. ಈಗ ಯಾವ ಕಡೆ ಪ್ರಯಾಣ'?

'ಪಶುಪತಿನಾಥ ದೇವಾಲಯದವರೆಗೆ'

ಆತನಿಂದ ಬೀಳ್ಕೊಂಡು ನಾನು ದೇವಾಲಯದ ಕಡೆ ನಡೆದೆ. ವಿಷ್ಣುಕಾಂತ್ ನೇಪಾಳದ ಒಬ್ಬ ಪ್ರಖ್ಯಾತ ನ್ಯಾಯವಾದಿ. ಹದಿನೈದು ವರ್ಷಗಳ ಆತನ ಸೇವೆಯಲ್ಲಿ ಆತ ಒಳ್ಳೆಯ ಹೆಸರು ಮಾಡಿದಾತ. ಆತ ಎಲ್ಲಾ ಕೇಸುಗಳನ್ನು ಕೈಗೆತ್ತಿಕೊಳ್ಳುವುದಿಲ್ಲ. ಆತ ಕೇಸುಗಳನ್ನು ಕೈಗೆತ್ತಿಕೊಂಡರೆ, ಅವುಗಳನ್ನು ಗೆದ್ದಂತೆಯೆ. ಹೀಗಾಗಿ ಆತನನ್ನು ನೇಪಾಳದ ರಾಜಧಾನಿಯಲ್ಲಿ ಒಬ್ಬ ಪ್ರಸಿದ್ಧ ವಕೀಲರೆಂದು ಪರಿಗಣಿಸಿದ್ದಾರೆ.



ನಾನು ವಿಷ್ಣುಕಾಂತನಲ್ಲಿಗೆ ನಿಗದಿತ ಸಮಯಕ್ಕೆ ಸರಿಯಾಗಿ ಹೋದೆ. ನಾನು ಕಚೇರಿಗೆ ಹೋಗಿ ಕುರ್ಚಿಯಲ್ಲಿ ಕುಳಿತುಕೊಂಡೆ. ನಾನು ಕುರ್ಚಿಯಲ್ಲಿ ಕುಳಿತುಕೊಂಡ ತಕ್ಷಣ 'ನಾನು ಈತನ ಹಲ್ಲು ಮುರಿಯುತ್ತೇನೆ. ಈತ ಏನು ತಿಳಿದುಕೊಂಡಿದ್ದಾನೆ!' ಎಂದು ಆತ ತನ್ನ ಆವೇಶವನ್ನು ವ್ಯಕ್ತಪಡಿಸಿದರು.

ಕೆಂಗಣ್ಣುಗಳಿಂದ ನನ್ನನ್ನೇ ನೋಡತೊಡಗಿದರು. ನನ್ನ ಮೇಲೆ ಆತ ಆ ರೀತಿ ಕೋಪ ಮಾಡಿಕೊಳ್ಳಲು ಯಾವುದೇ ಕಾರಣವಿರಲಿಲ್ಲ. ನನಗೆ ಗಾಬರಿಯಾಯಿತು. ಕಳೆದ ಹದಿನೈದು ವರ್ಷಗಳಿಂದ ನಾವಿಬ್ಬರು ಒಳ್ಳೆಯ ಸ್ನೇಹಿತರು. ಆತ ಬುದ್ಧಿವಂತ ಮತ್ತು ಹಾಸ್ಯಪ್ರಿಯ ಎನ್ನುವುದು ನನಗೆ ಗೊತ್ತಿತ್ತು. ಆದರೆ ಆತ ಈ ರೀತಿ ಕೋಪಮಾಡಿಕೊಂಡಿದ್ದನ್ನು ನಾನು ಯಾವತ್ತೂ ನೋಡಿರಲಿಲ್ಲ.

ನಾನು ಬಾಯಿ ಬಿಡುವ ಮುನ್ನ, ಆತನ ಸಹಾಯಕನಿಗೆ ಹೇಳಿದ– 'ಮಿಸ್ಟರ್ ಸೋಮನಾಥ್ ಏನು ಹುಡುಕುತ್ತಿದ್ದೀಯಾ? ಆ ಇಕ್ಕಳ ತೆಗೆದುಕೊಂಡು ಬಾ, ಇವನ ಹಲ್ಲುಗಳನ್ನು ತೆಗೆಯುತ್ತೇನೆ, ಎಲ್ಲಾ ಹಲ್ಲುಗಳನ್ನು! ಈತ ದಾಳಿಂಬೆ ಹಣ್ಣಿನಬೀಜದಂತಹ ಹಲ್ಲುಗಳನ್ನು ಹೊಂದಿದ್ದೇನೆ ಎಂದು ಜಂಭ ಕೊಚ್ಚಿಕೊಳ್ಳುತ್ತಾನೆ. ನಾನು ಈತನಿಗೆ ತೋರಿಸುತ್ತೇನೆ ಅವು ದಾಳಿಂಬೆ ಹಣ್ಣಿನ ಬೀಜಗಳೊ ಅಥವಾ ಮುಸುಕಿನ ಜೋಳದ ಕಾಳುಗಳೊ ಎನ್ನುವುದನ್ನು'!

'ಅಯ್ಯಾ, ಸ್ನೇಹಿತನೆ ನೀನು ಏನು ಹೇಳುತ್ತಿದ್ದೀಯಾ' ನಾನು ವಿನಯವಾಗಿ ಹೇಳಿದೆ. 'ಯಾರ ಹಲ್ಲುಗಳನ್ನು ನೀನು ಕೀಳುವುದು'?

ನನ್ನ ಕಡೆ ರಭಸದಿಂದ ತಿರುಗಿ, ಆತ ಹೇಳಿದ– ನಿನ್ನ ಹಲ್ಲುಗಳನ್ನು! ನಿಮ್ಮದನ್ನು ಅರ್ಥವಾಯಿತೇ?

ಆತನ ಆಕ್ರಮಣಕಾರಿ ಪ್ರತಿಕ್ರಿಯೆ ನನ್ನನ್ನು ಒಂದು ರೀತಿ ಉದ್ರೇಕಗೊಳಿಸಿತು. ಆತನ ಮಾತುಗಳಿಗೆ ಪ್ರತಿಕ್ರಿಯಿಸುತ್ತಾ ನಾನು ಹೇಳಿದೆನು– 'ನೀವು ಏನ್ ಹೇಳುತ್ತಿದ್ದೀರಿ? ನಿಮಗೆ ಹುಚ್ಚುಹಿಡಿದಿದೆಯಾ? ಯಾರ ಹಲ್ಲಿನ ಬಗ್ಗೆ ನೀವು ಮಾತನಾಡುತ್ತಿರುವುದು'?

ಹೌದು, ನಾನು ಹುಚ್ಚ! ಮತ್ತೇನೆಂದು ನೀನು ಕರೆಯಬೇಕೆಂದಿರುವೆ? ಆತನ ಸಹಾಯಕನ ಕಡೆ ತಿರುಗಿ ಆತ ಹೇಳಿದ– 'ಏನನ್ನು ಹುಡುಕುತ್ತಿದ್ದೀಯ? ಇಕ್ಕಳ ತೆಗೆದುಕೊಂಡು ಬಾ, ನಾನು ಹೇಳುತ್ತಿರುವುದು ಕೇಳುವುದಿಲ್ಲವೆ'?

ನ್ಯಾಯವಾದಿಯ ಆದೇಶವನ್ನು ಕೇಳಿದ ಆತನ ಸಹಾಯಕ ಇಕ್ಕಳವನ್ನು ತಂದು ಟೇಬಲ್ಲಿನ ಮೇಲೆ ಇಟ್ಟ. ನ್ಯಾಯವಾದಿ ಇಕ್ಕಳವನ್ನು ತನ್ನ ಬಲಗೈಯಲ್ಲಿ ತೆಗೆದುಕೊಂಡು ಹೇಳಿದ – 'ನಾನು ನಿನ್ನ ಮುಂದಿನ ನಾಲ್ಕು ಹಲ್ಲುಗಳನ್ನು ಕೀಳುತ್ತೇನೆ, ಒಂದು ಎರಡು ಮೂರು ಮತ್ತು ನಾಲ್ಕು' ಎಂದು ಎಣಿಸುತ್ತಾ ಟೇಬಲ್ಲಿನ ಮೇಲೆ ಒಂದಾದರೊಂದರಂತೆ ಇಡುತ್ತೇನೆ. ನೀನು ಏನು ಮಾಡುತ್ತೀಯಾ ನೋಡುತ್ತೇನೆ'.

'ನಿನಗೆ ಈಗ ಏನೂ ಕೆಲಸವಿಲ್ಲವೆ? ಯಾರೂ ಕ್ಲೈಯಂಟ್ಸ್ ಇಲ್ಲವೇ? ಆದ್ದರಿಂದ ಈ ರೀತಿಯ ಅಸಂಬದ್ಧ ಮಾತುಗಳನ್ನಾಡುತ್ತಿರುವೆ'?

'ಹೌದು, ನಾನು ಭಿಕ್ಷುಕನಾಗಿದ್ದೇನೆ. ನನಗೆ ಕ್ಲೈಯಂಟ್ಸ್ ಇಲ್ಲ. ಆದ್ದರಿಂದಲೆ ನಿನ್ನ ಹಲ್ಲುಗಳನ್ನು ಕೀಳಲು ಇಚ್ಛಿಸುತ್ತೇನೆ' – ನನ್ನ ಎಡ ದವಡೆಯನ್ನು ಹಿಡಿದುಕೊಂಡು ಆತ ಹೇಳಿದ.

ಸಿಟ್ಟಿನಿಂದ ಕೆರಳಿದ ನಾನು ಕುರ್ಚಿಯಿಂದ ಮೇಲೆದ್ದು ಪ್ರತಿಭಟಿಸಿದೆ. ನಿನಗೆ ಏನು ಬೇಕಾಗಿದೆ!

ಸಮಾಧಾನಗೊಂಡವನಂತೆ ಆತ ಹೇಳಿದ – 'ನನಗೆ ನಿನ್ನೊಂದಿಗೆ ಜಗಳವಾಡುವುದು ಇಷ್ಟವಿಲ್ಲ. ನಿನ್ನ ಹಲ್ಲುಗಳನ್ನು ಕೀಳಬೇಕು ಅಷ್ಟೆ. ನಾನು ಬಲವಂತವಾಗಿಯಾದರೂ ನಿನ್ನ ಹಲ್ಲುಗಳನ್ನು ಕೀಳಬೇಕು. ಕಾನೂನಿನ ಪ್ರಕಾರ ನಿಗದಿಯಾದ ದಂಡವನ್ನು ಕಟ್ಟಲು ನಾನು ಸಿದ್ಧನಿದ್ದೇನೆ. ಎರಡು ನೂರು ನಲವತ್ತು ರೂಪಾಯಿಗಳನ್ನು ಅದಕ್ಕಾಗಿ ಸಿದ್ಧಮಾಡಿ ಕೊಂಡಿದ್ದೇನೆ'.

ನಾನು, ಇನ್ನೂರನಲವತ್ತು ರೂಪಾಯಿಗಳು ಮತ್ತು ಇಕ್ಕಳ ಎರಡನ್ನು ಟೇಬಲ್ಲಿನ ಮೇಲೆ ನೋಡಿದೆ. ಆತ ನನ್ನ ಮುಖದ ಅಂದಕ್ಕೆ ಕಾರಣವಾಗಿರುವ ಮುಂದಿನ ನಾಲ್ಕು ಹಲ್ಲುಗಳನ್ನು ಕೀಳಲು ಸಿದ್ಧನಾಗಿ ಇನ್ನೂರು ನಲವತ್ತು ರೂಪಾಯಿಗಳನ್ನು ತೆಗೆದಿಟ್ಟಿದ್ದಾನೆ.

ನನಗೆ ಇದು ನಾಟಕವೊ ಅಥವಾ ನಿಜವಾಗಿಯೂ ಮಾಡುತ್ತಿದ್ದಾನೊ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಕಷ್ಟವಾಯಿತು. ನನಗೆ ವಕೀಲರ ಮೇಲೆ ಕೋಪ ಬಂತು. ನಾನು ಹೇಳಿದೆ– 'ನಿಮ್ಮ ಇನ್ನೂರ ನಲವತ್ತು ರೂಪಾಯಿಗಳನ್ನು ನೀವೆ ಇಟ್ಟುಕೊಳ್ಳಿ. ನಾನು ನನ್ನ ಮುಖದ ಅಂದವನ್ನು ಹಾಳುಮಾಡಿಕೊಳ್ಳಲು ಇಷ್ಟಪಡುವುದಿಲ್ಲ' ಎಂದು.

ನಾನು ಕೋಪಿಸಿಕೊಂಡಂತೆ ಇದ್ದುದನ್ನು ಗಮನಿಸಿದ ವಕೀಲರು, ಸಮಾಧಾನ ಗೊಳ್ಳತೊಡಗಿದರು. ನನಗೆ ಕೋಪ ಕಡಿಮೆಯಾಗಲಿಲ್ಲ – 'ನಾನು ನಿನ್ನ ಹಲ್ಲುಗಳನ್ನು ಕೀಳುತ್ತೇನೆ ಮತ್ತು ನೀನು ಕೊಡುವ ಹತ್ತುಪಟ್ಟು ಹಣವನ್ನು ಕೊಡುತ್ತೇನೆ'..... ಎಂದು ಪ್ರತಿಕ್ರಿಯಿಸಿದೆ. 'ಒಂದು ಹಲ್ಲಿಗೆ ಕೇವಲ ಅರವತ್ತು ರೂಪಾಯಿಗಳೇ ಏಕೆ? ನಾನು ಆರುನೂರು ರೂಪಾಯಿಗಳನ್ನು ನೀಡುತ್ತೇನೆ. ನಾನು ಯಾವ ಮುಖ್ಯ ಉದ್ದೇಶಕ್ಕಾಗಿ ಬಂದಿದ್ದೇನೆ ಎನ್ನುವುದನ್ನು ಅರ್ಥ ಮಾಡಿಕೊಳ್ಳದೆ, ಮತ್ತು ನೀನು ಎಂಥ ಜವಾಬ್ದಾರಿಯುತ ಪ್ರಮುಖ ವ್ಯಕ್ತಿಯೆಂದು ತಿಳಿಯದೆ ಸುಮ್ಮನೆ ಅಸಂಬದ್ಧ ಮಾತುಗಳನ್ನಾಡುತ್ತೀದ್ದಿಯ. ಒಬ್ಬ ಮೂರ್ಖನ ಹಾಗೆ'.

ಆತ ಶಾಂತನಾದ ಮತ್ತು ಗಂಭೀರವಾಗಿ ಫೈಲನ್ನು ನೋಡಲು ಪ್ರಾರಂಭಿಸಿದ. ಕೆಲ ನಿಮಿಷಗಳ ನಂತರ ನಗುತ್ತಾ ಹೇಳಿದ– 'ನಿಮ್ಮ ವಿಷಯಕ್ಕೆ ಸಂಬಂಧಿಸಿದ



ಫೈಲು ಇದು. ನನ್ನ ಸಹಾಯಕ ನೀವು ಬರುವ ವಿಷಯವನ್ನು ತಿಳಿಸಿದ್ದ. ನಾನು ನಿಮ್ಮಿಂದ ಇನ್ನೂ ಸ್ವಲ್ಪ ಮಾಹಿತಿ ಪಡೆಯಬಹುದೆಂದು ನಾಟಕ ಮಾಡಿದೆ. ಏನೂ ತಿಳಿಯಬೇಡಿ. ಇದು ಕೇವಲ ಒಂದು ತಮಾಷೆ'!

ಆತ ಇನ್ನು ಈ ನಾಟಕದ ಬಗ್ಗೆ ವಿವರಿಸುತ್ತಿದ್ದಂತೆಯೆ ಒಬ್ಬ ಮಧ್ಯವಯಸ್ಸಿನ ಮಹಿಳೆ ಆತುರಾತುರವಾಗಿ ಬಂದಳು. 'ನಾನು ನಾಶವಾದೆ ಸಾರ್. ನಾನು ನಾಶವಾದೆ!' ಎಂದು ಹೇಳುತ್ತಾ ನನ್ನ ಪಕ್ಕದ ಕುರ್ಚಿಯಲ್ಲಿ ಕುಳಿತುಕೊಂಡಳು. ನಾವು ಅವಳನ್ನೆ ನೋಡತೊಡಗಿದೆವು.

ಖಿನ್ನ ಮುಖದ, ಆಯಾಸಗೊಂಡ ಆಕೆ ಹೇಳಿದಳು – 'ನಾನು ಮತ್ತೆ ಆ ಕೇಸಿನಲ್ಲಿ ಸೋತುಹೋದೆ ಸಾರ್! ನಾನು ಈಗ ಏನು ಮಾಡಲಿ! ಈಗ ನನಗುಳಿದಿರುವುದು ನದಿಗೆ ಹಾರಿಕೊಳ್ಳುವುದು ಅಷ್ಟೆ! ಕಳೆದ ಹದಿನೆಂಟು ವರ್ಷಗಳಿಂದ ವ್ಯಾಜ್ಯ ನಡೆಯುತ್ತಲಿತ್ತು. ನಾನು ಗೆಲ್ಲಬಹುದೆಂಬ ನಂಬಿಕೆಯ ಮೇಲೆ ಜೀವಂತವಾಗಿದ್ದೆ. ಈಗ ಅದು ಹೋಯಿತು'!

'ಯಾವ ಕೇಸು ನೀನು ಸೋತಿದ್ದು ಮತ್ತು ಹೇಗೆ'? ಕುತೂಹಲದಿಂದ ವಕೀಲರು ಮಹಿಳೆಯ ಮಾತುಗಳ ಬಗ್ಗೆ ಕೇಳಿದರು.

ನಿಧಾನವಾಗಿ ಮಹಿಳೆ ಹೇಳತೊಡಗಿದಳು– 'ನನ್ನ ಗಂಡನ ಆಸ್ತಿಯಲ್ಲಿ ನನ್ನ ಮತ್ತು ನನ್ನ ಮಗನ ಭಾಗವನ್ನು ಪಡೆಯುವ ಹಕ್ಕನ್ನು ತಿರಸ್ಕರಿಸಿದರು. ಮೊದಲನೆ ಕೋರ್ಟು ನಮ್ಮ ಪರವಾಗಿ ನ್ಯಾಯ ನೀಡಿತ್ತು. ಈಗ ನಮಗೆ ಸಹಾಯವಾಗುವ ಯಾವುದಾದರೂ ದಾರಿಯನ್ನು ನೀವು ತೋರಿಸುವಿರಾ'?

ವಕೀಲರು ಆ ಮಹಿಳೆಗೆ ಹೇಳಿದರು – 'ನೀವು ಜಿಲ್ಲಾ ನ್ಯಾಯಾಲಯದಲ್ಲಿ ನಿಮ್ಮ ಪರವಾಗಿ ನ್ಯಾಯ ಸಿಗಲಿಲ್ಲ ಎನ್ನುವ ಕಾರಣಕ್ಕೆ ನಿಜವಾಗಿಯೂ ಸೋತು ಹೋದಿರಿ ಎನ್ನುವುದು ಇದರರ್ಥವಲ್ಲ. ನೀವು ಇಚ್ಛಿಸಿದರೆ ಇನ್ನು ಎರಡು ಹಂತಗಳಲ್ಲಿ ನ್ಯಾಯವನ್ನು ಕೇಳಬಹುದು. ಆದರೆ ಕಾನೂನಿನಲ್ಲಿ ನಿಮ್ಮ ಗಂಡನ ಚರ ಆಸ್ತಿಯ ಬಗ್ಗೆ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ. ನಾನು ಈ ವಿಚಾರವನ್ನು ನಿಮಗೆ ಈಗಾಗಲೇ ತಿಳಿಸಿದ್ದೇನೆ'?

ವಕೀಲರ ಮಾತುಗಳನ್ನು ತಡೆದು, ನಾನು ಹೇಳಿದೆ – 'ನೀವು ಏನು ಹೇಳುತ್ತಿದ್ದೀರಿ? ಗಂಡನ ಚರ ಆಸ್ತಿಯಲ್ಲಿ ಹೆಂಡತಿಗೆ ಪಾಲು ಇಲ್ಲವಾ'?.

'ಗಂಡನ ಚರ ಆಸ್ತಿಯಲ್ಲಿ ಹೆಂಡತಿಗೆ ಭಾಗವಿದೆಯೆಂದು ಹೇಳುವ ಯಾವುದೇ ಪ್ರಕರಣಗಳನ್ನು ಪುರಸ್ಕರಿಸಿರುವ ಪ್ರಕರಣಗಳು ಇದುವರೆವಿಗೆ ದಾಖಲಾಗಿರುವ ಬಗ್ಗೆ ಯಾವುದೇ ಮಾಹಿತಿಯಿರುವುದಿಲ್ಲ'.

ಆ ಮಹಿಳೆ ಪ್ರಶ್ನಿಸುತ್ತಾ ಕೇಳಿದಳು – 'ಅಂದರೆ ನೀವು ಹೇಳುವುದು, ಸುಪ್ರೀಮ್ ಕೋರ್ಟಿನಲ್ಲಿ ನಾನು ಆತನ ಹೆಂಡತಿಯೆಂದು ಮತ್ತು ಕಾನೂನಿನ

ಪ್ರಕಾರ ನನ್ನ ಮಗ ಆತನ ಸಂತತಿಯೆಂದು ಹೇಳಿದ್ದು ಎಲ್ಲವೂ ಸುಳ್ಳಾದಂತಾಯಿತು? ಕಳೆದ ಹದಿನೆಂಟು ವರ್ಷಗಳಿಂದ ನಾನು ಆತನ ಹೆಂಡತಿಯೆಂದು ಮತ್ತು ನನ್ನ ಮಗ ಆತನ ಸಂತತಿಯೆಂದು ತೋರಿಸಲು ಪಟ್ಟ ಪ್ರಯತ್ನವೆಲ್ಲಾ ಚರಂಡಿಗೆ ಬಿಸಾಕಿದಂತಾಯಿತು'?

ಕ್ರಮೇಣ ನಾನು ಆ ಮಹಿಳೆಯ ಬಗೆಗಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸತೊಡಗಿದೆ. ನಲವತ್ತು ವರ್ಷದ ಮಹಿಳೆ ಆಕೆಯ ಆಯುಷ್ಯದ ಅರ್ಧದಷ್ಟು ಭಾಗವನ್ನು ನ್ಯಾಯಾಲಯದ ವ್ಯಾಜ್ಯಗಳಲ್ಲಿಯೆ ಕಳೆದಿದ್ದಾಳೆ. ಆಕೆಯ ಗಂಡ ಆಕೆಯನ್ನು ತನ್ನ ಹೆಂಡತಿಯೆಂದು ಒಪ್ಪಿಕೊಳ್ಳದೆ ಮನೆಯಿಂದ ಹೊರಗಟ್ಟಿದ್ದಾನೆ. ಆಕೆ ನ್ಯಾಯಾಲಯಕ್ಕೆ ಹೋಗಿ ತನ್ನ ಹಕ್ಕಿಗಾಗಿ ಹೋರಾಡಿದ್ದಾಳೆ ಹಾಗೂ ಸಾಮಾಜಿಕ ಕಳಂಕದಿಂದ ದೂರವಾಗಲು ಶ್ರಮಿಸಿದ್ದಾಳೆ. ಹದಿನೆಂಟು ವರ್ಷಗಳ ದೀರ್ಘ ಹೋರಾಟದಿಂದಲೂ ಆಕೆಯ ಹಕ್ಕನ್ನು ಸಾಧಿಸಲು ಸಾಧ್ಯವಿಲ್ಲದಾದಾಗ ಅವರಿಗೆ ಸಾಯುವಷ್ಟು ಬೇಸರವಾಗಿದೆ. ನಮ್ಮ ಮಾತಿನ ನಡುವೆ ಆಕೆ ಒಮ್ಮೆ ಹೇಳಿದಳು – 'ಈಗ ನಾನು ಏನು ಮಾಡಲಿ? ಆತ್ಮಹತ್ಯೆ ಮಾಡಿಕೊಳ್ಳಲೆ? ಆಕೆಯ ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ಆಕೆಯ ಪ್ರಶ್ನೆಗಳಿಗೆ ಉತ್ತರಗಳೇ ಇಲ್ಲದೆ ಜೀವನ ಪರ್ಯಂತ ಪ್ರಶ್ನೆಯಾಗಿಯೆ ಉಳಿಯುತ್ತವೆ.

ನನ್ನ ಜೊತೆ ವಕೀಲರಿಗೆ ಕೆಲಸವಿದ್ದುದರಿಂದ, ಆತ ಆಕೆಗೆ ಹೆಚ್ಚು ಗಮನವನ್ನು ನೀಡಲಾಗಲಿಲ್ಲ. ಆಕೆಯನ್ನು ಉದ್ದೇಶಿಸಿ ಹೇಳಿದ– 'ಮೇಡಂ ಅಷ್ಟೊಂದು ಯೋಚಿಸಬೇಡಿ! ಹಣೆಯಲ್ಲಿ ಬರೆದಿದ್ದನ್ನು ಯಾರಿಂದಲೂ ಅಳಿಸಲು ಸಾಧ್ಯವಿಲ್ಲ! ಈ ಕೇಸು ಎಲ್ಲಿಯವರೆಗೆ ನಡೆಯುತ್ತದೆಯೋ ಅಲ್ಲಿಯವರೆಗೆ ಉಚಿತ ಕಾನೂನು ಸೇವೆಯನ್ನು ನೀಡುತ್ತೇನೆಂದು ನಿಮಗೆ ಆಶ್ವಾಸನೆ ನೀಡಿದ್ದೇನೆ. ಚಿಂತಿಸಬೇಡಿ! ಈ ದಿನ ಇದರ ಬಗ್ಗೆ ಯೋಚನೆ ಮಾಡುತ್ತೇನೆ. ನಾಳೆ ಇದೇ ವೇಳೆಗೆ ಬನ್ನಿ, ಈ ಬಗ್ಗೆ ಹೆಚ್ಚಿಗೆ ಸಮಾಲೋಚಿಸೋಣ.'

'ಸರಿ ಸಾರ್! ನೀವೊಬ್ಬರೆ ನಮಗೆ ಆಶ್ರಯದಾತರು. ದಯವಿಟ್ಟು ಸಹಾಯ ಮಾಡಿ' ಎಂದು ಹೇಳಿ ರೂಮಿನಿಂದ ಹೊರನಡೆದಳು.

ಆತನ ಸಹಾಯಕ ವಕೀಲರಿಗೆ ಒಂದು ಫೈಲನ್ನು ನೀಡುತ್ತಾ 'ನಾಳೆ ಇದು ರಿಜಿಸ್ಟರ್ ಮಾಡಿಸಬೇಕಾದ ಫೈಲು. ನಾವು ಇದರ ಬಗ್ಗೆ ದೋಷಾರೋಪ ಪಟ್ಟಿಯನ್ನು ಸಿದ್ಧಪಡಿಸಬೇಕು' ಎಂದನು.

ಯಾವ ಕೇಸು?

'ಆ ಕಾಲು ಮುರಿದವನ ಕೇಸು'

'ಓ! ಅದಾ ತನ್ನಿ'.

ನನ್ನ ಕಡೆ ತಿರುಗುತ್ತಾ ಲಾಯರ್ ಹೇಳಿದ – 'ಯಾವ ತರಹದ ಕೇಸು,



ಯಾವ ತರಹದ ಕಾನೂನು! ನಾನು ಈ ಕಾನೂನು ಮತ್ತು ಕೇಸುಗಳ ಮಧ್ಯೆ ಸಿಕ್ಕಿಹೋಗಿದ್ದೇನೆ. ಆತ ಕಾಲು ಮುರಿದುಕೊಂಡು ಆಸ್ಪತ್ರೆಯಲ್ಲಿ ಇದ್ದಾನೆ. ಕೇಸನ್ನು ನಿಗದಿತ ಸಮಯಕ್ಕೆ ಸರಿಯಾಗಿ ಸಲ್ಲಿಸಬೇಕು. ಅದೂ ಅಲ್ಲದೆ ವ್ಯಾಜ್ಯದ ಕೊನೆಯಲ್ಲಿ ಅದರಿಂದ ಗಳಿಸುವಂಥಾದ್ದು ಏನೂ ಇಲ್ಲ. ಇಂಥ ಕೇಸುಗಳನ್ನು ನಾನು ತೆಗೆದುಕೊಳ್ಳಲು ಒಪ್ಪವುದಿಲ್ಲ. ಇಂಥ ಕೇಸುಗಳನ್ನು ತೆಗೆದುಕೊಂಡು ವಾದಿಸುವುದರಿಂದ ಏನು ಪ್ರಯೋಜನ?

ನನ್ನ ಗಮನವನ್ನು ಸೆಳೆಯುತ್ತಾ ಆತ ಹೇಳಿದ– ನೋಡಿ ನೀವೇನಾದರು ದೈಹಿಕವಾಗಿ ವಿರೂಪಗೊಂಡರೆ, ನೀವು ಜೀವನದುದ್ದಕ್ಕೂ ಅಂಗವಿಕಲರಾಗಿರುವುದನ್ನು ಬಿಟ್ಟರೆ ಬೇರೆ ದಾರಿಯೆ ಇಲ್ಲ!.

ನನಗೆ ಕಾನೂನಿನ ವಿಚಾರಗಳು ಅರ್ಥವಾಗುವುದಿಲ್ಲ. ಆದರೆ ವಕೀಲರು ಹೇಳುವ ಎಲ್ಲವನ್ನು ಕೇಳಿಕೊಂಡು ಮೌನವಾಗಿರಲಾಗಲಿಲ್ಲ – 'ನಿಮ್ಮ ಅರ್ಥ ನನ್ನನ್ನು ಯಾರಾದರೂ ದೈಹಿಕವಾಗಿ ವಿರೂಪಗೊಳಿಸಿದರೆ ಕಾನೂನಿನಲ್ಲಿ ರಕ್ಷಣೆಯಿಲ್ಲವೆ?' ನಾನು ಆತನನ್ನು ಕೇಳಿದೆ.

'ಹೌದು, ಇದೆ ಯಾಕಿಲ್ಲ? ಕಾನೂನು ನಿಮ್ಮನ್ನು ನಿಜವಾಗಿಯೂ ರಕ್ಷಿಸುತ್ತದೆ. ಆದರೆ ನಿಮಗಾದ ನಷ್ಟವನ್ನು ತುಂಬಿಕೊಡಲು ಸಮರ್ಪಕವಾದ ಪರಿಹಾರಗಳು ಇಲ್ಲ'.

ವಕೀಲರು ಹೇಳುತ್ತಿದ್ದ ವಿಚಾರವನ್ನು ಕೇಳಿದ ನಂತರ, ನಾನು ದೈಹಿಕವಾಗಿ ರಕ್ಷಣೆಯಿಲ್ಲದ ವ್ಯಕ್ತಿಯೆಂದು ಭಾವಿಸತೊಡಗಿದೆ. ಯಾರಾದರೂ ನನ್ನ ಹಲ್ಲು ಮುರಿದರೆ, ಕಾಲು ಮುರಿದರೆ, ಅಥವಾ ಕೈಯನ್ನು ಮುರಿದರೆ, ನಾನು ಏನೂ ಮಾಡಲಾಗುವುದಿಲ್ಲ, ನಾನು ಜೀವನದುದ್ದಕ್ಕೂ ಅಂಗವಿಕಲನಾಗಿ ಉಳಿಯುತ್ತೇನೆ....! ನನಗೆ ಒಂದು ರೀತಿಯ ಭಯ ಆರಂಭವಾಯಿತು.

ವಕೀಲರು ಕಾನೂನು ಮತ್ತು ಅದರ ಆಚರಣೆಗಳ ನಡುವೆ ಇರುವ ಸಂಬಂಧ ಮತ್ತು ವ್ಯತ್ಯಾಸವನ್ನು ನನಗೆ ವಿವರಿಸಿ ಹೇಳುತ್ತಿದ್ದರು. ಆತ ಅನೇಕ ಕಾನೂನು ಸಮಸ್ಯೆಗಳನ್ನು ನನ್ನ ಮುಂದೆ ಇಟ್ಟು ಅವುಗಳಿಂದ ಈಗ ಆತ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಆತನ ಅಭಿಪ್ರಾಯದಲ್ಲಿ ಕಾನೂನು ಮತ್ತು ಆಚರಣೆಗಳ ಮಧ್ಯೆ ಸಮನ್ವಯ ಮತ್ತು ಸಾಮರಸ್ಯ ಇರಬೇಕು. ಆತ ಸಮಸ್ಯೆಗಳ ಮೇಲೆ ಸಮಸ್ಯೆಗಳನ್ನು ಹೇಳುತ್ತಿದ್ದುದನ್ನು ಗಮನಿಸಿದ ನಾನು ಬಲವಂತವಾಗಿ – 'ನಿಮ್ಮಲ್ಲಿ ಬರೀ ಸಮಸ್ಯೆಗಳೇ ಇವೆ, ಪರಿಹಾರ ಇಲ್ಲವೆ' ಎಂದು ಕೇಳಬೇಕೆನ್ನಿಸಿತು?

ಆತ ಬೇಸರದಿಂದ ಹೇಳಿದ– ನಿಮಗೆ 'ಪವಿತ್ರ'ವಾದುದು ಯಾವುದು ಎಂದು ಪರಿಚಯವಿದ್ದಾಗ ಮಾತ್ರ 'ಅಪವಿತ್ರ'ವಾದುದನ್ನು ವರ್ಗೀಕರಿಸಿ ನೋಡಲು ಸಾಧ್ಯ. ಎಲ್ಲಾ ಸಮಸ್ಯೆಗಳಿಗೂ ಪರಿಹಾರವಿದ್ದೇ ಇರುತ್ತದೆ. ಆದರೆ ನಿಜವಾದ ಸಮಸ್ಯೆಯೆಂದರೆ

ಅದನ್ನು ಕಂಡುಹಿಡಿಯುವುದು.

ನನಗೆ ಆತ ಏನನ್ನು ಹೇಳುತ್ತಿದ್ದಾನೆ ಎನ್ನುವುದು ಸರಿಯಾಗಿ ಅರ್ಥವಾಗಲಿಲ್ಲ. ಅದು ಅಲ್ಲದೆ ಅದನ್ನು ಅರ್ಥಮಾಡಿಕೊಳ್ಳುವ ಇಷ್ಟವೂ ಇರಲಿಲ್ಲ. ನಾನು ನನ್ನ ಜಮೀನಿನ ಮೇಲೆ ನನ್ನ ಪಕ್ಕದವನು ಅತಿಕ್ರಮಿಸಿರುವ ವಿಚಾರವಾಗಿ ಸಲಹೆ ಪಡೆಯಲು ಬಂದಿದ್ದೆ. ನಾನು ಈ ವಿಚಾರವನ್ನು ಎರಡು ಮೂರು ಬಾರಿ ಆತನ ಗಮನಕ್ಕೆ ತಂದೆನು. ಆದರೆ ಆತ ಅದರ ಕಡೆ ಗಮನವನ್ನೆ ಹರಿಸಲಿಲ್ಲ.

ನಾನು ವಿಷಯವನ್ನು ಬದಲಿಸುತ್ತಾ ಕೇಳಿದೆ 'ನೀವು ಇತ್ತೀಚಿನ ದಿನಗಳಲ್ಲಿ ಎಷ್ಟು ಬಾರಿ ನ್ಯಾಯಾಲಯಕ್ಕೆ ಹೋಗುತ್ತೀರಿ'? ಎಂದು.

'ನ್ಯಾಯಾಲಯಕ್ಕೆ ಹೋಗುವುದರಿಂದ ಏನು ಪ್ರಯೋಜನವಿದೆ? ಒಂದು ಕೇಸನ್ನು ವಾದ ಮಾಡಲು ತಿಂಗಳುಗಟ್ಟಲೆ ಬೇಕಾಗುತ್ತದೆ. ಅವರು ಕೇಸನ್ನು ದಾಖಲಿಸಿದ ದಿನ ಅದನ್ನು ಓದುವುದಿಲ್ಲ. ನೀವು ಇಡೀ ದಿನ ನ್ಯಾಯಾಲಯದ ಹುಲ್ಲುಹಾಸಿನ ಮೇಲೆ ಕಾಲಕಳೆದು ಸಂಜೆ ಮನೆಗೆ ಹಿಂತಿರುಗುತ್ತೀರಿ..... ಆದ್ದರಿಂದ ನೀವು ಕೋರ್ಟಿಗೆ ಹೋಗಿ ಅಥವಾ ಹೊರಗಡೆಯಿರಿ ಇದರಿಂದ ಅಂಥಾ ವ್ಯತ್ಯಾಸವೇನೂ ಇರುವುದಿಲ್ಲ. ಪರಿಸ್ಥಿತಿ ಈ ರೀತಿಯಿದೆ. ಇವತ್ತಿನ ನ್ಯಾಯಾಂಗ ಮುಂದುವರೆಯುತ್ತಿರುವ ರೀತಿಯನ್ನು ನೋಡಿದರೆ ಯಾವುದಾದರೊಂದು ಪ್ರಕರಣದಲ್ಲಿ ತಿರುಚಿ ವಿರುದ್ಧವಾದ ತೀರ್ಪು ನೀಡಿದ್ದರೂ ನನಗೆ ಅದು ತಿಳಿದೇ ಇರುವುದಿಲ್ಲ'.

ಮಾತು ಮುಂದುವರೆಸಿ, 'ರಾಣಾರ ಆಡಳಿತಾವಧಿಯಲ್ಲಿ ಐದು ಪರ್ಸೆಂಟ್ ಕೇಸುಗಳು ನ್ಯಾಯಾಂಗದ ಪ್ರಕ್ರಿಯೆಯಲ್ಲಿ ಕಾನೂನುವಿರುದ್ಧವಾಗಿ ತೀರ್ಮಾನವಾಗಿದ್ದರೆ ನ್ಯಾಯಾಂಗ ಅಧಿಕಾರಿಗಳನ್ನು ಉದ್ಯೋಗದಿಂದ ತೆಗೆದುಹಾಕುತ್ತಿದ್ದರು. ಅಂದರೆ ರಾಣಾರ ಸರ್ಕಾರ ಒಳ್ಳೆಯ ಸರ್ಕಾರ ಎನ್ನುವುದು ಇದರರ್ಥವಲ್ಲ. ಆದರೆ ಆಡಳಿತ ಕೆಲವು ಕ್ಷೇತ್ರದಲ್ಲಿ ಅದರದೇ ಆದ ರೀತಿಯಲ್ಲಿ ಬಿಗಿಯಿತ್ತು' ಎಂದು ವಕೀಲರು ತಮ್ಮ ಮಾತು ಮುಂದುವರೆಸಿದರು– ಕಾನೂನು ಏನೇ ಇದ್ದರು ನ್ಯಾಯಾಂಗದ ಪ್ರಕ್ರಿಯೆ ಮತ್ತು ಅದನ್ನು ಕಾರ್ಯಗತಗೊಳಿಸುವಲ್ಲಿ ಬಹಳ ಕಠಿಣವಾಗಿದ್ದರು. ಆದರೆ ಇಂದು ಪರಿಸ್ಥಿತಿ ಆ ರೀತಿಯಿಲ್ಲ. ನೂರಕ್ಕೆ ನೂರರಷ್ಟು ಕೇಸುಗಳು ನ್ಯಾಯಾಂಗ ಪ್ರಕ್ರಿಯೆಯ ವಿರುದ್ಧವಾಗಿ ತೀರ್ಮಾನ ವಾಗುತ್ತವೆ. ಆದರೂ ಏನೂ ನಡೆದೇಯಿಲ್ಲ ಎನ್ನುವಂತೆ ಇರುತ್ತಾರೆ. ಒಂದು ಸಾಮಾನ್ಯ ಕೇಸನ್ನು ನಡೆಸಲು ಹತ್ತು ಹನ್ನೆರಡು ವರ್ಷಗಳು ಹಿಡಿಯುವುದು ಈಗ ಸಾಮಾನ್ಯ ವಿಚಾರವಾಗಿದೆ, ನೀವು ಏನು ಮಾಡಲು ಸಾಧ್ಯ? ಏನೇ ಆದರೂ, ನೀವು ಇಷ್ಟಪಡಲಿ–ಪಡದಿರಲಿ ನ್ಯಾಯಾಲಯಕ್ಕೆ ಹೋಗಲೇಬೇಕು! ಆತ ಮುಂದುವರೆದು ಹೇಳಿದ– ನೀವು ಈಗಾಗಲೆ ಆಯ್ಕೆ ಮಾಡಿರುವ ಉದ್ಯೋಗವನ್ನು



ಅಷ್ಟೇ ಸುಲಭವಾಗಿ ಬಿಟ್ಟುಬಿಡಲು ಸಾಧ್ಯವಾಗುವುದಿಲ್ಲ. ಅದೇ ಸಮಯದಲ್ಲಿ ನೀವು ನಿಮ್ಮ ಘನತೆ ಮತ್ತು ನ್ಯಾಯಸಮ್ಮತವಾದ ರೀತಿಯನ್ನು ಕಾಪಾಡಬೇಕಾಗುತ್ತದೆ. ಕಾನೂನಿನಲ್ಲಿ ಏನೇ ಲೋಪವಿದ್ದರೂ ಅವುಗಳ ಜೊತೆ ಹೊಂದಿಕೊಳ್ಳಲೇ ಬೇಕು. ಇದು ನನ್ನ ಉದ್ಯೋಗ. ಆದ್ದರಿಂದ ನಾನು ನ್ಯಾಯಾಲಯಕ್ಕೆ ಹೋಗಲೇಬೇಕು.'

ನನ್ನ ವಕೀಲ ಸ್ನೇಹಿತನ ಮಾತುಗಳ ಮಹಾಪೂರವನ್ನು ಕುತೂಹಲದಿಂದ ಕೇಳುತ್ತಿದ್ದೆ. ನಾನು ಆತನ ಮುಖದಲ್ಲಿ ಒಂದು ರೀತಿಯ ಪ್ರಶಾಂತತೆ ಮೂಡುತ್ತಿರುವುದನ್ನು ಗಮನಿಸಿದೆ.

ಅಷ್ಟರಲ್ಲಿ ಒಂದು ಹೊಸ ಮುಖ ರೂಮಿನಲ್ಲಿ ಕಾಣಿಸಿಕೊಂಡು ನನ್ನ ವಕೀಲ ಸ್ನೇಹಿತನಿಗೆ ಅಭಿನಂದಿಸಿ ನನ್ನ ಪಕ್ಕದಲ್ಲಿ ಕುಳಿತು ಬೇಸರದಿಂದ ಹೇಳಿದರು – 'ಇದು ತುಂಬಾ ಭಯಂಕರ ಸಾರ್, ಸುಪ್ರೀಂ ಕೋರ್ಟ್ ನನ್ನನ್ನು ಕೆಳಗೆ ತಳ್ಳಿತು. ನಾನು ನನ್ನ ಕೇಸಿನಲ್ಲಿ ಸೋತೆ'?

ನನ್ನ ವಕೀಲ ಸ್ನೇಹಿತ ಅತ್ಯಾಶ್ಚರ್ಯಗೊಂಡು ಹೇಳಿದ– 'ಏನು? ಕೇಸಿನಲ್ಲಿ ಸೋತಿರಾ? ನಂಬಲು ಸಾಧ್ಯವಿಲ್ಲ? ಅದು ಹೇಗೆ ಅಂಥ ಕೇಸಿನಲ್ಲಿ ನಿಮ್ಮನ್ನು ಕೆಳಗೆ ತಳ್ಳಲು ಸಾಧ್ಯ?'

ಹೌದು, ನಾನು ಈ ಕೇಸಿನಲ್ಲಿ ಸೋಲುವುದಿಲ್ಲ ಎನ್ನುವ ಭರವಸೆ ಕಳೆದ ಹನ್ನೆರಡು ವರ್ಷಗಳಿಂದ ನನ್ನನ್ನು ಮುನ್ನಡೆಸಿತ್ತು. ಈ ಮಾರ್ಗಕ್ಕೆ ಬಹಳ ಇತಿಹಾಸವಿದೆ. ಅದು ಶತಮಾನಗಳಷ್ಟು, ನಮ್ಮ ತಂದೆ ತಾಯಿಯ ಪುರಾತನ ಕಾಲದಷ್ಟು ಹಿಂದೆ ಹೋಗುತ್ತದೆ. ನನ್ನ ನೆರೆಹೊರೆಯವರೆಲ್ಲರೂ ಇದನ್ನು ಬಲ್ಲರು. ಹೀಗಿದ್ದರೂ ಕೂಡ.... ನಾನು ಈಗ ಏನು ಮಾಡಲಿ?

ನನ್ನ ಕಡೆ ತಿರುಗುತ್ತ, ನನ್ನ ವಕೀಲ ಸ್ನೇಹಿತ ಹೇಳಿದ – 'ನೋಡಿದೆಯಾ! ಆತ ಜಿಲ್ಲಾ ನ್ಯಾಯಾಲಯದಲ್ಲಿ ಅವನ ಕೇಸನ್ನು ಗೆದ್ದಿದ್ದ. ಅದು ಕಾನೂನಿನ ದೃಷ್ಟಿಯಲ್ಲಿ ಅಂತಿಮ ತೀರ್ಪು ಎಂದು ಮುಕ್ತಾಯಗೊಳಿಸಲಾಗಿತ್ತು. ಆದರೆ ಈಗ ಒಂದು ಹೊಸ ಆದೇಶನೀಡುವುದರ ಮೂಲಕ ಈತನನ್ನು ಸೋಲಿಸಲಾಗಿದೆ'.

ಆ ವೇಳೆಗೆ ಆ ವ್ಯಕ್ತಿಯು ಹೇಳಿದ – 'ಸ್ಥಳೀಯ ನ್ಯಾಯಾಲಯದಲ್ಲಿ ಅಷ್ಟೇ ಅಲ್ಲ, ಜಿಲ್ಲಾ ನ್ಯಾಯಾಲಯದಲ್ಲಿಯೂ ನಾನು ಈ ಕೇಸಿನಲ್ಲಿ ಜಯಶೀಲನಾಗಿದ್ದೆ. ವಿಭಾಗೀಯ ಹಂತದಲ್ಲಿಯೂ ಕೂಡ ನನ್ನ ಹಕ್ಕು ಪೂರ್ಣ ತಿರಸ್ಕಾರಗೊಂಡಿರಲಿಲ್ಲ. ನಿನ್ನೆಯ ತೀರ್ಪು ಸಂಪೂರ್ಣವಾಗಿ ನನ್ನ ದಾರಿಗೆ ಅಡ್ಡಿಯಾಗಿದೆ ಸಾರ್, ಈಗ ನಾನು ಮಾಡಬಹುದಾದುದು ಏನಾದರು ಉಳಿದಿದೆಯೆ?'

ನ್ಯಾಯವಾದಿ ಆತನನ್ನು ಕೇಳಿದನು – 'ನಿಮ್ಮ ವಯಸ್ಸು ಎಷ್ಟು'? ಸಾರ್.

'ಇನ್ನು ಸ್ವಲ್ಪ ದಿವಸದಲ್ಲಿಯೆ ನಾನು ಐವತ್ತಾರು ವರ್ಷಗಳನ್ನು ತಲುಪುತ್ತೇನೆ'.

'ಈ ಕೇಸನ್ನು ಪ್ರಾರಂಭಿಸಿದಾಗ ನಿಮ್ಮ ವಯಸ್ಸು ಎಷ್ಟಾಗಿತ್ತು'?

'ಓ! ನಲವತ್ತೈದು'.

'ಈಗ ಇದು ಮತ್ತೆ ಹನ್ನೆರಡು ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಆಗ ನಿಮ್ಮ ವಯಸ್ಸು, ಎಷ್ಟಾಗಿರುತ್ತದೆ'?

ಆ ವ್ಯಕ್ತಿ ಸ್ವಲ್ಪ ಸಿಟ್ಟಿನಿಂದ ಹೇಳಿದ – 'ನೀವು ಏನು ಮಾತನ್ನಾಡುತ್ತಿದ್ದೀರಿ ಸಾರ್? ನೀವು ಹೇಳುವುದು ನಾನು ಈ ಮಾರ್ಗವನ್ನು ಬಿಟ್ಟುಬಿಡಲಾ? ನನಗೆ ಈಗ ನ್ಯಾಯವನ್ನು ಪಡೆಯುತ್ತೇನೆಂಬ ನಂಬಿಕೆಯೆ ಇಲ್ಲವಾಗಿದೆ'?

ಆತನನ್ನು ಸಮಾಧಾನಪಡಿಸುತ್ತಾ ವಕೀಲರು ಹೇಳಿದರು– 'ನಿಮಗೆ ನ್ಯಾಯ ದೊರಕುವುದಿಲ್ಲವೆಂದು ಹೇಗೆ ಹೇಳಲಿ? ನಮ್ಮ ಈ ವ್ಯವಸ್ಥೆಯನ್ನು ಹೆಚ್ಚು ಪರಿಣಾಮ ಕಾರಿಯನ್ನಾಗಿ ಮಾಡಲು ಅನೇಕ ಕಾನೂನು ಸಿದ್ಧಾಂತಗಳನ್ನು ಜಾರಿಗೆ ತರಲಾಗಿದೆ. ಎಲ್ಲರಿಗೂ ನ್ಯಾಯ ದೊರಕಿಸಲು ಅನೇಕ ಸಮರ್ಥ ಕಾನೂನು ತಜ್ಞರು ದುಡಿಯುತ್ತಿದ್ದಾರೆ. ನ್ಯಾಯಾಂಗ ಸುಧಾರಣೆಗಾಗಿ ಅನೇಕ ಕಾನೂನು ಆಯೋಗಗಳನ್ನು ರಚಿಸಲಾಗಿದೆ. ಈ ರಾಜ್ಯದಲ್ಲಿ ನ್ಯಾಯಯುತವಾದ ದೇಶದಲ್ಲಿ ನ್ಯಾಯ ದೊರೆಯುವುದಿಲ್ಲವೆಂದು ಯಾರು ಹೇಳಿದರು? ನಿಮಗೆ ನಿಜವಾಗಿಯೂ ನ್ಯಾಯ ದೊರೆಯುತ್ತದೆ. ಆದರೆ ಯಾವ ರೀತಿ ದೊರೆಯುತ್ತದೆ ಎನ್ನುವುದನ್ನು ನಿಮ್ಮ ಅನುಭವವೇ ಹೇಳುತ್ತದೆ.'

ವಕೀಲರು ನನ್ನ ಕಡೆ ತಿರುಗಿ ಹೇಳಿದರು– 'ಒಂದು ಕೇಸನ್ನು ಹಾಕುವುದು ಎಂದರೆ ನಿಮ್ಮ ಅಮೂಲ್ಯವಾದ ಐದು ವರ್ಷಗಳನ್ನು ಹಾಳುಮಾಡಬೇಕು. ಇದು ಒಂದು ಸಣ್ಣ ಕೇಸಿಗೆ ಸಂಬಂಧಿಸಿದ್ದು, ಮತ್ತೆ ನಿಮ್ಮ ವಿರೋಧಿಗೆ ನೀವು ಟ್ರಯಲ್ ಮಾಡಲು ಸಾಕಷ್ಟು ಸಮಯ ನೀಡಬೇಕು. ಇಲ್ಲದಿದ್ದರೆ ಹತ್ತರಿಂದ ಇಪ್ಪತ್ತು ವರ್ಷಗಳು ಸಾಮಾನ್ಯವಾಗಿ ಒಂದು ಕೇಸಿಗೆ ಬೇಕಾಗುತ್ತದೆ. ಇಪ್ಪತ್ತನಾಲ್ಕು ವರ್ಷಗಳ ಕಾನೂನು ಸಮರವನ್ನು ಕಂಡಿರುವ ಎರಡು ಪ್ರಕರಣಗಳು ನನ್ನಲ್ಲಿ ರಿಜಿಸ್ಟರ್ಡ್ ಆಗಿವೆ. ಒಂದು ಪ್ರಕರಣ ಇಪ್ಪತ್ತೈದು ವರ್ಷಗಳನ್ನು ದಾಟಿದೆ. ಈಗ ನೀವೇ ಹೇಳಿ, ಇಷ್ಟು ದೀರ್ಘ ಕಾಲವನ್ನು ಯಾರಾದರೊಬ್ಬರು ಒಂದು ಪ್ರಕರಣಕ್ಕಾಗಿ ವ್ಯಯಮಾಡುವುದು ಹಾಸ್ಯಾಸ್ಪದವಲ್ಲವೆ'?

ಆ ನಾಗರಿಕ ಅಷ್ಟರಲ್ಲಿ 'ರಾಣಾರ ಕಾಲದಲ್ಲಿ ನ್ಯಾಯಪದ್ಧತಿ ಈಗಿನದಕ್ಕಿಂತ ಉತ್ತಮವಾಗಿತ್ತು' ಎಂದು ಹೇಳಿದರು. ಅವರು ಬೇರೆ ಕ್ಷೇತ್ರದಲ್ಲಿ ಹೇಗಿದ್ದರೊ ಏನೊ? ನ್ಯಾಯಾಂಗ ವಿಚಾರದಲ್ಲಿ ಬಹಳ ಚುರುಕಾಗಿದ್ದರು. ಹನ್ನೆರಡು ವರ್ಷಗಳಿಂದ ಕುಂಟುತ್ತಾ ನಡೆದಿರುವ ಪ್ರಕರಣವನ್ನು ಹನ್ನೆರಡು ನಿಮಿಷಗಳಲ್ಲಿ ಇತ್ಯರ್ಥಗೊಳಿಸುತ್ತಿದ್ದರು. ರಾಣಾರ ಕಾಲ ನ್ಯಾಯಾಂಗಕ್ಕೆ ಸಂಬಂಧಿಸಿದಂತೆ 'ಸುವರ್ಣಯುಗ'ವೆಂದು ಎಲ್ಲರೂ ಹೇಳುತ್ತಾರೆ.

'ಆಗಿನ ಕಾಲದಲ್ಲಿ ಜನಸಂಖ್ಯೆ ಕಡಮೆಯಿತ್ತು. ನ್ಯಾಯಾಲಯದಲ್ಲಿ ಕೆಲವೇ



ಕೆಲವು ಪ್ರಕರಣಗಳು ದಾಖಲಾಗುತ್ತಿದ್ದವು. ಮತ್ತು ಅದು ರಾಣಾ ಅವರ ನಿರಂಕುಶಪ್ರಭುತ್ವದ ಕಾಲ. ಕಾನೂನು ಅವರು ಹೇಳಿದಂತೆ ನಡೆಯುತ್ತಿತ್ತು. ಈಗ ಆ ರೀತಿಯಿಲ್ಲ ಮತ್ತು ಆ ರೀತಿ ನಡೆಯುವುದಿಲ್ಲವೆಂದು' ನಾನು ಆತನ ಮಾತುಗಳಿಗೆ ಪ್ರತಿಕ್ರಿಯಿಸಿದೆ.

'ಯಾಕಾಗುವುದಿಲ್ಲ? ಅವರು ಕೆಲಸ ಮಾಡಲೇಬೇಕೆಂದಿದ್ದರೆ ಮಾಡಬಹುದು. ಜನಸಂಖ್ಯೆ ಜಾಸ್ತಿಯಿದ್ದರೆ, ನ್ಯಾಯಾಲಯಗಳೂ ಹೆಚ್ಚಿನ ಸಂಖ್ಯೆಯಲ್ಲಿವೆ. ಇಲ್ಲಿ ಯಾವುದು ಸರಿಯಿಲ್ಲವೆಂದರೆ, ಅವರು ಕೆಲಸ ಮಾಡುತ್ತಿರುವ ರೀತಿ. ನಾನು ಕಳೆದ ಹನ್ನೆರಡು ವರ್ಷಗಳಿಂದ ವ್ಯಾಜ್ಯವಾಡುತ್ತಿರುವುದನ್ನು ನೀವೇ ಕೇಳಿದಿರಿ' ಎಂದು ಆತ ಮಾತು ಮುಂದುವರಿಸಿ ನಾನು ನ್ಯಾಯಾಲಯಕ್ಕೆ ಓಡಾಡಲು, ನ್ಯಾಯಾಲಯಕ್ಕೆ ಮತ್ತು ವಕೀಲರಿಗೆ ಎಷ್ಟು ಹಣವನ್ನು ಈ ಹನ್ನೆರಡು ವರ್ಷಗಳಲ್ಲಿ ಪಾವತಿಸಿರುವೆನೆಂದು ನೀವು ಊಹಿಸಬಲ್ಲಿರಾ?

ನಮ್ಮ ವಕೀಲ ಮಿಸ್ಟರ್ ವಿಷ್ಣುಕಾಂತ್ ಹೇಳುತ್ತಾರೆ 'ನಾನು ಇನ್ನೂ ಹನ್ನೆರಡು ವರ್ಷ ವ್ಯಾಜ್ಯ ನಡೆಸಬೇಕೆಂದು. ಅನೇಕ ವರ್ಷಗಳ ಕಾಲ ವ್ಯಾಜ್ಯ ನಡೆಸುವುದು ಎಂಥಾ ವಿಪರ್ಯಾಸದ ವಿಷಯ'.

ನನಗೆ ಈವರೆಗೆ ನಾನು ಅಲ್ಲಿಗೆ ಬಂದಿರುವ ವಿಚಾರದ ಬಗ್ಗೆ ನನ್ನ ವಕೀಲ ಸ್ನೇಹಿತನಲ್ಲಿ ಮಾತನಾಡುವ ಅವಕಾಶ ಸಿಕ್ಕಿರಲಿಲ್ಲ. ನಾನು ಗಡಿಯಾರವನ್ನು ನೋಡಿಕೊಂಡೆ. ನಾನು ಅಲ್ಲಿಗೆ ಬಂದು ಅನೇಕ ತಾಸುಗಳೆ ಆಗಿದ್ದವು. ನಾನು ವಕೀಲರ ಗಮನವನ್ನು ಸೆಳೆಯುತ್ತಾ ಹೇಳಿದೆ – 'ನೋಡಿ ಕಾನೂನುಸಲಹೆ ಪಡೆಯಲು ಬಂದಿದ್ದೇನೆ.'

'ನೀವು ಮೊದಲೇ ಯಾಕೆ ಹೇಳಲಿಲ್ಲ? ಸರಿ ಈಗ ಹೇಳಿ!

ನಾನು ಬಂದ ಕೂಡಲೇ ನೀವು ನಿಮ್ಮ ನಾಟಕವನ್ನು ಆರಂಭಿಸಿದಿರಿ. ಆಗ ನಾನು ಹೇಗೆ ಹೇಳಲಿ?'

'ಅದನ್ನು ಮರೆತುಬಿಡಿ, ನೀವು ಇಲ್ಲಿರುವುದು ಮಾತನಾಡಲಿಕ್ಕೆ ಎನ್ನುವುದು ನನಗೆ ಗೊತ್ತು. ಈಗ ಹೇಳಿ, ಸಮಸ್ಯೆ ಏನು? ನಿಮಗೆ ಯಾವರೀತಿಯ ಕಾನೂನುಸಲಹೆ ಬೇಕಿದೆ?'

ನಗರದ ಕೇಂದ್ರಭಾಗದಲ್ಲಿ ಎರಡು ಸಾವಿರ ಚದರ ಅಡಿಯಷ್ಟು ಪ್ಲಾಟನ್ನು ನಾನು ಹೊಂದಿದ್ದೇನೆ. ಹಿಂದಿನ ಕಾಲದಲ್ಲಿ ನನ್ನ ಹಿರಿಯರು ಅಲ್ಲಿ ಒಂದು ಮನೆಯನ್ನು ಹೊಂದಿದ್ದರು. ಈಗಲೂ ಮನೆಯ ಅವಶೇಷಗಳಿರುವುದನ್ನು ಯಾರಾದರೂ ಕಾಣಬಹುದು. ನಗರದಲ್ಲಿ ಆಗಿನ ಕಾಲದಲ್ಲಿ ಕಂದಾಯ ಪದ್ಧತಿಯಿರಲಿಲ್ಲ. ಯಾವಾಗ ಕಂದಾಯ ಪದ್ಧತಿಯಿರಲಿಲ್ಲವೊ ಯಾವ ದಾಖಲೆಯೂ ಇರಲಿಲ್ಲ. ಕಳೆದ ಸಾಲಿನಲ್ಲಿ ಭೂಮಿಯನ್ನು ಅಳತೆ ಮಾಡುವಾಗ ಅದನ್ನು ಕೇವಲ

ಮನೆಯ ಪ್ಲಾಟ್ ಎಂದು ದಾಖಲಿಸಿದರು. ಆಗ ಅವರು ಮಾಡಿದ ಭೂಮಾಪನದಲ್ಲಿ ಅವರು ಮಾಲಿಕರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಅವರಿಗೆ ತಿಳಿದಂತೆ ಮಾಡಿದ್ದರು. ಇದು ನಿಮಗೆ ಚೆನ್ನಾಗಿ ಗೊತ್ತಿದೆ. ಅವರು ಯಾರನ್ನೂ ಪ್ಲಾಟಿನ ಮಾಲಿಕರೆಂದು ದಾಖಲಿಸಲಿಲ್ಲ. ಈಗ ಪಕ್ಕದ ಒಬ್ಬ ವ್ಯಕ್ತಿ ಅದನ್ನು ತನ್ನ ವಾಸದ ಮನೆಯೆಂದು ಪ್ರತಿಪಾದಿಸಿ ಆತನ ಹೆಸರಿಗೆ ರಿಜಿಸ್ಟರ್ಡ್ ಮಾಡಿಸಿಕೊಂಡು ಅದರ ಮೇಲೆ ಒಂದು ಹೊಸ ಮನೆಯನ್ನು ಕಟ್ಟಲು ನಿಯಮಾನುಸಾರ ಅನುಮತಿಯನ್ನು ಪಡೆದಿದ್ದಾನೆ. ಇದನ್ನು ಇನ್ನಾರೋ ನನಗೆ ಹೇಳಿದರು. ಪ್ಲಾಟು ನನ್ನ ಪೂರ್ವಿಕರಿಗೆ ಸಹಜವಾಗಿ ಸೇರಿದ್ದು. ಈಗ ಅದು ಬೇರೊಬ್ಬರಿಗೆ ಸೇರುತ್ತಿದೆ. ಅದನ್ನು ಮತ್ತೆ ಪಡೆಯಲು ಯಾವುದಾದರೂ ದಾರಿ ಇದೆಯೆ?

ನನ್ನ ವಕೀಲ ಸ್ನೇಹಿತ ನನ್ನ ಮಾತುಗಳನ್ನು ಆಸಕ್ತಿಯಿಂದ ಕೇಳಿ ತುಟಿಗಳನ್ನು ಅಗಲಿಸಿ, 'ಅಂದರೆ ಆ ಪ್ಲಾಟು ನಿಮಗೆ ಸೇರಿದೆ ಎನ್ನಲು ನಿಮ್ಮಲ್ಲಿ ಯಾವುದೇ ದಾಖಲೆಗಳಿಲ್ಲ. ಬಾಯಿಮಾತಿನಿಂದ ನಿಮ್ಮ ಕೇಸನ್ನು ಗೆಲ್ಲಲಾಗುವುದಿಲ್ಲ. ಅಲ್ಲದೆ, ನಿಮ್ಮ ಆಸ್ತಿಯನ್ನು ನನ್ನದು ಎಂದು ಪ್ರತಿಪಾದಿಸಿ ಮನೆಯನ್ನು ಕಟ್ಟಲು ನಿಯಮಾನುಸಾರ ಪರವಾನಗಿ ಪಡೆದಿರುವ ವ್ಯಕ್ತಿಯೂ ಸರಿಯಾದ ಪುರಾವೆಯನ್ನು ಪಡೆದಿಲ್ಲವೆನ್ನುವುದೂ ಅಷ್ಟೆ ಸತ್ಯ. ಆಸ್ತಿ ವಂಶಪಾರಂಪರ್ಯವಾಗಿ ಬಂದದ್ದು, ಅದು ನಿಮಗೆ ಸೇರಬೇಕು. ನೀವು ಕೇಸನ್ನು ಹಾಕಬಹುದು ಮತ್ತು ಇದನ್ನು ಸ್ಥಾಪಿಸಬಹುದು. ಆದರೆ ಆಸ್ತಿಯನ್ನು ಮತ್ತೆ ಪಡೆಯಲು ಹತ್ತರಿಂದ ಹದಿನೈದು ವರ್ಷಗಳು ಬೇಕಾಗುತ್ತವೆ. ಇದಕ್ಕೆ ಸಮಯ ಅಷ್ಟೆ ಅಲ್ಲ ಹಣವೂ ಬೇಕಾಗುತ್ತದೆ. ನನ್ನ ದೃಷ್ಟಿಯಲ್ಲಿ ಅದನ್ನು ಬಿಟ್ಟುಬಿಡುವುದು ಒಳ್ಳೆಯದು'.

ಏನು ಹೇಳಿದಿರಿ? ಬಿಟ್ಟು ಬಿಡುವುದೆ? ನನ್ನ ತಂದೆಯವರು ಕಟ್ಟಿಸಿದ ಮನೆಯ ಮೇಲೆ ಬೇರೆಯವರು ಮನೆಯನ್ನು ಕಟ್ಟಲು ಬಿಡುವುದೇ? ನೀವು ಏನು ಮಾತ ನಾಡುತ್ತಿದ್ದೀರಿ?

'ಕಟ್ಟಲಿಬಿಡಿ, ನೀವು ಸಾವಿರಾರು ರೂಪಾಯಿಗಳನ್ನು ಕೇವಲ ಎರಡು ಸಾವಿರ ಚದರಡಿಯ ಮೇಲೆ ಖರ್ಚು ಮಾಡಬೇಕು. ನೀವು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದ ಮೇಲೂ ಕೇಸನ್ನು ಗೆಲ್ಲುವುದು ಗ್ಯಾರಂಟಿಯಿಲ್ಲ. ನೀವೇ ಹೇಳುವಂತೆ, ನಿಮ್ಮಲ್ಲಿ ಯಾವುದೇ ದಾಖಲೆಗಳು ಇಲ್ಲ'?

'ನಾನು ಹೇಳುತ್ತಿರುವುದನ್ನು ನೀವು ಗ್ರಹಿಸಲಿಲ್ಲ. ಹಿಂದೆ ಈ ಕಠ್ಮಂಡು ಕಚೇರಿಯಲ್ಲಿ ಕಂದಾಯಪದ್ಧತಿಯಿರಲಿಲ್ಲ. ಆದ್ದರಿಂದ ದಾಖಲೆಯಿರಲು ಹೇಗೆ ಸಾಧ್ಯ? ನಮ್ಮ ಮನೆಯ ಪಕ್ಕದವರೆ ನನಗೆ ಸಾಕ್ಷಿ. ಅವರು ಈ ಕೇಸಿನಲ್ಲಿ ಸಾಕ್ಷಿ ಹೇಳಲು ಸಿದ್ಧರಿದ್ದಾರೆ.'

'ಅವರು ನಿಮ್ಮ ಕೇಸಿನಲ್ಲಿ ಎಷ್ಟು ಸಾಕ್ಷಿ ಹೇಳುತ್ತಾರೆಯೆನ್ನುವುದು ಇಲ್ಲಿ



ಮುಖ್ಯವಲ್ಲ, ಆದರೆ ಆ ಸಾಕ್ಷಿಗೆ ಯಾವುದೇ ನ್ಯಾಯಸಮ್ಮತವಾದ ಬೆಲೆಯಿರುವುದಿಲ್ಲ' ಯಾವ ಹಂತದ ನ್ಯಾಯಾಲಯಗಳಿವೆ ಎನ್ನುವುದನ್ನು ನೀವು ಚೆನ್ನಾಗಿ ತಿಳಿದಿದ್ದೀರಾ. ಆವೇಶದಲ್ಲಿ ಭಾವುಕರಾಗಿ ಕೇಸನ್ನು ಫೈಲ್ ಮಾಡುವುದು ತುಂಬಾ ಸುಲಭ; ಆದರೆ ಅದರ ಪರಿಣಾಮವನ್ನು ಸಹಿಸಿಕೊಳ್ಳುವುದು ತುಂಬಾ ಕಷ್ಟ. ನಾನು ಸ್ನೇಹಿತನಾಗಿ ನಿಮಗೆ ಹೇಳುವ ಬುದ್ಧಿಮಾತು ಇಷ್ಟೆ, ಅದನ್ನು ಬಿಟ್ಟುಬಿಡಿ!

'ನಾನು ನನ್ನ ವಕೀಲ ಸ್ನೇಹಿತರನ್ನು ನೋಡಲು ಬಹಳ ದೊಡ್ಡ ಆಸೆಯಿಂದ ಬಂದಿದ್ದೆ. ಒಬ್ಬ ಒಳ್ಳೆಯ ವಕೀಲಿ ಸ್ನೇಹಿತನನ್ನು ಪಡೆದಿರುವೆನೆಂದು ಹೆಮ್ಮೆಯಿದೆ. ಆದರೆ ಈಗ ಅದು ಕರಗಿಹೋಯಿತು. ಆತನ ಸೂಚನೆಯ ವಿರುದ್ಧ ವಾದ ಮಾಡುವುದು ಒಟ್ಟಾರೆ ಅರ್ಥವಿಲ್ಲದ್ದು. ನಾನು ಸುಮ್ಮನೆ ಹೇಳಿದೆ, ಹಾಗಾದರೆ ನಾನು ಬಿಟ್ಟುಬಿಡಲೆ?' ಎಂದು.

ಅವರು ಹೇಳಿದರು 'ಮರೆಯುವುದು ಒಳ್ಳೆಯದು'. ಬಲವಿದ್ದವರು ಬದುಕುತ್ತಾರೆ ಎನ್ನುವುದು ನಿಮಗೆ ತಿಳಿದಿರಬೇಕು.

ನಾನು ನನ್ನ ವಾಚನ್ನು ನೋಡಿದೆ, ಆಗಲೆ ಮಧ್ಯಾಹ್ನವಾಗಿತ್ತು. ನಾನು ನನ್ನ ವಕೀಲ ಸ್ನೇಹಿತರಿಗೆ ಮತ್ತೆ ಒಂದು ದಿನ ಬರುವುದಾಗಿ ಹೇಳಿ ಅಲ್ಲಿಂದ ಹೊರನಡೆದೆ.

ಮಧ್ಯಾಹ್ನದ ಬಿಸಿಲು. ನಾನು ಮನೆಯ ಕಡೆ ದಾಪುಗಾಲು ಹಾಕುತ್ತಿದ್ದೇನೆ. ಎಂದಿಗಿಂತಲೂ ಇಂದು ರಸ್ತೆಗಳು ಬಿಕೋ ಎನ್ನುತ್ತಿವೆ ಎಂದು ನನಗನಿಸಿತು. ನನ್ನ ವಕೀಲ ಮಿತ್ರನ ನ್ಯಾಯದ ಹೆಸರಿನ ನಾಟಕದ ದೃಶ್ಯಗಳು ಒಂದಾದರೊಂದರಂತೆ ನನ್ನ ಮನಸ್ಸಿನಲ್ಲಿ ಹಾದುಹೋಗುತ್ತಿದ್ದವು. ನನಗೆ ಆತನ ಸಂಭಾಷಣೆ ಹಾಗೂ ಆ ದೃಶ್ಯ ನೆನಪಾದಾಗಲೆಲ್ಲ ಭಯವಾದಂತೆ ಭಾಸವಾಗುತ್ತಿತ್ತು! ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಅಸಹಾಯಕನೆಂದು ಭಾವಿಸತೊಡಗಿದೆ. ಮತ್ತು ಎಲ್ಲಾ ದಿಕ್ಕುಗಳಿಂದ ಕಪ್ಪುನೆರಳು ನನ್ನ ಸುತ್ತ ಆವರಿಸಿಕೊಂಡಂತೆ ಭಾಸವಾಯಿತು! ಪ್ರಸ್ತುತ ಅಸಹನೀಯ ಸಂದರ್ಭದ ನಡುವೆ ನನ್ನ ಬದುಕು ಸಿಲುಕಿದೆ ಎಂದು ಅನಿಸತೊಡಗಿತು. ಇದು ಅಂತ್ಯವೇ ಇಲ್ಲದ ಕಾಲಾತೀತ Timeless ದಿಗಂತದಂತೆ! ಸಮಯದಲ್ಲಿ ಲೀನವಾದಂತೆ ಭಾಸವಾಯಿತು.